ಹುಬ್ಬಳ್ಳಿ
ಶನಿವಾರ, 2 ಮೇ 2026
ಸಂಪುಟ 16, ಸಂಚಿಕೆ 38, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಲಡಾಖ್ ಧರ್ಮದ ನೆಲೆಬೀಡು: ಶಾ | 02
ದೋಣಿ ದುರಂತ: 9 ಜನ ಸಾವು | 02
ಚಿನಾರ್ ಕಾರ್ಪ್ಸ್‌ಗೆ ಬಲ್ಬೀರ್ ಮುಖ್ಯಾಧಿಕಾರಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖೆ

ದಿನದ ಮಾತು

ಮನಸ್ಸನ್ನು ಕಾಪಾಡಿಕೊಳ್ಳದವರಿಗೆ ಕೋಪವು ಅನರ್ಥವನ್ನು ತರುತ್ತದೆ.
▲ ನೀತಿಮಂಜರಿ

ಸೂರ್ಯ ರೇಖೆಯ ಮೇಲಿನ ಚಿಹ್ನೆಗಳು

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಮೇನಲ್ಲಿ ಸರಾಸರಿಗೂ ಹೆಚ್ಚು ಮಳೆ, ಕೆಲವೆಡೆ ಉಷ್ಣ ಅಲೆ

• **ಹೊಸದಿಲ್ಲಿ:** ಮೇ ತಿಂಗಳು ದೇಶದಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿನ ಮಳೆಯಾಗಲಿದೆ. ಇದರೊಂದಿಗೆ ದೇಶದ ಕೆಲವು ಭಾಗಗಳಲ್ಲಿ ತಾಪಮಾನವೂ ಏರಿಕೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹವಾಮಾನ ನಿರೀಕ್ಷಿಸಿದೆ.

• ಪುಟ ೭

ಸ್ವದೇಶಿ ಮಹೇಂದ್ರಗಿರಿ ನೌಕಾಪಡೆಗೆ ಸೇರ್ಪಡೆ

• **ಹೊಸದಿಲ್ಲಿ:** ಸಾಕಷ್ಟು ಸಮರ್ಥ ಶಸ್ತ್ರಾಸ್ತ್ರಸಜ್ಜಿತ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಸ್ವದೇಶಿ ಯುದ್ಧ ನೌಕೆ ಮಹೇಂದ್ರಗಿರಿಯನ್ನು ಶುಕ್ರವಾರ ಭಾರತೀಯ ನೌಕಾಪಡೆಗೆ ವಿಧ್ಯುಕ್ತವಾಗಿ ಹಸ್ತಾಂತರಿಸಲಾಯಿತು. ನೀಲ್‌ಗಿರಿ ದರ್ಜೆಯ (ಪ್ರಾಜೆಕ್ಟ್ 17ಎ) ಆರನೇ ನೌಕೆಯನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್(ಎಂಡಿಎಸ್‌ಎಲ್)ನಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು.

• ಪುಟ ೭

ಅಭಿಮಾನಿಗಳಿಂದ ಬಿಎಸ್‌ವೈ ಅಭಿಮಾನೋತ್ಸವ

• ಪುಟ ೮

ನವಿಲುಗಳ ಸಾವಿಗೆ ಎಚ್‌5ಎನ್‌1 ಕಾರಣ

• ಪುಟ ೮

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 993 ರೂ. ಹೆಚ್ಚಳ

• ಪುಟ ೭

ಸದನಕ್ಕೆ ಪಾನಮತ್ತರಾಗಿ ಬಂದ ಪಂಜಾಬ್ ಸಿಎಂ

• ಪುಟ ೭



ಭಾರತದ ಹೈಸ್ಪೀಡ್ ಕನಸು ಸಾಕಾರ

• ಪುಟ ೭

ಸುದ್ದಿ ಸಮಗ್ರ

ಮಧ್ಯರಾತ್ರಿ ಸ್ಟ್ರಾಂಗ್ ರೂಂಗೆ ದೀದಿ | ಸೋಲಿನ ಭಯ ಎಂದ ಬಿಜೆಪಿ

ಮಮತಾ ಹೈಡ್ರಾಮಾ

• **ಹೊಸದಿಲ್ಲಿ/ಕೋಲ್ಕತ್ತಾ:** ಮತ ಎಣಿಕೆಗೆ ಕೆಲವೇ ಗಂಟೆಗಳು ಬಾಕಿ ಇರುವ ವೇಳೆ ಪಶ್ಚಿಮ ಬಂಗಾಳ ರಾಜಕೀಯದಲ್ಲಿ ಭಾರೀ ಹೈಡ್ರಾಮಾ ಶುರುವಾಗಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ವಿದ್ಯುನ್ಮಾನ ಮತಯಂತ್ರಗಳ(ಇವಿಎಂ) ಸುರಕ್ಷತೆ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದು, ಇವಿಎಂ ತಿರುಚುವ ಸಾಧ್ಯತೆಯಿದೆ ಎಂದು ಆರೋಪಿಸಿದ್ದಾರೆ. ಈ ಬೆಳವಣಿಗೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವೆ ತೀವ್ರ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ.

ಗುರುವಾರ ತಡರಾತ್ರಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತಾದ ಭವಾನೀಪುರ ಪ್ರದೇಶದಲ್ಲಿರುವ ಇವಿಎಂ ಸ್ಟ್ರಾಂಗ್ ರೂಂಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸಿದರು. ಇವಿಎಂಗಳನ್ನು ಇರಿಸಿರುವ ಪ್ರದೇಶದ ಸುತ್ತ ಅನುಮಾನಾಸ್ಪದ ಚಟುವಟಿಕೆಗಳು ನಡೆಯುತ್ತಿವೆ ಎಂದು ಟಿಎಂಸಿ ನಾಯಕರು ಆರೋಪಿಸಿದ ಬಳಿಕ ಅವರು ಸ್ಟ್ರಾಂಗ್ ರೂಂಗೆ ಭೇಟಿ ನೀಡಿ, ಹೈಡ್ರಾಮಾ ಮಾಡಿದರು. ಅಪರಿಚಿತ ವ್ಯಕ್ತಿಗಳು ನಿರ್ಬಂಧಿತ ಪ್ರದೇಶಗಳಿಗೆ ಪ್ರವೇಶಿಸುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಕಾಣಿಸಿಕೊಂಡಿವೆ ಎಂದು ಟಿಎಂಸಿ ಆರೋಪಿಸಿದೆ. ಫಲಿತಾಂಶ ತಿರುಚಲು ಯತ್ನವಾದರೆ ತಕ್ಕ ಪ್ರತಿಕ್ರಿಯೆ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

ಇದನ್ನು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಕರೆಯುತ್ತಿರುವ ಟಿಎಂಸಿ ನಾಯಕರು, ಚುನಾವಣಾ ಫಲಿತಾಂಶವನ್ನು ಪ್ರಭಾವಿತಗೊಳಿಸಲು ಸಂಚು ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ.

➡ ಪುಟ ೪



ಇವಿಎಂ ಸಂಪೂರ್ಣ ಸುರಕ್ಷಿತ: ಇಸಿ

ಟಿಎಂಸಿ ಆರೋಪಗಳನ್ನು ಭಾರತೀಯ ಚುನಾವಣಾ ಆಯೋಗ ತಳ್ಳಿಹಾಕಿದೆ. ಸ್ಟ್ರಾಂಗ್ ರೂಂಗಳು 24 ಗಂಟೆಗಳ ಸಿಸಿಟಿವಿ ನಿಗಾದಲ್ಲಿದ್ದು, ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಸ್ಟ್ರಾಂಗ್ ರೂಂಗಳೊಳಗಿನ ಚಲನವಲನಗಳು ಅಂಚೆ ಮತಪತ್ರಗಳ ನಿರ್ವಹಣೆ ಸೇರಿದಂತೆ ಸಾಮಾನ್ಯ ಆಡಳಿತಾತ್ಮಕ ಕಾರ್ಯಗಳ ಭಾಗವಾಗಿದ್ದು, ಅದನ್ನು ಎಲ್ಲಾ ರಾಜಕೀಯ ಪಕ್ಷಗಳಿಗೆ ಪೂರ್ವ ಮಾಹಿತಿ ನೀಡಿ ನಡೆಸಲಾಗಿದೆ ಎಂದು ಆಯೋಗ ತಿಳಿಸಿದೆ.

ಎಣಿಕೆ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಕೊಲ್ಕತ್ತಾದ ವಿವಿಧ ಸ್ಟ್ರಾಂಗ್ ರೂಂಗಳ ಬಳಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆ, ನಗರ ಪೊಲೀಸ್ ಇಲಾಖೆ ಕಠಿಣ ಭದ್ರತಾ ಕ್ರಮ ಕೈಗೊಂಡಿದೆ. ಪೊಲೀಸ್ ಆಯುಕ್ತ ಅಜಯ್ ನಂದ ಹೊರಡಿಸಿದ ಆದೇಶದಂತೆ, ಎಲ್ಲಾ ಸ್ಟ್ರಾಂಗ್ ರೂಂಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಐದು ಅಥವಾ ಹೆಚ್ಚು ಜನ ಸೇರುವುದನ್ನು ನಿಷೇಧಿಸಲಾಗಿದೆ. ಮೆರವಣಿಗೆ, ಪ್ರತಿಭಟನೆ ಹಾಗೂ ಶಸ್ತ್ರಾಸ್ತ್ರ ಅಥವಾ ಸ್ಫೋಟಕ ವಸ್ತುಗಳ ಸಾಗಣೆಯ ಮೇಲೂ ನಿರ್ಬಂಧ ಹೇರಲಾಗಿದೆ. ಮೇ 4ರ ಮತ ಎಣಿಕೆ ಮುಗಿಯುವವರೆಗೆ ಈ ಆದೇಶ ಜಾರಿಯಲ್ಲಿರಲಿದೆ.

15 ಮತಗಟ್ಟೆಗಳಲ್ಲಿ ಇಂದು ಮರುಮತ

ಚುನಾವಣಾ ಆಯೋಗವು ಶುಕ್ರವಾರ ದಕ್ಷಿಣ 24 ಪರಗಣಾಸ್ ಜಿಲ್ಲೆಯ ಡೈಮಂಡ್ ಹಾರ್ಬರ್, ಮಗ್ರಾಹಟ್ ಪಶ್ಚಿಮ ವಿಧಾನಸಭಾ ಕ್ಷೇತ್ರಗಳ 15 ಮತಗಟ್ಟೆಗಳಲ್ಲಿ ಶನಿವಾರ ಮರುಮತದಾನ ನಡೆಸಲು ಆದೇಶಿಸಿದೆ. ಮಗ್ರಾಹಟ್ ಪಶ್ಚಿಮ ಕ್ಷೇತ್ರದ 11 ಮತಗಟ್ಟೆಗಳಲ್ಲಿ, ಡೈಮಂಡ್ ಹಾರ್ಬರ್ ಕ್ಷೇತ್ರದ 4 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ.

➡ ಪುಟ ೪

ಸುಪ್ರೀಂ ಮೆಟ್ಟಿಲೇರಿದ ಟಿಎಂಸಿ, ಇಂದು ವಿಚಾರಣೆ

ಮತ ಎಣಿಕೆಗೆ ಕೇವಲ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ನೌಕರರನ್ನೇ ಮೇಲ್ವಿಚಾರಕರಾಗಿ ನೇಮಿಸಿರುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಟಿಎಂಸಿ ಸುಪ್ರೀಂಕೋರ್ಟ್ ಮೊರೆ ಹೋಗಿದೆ.

➡ ಪುಟ ೪

ಟಿವಿಕೆ ಕಚೇರಿಗೆ ಬೆಂಕಿ

• **ಚೆನ್ನೈ:** ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಶ್ರೀರಂಗಂನಲ್ಲಿ ಸ್ಥಳೀಯ ಕಚೇರಿಯನ್ನು ಗುರುವಾರ ರಾತ್ರಿ ದುಷ್ಕರ್ಮಿಗಳು ಹಾನಿಗೊಳಿಸಿ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆ ಪ್ರದೇಶದ ಸಿಸಿಟಿವಿ ದೃಶ್ಯಗಳಲ್ಲಿ ಇಬ್ಬರು ವ್ಯಕ್ತಿಗಳು ಕಚೇರಿ ಒಳಗೆ ಪ್ರವೇಶಿಸಿ, ಸ್ವಲ್ಪ ಹೊತ್ತಿನ ಬಳಿಕ ಹೊರಬರುವ ದೃಶ್ಯಗಳು ಕಂಡುಬಂದಿವೆ. ಶುಕ್ರವಾರ ಬೆಳಗ್ಗೆ ಪಕ್ಷದ ಪೋಸ್ಟರ್‌ಗಳು, ಪಕ್ಷದ ಮುಖ್ಯಸ್ಥ, ನಟ-ರಾಜಕಾರಣಿ ವಿಜಯ್ ಅವರ ಚಿತ್ರಗಳನ್ನು ಹರಿದು ಹಾಕಿರುವುದು ಕಂಡುಬಂದಿದೆ.

ವಿಶ್ವ ಕಾರ್ಮಿಕ ದಿನ ಕಾರ್ಯಕ್ರಮದಲ್ಲಿ ಸಿಎಂ

ನಮ್ಮದು ಯಾವಾಗಲೂ ಕಾರ್ಮಿಕ ಪರ ಸರ್ಕಾರ



• **ಬೆಂಗಳೂರು:** ನಮ್ಮ ಸರ್ಕಾರ ಯಾವಾಗಲೂ ಕಾರ್ಮಿಕರ ಪರವಾಗಿದ್ದು, ಅವರನ್ನು ಗೌರವಿಸುತ್ತದೆ. ರಾಜ್ಯ ಸರ್ಕಾರ ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ವಿಶ್ವ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಕಾರ್ಮಿಕರ ಪರವಾಗಿ ಅನೇಕ ಕಾರ್ಯಕ್ರಮ ಕೈಗೊಂಡಿದ್ದು, ಕಾರ್ಮಿಕರು ಕೆಲಸದ ವೇಳೆ ಮೃತಪಟ್ಟರೆ ಅವರಿಗೆ ನೀಡುತ್ತಿದ್ದ 5 ಲಕ್ಷ ರೂ.ಗಳ ಪರಿಹಾರ ಮೊತ್ತವನ್ನು 8 ಲಕ್ಷ ರೂ.ಗೆ ಹೆಚ್ಚಿಸಿದೆ. ಸಹಜ ಮರಣ ಹೊಂದಿದವರ ಸಂಸ್ಕಾರಕ್ಕೆ ನೀಡುತ್ತಿದ್ದ 75 ಸಾವಿರ ರೂ.ಗಳನ್ನು ಒಂದೂವರೆ ಲಕ್ಷಕ್ಕೆ ಹೆಚ್ಚಿಸಿದೆ ಎಂದು ತಿಳಿಸಿದರು. ಕಾರ್ಮಿಕರು ದೇಶದ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯ ಶಿಲ್ಪಿಗಳು.

➡ ಪುಟ ೪

ಕಾರ್ಮಿಕರ ಬೆವರು ಈ ದೇಶಕ್ಕೆ ನಿಜವಾದ ಅಡಿಪಾಯ. ಕಾರ್ಮಿಕರಿಗೆ ನ್ಯಾಯ ಸಿಕ್ಕಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಬೇರೆ ಪಕ್ಷಗಳು ಈ ಕಾರ್ಮಿಕರ ಬಗ್ಗೆ ಕಾಳಜಿ ತೋರುತ್ತಿಲ್ಲ. ಕಳೆದ 12 ವರ್ಷಗಳಲ್ಲಿ ಎನ್‌ಡಿಎ ಸರ್ಕಾರ ಕಾರ್ಮಿಕರ ಬದುಕಿನಲ್ಲಿ ಸಣ್ಣ ಬದಲಾವಣೆ ತರಲು ಸಾಧ್ಯವಾಗಿಲ್ಲ. ಈ ದೇಶವನ್ನು ಕಟ್ಟಿದವರಿಗೆ ಗೌರವ ನೀಡುತ್ತಿಲ್ಲ.
■ **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

30256 ಗಿಗ್ ಕಾರ್ಮಿಕರ ನೋಂದಣಿ

ನಮ್ಮ ಪಕ್ಷದ ವರಿಷ್ಠ ರಾಹುಲ್ ಗಾಂಧಿಯವರು ಸಂತೋಷ್ ಲಾಡ್ ಹಾಗೂ ಪ್ರಿಯಾಂಕ್ ಖರ್ಗೆ ಹಾಗೂ ನನ್ನೊಂದಿಗೆ ಚರ್ಚಿಸಿ ಕಾರ್ಮಿಕರಿಗೆ ನೆರವಾಗುವ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯಲ್ಲಿ 30256 ಗಿಗ್ ಕಾರ್ಮಿಕರನ್ನು ನೋಂದಾಯಿಸಲಾಗಿದ್ದು, ಅಪಘಾತದಲ್ಲಿ ಮರಣ ಹೊಂದಿದವರಿಗೆ 4 ಲಕ್ಷ ರೂ. ಪರಿಹಾರ ನೀಡಲು ತೀರ್ಮಾನಿಸಿದೆ. ಈಗಾಗಲೇ ಐದು ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಲಿ

• ಪುಟ ೪

ಮಹಾರಾಷ್ಟ್ರ: ಮಾದಕ ಜಾಲದ ಮೇಲೆ ಎನ್‌ಸಿಬಿ ಬಿಗಿ ಬಲೆ

1,745 ಕೋಟಿ ಮೌಲ್ಯದ ಡ್ರಗ್ಸ್ ವಶ

• **ಹೊಸದಿಲ್ಲಿ:** ಮುಂಬೈನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂತಾರಾಷ್ಟ್ರೀಯ ಮಾದಕ ವಸ್ತು ಸಾಗಣೆ ಜಾಲವನ್ನು ಮಾದಕ ವಸ್ತು ನಿಯಂತ್ರಣ ಬ್ಯೂರೋ (ಎನ್‌ಸಿಬಿ) ಭೇದಿಸಿದ್ದು, ಸುಮಾರು 1,745 ಕೋಟಿ ರೂ. ಮೌಲ್ಯದ 349 ಕೆಜಿ ಉನ್ನತ ದರ್ಜೆಯ ಕೊಕೇನ್ ವಶಪಡಿಸಿಕೊಂಡಿದೆ. ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಹಿತಿ ಹಂಚಿಕೊಂಡಿದ್ದಾರೆ.



ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಅಮಿತ್ ಶಾ, ದೇಶದಲ್ಲಿ ಮಾದಕ ವಸ್ತುಗಳ ಜಾಲವನ್ನು ಸಂಪೂರ್ಣವಾಗಿ ಹತ್ತಿಕ್ಕಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕೆಳಮಟ್ಟದಿಂದ ಮೇಲಿನವರೆಗೆ ಎನ್‌ಸಿಬಿ ನಡೆಸಿದ ಕಾರ್ಯಾಚರಣೆ ದೊಡ್ಡ ಯಶಸ್ಸಿಗೆ ಕಾರಣವಾಗಿದೆ ಎಂದಿದ್ದಾರೆ. ಈ ಮಹತ್ವದ ಕಾರ್ಯಾಚರಣೆ ಮೂಲಕ ಅಂತಾರಾಷ್ಟ್ರೀಯ ಮಾದಕ ಜಾಲಕ್ಕೆ ದೊಡ್ಡ ಹೊಡೆತ ನೀಡಲಾಗಿದೆ ಎಂದು ಹೇಳಿದ್ದಾರೆ. ಇದೇ ವೇಳೆ, ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎನ್‌ಸಿಬಿ ಅಧಿಕಾರಿಗಳು, ಸಿಬ್ಬಂದಿಯನ್ನು ಶಾ ಅಭಿನಂದಿಸಿದ್ದಾರೆ.

➡ ಪುಟ ೪

- ಆಪರೇಷನ್ ಗ್ಲೋಬಲ್-ಹಂಟ್‌ನಲ್ಲಿ ದಾವೂದ್ ಸಹಚರ ಸಲೀಂ ಡೋಲಾ ಬಂಧನದ ಬೆನ್ನಲ್ಲೇ ಮಹತ್ವದ ಕಾರ್ಯಾಚರಣೆ
- ಸುಮಾರು 1,745 ಕೋಟಿ ರೂ. ಮೌಲ್ಯದ 349 ಕೆಜಿ ಉನ್ನತ ದರ್ಜೆಯ ಕೊಕೇನ್ ವಶಪಡಿಸಿಕೊಂಡ ಎನ್‌ಸಿಬಿ
- ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಎನ್‌ಸಿಬಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಮಿತ್ ಶಾ ಅಭಿನಂದನೆ

ನೌಕರರ ವೇತನ ನೀಡಲಾಗದ ಸರ್ಕಾರ: ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯ ಆಡಳಿತಯಂತ್ರ ಕುಸಿತ: ಬಿವೈವಿ

• **ಬೆಂಗಳೂರು:** ನೌಕರರ ವೇತನಕ್ಕೂ ಹಣ ನೀಡಲಾಗದ ರಾಜ್ಯದ ಕಾಂಗ್ರೆಸ್ ಸರ್ಕಾರ ದಿವಾಳಿಯಾಗಿದ್ದು, ಆಡಳಿತಯಂತ್ರ ಸಂಪೂರ್ಣ ಕುಸಿದು ಬಿದ್ದಿದೆ. ಭ್ರಷ್ಟಾಚಾರ ಮಿತಿಮೀರಿ ಹೋಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.



ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಹಣ ನೀಡುತ್ತಿಲ್ಲ, ಕೇಂದ್ರ ಸರ್ಕಾರದ ಮೇಲೆ ಆರೋಪ ಹೊರಿಸುವುದರಲ್ಲಿ ತೊಡಗಿದೆ ಎಂದು ದೂರಿದರು. ಆಡಳಿತ ಪಕ್ಷದ ಆಂತರಿಕ ಕಚ್ಚಾಟ ಹೆಚ್ಚಾಗಿದೆ. ಸಿಎಂ ಕುರ್ಚಿಗೆ ಪೈಪೋಟಿ ಹೆಚ್ಚಾಗಿದೆ. ಆಡಳಿತ ಪಕ್ಷದ ಶಾಸಕರು ಸಚಿವ ಸ್ಥಾನಕ್ಕಾಗಿ ದಿಲ್ಲಿಯಲ್ಲಿ ವಾಸ್ತವ್ಯ ಹೂಡಿದ್ದಾರೆ. ಒಮ್ಮೆ ಡಿ.ಕೆ.ಶಿವಕುಮಾರ್ ಬೆಂಬಲಿಗರು ದಿಲ್ಲಿಗೆ ಹೋದರೆ, ಮತ್ತೊಮ್ಮೆ ಸಿದ್ದರಾಮಯ್ಯ ಅವರ ಬೆಂಬಲಿಗರು ದಿಲ್ಲಿಯಲ್ಲಿ ಬೀಡುಬಿಡುತ್ತಾರೆ.

➡ ಪುಟ ೪

ಹಿಂದುಗಳಿಗೆ ಅಪಮಾನ ಸಲ್ಲದು

ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆ ಅಲ್ಪಸಂಖ್ಯಾತರಿಗೆ ಮತ್ತೆ 650 ಕೋಟಿ ರೂ. ನೀಡಲು ತೀರ್ಮಾನ ಕೈಗೊಂಡಿದೆ. ಬಿಜೆಪಿ ಅಲ್ಪಸಂಖ್ಯಾತರ ವಿರೋಧಿಗಳಲ್ಲ, ಆದರೆ, ಈ ಸರ್ಕಾರ ಮಾತ್ರ ಪದೇ ಪದೇ ಅಲ್ಪಸಂಖ್ಯಾತರನ್ನು ಓಲೈಸಲು ಹಣ ನೀಡುತ್ತಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಹಿಂದುಗಳು ಮತ ಹಾಕಿಲ್ಲವೇ? ಹಿಂದುಗಳಿಗೆ ಮುಖ್ಯಮಂತ್ರಿಗಳು ಅಪಮಾನ ಮಾಡುತ್ತಿರುವುದು ಅಕ್ಷಮ್ಯ. ಅಲ್ಪಸಂಖ್ಯಾತರನ್ನು ಓಲೈಸುವ ನಿರ್ಧಾರವನ್ನು ಪದೇ ಪದೇ ಕೈಗೊಳ್ಳುತ್ತಿರುವ ಈ ಸರ್ಕಾರವನ್ನು ರಾಜ್ಯದ ಜನ ಕ್ಷಮಿಸುವುದಿಲ್ಲ. ಹಿಂದುಗಳಿಗೆ ಅಪಮಾನ ಸಲ್ಲದು ಎಂದು ವಿಜಯೇಂದ್ರ ಹೇಳಿದರು.

ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ

- ಆಮದು ಆಧಾರಿತ ಆದಾಯದಲ್ಲಿ ಭಾರಿ ಏರಿಕೆ
- ಇದೇ ಮೊದಲ ಬಾರಿಗೆ ದಾಖಲೆಯ ಜಿಎಸ್‌ಟಿ ಸಂಗ್ರಹ
- ಏಪ್ರಿಲ್‌ನಲ್ಲಿ 2.43 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ



• **ಹೊಸದಿಲ್ಲಿ:** ಏಪ್ರಿಲ್ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ಶೇ.8.7 ಏರಿಕೆಯೊಂದಿಗೆ ದಾಖಲೆ ಮಟ್ಟದ 2.43 ಲಕ್ಷ ಕೋಟಿ ರೂ. ತಲುಪಿದೆ. ಸರ್ಕಾರ ಬಿಡುಗಡೆ ಮಾಡಿದ ಅಂಕಿ-ಅಂಶಗಳ ಪ್ರಕಾರ, ಆಮದು ಆಧಾರಿತ ಆದಾಯದಲ್ಲಿ ವೇಗವಾದ ಏರಿಕೆ ಈ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಇದಕ್ಕೂ ಮೊದಲು ಗರಿಷ್ಠ ಜಿಎಸ್‌ಟಿ ಸಂಗ್ರಹವು ಕಳೆದ ವರ್ಷದ ಏಪ್ರಿಲ್‌ನಲ್ಲಿ 2.23 ಲಕ್ಷ ಕೋಟಿ ರೂ. ದಾಖಲಾಗಿತ್ತು. ಈ ಬಾರಿ ಆ ದಾಖಲೆಯನ್ನು ಮೀರಿ ಹೊಸ ಗರಿಷ್ಠ ಮಟ್ಟ ತಲುಪಲಾಗಿದೆ.

➡ ಪುಟ ೪

ಬೇಕೋ? ಬೇಡವೋ? ನಿರ್ಧರಿಸಲು ಸಮಿತಿ ರಚನೆ

ತೂಗುಯ್ಯಾಲೆಯಲ್ಲಿ ಕೆಎಟಿ

▸ ವೀರಣ್ಣ ಬಳಿಗಾರ

ದಿಗಂತ ವಿಶೇಷ

• **ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರ ನೇಮಕಾತಿ ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯನ್ನು(ಕೆಎಸ್‌ಎಟಿ) ರದ್ದುಪಡಿಸದೆ ಮುಂದುವರಿಸಬೇಕೆಂಬುವುದು ಸರ್ಕಾರಿ ನೌಕರರ ಒತ್ತಾಯವಾಗಿದೆ.

ಕೇಂದ್ರ ಸರ್ಕಾರದ 1986ರ ಅಧಿಸೂಚನೆ ಮೇರೆಗೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಪ್ರಧಾನ ಪೀಠವನ್ನು ಸ್ಥಾಪಿಸಲಾಯಿತು. ನಂತರ ಬೆಳಗಾವಿ ಹಾಗೂ ಕಲಬುರ್ಗಿ ಜಿಲ್ಲೆಗಳಲ್ಲಿ ಸಂಚಾರಿ ಪೀಠಗಳನ್ನು 2018 ಮತ್ತು 2019ರಲ್ಲಿ ಸ್ಥಾಪಿಸಲಾಯಿತು.

ರಾಜ್ಯ ಸರ್ಕಾರವು ಫೆಬ್ರವರಿಯಲ್ಲಿ ಕೆಎಸ್‌ಎಟಿ ರದ್ದುಪಡಿಸುವ ಅಥವಾ ಮುಂದುವರಿಸುವ ಸಂಬಂಧ ನ್ಯಾ.ಉಮೇಶ್ ಎಂ.ಅಡಿಗ ಅವರ ನೇತೃತ್ವದಲ್ಲಿ ಜ್ಯುಡಿಷಿಯಲ್ ಇಂಪ್ಯಾಕ್ಟ್ ಅಸೆಸ್ಮೆಂಟ್ ಕಮಿಟಿ ರಚಿಸಿದೆ. ಕೆಎಸ್‌ಎಟಿ ರದ್ದುಪಡಿಸಬೇಕೋ ಅಥವಾ ಮುಂದುವರಿಸಬೇಕೋ ಎಂಬುವುದರ ಕುರಿತು ಅಧ್ಯಯನ ಕೈಗೊಂಡಿರುವ ಜ್ಯುಡಿಷಿಯಲ್ ಇಂಪ್ಯಾಕ್ಟ್ ಅಸೆಸ್ಮೆಂಟ್ ಕಮಿಟಿಯು ಸರ್ಕಾರಿ ನೌಕರರ ಸಂಘಗಳಿಗೆ ಪತ್ರ ಬರೆದಿದೆ.

➡ ಪುಟ ೪



ನೌಕರರಿಗೆ ಅನಾನುಕೂಲ

ನ್ಯಾಯಮಂಡಳಿ ರದ್ದುಪಡಿಸಿದಲ್ಲಿ ಸರ್ಕಾರಿ ನೌಕರರು ತಮ್ಮ ದಾವೆಗಳನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಬೇಕಾಗುತ್ತದೆ. ಇದರಿಂದ ಸಮಯ ಮತ್ತು ವೆಚ್ಚ, ಎರಡೂ ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ, ನ್ಯಾಯಾಂಗ ವ್ಯವಸ್ಥೆಯ ಸುಗಮ ನಿರ್ವಹಣೆಗೆ ಹಾಗೂ ಸರ್ಕಾರಿ ನೌಕರರ ಹಿತದೃಷ್ಟಿಯಿಂದ ನ್ಯಾಯಮಂಡಳಿಯನ್ನು ಮುಂದುವರಿಸುವುದು ಅತ್ಯಂತ ಅಗತ್ಯವಾಗಿದೆ.

➡ ಪುಟ ೪

ಡಿಸಿ ನೇತೃತ್ವದಲ್ಲಿ ತನಿಖೆಗೆ ಚುರುಕು

ಬೌರಿಂಗ್ ಆಸ್ಪತ್ರೆ ತಡೆಗೋಡೆ ಕುಸಿತ ಪ್ರಕರಣ

• **ಬೆಂಗಳೂರು:** ನಗರದ ಬೌರಿಂಗ್ ಆಸ್ಪತ್ರೆ ಆವರಣದ ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರಚಿಸಿರುವ ತಂಡಗಳು ತನಿಖೆ ಚುರುಕಾಗಿಸಿದ್ದು, ಗೋಡೆ ನಿರ್ಮಾಣ, ಅನುದಾನ ಬಿಡುಗಡೆ ಸೇರಿದಂತೆ ಇತರೆ ಮಾಹಿತಿ ಸಂಗ್ರಹಿಸಲು ಸಿದ್ಧತೆ ನಡೆಸಿದೆ. ಘಟನೆ ಸಂಭವಿಸಿದ ಆವರಣ ಗೋಡೆಯನ್ನು ದುರ್ಬಲಗೊಳಿಸುವ ಬಗ್ಗೆ ಯಾವುದೇ ಕಾರ್ಯಗಳನ್ನು ಅಲ್ಲಿನ ಆವರಣದಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೈಗೊಳ್ಳಲಾಗಿತ್ತದೆ ಎಂಬುದರ ಬಗ್ಗೆ ತನಿಖಾಧಿಕಾರಿಗಳು ಪರಿಶೀಲಿಸಲಿದ್ದಾರೆ.

➡ ಪುಟ ೪

ಕಿರುಸುದ್ದಿ

ಸಿನೇಮಾ ಕಲಾವಿದರಿಗೆ ರಂಗಭೂಮಿ ಬುನಾದಿ



◆ **ಧಾರವಾಡ:** ಬಹುತೇಕ ಸಿನೆಮಾ ಕಲಾವಿದರಿಗೆ ರಂಗಭೂಮಿ ಬುನಾದಿ ಹಾಕಿದೆ. ನಾಟಕ, ಸಂಗೀತ, ಸಾಹಿತ್ಯ ಜ್ಞಾನ ಕಲಾವಿದರ ಸಿನೆಮಾ ಬೆಳವಣಿಗೆಗೂ ಕೂಡ ದಾರಿದೀಪವಾಗಿದೆ ಎಂದು ಹಿರಿಯ ನಟಿ ಉಮಾಶ್ರೀ ಹೇಳಿದರು. ನಗರದ ರಂಗಾಯಣ ಅಭಿನಯ-ಅಭಿವ್ಯಕ್ತಿ ಧ್ಯೇಯದೊಂದಿಗೆ ಹಮ್ಮಿಕೊಂಡ ಮಕ್ಕಳ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿ, ರಂಗಭೂಮಿಯಲ್ಲಿ ಕೆಲಸ ಮಾಡಿದರೆ, ಸಿನೆಮಾ ಅವಕಾಶಗಳು ಒದಗಿ ಬರಲಿವೆ ಎಂದರು. ಉಮಾಶ್ರೀ ಅವರಿಗೆ ರಂಗಾಯಣದಿಂದ ಸನ್ಮಾನಿಸಲಾಯಿತು. ರಂಗಾಯಣದ ನಿರ್ದೇಶಕ ಝುಕೀರ ನದಾಫ್, ಆಡಳಿತಾಧಿಕಾರಿಗಳಾದ ಶಶಿಕಲಾ ಹುಡೇದ, ಗಿರೀಶ ಕರಿಯಪ್ಪನವರ, ಅರುಣಕುಮಾರ ಮೇದಾರ, ಸುನಂದ ನಿಂಬನಗೌಡರ ಇದ್ದರು.

ನಾಟಕೋತ್ಸವ ಇಂದು

◆ **ಧಾರವಾಡ:** ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ಚಿಣ್ಣರ ನಾಟಕೋತ್ಸವ ಉದ್ಘಾಟನಾ ಸಮಾರಂಭ ಮೇ 2 ಮತ್ತು 3ರಂದು ರಂಗಾಯಣದ ಪಂ. ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ ನಡೆಯಲಿದೆ. ಮೇ 2ರ ಸಂಜೆ 5.30ಕ್ಕೆ ಸಾಹಿತಿ ಡಾ.ಬಸು ಬೇವಿನಗಿಡದ ನಾಟಕೋತ್ಸವ ಉದ್ಘಾಟಿಸಲಿದ್ದು, ಕನ್ನಡ-ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್. ಚನ್ನೂರ ಆಗಮಿಸಲಿದ್ದಾರೆ. ಮೇ 3ರ ಸಂಜೆ 5.30ಕ್ಕೆ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಶಿಬಿರದ ಸಮಾರೋಪ ಭಾಷಣ ಮಾಡಲಿದ್ದು, ರಂಗಾಯಣ ನಿರ್ದೇಶಕ ಝುಕೀರ ನದಾಫ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ತಿಳಿಸಿದ್ದಾರೆ.

ಅಭಿನಂದನಾ ಸಮಾರಂಭ



◆ **ಹುಬ್ಬಳ್ಳಿ:** ರಂಗ ರೇಖಾ ಕಲಾ ಬಳಗ ವತಿಯಿಂದ ನೃತ್ಯ ಗೀತಗಾಯನ ಅಭಿನಂದನಾ ಸಮಾರಂಭ ಗೋಕುಲ ರಸ್ತೆಯ ಲೋಹಿಯಾನಗರದ ರಾಧಕೃಷ್ಣ ನೃತ್ಯ ಅಕಾಡೆಮಿಯಲ್ಲಿ ನಡೆಯಿತು. ಖ್ಯಾತ ನೃತ್ಯ ಕಲಾವಿದೆ ಮನಿಷ ಶಿಂಧೆ ಅವರಿಗೆ ಗೌರವ ಡಾಕ್ಟರೇಟ್ ದೊರೆತ ಹಿನ್ನೆಲೆ ಅವರಿಗೆ ಅಭಿನಂದಿಸಲಾಯಿತು. ಸುಭಾಸ ಮೆಹರವಾಡೆ, ಗುರುಸಿದ್ದಪ್ಪ ಬಡಿಗೇರ, ಅನ್ನಪೂರ್ಣ ಉಂಡಿ, ತುಕರಾಮ ಕಟಾರೆ, ಮೋಹನ ಕಾಟಕರ, ಮೋಹನ ಗೌಳಿ, ಫಕ್ಕೀರಶ ಮುಗುಳಿ ಹಾಗೂ ಅಧ್ಯಕ್ಷತೆ ಕಲಾ ಬಳಗದ ಅಧ್ಯಕ್ಷ ಬಸವರಾಜ ಚಕ್ರಸಾಲಿ ವಹಿಸಿದ್ದರು. ಅವಿಘ್ನ ಶಿಂಧೆ ಹಾಗೂ ಆಶೀರ್ವಾದ ನೃತ್ಯ ಸಂಸ್ಥೆ ವತಿಯಿಂದ ಭರತನಾಟ್ಯ ಪ್ರದರ್ಶನ ನೀಡಿದರು. ತುಕಾರಾಮ ಕಟಾರೆ, ವೀರಭದ್ರಪ್ಪ ಹುಟಗಿ, ಬದರಿ ನಾರಯಣ ಕೊರಲ್ಳಿ ಅವರಿಂದ ಗೀತಗಾಯನ ಸಮಾರಂಭ ನಡೆಯಿತು. ವಿನೋದ ಅಂಗಡಿ, ಹರಿಶ ಧುಳೇ, ಶಿವಣ್ಣ ಪೆರೂರ, ಪ್ರಜ್ವಲ ಅನವಾಲ, ಶಿವಾನಂದ ದಾಸಪ್ಪನವರ, ಸಂಜಯ ನಡುವಿನಮನಿ, ಶೋಭಾ ಪವಾರ, ಗೌರಿ ಜಕರಡ್ಡಿ, ಶಕುಂತಲಾ ಬೀರಣ್ಣವರ ಇದ್ದರು.

ರಾಜಕೀಯ ಲಾಭಕ್ಕೆ ಬಾಲಿಶತನದ ಹೇಳಿಕೆ

◆ **ಧಾರವಾಡ:** ಯೋಗೇಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ವಿನಯ ಕುಲಕರ್ಣಿ ಮೆಚ್ಚಿಸಲು ಹಾಗೂ ತಮ್ಮ ರಾಜಕೀಯ ಲಾಭಕ್ಕಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಏಗನಗೌಡ ಅವರು, ಹೋರಾಟಗಾರ ಬಸವರಾಜ ಕೊರವರ ವಿರುದ್ಧ ನೀಡಿದ ಹೇಳಿಕೆ ಸರಿಯಲ್ಲ ಎಂದು ಬಸವರಾಜ ಕೊರವರ ಗೆಳೆಯರ ಬಳಗದ ಸದಸ್ಯ ಸುರೇಶ ಕೋರಿ ಹೇಳಿದರು. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಬಸವರಾಜ ಕೊರವರ ಅವರು ಬಿಟ್ಟಿ ಪ್ರಚಾರ ಪಡೆಯುವ ಅರವಿಂದ ಏಗನಗೌಡರ ಹೇಳಿಕೆ ಖಂಡನೀಯ. ಕೊರವರ ಅವರು ಪೊಲೀಸರ ಹಕ್ಕುಗಳು, ಪೆಕ್ಸಿ ಕಂಪನಿ, ಕೆಐಎಡಿಬಿ, ಪರಿಸರ ಸಂರಕ್ಷಣೆ, ಡೋನೇಷನ್ ಹಾವಳಿ, ರೈತಪರ ಹೋರಾಟ ಸೇರಿದಂತೆ ಅನೇಕ ಹೋರಾಟಗಳು ಮಾಡಿದ್ದಾಗಿ ಮಾಹಿತಿ ನೀಡಿದರು. ಬಸವರಾಜ ವಿರುದ್ಧ ಬಿಟ್ಟಿ ಪ್ರಚಾರ ಹೇಳಿಕೆ ಸಲ್ಲ. ಮೌನ ಮೆರವಣಿಗೆ ಜನತಾಂತ್ರಿಕ ಹಕ್ಕುಗಳಾದರೂ, ಅವುಗಳನ್ನು ನ್ಯಾಯಾಂಗದ ಮೇಲೆ ಅಪನಂಬಿಕೆ ಹುಟ್ಟಿಸುವ ಸಾಧನಗಳಾಗಿ ಬಳಸದೆ, ಕೋರ್ಟ್ ತೀರ್ಪು ಗೌರವಿಸಬೇಕು. ಇಲ್ಲವೇ ಕಾನೂನು ಹೋರಾಟ ಮಾಡಬೇಕು. ಅದುಬಿಟ್ಟು ಪ್ರಭಾವಕ್ಕೆ ಒಳಗಾಗಿ ಬಾಲಿಶತನದ ಹೇಳಿಕೆ ನೀಡುವುದು ಬಿಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ವಿಜಯಾನಂದ ವಕೀಲರು ಹಾಗೂ ವಿರೂಪಾಕ್ಷಿ ಮಾಚನೂರ ಇದ್ದರು.



ಧಾರವಾಡ: ಏಪ್ರೀಲ್ 27ನ್ನು ರಾಷ್ಟ್ರೀಯ ಗೋಸಮ್ಮಾನ ದಿವಸ ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ವೇದಮಾತಾ ಗೋಶಾಲೆ ಟ್ರಸ್ಟ್, ಶ್ರೀರಾಮ ಸೇನೆ, ಭಜರಂಗ ದಳ ಹಾಗೂ ಹಿಂದುಪರ ಸಂಘಟನೆಗಳು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು. ಮನಗುಂಡಿ ಗುರುಬಸವ ಮಹಾಮನೆಯ ಬಸವಾನಂದ ಸ್ವಾಮೀಜಿ ನೇತೃತ್ವದಲ್ಲಿ ಧಾರವಾಡ ತಹಶೀಲ್ದಾರ್ ಕಚೇರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು. ಟ್ರಸ್ಟ್ ಅಧ್ಯಕ್ಷ ಶ್ರೀಶೈಲ ತೆಕ್ಕಲಕೋಟೆ, ಉಪಾಧ್ಯಕ್ಷ ಮಹಾಂತೇಶ ಜಾಧವ, ರವಿ ಶೆಟ್ಟಿ, ಉಪಕಾರ್ಯದರ್ಶಿ ಶ್ರೀನಿವಾಸ ಕುಲಕರ್ಣಿ, ಮಹೇಶ ಕುಲಕರ್ಣಿ ಇತರರಿದ್ದರು.

ಉಪನ್ಯಾಸ: ವಿಶ್ಲೇಷಣಾತ್ಮಕ ಚರ್ಚೆ

◆ **ಹುಬ್ಬಳ್ಳಿ:** ನಗರದ ವಿದ್ಯಾನಗರದಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಜಾಗತಿಕ ಸಮಾಜದ ಮೇಲೆ ಯುದ್ಧದ ಪರಿಣಾಮ ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮಕ್ಕೆ ಹಿರಿಯ ಪತ್ರಕರ್ತ ಸಿದ್ದಯ್ಯ ಹಿರೇಮಠ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಉಪನ್ಯಾಸ ನೀಡಿದರು. ಯುದ್ಧವು ಜಾಗತಿಕ ಸಮಾಜದ ಮೇಲೆ ಉಂಟುಮಾಡುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಣಾಮಗಳ ಕುರಿತು ವಿಶ್ಲೇಷಣಾತ್ಮಕ ಚರ್ಚೆ ನಡೆಯಿತು.

ಈ ವೇಳೆ ಪೋಸ್ಟರ್ ಪ್ರೆಸೆಂಟೇಶನ್ ಸ್ಪರ್ಧೆಯನ್ನು ಸಹ ಆಯೋಜಿಸಲಾಯಿತು. ಸ್ಪರ್ಧೆಯಲ್ಲಿ ಭೂಮಿಕಾ ಪಾಟೀಲ್ ಮತ್ತು ಹರ್ಷ ಕುಬೆಳ್ಳಿ ಮೊದಲ ಬಹುಮಾನ ಪಡೆದುಕೊಂಡರು. ನೇತ್ರಾ ಕರ್ಪೂರ ಮತ್ತು ನದಿತಾ ತೆರದಾಳ ದ್ವಿತೀಯ ಸ್ಥಾನ ಪಡೆದರೆ, ಅನುಷಾ ಹಳ್ಳವಾರ ತೃತೀಯ ಸ್ಥಾನವನ್ನು ಪಡೆದುಕೊಂಡರು.

ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಪ್ರಸ್ತುತ ಜಾಗತಿಕ ವಿಷಯಗಳ ಬಗ್ಗೆ ಅರಿವು ಹೆಚ್ಚಿಸಲು ಸಹಾಯಕವಾಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.



ಹುಬ್ಬಳ್ಳಿ: ನಗರದ ವಿದ್ಯಾನಗರದಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್. ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಜಾಗತಿಕ ಸಮಾಜದ ಮೇಲೆ ಯುದ್ಧದ ಪರಿಣಾಮ ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಿತು.


ಅಂಬಲಿ ಹಳ್ಳದ ಅಬ್ಬರಕ್ಕೆ ಜಮೀನು ಜಲಾವೃತ | ರೈತರ ಆಕ್ರೋಶ

ಭದ್ರ ತಡೆಗೋಡೆ ನಿರ್ಮಾಣಕ್ಕೆ ಆಗ್ರಹ

◆ **ನವಲಗುಂದ:** ಪಟ್ಟಣದ ಇಬ್ರಾಹಿಂಪುರ ರಸ್ತೆಗೆ ಹೊಂದಿಕೊಂಡಿರುವ ಅಂಬಲಿ ಹಳ್ಳವು ಮಳೆ ಬಂದ ಸಂದರ್ಭದಲ್ಲಿ ಹಳ್ಳದ ನೀರು ಪಕ್ಕದ ಜಮೀನುಗಳಿಗೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿ ಮಾಡುತ್ತಿದೆ ಎಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಬಲಿ ಹಳ್ಳದ ಹೂಳು ತೆಗೆಯದ ಕಾರಣ ಹಾಗೂ ನೀರಿನ ಹರಿವಿನ ದಿಕ್ಕು ಬದಲಾಗಿರುವುದರಿಂದ ನೀರು ನೇರವಾಗಿ ಜಮೀನುಗಳಿಗೆ ನುಗ್ಗುತ್ತಿದೆ. ಇದರಿಂದ ವರ್ಷಪೂರ್ತಿ ಕಷ್ಟಪಟ್ಟು ಕಟ್ಟಿದ ಒಡ್ಡುಗಳು ಕ್ಷಣಾರ್ಧದಲ್ಲಿ ಕೊಚ್ಚಿ ಹೋಗುತ್ತಿವೆ. ಕೇವಲ ಬೆಳೆಯಲ್ಲದೆ ಫಲವತ್ತಾದ ಭೂಮಿಯೂ ಸವಕಳಿಯಾಗುತ್ತಿದ್ದು, ಸಣ್ಣ ಹಿಡುವಳಿದಾರರು ಬೀದಿಗೆ ಬರುವಂತಾಗಿದೆ. ನಮ್ಮ ಸರ್ವೇ ನಂಬರ್‌ಗಳು ಹಳ್ಳದ ಪಕ್ಕದಲ್ಲೇ ಇವೆ. ಪ್ರತಿ ಬಾರಿ ಮಳೆ ಬಂದಾಗಲೂ ನಮಗೆ ನಷ್ಟ ತಪ್ಪಿದ್ದಲ್ಲ. ಇಲ್ಲಿ ವೈಜ್ಞಾನಿಕವಾಗಿ ಹಳ್ಳವನ್ನು ಸ್ವಚ್ಛಗೊಳಿಸಿಲ್ಲ, ತಡೆಗೋಡೆ ನಿರ್ಮಿಸಿಲ್ಲ ಎಂದು ರೈತರಾದ ಬಸವರಾಜ ಮಲ್ಲದಾಸರ, ಹನುಮಂತಪ್ಪ ಹುಳಕಣ್ಣವರ ಹಾಗೂ ಸುರೇಶ ದೊಡ್ಡಮನಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಹಳ್ಳದ ಪಕ್ಕದಲ್ಲಿ ಭದ್ರವಾದ ತಡೆಗೋಡೆ ನಿರ್ಮಿಸದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಮಾಡುವುದಾಗಿ ಸ್ಥಳೀಯ ಆಡಳಿತಕ್ಕೆ ನೇರವಾಗಿ ಎಚ್ಚರಿಕೆಯನ್ನು ನೀಡಿದ್ದಾರೆ.

- ಅಂಬಲಿ ಹಳ್ಳದ ಪಕ್ಕದಲ್ಲಿರುವ ಸರ್ವೇ ನಂಬರ್ 144/1 ರಿಂದ 144/15 ರವರೆಗೆ ಹೊಂದಿರುವ ಜಮೀನುಗಳಿಗೆ ನುಗ್ಗುತ್ತಿರುವ ಹಳ್ಳದ ನೀರು
- ನೀರಾವರಿ ಇಲಾಖೆಯ ಅಧಿಕಾರಿಗಳು ಹಳ್ಳವನ್ನು ಸರಿಯಾಗಿ ಬಳಸದ ಕಾರಣ ಹೂಳು ಹಾಗೂ ಹಾಫ್ ತುಂಬಿದ್ದು, ನೀರು ಸರಾಗವಾಗಿ ಹರಿಯದೆ ಪಕ್ಕದ ಹೊಲಗಳಿಗೆ ನುಗ್ಗುತ್ತಿದ್ದು, ಜಮೀನಿನ ಒಡ್ಡು ಒಡೆದು ಹೋಗುತ್ತಿವೆ
- ಈ ಹಳ್ಳದ ಪಕ್ಕದಲ್ಲಿ ಕೂಡಲೇ ತಡೆಗೋಡೆ ನಿರ್ಮಾಣ ಮಾಡಿದರೆ ಸಣ್ಣ ಹಿಡುವಳಿದಾರರ ಜಮೀನುಗಳು ಸಂಪೂರ್ಣವಾಗಿ ನಾಶವಾಗುವುದು ತಪ್ಪುತ್ತದೆ ಎನ್ನುತ್ತಿದ್ದಾರೆ ರೈತರು





ಹೊಲಗಳಿಗೆ ನೀರು

ಅಂಬಲಿ ಹಳ್ಳದ ಪಕ್ಕದಲ್ಲಿರುವ ಜಮೀನುಗಳಿಗೆ ಹಳ್ಳದ ನೀರು ನುಗ್ಗುತ್ತಿದೆ. ಹಳ್ಳದಲ್ಲಿ ಹೂಳು ತುಂಬಿರುವ ಕಾರಣ, ನೀರು ಸರಾಗವಾಗಿ ಹರಿಯದೆ ಪಕ್ಕದ ಹೊಲಗಳಿಗೆ ನುಗ್ಗುತ್ತಿದೆ. ಇದರಿಂದಾಗಿ ಜಮೀನಿನ ಬದುಗಳು ಒಡೆದು ಹೋಗುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಈ ಹಳ್ಳದ ಪಕ್ಕದಲ್ಲಿ ಕೂಡಲೇ ತಡೆಗೋಡೆ ನಿರ್ಮಾಣ ಮಾಡಬೇಕು ಎಂದು ರೈತ ಹನುಮಂತಪ್ಪ ಹುಳಕಣ್ಣವರ ಆಗ್ರಹಿಸಿದರು.

> ಇಬ್ರಾಹಿಂಪುರ ರಸ್ತೆಗೆ ಹೊಂದಿಕೊಂಡಿರುವ ಅಂಬಲಿ ಹಳ್ಳವು ತುಂಬಿ ಹರಿಯುತ್ತಿದ್ದು, ಹಳ್ಳದ ನೀರು ಪಕ್ಕದ ಜಮೀನುಗಳಿಗೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿ ಮಾಡುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಜರುಗಿಸಬೇಕು.
> ■ **ರಾಜು ಅಳಗವಾಡಿ,** ಸ್ಥಳೀಯ ರೈತ, ನವಲಗುಂದ

ಹಳ್ಳದ ನೀರು ನುಗ್ಗಿ ಮಣ್ಣಿನ ಸವಕಳಿ

ಅಂಬಲಿ ಹಳ್ಳದ ಪಕ್ಕದಲ್ಲಿರುವ ಸಣ್ಣ ಹಿಡುವಳಿದಾರರ ಜಮೀನುಗಳಲ್ಲಿ ಹಳ್ಳದ ನೀರು ನುಗ್ಗಿ ಮಣ್ಣಿನ ಸವಕಳಿಯಾಗುತ್ತಿದೆ. ಫಲವತ್ತಾದ ಮಣ್ಣು ಕೊಚ್ಚಿ ಹೋಗುತ್ತಿದ್ದು, ಸಣ್ಣ ಹಿಡುವಳಿದಾರರ ಜಮೀನು ಸಂಪೂರ್ಣನಾಶವಾಗುತ್ತವೆ. ಈ ಕುರಿತು ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ಕರ್ತವ್ಯಲೋಪ ಆರೋಪದಡಿ ಪ್ರಕರಣ ದಾಖಲು ಮಾಡುತ್ತೇನೆ. ನೀರಾವರಿ ಇಲಾಖೆಯೊಳಗೆ ರೈತರು ಏನೇ ಸಮಸ್ಯೆ ಹೇಳಿದರೂ ಇಲಾಖೆಯವರು ಸಿಬ್ಬಂದಿ ಕೊರತೆಯಿದೆ, ಅನುದಾನ ಇಲ್ಲ ಅನ್ನುತ್ತಾರೆ ಎಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಆರೋಪಿಸಿದರು.

ಸುರಕ್ಷತೆಗೆ ಮೊದಲ ಆದ್ಯತೆ ನೀಡಿ

◆ **ಹುಬ್ಬಳ್ಳಿ:** ಇಂಧನ ಇಲಾಖೆಯಲ್ಲಿ ಕೆಲಸ ಮಾಡುವವರು ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಸುರಕ್ಷತಾ ಕಿಟ್‌ನ್ನು ತಪ್ಪದೆ ಬಳಸಬೇಕು. ಒಮ್ಮೆ ಹೋದ ಜೀವ ಏನು ಕೊಟ್ಟರೂ ಪುನಃ ಮರಳುವುದಿಲ್ಲ, ಅವರನ್ನು ನಂಬಿದ ಕುಟುಂಬ ಬೀದಿಪಾಲಾಗುತ್ತದೆ. ಹೀಗಾಗಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಎಂದು ಹೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ವೈಶಾಲಿ ಎಂ.ಎಲ್. ಹೇಳಿದರು.

ಶುಕ್ರವಾರ ಹೆಸ್ಕಾಂ ನಿಗಮ ಕಚೇರಿಯಲ್ಲಿ ನಡೆದ ವಿಶ್ವ ಕಾರ್ಮಿಕರ ದಿನಾಚರಣೆ ಹಾಗೂ ಹೆಸ್ಕಾಂ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದ ಅವಧಿ (2025-26)ಯಲ್ಲಿ ಕರ್ತವ್ಯ ನಿರತ ಸಂದರ್ಭದಲ್ಲಿ ವಿದ್ಯುತ್ ಅಪಘಾತದಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ಸಂತೈಸುವ ಕಾರ್ಯಕ್ರಮದಲ್ಲಿ ಮಾತನಾಡಿ, ಇಂಧನ ಇಲಾಖೆಗೆ ಪವರ್‌ಮ್ಯಾನ್‌ಗಳು ಬೆನ್ನುಲುಬು. ವಿದ್ಯುತ್‌ಅವಘಡಗಳಿಂದ ಜೀವಹಾನಿಯಾಗಿ, ಮೃತರ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತದೆ. ಆದ್ದರಿಂದ ಪವರ್ ಮ್ಯಾನ್‌ಗಳು ಕೆಲಸ ಮಾಡುವ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದರಿಂದ ವಿದ್ಯುತ್ ಅವಘಡಗಳ ಪ್ರಮಾಣ ತಗ್ಗಿಸಬಹುದು ಎಂದರು. ಮುಂಡರಗಿ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮೃತ ಪವರ್ ಮ್ಯಾನ್ ಅವರ ಕುಟುಂಬಕ್ಕೆ ಒಂದು ಕೋಟಿ ರೂ. ಮೊತ್ತದ ವಿಮಾ ಹಣದ ಚೆಕ್‌ನ್ನು ನೀಡಲಾಯಿತು. ಏ.1, 2025 ರಿಂದ ಮಾರ್ಚ್ 31, 2026ರ ಅವಧಿಯಲ್ಲಿ ಕರ್ತವ್ಯ ನಿರತ ಸಂದರ್ಭದಲ್ಲಿ ವಿದ್ಯುತ್ ಅಪಘಾತಕ್ಕೀಡಾಗಿ ಮರಣ ಹೊಂದಿದ ಪವರ್‌ಮ್ಯಾನ್‌ಗಳಾದ ಮಂಜಪ್ಪ ಹನುಮಂತಪ್ಪ ಗರಡ್ಡಿ, ಮಹಮದಸಾಬ ಖಾದರಸಾಬ ಬಿರ್ಜೆ, ಗಂಗಾಧರಯ್ಯ ರುದ್ರಯ್ಯ ಹಿರೇಮಠ, ರಾಹುಲ ಭಾವುರಾವ್ ಪಾಟೀಲ ಹಾಗೂ ಮಾರುತಿ ಭೀಮಪ್ಪ ಅವಳಿ ಕುಟುಂಬದವರಿಗೆ ಸ್ಮರಣಿಕೆ ನೀಡಿ ಸಂತೈಸಲಾಯಿತು. ಹೆಸ್ಕಾಂನ ತಾಂತ್ರಿಕ ನಿರ್ದೇಶಕ ಜಗದೀಶ್ ಎಸ್., ಪ್ರಧಾನ ವ್ಯವಸ್ಥಾಪಕ (ಆ ಮತ್ತು ಮಾ.ಸಂ.ಅ) ಮೊಹಮ್ಮದ ಖಿಜರ್, ಹೆಸ್ಕಾಂ, ಕ.ವಿ.ಪ್ರ.ನಿ. ಸಂಘದ ಉಪಾಧ್ಯಕ್ಷ ಹಾಗೂ ಕ.ವಿ.ಮಂ. ಪ.ಜಾ. ಮತ್ತು ಪ.ಪಂ. ಕಲ್ಯಾಣ ಸಂಸ್ಥೆಯ ಉಪಾಧ್ಯಕ್ಷ ವಿಜಯ ಎಲ್. ಗುಂಜೀಕರ್, ಹೆಸ್ಕಾಂ ಮತ್ತು ಕ.ವಿ.ಮಂ. ಇಂಜಿನಿಯರ್‌ಗಳ ಸಂಘದ ಉಪಾಧ್ಯಕ್ಷ ರಾಜೇಶ ಕಲ್ಯಾಣಶೆಟ್ಟಿ, ಕ.ವಿ.ಪ್ರ.ನಿ. ನೌಕರರ ಸಂಘದ ಉಪಾಧ್ಯಕ್ಷ ಪಿ.ಎಸ್. ಶಿಂಧೆ, ಸೇರಿದಂತೆ ಹೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಕಾರ್ಮಿಕ ವಿರೋಧಿ ಧೋರಣೆ ಸಲ್ಲ: ಬಡಿಗೇರ

◆ **ಧಾರವಾಡ:** ಕಾರ್ಮಿಕರು ಹೋರಾಡಿ ಪಡೆದ ಕಾಯ್ದೆಗಳನ್ನು ಇಂದು ಬಂಡವಾಳ ಶಾಹಿ ಪರವಾಗಿ ತಿದ್ದುಪಡಿ ಮಾಡಲಾಗುತ್ತಿದೆ. ಇದು ಶ್ರಮಿಕ ವರ್ಗಕ್ಕೆ ಮಾಡಿದ ದ್ರೋಹ ಎಂದು ಅಖಿಲ ಭಾರತ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಜಿಲ್ಲಾಧ್ಯಕ್ಷ ಗಂಗಾಧರ ಬಡಿಗೇರ ಹೇಳಿದರು.

ಅಖಿಲ ಭಾರತ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿದ ಅವರು, ಸರ್ಕಾರಗಳು ಕಾರ್ಮಿಕ ವಿರೋಧಿ ಧೋರಣೆ ಅನುಸರಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು. ಬೆಲೆ ಏರಿಕೆ ಕಾಲದಲ್ಲಿ ಕಾರ್ಮಿಕರಿಗೆ ಬದುಕಲು ಪೂರಕವಾದ ವೈಜ್ಞಾನಿಕ ಕನಿಷ್ಠ ವೇತನ ಸರ್ಕಾರ ತಕ್ಷಣ ಜಾರಿಗೆ ತರಬೇಕು. ಅಲ್ಲದೇ ಪಿಎಫ್, ರಜೆಯ ಜೊತೆ ಸೇವಾ ಭದ್ರತೆ ನೀಡಬೇಕು. ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಲು ಆಗ್ರಹಿಸಿದರು.

ಅಧ್ಯಕ್ಷತೆ ವಹಿಸಿ ಮಹಿಳಾ ಕಾರ್ಮಿಕರ ಮತ್ತು ಅಸಂಘಟಿತ ವಲಯದ ಸಮಸ್ಯೆ ಕುರಿತು ಮಾತನಾಡಿದ ಸಂಘಟನೆ ಮುಖ್ಯಸ್ಥೆ ಭುವನಾ ಬಳ್ಳಾರಿ, ವಿವಿಧ ಕ್ಷೇತ್ರದಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನದಲ್ಲೂ ತಾರತಮ್ಯ ನಡೆಯುತ್ತಿದೆ ಎಂದು ದೂರಿದರು. ಗುತ್ತಿಗೆ ಆಧಾರಿತ ಕೆಲಸದಲ್ಲಿ ಭದ್ರತೆ ಇಲ್ಲದೆ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿಯೊಬ್ಬ ಕಾರ್ಮಿಕರಿಗೂ ಪಿಂಚಣಿ ಹಾಗೂ ಆರೋಗ್ಯ ವಿಮೆ ಸೌಲಭ್ಯಗಳು ಸಿಗಬೇಕು. ಕಾರ್ಮಿಕರು ಇವೆಲ್ಲ ಸೌಲಭ್ಯಗಳು ಪಡೆಯಲು ಸಂಘಟಿತ ಹೋರಾಟ ಒಂದೇ ದಾರಿ ಎಂದರು.

ಕಾರ್ಯಕ್ರಮದಲ್ಲಿ ಸಂಘಟನೆ ಪದಾಧಿಕಾರಿಗಳಾದ ಭೀಮಸೇನ್ ಎಣ್ಣಿ, ಕಲ್ಲಪ್ಪ ಆಳಗವಾಡಿ, ಶ್ರೀನಾಥ ದುಂಡಪ್ಪನವರ, ಯೋಗಪ್ಪ ಜ್ಯೋತೆಪ್ಪನವರ, ಮಾರುತಿ ವಿಟೋಜಿ, ರೇಣುಕಾ ಬೋಗಾರ, ನಂದಾ ದೊಡಮನಿ, ಗೀತಾ ಮಲ್ಲನಗೌಡರ, ಶೈನಾಜ್ ಹುಡೇದಮನಿ, ಪದ್ಮಾವತಿ ಪತ್ತಾರ ಇದ್ದರು. ಇದಕ್ಕೂ ಮೊದಲು ಎಐಯುಟಿಯುಸಿ ಸಂಘಟನೆಯ ಕೆಂಪು ಧ್ವಜವನ್ನು ಹಾರಿಸಿ, ಶಿಕಾಗೋ ಹೋರಾಟದ ಹುತಾತ್ಮರಿಗೆ ಸ್ಮರಣಾಂಜಲಿ ಅರ್ಪಿಸಿತು. ಬಳಿಕ ಕಡಪಾ ಮೈದಾನದಿಂದ ಸಾಹಿತ್ಯ ಭವನದ ಆವರಣದವರೆಗೂ ಭವ್ಯ ಮೆರವಣಿಗೆ ನಡೆಸಿ, ಕಾರ್ಮಿಕರ ಐಕ್ಯತೆ ಜಿಂದಾಬಾದ್ ಎಂಬ ಘೋಷಣೆ ಮೊಳಗಿಸಿದರು.



ಬೀಳ್ಕೊಡುಗೆ ಸಮಾರಂಭ: ಸನ್ಮಾನ

◆ **ನವಲಗುಂದ:** ತಾಂತ್ರಿಕವಾಗಿ ಹೆಚ್ಚು ಪ್ರಾವಿಣ್ಯತೆ ಹೊಂದಿರುವ, ನವೀನ ಸಾಹೇಬರನ್ನು ನಾನು ಸಂಭೋದನೆಗಾಗಿ ಮಾತ್ರ ಸಹೋದರರು ಎಂದು ಕರೆಯುತ್ತಿಲ್ಲ, ನಿಜವಾಗಿಯೂ ನಾನು ಅವರನ್ನು ಸಹೋದರರಂತೆ ಕಂಡಿದ್ದೇನೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ ಪಾನಘಂಟಿ ಹೇಳಿದರು.

ಅವರು ಸಿವಿಲ್ ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯದ ನ್ಯಾಯಧೀಶ ನವೀನ ಎಫ್ ಡಿಸೋಜಾ ವರ್ಗಾವಣೆ ಹಿನ್ನೆಲೆ ಬೀಳ್ಕೊಡುವ ಸಮಾರಂಭದ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.ಹಿರಿಯ ಸಿವಿಲ್ ನ್ಯಾಯಾಲಯದ ಸಿಬ್ಬಂದಿ, ಪೊಲೀಸ್ ಇಲಾಖೆ ಹಾಗೂ ಅಬಕಾರಿ ಇಲಾಖೆಯ ವತಿಯಿಂದ ಸನ್ಮಾನಿಸಿ ಮಾತನಾಡಿದರು.

ನ್ಯಾಯಾಧೀಶ ನವೀನ ಡಿಸೋಜಾ ಅವರು ಕೇವಲ ನ್ಯಾಯದಾನ ಮಾತ್ರ ಮಾಡಿದವರಲ್ಲ, ನ್ಯಾಯದಾನದೊಂದಿಗೆ ಜನಪರ ಕಾಳಜಿ ಅವರಲ್ಲಿತ್ತು. ಕಾಯ್ದೆಯಲ್ಲಿ ಏನಾದರೂ ಬದಲಾವಣೆಗಳಾಗಿ, ಕರ್ತವ್ಯ ನಿರ್ವಹಣೆಯಲ್ಲಿ ತೊಂದರೆಯಾದಾಗ ನ್ಯಾಯಾಧೀಶರ ಮಾರ್ಗದರ್ಶನದಲ್ಲಿ ನಾವು ಕರ್ತವ್ಯ ನಿರ್ವಹಿಸಿದ್ದೇವೆ ಎಂದರು.

ವರ್ಗಾವಣೆ ಹೊಂದಿರುವ ಶಿರಸ್ತೇದಾರ್ ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಕಿರಣ ನಿರೂಪಿಸಿದರು, ಗಿರೀಶ ಸ್ವಾಗತಿಸಿದರು, ಯಲ್ಲಮ್ಮ ವಂದಿಸಿದರು. ನ್ಯಾಯಾಲಯದ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ, ಅಧಿಕಾರಿಗಳು, ಅಬಕಾರಿ ಇಲಾಖಾ ಕಚೇರಿಯ ಪೊಲೀಸ್ ನಿರೀಕ್ಷರು, ಉಪ ನಿರೀಕ್ಷಕರು ಹಾಗೂ ಸಿಬ್ಬಂದಿ ಇದ್ದರು.



ಕೂಲಿಕಾರರ ವಲಸೆ ತಡೆಗೆ ಕ್ರಮ: ಸಾವಂತ

◆ **ಕಲಘಟಗಿ:** ಗ್ರಾಮೀಣ ಕೂಲಿಕಾರರಿಗೆ ತೊಂದರೆ ಆಗದಂತೆ, ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಕೂಲಿಕಾರರಿಗೆ ಕೂಲಿ ಸಿಗಲು ನಮ್ಮ ಎಲ್ಲಾ ಸಿಬ್ಬಂದಿ ಪ್ರಯತ್ನ ಮಾಡುತ್ತಾ ಇದ್ದೇವೆ. ಸಧ್ಯಕ್ಕೆ ಹಳೆ ಮಾನದಂಡದ ಕೂಲಿ ನೀಡುತ್ತಿದ್ದೇವೆ, ಕೂಲಿಕಾರರು ವಲಸೆ ಹೋಗುವುದನ್ನು ತಡೆಯುತ್ತೇವೆ ಎಂದು ತಾಲೂಕ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರುಶುರಾಮ ಸಾವಂತ ಹೇಳಿದರು.

ಅವರು ತಾಲೂಕಿನ ಸಂಗಮೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ದೊಡ್ಡ ಕೆರೆಯಲ್ಲಿ ಹೂಳು ತೆಗೆಯುವ ಸಂಧರ್ಭದಲ್ಲಿ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿ, ಕೇಂದ್ರ, ಹಾಗೂ ರಾಜ್ಯ ಸರ್ಕಾರಗಳು ಗ್ರಾಮಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ಸಮಾಜದ, ದೇಶದ ಅಭಿವೃದ್ಧಿಗೆ ಶ್ರಮಿಸುತ್ತಾ ಇರುತ್ತವೆ. ಈ ಹಿಂದೆ ಕೇಂದ್ರ ಸರ್ಕಾರವು ನರೇಗಾ ಯೋಜನೆಯನ್ನು ಅನುಷ್ಠಾನಿಸಿ ಗ್ರಾಮಗಳ ವ್ಯವಸ್ಥೆಗಳನ್ನು ಗಮನಾರ್ಹವಾಗಿ ಬದಲಾಯಿಸಿದೆ. ಈಗ ಕೇಂದ್ರ, ಸರ್ಕಾರವು ಯೋಜನೆಯಲ್ಲಿ ಸ್ವಲ್ಪ ಬದಲಾವಣೆ ತರುತ್ತಿದೆ, ವಿಬಿಜಿ ರಾಮ್ ಜಿ ಎಂದು ನಾಮಕರಣ ಮಾಡಿದೆ ಎಂದರು. ಬಿಸಿಲು ತುಂಬಾ ಇರುವುದರಿಂದ ನಿಯಮಿತವಾಗಿ ನೀರು ಸೇವಿಸಿರಿ, ಕೆಲಸದ ಸ್ಥಳದಲ್ಲಿ ನೆರಳು, ನೀರು ವ್ಯವಸ್ಥೆ ಇರಲೇಬೇಕು ಎಂದರು.



45ಕ್ಕೂ ಹೆಚ್ಚು ಕೂಲಿಕಾರರು ಹೂಳು ತೆಗೆಯುವ ಕೆಲಸಕ್ಕೆ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನರೇಗಾ ಸಹಾಯಕ ನಿರ್ದೇಶಕ ಗಿರೀಶ ಕೋರಿ, ಪಿಡಿಒ ಸವಿತಾ ಕಬ್ಬೇರ, ಐಇಸಿ ಸಂಯೋಜಕ ಎಸ್. ದಿವಾಕರ, ಬಿಎಫ್‌ಟಿ ಲೋಕೇಶ್ ಗೋದ್ರಿ ಉಪಸ್ಥಿತರಿದ್ದರು.

ಸಂಶಿ ಗ್ರಾಮದಲ್ಲಿ ರಾತ್ರಿ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆ

◆ **ಕುಂದಗೋಳ:** ತಾಲೂಕಿನ ಸಂಶಿ ಗ್ರಾಮದ ಕೋಟೆ ಬಾವಿ ವೃತ್ತದಲ್ಲಿ ಗುರುವಾರ ರಾತ್ರಿ ಅಜ್ಞಾತ ವ್ಯಕ್ತಿಗಳಿಂದ ಬಸವೇಶ್ವರರ ಮೂರ್ತಿಯನ್ನು ಪ್ರತಿಷ್ಠಾಪಿಸಿರುವ ಘಟನೆ ಬೆಳಕಿಗೆ ಬಂದಿದೆ.



ಗ್ರಾಮದ ಸಂಗಮೇಶ್ವರ ಸಂಘದ ಅಧ್ಯಕ್ಷ ಬಸವರಾಜ ಮುಗಳಿ ಅವರು ಮೂರ್ತಿ ಸ್ಥಾಪನೆಗೆ ಅನುಮತಿ ಕೋರಿ ಸ್ಥಳೀಯ ಹಾಗೂ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದರು. ಆದರೆ ಅನುಮತಿ ವಿಚಾರದಲ್ಲಿ ವಿಳಂಬವಾಗುತ್ತಿರುವ ಹಿನ್ನೆಲೆ ಗ್ರಾಮಸ್ಥರ ಅಸಮಾಧಾನ ವ್ಯಕ್ತವಾಗಿತ್ತು. ಏಪ್ರಿಲ್ 28 ರಂದು ಕುಂದಗೋಳ ಪಟ್ಟಣದ ಸವಾಯಿ ಗಂಧರ್ವ ಸ್ಮಾರಕ ಭವನದಲ್ಲಿ ನಡೆದ ಜನತಾದರ್ಶನ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರ ಎದುರು ರೈತ ಮುಖಂಡ ಪರಮೇಶ್ವರಪ್ಪ ನಾಯ್ಕರ್ ಮೂರ್ತಿ ಸ್ಥಾಪನೆಗೆ ಅನುಮತಿ ನೀಡದಿರುವುದನ್ನು ವಿರೋಧಿಸಿ ಆಕ್ರೋಶ ವ್ಯಕ್ತಪಡಿಸಿದ್ದರು. ಇದಾದ ನಂತರ ಏಪ್ರಿಲ್ 30 ಗುರುವಾರ ರಾತ್ರಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು,ಈ ಕಾರ್ಯವನ್ನು ಯಾರು ನೆರವೇರಿಸಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

> ಏಪ್ರಿಲ್ 2 ರಂದು ಗ್ರಾಮದಲ್ಲಿ ವಿವಿಧ ಸಂಘಟನೆಗಳು ಹಾಗೂ ಗ್ರಾಮಸ್ಥರ ಸಭೆ ಕರೆದಿದ್ದು, ಈ ವಿಚಾರವನ್ನು ಚರ್ಚಿಸಿ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.
> ■ **ರಾಜು ಮಾವರಕರ,** ತಹಶೀಲ್ದಾರ್

> 2015ರಲ್ಲಿ ಬಸವೇಶ್ವರ ವೃತ್ತ ನಿರ್ಮಾಣಕ್ಕೆ ಅನುಮತಿ ನೀಡಲಾಗಿತ್ತು. ಆದರೆ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಸಂಗಮೇಶ್ವರ ಸಂಘದಿಂದ ಮನವಿ ಬಂದಿದ್ದರೂ ಅಧಿಕೃತ ಅನುಮತಿ ನೀಡಲಾಗಿಲ್ಲ.
> ■ **ಪಾಂಡುರಂಗ ಹಟ್ಟಿ,** ಗ್ರಾ.ಪಂ ಅಭಿವೃದ್ಧಿ ಅಧಿಕಾರಿ

ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ



◆ **ಕುಂದಗೋಳ:** ಸಮಾಜ ಸುಧಾರಕ ಬಸವೇಶ್ವರ ಅವರ ಪುತ್ಥಳಿಗೆ ತಾಲೂಕಿನ ಸಂಶಿ ಗ್ರಾಮದಲ್ಲಿ ಶುಕ್ರವಾರ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಗ್ರಾಮದ ಮುಖಂಡ ಜಗದೀಶ ಉಪ್ಪಿನ ಮಾತನಾಡಿ, ಬಸವೇಶ್ವರರು ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಸಾರಿದ ಮಹಾನ್ ಚಿಂತಕರಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ ಮಾತನಾಡಿ, ಬಸವೇಶ್ವರರ ತತ್ವಗಳು ಸಮಾಜದಲ್ಲಿ ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಸ್ಥಾಪಿಸಲು ಮಾರ್ಗದರ್ಶಿಯಾಗಿವೆ. ಯುವಕರು ಅವರ ಆದರ್ಶಗಳನ್ನು ಅನುಸರಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಕರಿಸಿದ್ದೇಶ್ವರ ದೇವಸ್ಥಾನದ ಅರ್ಚಕರಾದ ಶಿವಾನಂದ ಪೂಜಾರ, ಎನ್.ಎಫ್. ನದಾಪ್,ಮಲ್ಲೇಶ ಬೆಳವಡಿ, ನಿಂಗಪ್ಪ ಹಳ್ಳಿಕೇರಿ, ವಿದ್ಯಾಧರ ಸುಂಕದ, ವಾಯ್.ಜಿ. ಪಾಟೀಲ, ಹಾಲಪ್ಪ ತಡಾಳ, ಬಸವರಾಜ ನಾಯ್ಕರ, ಇರ್ಷಾದ್ ಮುಲ್ಲಾ, ಅಲ್ತಾಪ್ ಮುಲ್ಲಾ, ಹನಮಂತ ಹಿರೇಹೊಳಿ, ಲೋಕೇಶ್ ಸರಾವರಿ, ಖಾಜೀಸಾಬ ನದಾಪ್, ಗುರು ಛಲವಾದಿ, ಸಲೀಂ ಕಡ್ಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಧಾರ್ಮಿಕ ಸ್ವಾತಂತ್ರ್ಯ ನೀಡಿದ ಬಸವಣ್ಣ: ಪಟ್ಟಣಶೆಟ್ಟಿ

◆ **ಧಾರವಾಡ:** ಅನುಭವ ಮಂಟಪ ಸ್ಥಾಪಿಸುವ ಮೂಲಕ ಹೆಣ್ಣು ಮಕ್ಕಳಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ ಶ್ರೇಯಸ್ಸ ಜಗಜ್ಯೋತಿ ಬಸವೇಶ್ವರರಿಗೆ ಸಲ್ಲುತ್ತಿದೆ ಎಂದು ಸಾಹಿತಿ ಮಾಲತಿ ಪಟ್ಟಣಶೆಟ್ಟಿ ಹೇಳದರು.

ಜಾನಪದ ಸಂಶೋಧನಾ ಸಂಸ್ಥೆ ನಗರದ ವಿದ್ಯಾವರ್ಧಕ ಸಂಘದ ದೇಶಪಾಂಡೆ ಸಭಾಂಗಣದಲ್ಲಿ ನಡೆದ ಶರಣರ ದೃಷ್ಟಿಯಲ್ಲಿ ಹೆಣ್ಣು-ವಚನ ಸಾಹಿತ್ಯ ನೃತ್ಯ ರೂಪಕ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಸವಣ್ಣ 12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ಹೋಗಲಾಡಿಸಿದ್ದರು. ಆದರೆ ಸುಶಿಕ್ಷಿತ ಸಮಾಜದಲ್ಲಿ ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಜಾತಿಯತೆ ತಾಂಡವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ವಿದ್ಯೆ, ಧೈರ್ಯ ಮತ್ತು ಹೋರಾಟ ಮಹಿಳೆಯರ ಅಸ್ತ್ರಗಳಾಗಬೇಕು.



ಶರಣತತ್ವ ಓದುವ ಜೊತೆ ಪಾಲಿಸಬೇಕು. ಈ ಮೂಲಕ ದೈಹಿಕ ಹಾಗೂ ಮಾನಸಿಕವಾಗಿ ಗಟ್ಟಿಗೊಳ್ಳಬೇಕು ಎಂದರು.

ಶರಣರ ದೃಷ್ಟಿಯಲ್ಲಿ ಹೆಣ್ಣು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಬೆಳಗಾವಿಯ ಸುಧಾ ಪಾಟೀಲ ಮಾತಾತನಾಡಿ, ಮೋಕ್ಷ ಅಥವಾ ಶಿವನ್ನು ಸಾಕ್ಷತ್ಕರಿಸಿಕೊಳ್ಳುವ ಹಕ್ಕು ಗಂಡಿನಷ್ಟೇ ಹೆಣ್ಣಿಗೂ ಇದೆ. ಅಕ್ಕಮಹಾದೇವಿ, ಸತ್ಯಕ್ಕ, ಲಕ್ಕಮ್ಮ, ನೀಲಾಂಬಿಕೆ ಹಾಗೂ ಅಕ್ಕನಾಗಮ್ಮ ಅನೇಕ ಶರಣೆಯರು ಸಾಹಿತ್ಯ ಮತ್ತು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಧನೆಗೆ ಬಸವೇಶ್ವರರ ಪ್ರೋತ್ಸಾಹ ಕಾರಣ ಎಂದರು. ಗಿರಿಜಾ ಶಕ್ಕಿ, ಆಶಾ ಸೈಯದ್, ಭಾರತಿ ಕಲ್ಮಠ, ನಂದಾ ಗುಳೇದಗುಡ್ಡ, ಕೈರುನ್ನಿಸಾ, ಸರಸ್ವತಿ ಪೂಜಾರ, ಪ್ರಭಾ ನೀರಲಗಿ, ಚಂದು ನಾಗಶೆಟ್ಟಿ, ಗಂಗಾ ಬಲಕುಂದೀ ಜಯಶ್ರೀ, ಇಂದಿರಾ ಇದ್ದರು. ವೃಂದ ಕುಲಕರ್ಣಿ ಸ್ವಾಗತಿಸಿದರು. ವಿಶ್ವೇಶ್ವರ ಹಿರೇಮಠ ಪ್ರಾಸ್ತಾವಿಸಿದರು. ಸುಜಾತ ಹಡಗಲಿ ನಿರೂಪಿಸಿದರು. ಯೋಗ ಮಿತ್ರ ಹಾಗೂ ಗಾನ ಸಿಂಚನ ಮಹಿಳಾ ಮಂಡಳ ವಚನ ನೃತ್ಯ ರೂಪಕ ಪ್ರದರ್ಶಿಸಿದರು. ಜಾನಪದ ಸಂಗೀತ ಬಳಗ ವಚನ ಗಾಯನ, ಶ್ರೀನಿಧಿ ಜಕ್ಕಣ್ಣವರ್ ಹಾಗೂ ಕಲಾವತಿ ವಚನಗಳನ್ನು ಪ್ರಸ್ತುತಪಡಿಸಿದರು.

ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ

ಬಿಎಸ್‌ವೈ ಧೀಮಂತ ನಾಯಕ

ಹಾವೇರಿ: ಅಧಿಕಾರ ಮತ್ತು ಆದರ್ಶದ ನಡುವೆ ಯಾವಾಗಲೂ ಸಂಘರ್ಷ ಇರುತ್ತದೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೇ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕ ಯಡಿಯೂರಪ್ಪನವರು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆ

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ತಮ್ಮ ಕಠಿಣ ಪರಿಶ್ರಮದಿಂದ ಗುರಿ ಸಾಧನೆಯ ಛಲದಿಂದ ನಿರಂತರವಾಗಿ ಜನರ ಜೊತೆಗೆ ಇದ್ದು, ಪರಿಶ್ರಮದ ನಾಯಕರು ಯಾರಾದರೂ ಇದ್ದರೆ ಅದು ಕರ್ನಾಟಕದ ರಾಜಾ ಹುಲಿ ಯಡಿಯೂರಪ್ಪ ದಣಿವರಿಯದ ಹೋರಾಟಗಾರರು. ಮೊದಲು ರೈತರ ಪರವಾಗಿ ರಾಜಕಾರಣ ಮಾಡುವ ನಾಯಕರು ಇರಲಿಲ್ಲ, ವಿರೋಧ ಪಕ್ಷದಲ್ಲಿ ಇದ್ದರೂ ಕೂಡ, ಒಬ್ಬರು, ಇಬ್ಬರೇ ಶಾಸಕರು ಇದ್ದರೂ ರೈತರ ಪರ ಹೋರಾಟ ಮಾಡಿ, ಅದನ್ನು ಸಿಎಂವರೆಗೆ ತೆಗೆದುಕೊಂಡು ಹೋಗಿ ರಾಜ್ಯದಲ್ಲಿ ರೈತರ ಪರ ಹೋರಾಟ ಮಾಡುವ ಆಯಾಮ ತಂದವರು ಯಡಿಯೂರಪ್ಪ ಅವರು ಎಂದು ಹೇಳಿದರು.

ನೀರಾವರಿಗೆ ಆದ್ಯತೆ: ಯಡಿಯೂರಪ್ಪನವರು ಮೊದಲು ಅಧಿಕಾರಕ್ಕೆ ಬಂದಾಗ ನಾಲ್ಕು ವರ್ಷದ ಅವಧಿಯಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದರು. 7.36 ಲಕ್ಷ ಎಕರೆ ಹೊಸದಾಗಿ ನೀರಾವರಿ ಮಾಡಿರುವ ದಾಖಲೆ ಮಾಡಿದರು. ಆ ಕೆಲಸ ಮಾಡುವ ಸೌಭಾಗ್ಯ ನನಗೆ ಸಿಕ್ಕಿತು. ಯಾವ ಯೋಜನೆ ಅಪೂರ್ಣ ಆಗಿತ್ತೊ ಅದನ್ನು ಪೂರ್ಣ ಮಾಡುವ ಕೆಲಸ ನಾವು ಮಾಡಿದ್ದೇವು. ಅದಕ್ಕೆ ಉದಾಹರಣೆ ತುಂಗಾ ಮೇಲ್ದಂಡೆ ಯೋಜನೆ, ಎಚ್.ಕೆ.ಪಾಟೀಲರು 2002ರಲ್ಲಿ ಯೋಜನೆ ಮುಗಿಸುವುದಾಗಿ ಹೇಳಿದ್ದರು. ಯಡಿಯೂರಪ್ಪ ಅವರ ಕಾಲದಲ್ಲಿ 2012ರಲ್ಲಿ ನಾವು ಈ ಯೋಜನೆ ಪೂರ್ಣಗೊಳಿಸಿದೇವು ಎಂದರು.



> ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರಿಗೆ ಯಾವಾಗಲೂ ಉತ್ತರ ಕರ್ನಾಟಕ ಶಕ್ತಿ ತುಂಬಿದೆ. ರಾಜಕೀಯವಾಗಿ ಅತಿ ಹೆಚ್ಚು ಸ್ಥಾನ ಕೊಟ್ಟಿದ್ದು ಉತ್ತರ ಕರ್ನಾಟಕ. ಬಿಜೆಪಿಗೆ ಸ್ಥಾನ ಕಡಿಮೆಯಾದಾಗಲೂ ಉತ್ತರ ಕರ್ನಾಟಕದ ಬಿ.ಸಿ.ಪಾಟೀಲ ಅವರಂತಹ ನಾಯಕರಿಂದ ಶಕ್ತಿ ಬಂದಿದೆ. ಮೇ 9ರಂದು ಹಾವೇರಿ ಜಿಲ್ಲೆಯಿಂದ 1 ಲಕ್ಷ ಜನರನ್ನು ಸೇರಿಸುವ ಪಯತ್ನ ಮಾಡಬೇಕು. ನಮ್ಮ ಅಭಿಮಾನದ ಶಕ್ತಿಯನ್ನು ಮೇ 9ಕ್ಕೆ ತೋರಿಸೋಣ.
>
> ■ **ಬಸವರಾಜ ಬೊಮ್ಮಾಯಿ,** ಸಂಸದರು

ಯಡಿಯೂರಪ್ಪನವರ ಪ್ರೇರಣೆ ಅಗತ್ಯ: ಈ ರಾಜ್ಯದ ನೆಲ ಜಲ, ಜನರ ಗೌರವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದು ಯಡಿಯೂರಪ್ಪನವರು. ಈಗ 50 ವರ್ಷದ ಅವರ ಅಭಿಮಾನೋತ್ಸವ ರಾಜಕಾರಣದಲ್ಲಿ 50 ವರ್ಷ ಜೀವಂತವಾಗಿರುವುದೇ ಕಷ್ಟ 1952ರಲ್ಲಿ ನಮ್ಮ ರಾಜ್ಯ ಆಗಿದೆ. ಬಹಳ ಜನರು ಮಂತ್ರಿಗಳಾಗಿ ಹೋಗಿದ್ದಾರೆ. ಆದರೆ, ಎಂಟತ್ತು ಜನ ಮಂತ್ರಿಗಳು ನೆನಪಿದ್ದಾರೆ. ಮುಖ್ಯಮಂತ್ರಿಗಳಲ್ಲಿ ನಿಜಲಿಂಗಪ್ಪ, ದೇವರಾಜು ಅರಸು, ಯಡಿಯೂರಪ್ಪ ಅವರ ಹೆಸರು ನೆನಪಿಗೆ ಬರುತ್ತವೆ. ಅವರು ಈ ರಾಜ್ಯದಲ್ಲಿ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಈಗ ಬಿಜೆಪಿಗೆ ಅವರ ಪ್ರೇರಣೆ, ಶಕ್ತಿ, ಆಶೀರ್ವಾದ ತುಂಬುವ ಅವಶ್ಯಕತೆ ಇದೆ. ಬಹಳ ಒಳ್ಳೆಯ ಮುಹೂರ್ತದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಮೇ ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಅತ್ಯಂತ ಕಷ್ಟದಲ್ಲಿ ಸಿಲುಕುವ ಸಂದರ್ಭದಲ್ಲಿ ಬಿಜೆಪಿ ಮತ್ತೆ ಪುಟಿದೇಳಲು ಈ ಕಾರ್ಯಕ್ರಮ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ಸಂಸದ ಬಿ.ವೈ.ರಾಘವೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಮಾಜಿ ಸಚಿವ ಬಿ.ಸಿ.ಪಾಟೀಲ, ಮಾಜಿ ಶಾಸಕರಾದ ಅರುಣಕುಮಾರ ಪೂಜಾರ, ಶಿವರಾಜ ಸಜ್ಜನರ, ಡಿ.ಎಂ.ಸಾಲಿ, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಸಚಿವೆ ಶೋಭಾ ಕರಂದ್ಲಾಜೆ ಅಭಿಪ್ರಾಯ

ವಿಕಸಿತ ಭಾರತಕ್ಕೆ ಕಾರ್ಮಿಕರ ಕೊಡುಗೆ ಅಗತ್ಯ

ಹುಬ್ಬಳ್ಳಿ: ದೇಶದಲ್ಲಿ ಉದ್ಯೋಗದಾತರು ಹಾಗೂ ಉದ್ಯೋಗಿಗಳು ಪರಸ್ಪರ ಉತ್ತಮವಾಗಿದ್ದಾರೆ. ಕೆಲಸ ಕೊಡುವವರು ಮತ್ತು ತೆಗೆದುಕೊಳ್ಳುವವರು ಇದ್ದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. 2047ಕ್ಕೆ ಭಾರತ ದೇಶವನ್ನು ವಿಕಸಿತ ಭಾರತವನ್ನಾಗಿ ಮಾಡಲು ಕಾರ್ಮಿಕರು ಅಭೂತಪೂರ್ವ ಕೊಡುಗೆ ನೀಡಲು ಮುಂದಾಗಬೇಕು ಎಂದು ಕೇಂದ್ರದ ಕಾರ್ಮಿಕ ಹಾಗೂ ಉದ್ಯೋಗ ಮತ್ತು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶುಕ್ರವಾರ ಗೋಕುಲ ರಸ್ತೆಯ ಹೆಬಸೂರ ಭವನದಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮದಿಂದ ಆಯೋಜಿಸಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಕಾರ್ಮಿಕರ ಚಿಂತನೆಯಲ್ಲಿ ಬದಲಾವಣೆ ಆಗಬೇಕು. ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೂಡ ಒಂದು ಕಾಲದಲ್ಲಿ ಕಾರ್ಮಿಕರಾಗಿದ್ದರು. ಬ್ರಿಟಿಷರ ಕಾಲದ ಕಾನೂನುಗಳು ನಮ್ಮ ದೇಶದಲ್ಲಿವೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 78 ವರ್ಷ ಸಂದಿವೆ. ಭಾರತೀಯರಿಗೆ ಭಾರತೀಯತೆ ಇರುವ ಕಾನೂನು ಬೇಕು. ನಮ್ಮ ಹಿತ ಚಿಂತನೆ ಮಾಡುವಂತಹ ಕಾನೂನುಗಳು ಬೇಕು. ನಮ್ಮ ದೇಶದ ಸಂಸ್ಕೃತಿಯ ಕೆಲಸದ ಆಧಾರದಲ್ಲಿ ಕೆಲಸ ಮಾಡುವಂತಹ ಕಾನೂನು ಬೇಕು. ಲೇಬರ್ ಕೋಡ್ ಜಾರಿಗೆ ತರಲಾಗುತ್ತಿದೆ ಎಂದರು.

ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ, ಎಲ್ಲಾ ಕೆಲಸಕ್ಕೆ ಇಎಸ್‌ಐಸಿ ಮತ್ತು ಪಿಂಚಣಿ ಒದಗಿಸಬೇಕು. ಶೇ.90ರಷ್ಟು ಕಾರ್ಮಿಕರು ಇಎಸ್‌ಐಸಿ ಮತ್ತು ಇಪಿಎಫ್‌ದಿಂದ ಹೊರಗಿದ್ದಾರೆ. ನಮ್ಮ ದೇಶದಲ್ಲಿ ಅಸಂಘಟಿತ ಕಾರ್ಮಿಕರು ಹೆಚ್ಚಿರುವರು. ದೇಶದಲ್ಲಿ ಸುಮಾರು 80 ಕೋಟಿ ಜನರು ಕೆಲಸ ಮಾಡುತ್ತಾರೆ. ಉಳಿದವರು ಮಕ್ಕಳು, ವೃದ್ಧರು, ಅಂಗವಿಕಲರು ಇದ್ದಾರೆ. ಸಂಘಟಿತ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳು ಸಿಗುತ್ತವೆ. ಆದರೆ, ಅಸಂಘಟಿತ ಕಾರ್ಮಿಕರಿಗೆ ಯಾವುದೇ ಸೌಲಭ್ಯಗಳು ದೊರೆಯುವುದಿಲ್ಲ, ಅಸಂಘಟಿತ ಕಾರ್ಮಿಕರಿಗೆ ಪಿಎಫ್, ಇಎಸ್‌ಐಸಿ ಸೌಲಭ್ಯಗಳು ದೊರೆಯಬೇಕು ಎಂದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಎಲ್ಲಾ ಕಾರ್ಮಿಕರಿಗೆ ಸಮಾನ ವೇತನ ದೊರೆಯಬೇಕು. ಕೆಲಸದ ವೇಳೆಯನ್ನು 8 ಗಂಟೆ ಮಾತ್ರ ಇರಬೇಕು. ದೇಶದ ಆರ್ಥಿಕ ವ್ಯವಸ್ಥೆ ಸಬಲೀಕರಣ ಆಗಬೇಕಿದೆ. ಅದು ಕಾರ್ಮಿಕರಿಂದ ಮಾತ್ರ ಸಾಧ್ಯ. ಕಾರ್ಮಿಕರು ದೇಶದ ಆರ್ಥಿಕ ಬೆನ್ನೆಲುಬು ಆಗಿದ್ದಾರೆ. ಕಾರ್ಮಿಕರಿಗೂ ಕೂಡ ಹೆಚ್ಚಿನ ಸೌಲಭ್ಯಗಳು ಒದಗಿಸುವಂತಹ ಕಾರ್ಯಗಳಾಗಬೇಕು ಎಂದರು.



ಕರ್ನಾಟಕ ಗೋವಾದ ಹೆಚ್ಚುವರಿ ಭವಿಷ್ಯ ನಿಧಿ ಆಯುಕ್ತರಾದ ಜಯಕುಮಾರ ಅವರು ವಿವಿಧ ಸೌಲಭ್ಯಗಳ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಇಎಸ್‌ಐ ಮತ್ತು ಇಪಿಎಫ್‌ಒ ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿ ಆದೇಶಗಳನ್ನು ಗಣ್ಯರು ವಿತರಣೆ ಮಾಡಿದರು.

ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಾದ ಆಶುತೋಷ್ ತಿವಾರಿ, ಸಹಾಯಕ ಕಾರ್ಮಿಕ ಆಯುಕ್ತರಾದ ಎಂ.ರಾಮನಾಥನ್, ಎಸ್‌ಎಸ್‌ಒ ನಿರ್ಮಲಾ ಆರ್ ದಾವಣೆ, ಹುಬ್ಬಳ್ಳಿ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ, ಮಾಜಿ ಮೇಯರ್ ವೀರಣ್ಣ ಸವಡಿ, ಮಹಾದೇವ ಕರಮರಿ, ಸಿದ್ದೇಶ್ವರ ಕಮ್ಮಾರ, ಉದಯ ರೇವಣಕರ ಇದ್ದರು.

ಫ್ಲಿಪ್‌ಕಾರ್ಟ್ ಡೆಲಿವರಿ ಬಾಯ್‌ಗೆ ಪಂಗನಾಮ!

ಅಂಕೋಲಾ: ಆನ್‌ಲೈನ್ ಖರೀದಿ ವ್ಯವಹಾರದಲ್ಲಿ ಗ್ರಾಹಕರು ಮೋಸ ಹೋದ ಹಲವಾರು ಘಟನೆಗಳು ನಡೆದಿವೆ. ಆದರೆ, ಗ್ರಾಹಕನಾಗಿ ವಸ್ತುವಿಗೆ ಆರ್ಡರ್ ಮಾಡಿದವನೇ

ಮಾರಾಟಗಾರರಿಗೆ ಯಾಮಾರಿಸಿದ ಅಪರೂಪದ ಘಟನೆಯೊಂದು ತಾಲೂಕಿನ ಸಗಡಗೇರಿ ಕ್ರಾಸ್ ಬಳಿ ನಡೆದಿದ್ದು ಎಲ್ಲರೂ ಹುಬ್ಬೇರಿಸುವಂತಾಗಿದೆ.

ಗೋಕರ್ಣ ಕ್ರಾಸ್ ಸಗಡಗೇರಿಯ ವಿಳಾಸದಿಂದ ಇಶಾನ್ ಎಂಬಾತ ಫ್ಲಿಪ್ ಕಾರ್ಟ್ ಆನ್‌ಲೈನ್ ಆಪ್ ಮೂಲಕ 150120 ಮೌಲ್ಯದ ಆಪಲ್ ಐ ಫೋನ್ 17 ಪ್ರೋ ಮ್ಯಾಕ್ಸ್ ಮೊಬೈಲ್ ಫೋನ್ ಆರ್ಡರ್ ಮಾಡಿದ್ದು ಫ್ಲಿಪ್ ಕಾರ್ಟ್ ಡೆಲಿವರಿ ಹುಡುಗನಾಗಿ ಕೆಲಸ ಮಾಡುವ ಮಿರ್ಜಾನದ ಜಿತೇಶ ದಿವಾಕರ ನಾಯ್ಕ(29) ಎಂಬಾತ 2026 ಮಾರ್ಚ್ 6ರಂದು ತಲುಪಿದ ಪಾರ್ಸೆಲ್ ತಲುಪಿಸಲು ಗ್ರಾಹಕರು ನೀಡಿರುವ ವಿಳಾಸದ ಬಳಿ ಹೋಗಿ ನಮೂದಿಸಿದ ದೂರವಾಣಿ ಸಂಖ್ಯೆಗೆ ಕರೆ ಮಾಡಿದಾಗ ಆತನಿಗೆ ಭಾರತ್ ಪೆಟ್ರೋಲ್ ಪಂಪ್ ಹತ್ತಿರ ಬರುವಂತೆ ಹೇಳಲಾಗಿದೆ. ಡೆಲಿವರಿ ಹುಡುಗ ಜಿತೇಶ್ ಅಲ್ಲಿ ತಲುಪಿದಾಗ ಅಲ್ಲಿ ಇಬ್ಬರು ನಿಂತಿದ್ದು ಅವರಲ್ಲಿ ಒಬ್ಬ ಬಂದು ತನ್ನ ಹೆಸರಲ್ಲಿ ಮೂರು ಪಾರ್ಸೆಲ್ ಇದ್ದು ನೀಡುವಂತೆ ಹೇಳಿದ್ದಾನೆ.

ಡೆಲಿವರಿ ಹುಡುಗ ನಿಯಮದಂತೆ ಮೊಬೈಲ್ ನಂಬರಿನ ಕೊನೆಯ ನಾಲ್ಕು ಅಂಕಿಗಳನ್ನು ತಿಳಿಸುವಂತೆ ಹೇಳಿದ್ದು ಇಶಾನ್ ಎಂಬಾತ 6257 ಎಂದು ಅಂಕಿಗಳನ್ನು ಹೇಳಿದ್ದು ಡೆಲಿವರಿ ಹುಡುಗ ಅದನ್ನು ಕಂಪನಿ ಆಫ್‌ನಲ್ಲಿ ಪರಿಶೀಲಿಸಿ ಖಚಿತ ಪಡಿಸಿಕೊಂಡು ಪಾರ್ಸೆಲ್ ನೀಡಿದ್ದಾನೆ. ಇದೇ ಸಮಯದಲ್ಲಿ ಇನ್ನೋರ್ವ ವ್ಯಕ್ತಿ ಬಂದು ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿ ಡೆಲಿವರಿ ಹುಡುಗನ ಗಮನ ಬೇರೆ ಕಡೆ ಸೆಳೆದಿದ್ದು ಆ ಸಮಯದಲ್ಲಿ ಇಶಾನ್ ಎಂಬಾತ ಫೋನ್ ಇರುವ

ಪಾರ್ಸೆಲ್ ತೆರೆದು ಪರಿಶೀಲಿಸುವಂತೆ ಮಾಡಿ ತಾನು ತಂದ ಅದೇ ಮಾಡೆಲ್ ನಕಲಿ ಫೋನನ್ನು ಅರಿವಿಗೆ ಬರದಂತೆ ಬದಲಾಯಿಸಿದ್ದು ನಂತರ ಡೆಲಿವರಿ ಹುಡುಗ ಜಿತೇಶನಿಗೆ ಸಿಮ್ ಟ್ರೇ ತೆರೆದು ತೋರಿಸುವಂತೆ ಹೇಳಿದ್ದು ತೆರೆದು ನೋಡಿದಾಗ ಸಿಮ್ ಟ್ರೇ ತುಂಡಾಗಿರುವ ಸ್ಥಿತಿಯಲ್ಲಿ ಕಂಡು ಬಂದಿದೆ. ಇದನ್ನು ನೋಡಿದ ಆರೋಪಿತ ಗ್ರಾಹಕ ಮೊಬೈಲ್ ಸಹಿತ ಇನ್ನೆರಡೂ ಆರ್ಡರ್ ರದ್ದು ಪಡಿಸಿದ್ದು ಪಾರ್ಸೆಲ್‌ನ್ನು ಮಾರಾಟ ತಂಡಕ್ಕೆ ಮರಳಿ ಕಳುಹಿಸಿ ಗ್ರಾಹಕನಿಗೆ ಹಣ ಮರಳಿ ಸಂದಾಯವಾಗಿದೆ.

ಮರಳಿ ಹೋಗಿರುವ ಮೊಬೈಲ್ ಪೋನಿನ ಐ.ಎಂ.ಇ.ಐ ಪರೀಶಿಲನೆ ನಡೆಸಿದಾಗ ಮರಳಿ ಬಂದಿರುವ ಐ.ಎಂ.ಇ.ಐ ಬದಲಾಗಿರುವುದು ತಿಳಿದು ಬಂದಿದ್ದು ಆ ಕುರಿತಂತೆ ಮಾರಾಟ ಸಂಸ್ಥೆ ಈ ಮೇಲ್ ಮೂಲಕ ಮಾಹಿತಿ ನೀಡಿದೆ. ಇಶಾನ್ ಎನ್ನುವ ಗ್ರಾಹಕ ಮೋಸ ಮಾಡುವ ಉದ್ದೇಶದಿಂದಲೇ ಆರ್ಡರ್ ಮಾಡಿ ಕಂಪನಿಗೆ ಮತ್ತು ತನಗೆ ಯಾಮಾರಿಸಿರುವುದಾಗಿ ಡೆಲಿವರಿ ಹುಡುಗ ಜಿತೇಶ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪ್ರಕರಣ ದಾಖಲಿಸಿದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನೀರಾವರಿ ಕ್ಷೇತ್ರದಲ್ಲಿ ವಿಜಯಪುರ ದೇಶಕ್ಕೆ ಮಾದರಿ: ಎಸ್.ಬೋಸರಾಜು

ವಿಜಯಪುರ: ಜಿಲ್ಲೆಯ ಹಳ್ಳಗಳಿಗೆ ನೀರು ತುಂಬಿಸುವ ಯೋಜನೆ ಸಣ್ಣ ನೀರಾವರಿ ಕ್ಷೇತ್ರದಲ್ಲಿ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಹೇಳಿದರು.

ಶುಕ್ರವಾರ ತಿಕೋಟಾ ತಾಲೂಕಿನ ಬರಟಗಿ ಗ್ರಾಮದಲ್ಲಿ ತೊರವಿ, ಭೂತನಾಳ, ಇಟ್ಟಂಗಿಹಾಳ, ವಿಠ್ಠಲವಾಡಿ, ಯತ್ನಾಳ, ಅರಕೇರಿ, ಸಿದ್ದಾಪೂರ, ಅರಕೇರಿ, ಜಾಲಗೇರಿ ಹಳ್ಳಗಳಿಗೆ ಅಡ್ಡಲಾಗಿ ಚೆಕ್ ಡ್ಯಾಂ ಮತ್ತು ರಿಚಾರ್ಜ್ ಶಾಫ್ಟ್ ಗಳನ್ನು ನಿರ್ಮಾಣ ಮಾಡುವ ಮೂಲಕ ಅಂತರ್ಜಲ ಅಭಿವೃದ್ಧಿ ಪಡಿಸುವ ಅಂದಾಜು ರೂ.734.63 ಲಕ್ಷ ವೆಚ್ಚದ ಕಾಮಗಾರಿಗೆ ಭೂಮಿಪೂಜೆ ಹಾಗೂ 2025-26ನೇ ವರ್ಷದ ಬರಟಗಿ ತಾಂಡಾ-3(ಜಾಧವ ನಗರ)ದಲ್ಲಿ ರೂ. 50 ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಾಸಕರಾಗಿದ್ದಾಗ ಕೆರೆಗೆ ನೀರು ತುಂಬಿಸುವ ಯೋಜನೆ ರೂಪಿಸಿ ನೀರಾವರಿ ಸಚಿವರಾಗಿ ಆ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡುವ ಮೂಲಕ ಎಂ.ಬಿ. ಪಾಟೀಲರು ಜಲಕ್ರಾಂತಿ ಮಾಡಿದ್ದಾರೆ. ಈಗ ವ್ಯರ್ಥವಾಗಿ ಹರಿಯುವ ನೀರನ್ನು ಸದ್ಬಳಕೆ ಮಾಡಲು ಹಳ್ಳಗಳನ್ನು ತುಂಬಿಸುವ ಮೂಲಕ ವಿಜಯಪುರ ಜಿಲ್ಲೆಯಲ್ಲಿ ಸುಮಾರು 400 ಕಿ. ಮೀ. ವ್ಯಾಪ್ತಿಯಲ್ಲಿ ಅಂತರ್ಜಲ ಹೆಚ್ಚಿಸುವ ಮಹತ್ವದ ಯೋಜನೆ ರೂಪಿಸಿದ್ದಾರೆ.



ಇಡೀ ದೇಶಕ್ಕೆ ಮಾದರಿಯಾದ ಈ ಯೋಜನೆ ರೂಪಿಸಿರುವ ಸಚಿವರ ಮಾರ್ಗದರ್ಶನದಲ್ಲಿ ನಾನೂ ಕೂಡ ಕೆರೆಗೆ ತುಂಬಿಸುವ ಮತ್ತು ಹಳ್ಳಗಳನ್ನು ತುಂಬಿಸುವ ಕೆಲಸ ಮಾಡಿಸುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ನಾವು ಮಾಡದ ಕೆಲಸವನ್ನು ಅವರು ಇಲ್ಲಿ ಮಾಡುತ್ತಿರುವ ಕೆಲಸ ಶ್ಲಾಘನೀಯ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮಾತನಾಡಿ, 176 ಹಳ್ಳಗಳಿಗೆ ಮಳೆಗಾಲದಲ್ಲಿ ಕಾಲುವೆಗಳ ಮೂಲಕ ನೀರು ತುಂಬಿಸಲಾಗುವುದು. ಇದರಿಂದ 400 ಕಿ. ಮೀ. ವ್ಯಾಪ್ತಿಯಲ್ಲಿ ಅಂತರ್ಜಲ ಹೆಚ್ಚಾಗಲಿದೆ.

ನಮ್ಮ ವಿಜಯಪುರ ಜಿಲ್ಲೆಯ 27 ಪ್ಯಾಕೇಜ್ ಮೂಲಕ ಯೋಜನೆ ಜಾರಿಗೆ ಸುಮಾರು ರೂ. 270 ಕೋ. ವೆಚ್ಚದ ಕಾಮಗಾರಿಗೆ ಒಪ್ಪಿಗೆ ನೀಡುವ ಮೂಲಕ ಸಚಿವ ಎನ್.ಎಸ್. ಬೋಸರಾಜು ನಮಗೆ ಸಹಾಯ ಮಾಡಿದ್ದು, ಅವರಿಗೆ ಅಭಾರಿಯಾಗಿದ್ದೇನೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಮುಖಂಡ ಬಸನಗೌಡ ಪಾಟೀಲ, ಗ್ಯಾರಂಟಿ ಯೋಜನೆ ಅನುಷ್ಠಾನ ತಾಲೂಕು ಸಮಿತಿ ಅಧ್ಯಕ್ಷ ಗುರುಪಾದಗೌಡ ದಾಶ್ಯಾಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದು ಗೌಡನವರ, ಮುಖಂಡರಾದ ಸಿದ್ದನಗೌಡ ಪಾಟೀಲ, ಬಾಳಾಸಾಹೇಬ ಪಾಟೀಲ, ಪೀರಪಟೇಲ ಪಾಟೀಲ, ಪದ್ದು ಚವ್ಹಾಣ, ಡಿ.ಎಲ್. ಚವ್ಹಾಣ, ಗೋವಿಂದ ಶಿಂಧೆ, ಸತೀಶ ನಾಯಕ, ದತ್ತಾ ಕಾಟಕರ, ಧನರಾಜ ಪತ್ತಾರ, ಸುಭಾಸ ರಜಪೂತ, ವಿಜಯಸಿಂಗ ರಜಪೂತ, ಕಾಂತುಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.


ಎಸ್ಸೆಸ್ಸೆಲ್ಸಿ ಅನುತ್ತೀರ್ಣ: ವರದಿ ಸಲ್ಲಿಕೆ

ಬೆಂಗಳೂರು: ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾಗುತ್ತಿರುವ ಹಿನ್ನೆಲೆ ಈ ಕುರಿತು ಸಮಗ್ರ ಸಂಶೋಧನೆ ನಡೆಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವು, ತನ್ನ ವರದಿಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದೆ.

ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡಕ್ಕಿರುವ ಸ್ಥಾನಮಾನ ಹಾಗೂ ವಿದ್ಯಾರ್ಥಿಗಳ ಸಾಧನೆಯನ್ನು ಆಧರಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದ್ದು, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರ ಮಾರ್ಗದರ್ಶನದಲ್ಲಿ ಎಂಟು ಮಂದಿ ಶಿಕ್ಷಕರ ತಂಡವು ಈ ಅಧ್ಯಯನ ನಡೆಸಿದ್ದಾರೆ. ಕನ್ನಡದಲ್ಲಿ ಮಕ್ಕಳು ಹಿಂದುಳಿಯಲು ಶಿಕ್ಷಣ ವ್ಯವಸ್ಥೆಯಲ್ಲಿನ ಏಕರೂಪತೆಯ ಕೊರತೆಯೇ ಮುಖ್ಯ ಕಾರಣ ಎಂದು ಗುರುತಿಸಿದೆ.

2016 ರಲ್ಲಿ ಶೇ. 83.3 ರಷ್ಟಿದ್ದ ಕನ್ನಡ ಪ್ರಥಮ ಭಾಷಾ ಆಸಕ್ತಿಯು, 2025ರ ವೇಳೆಗೆ ಶೇ. 81.03ಕ್ಕೆ ಕುಸಿದಿರುವುದು ಆತಂಕಕಾರಿ ವಿಷಯವಾಗಿದೆ. ಇದೇ ಅವಧಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಮೊದಲ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಕಳೆದ ವರ್ಷದ ಪರೀಕ್ಷೆಯಲ್ಲಿ ಸುಮಾರು 80 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಕನ್ನಡದಲ್ಲಿ ಫೇಲ್ ಆಗಿರುವುದು ಕನ್ನಡದ ಭವಿಷ್ಯಕ್ಕೆ ಎಚ್ಚರಿಕೆಯ ಗಂಟೆಯಾಗಿದೆ ಎಂದು ವರದಿ ತಿಳಿಸಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ಪ್ರಾಧಿಕಾರವು ಸರ್ಕಾರಕ್ಕೆ 22 ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಅಂಗನವಾಡಿಯಿಂದ ಪದವಿವರೆಗಿನ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಕಡ್ಡಾಯ ಭಾಷೆಯನ್ನಾಗಿ ಜಾರಿಗೊಳಿಸಬೇಕು ಮತ್ತು ತ್ರಿಭಾಷಾ ಸೂತ್ರದ ಬದಲಿಗೆ ದ್ವಿಭಾಷಾ ನೀತಿಯನ್ನು ಅಳವಡಿಸಿಕೊಳ್ಳಬೇಕು ಎಂಬುದು ಪ್ರಾಧಿಕಾರದ ಪ್ರಮುಖ ಒತ್ತಾಯವಾಗಿದೆ. ಅಲ್ಲದೇ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ. 25ರಷ್ಟು ಮೀಸಲಾತಿ ನೀಡಬೇಕು ಮತ್ತು ಪಠ್ಯಪುಸ್ತಕಗಳನ್ನು ಭಾಷಾ ತಜ್ಞರಿಂದಲೇ ರಚಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ರಾಮ ಬಾಣ



ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ
ಮಳೆ ಹಾನಿಗೆ ಸೂಕ್ತ ಪರಿಹಾರ

ಶಿವಮೊಗ್ಗ: ಶಿವಮೊಗ್ಗ ಗ್ರಾಮಾಂತರ ಕ್ಷೇತ್ರ ವ್ಯಾಪ್ತಿಯಲ್ಲಿ ಬಿರುಗಾಳಿ ಸಹಿತ ಮಳೆಯಿಂದಾಗಿ ತೀವ್ರ ಹಾನಿಯುಂಟಾದ ಕೃಷಿ ಭೂಮಿ ಮತ್ತು ಮನೆಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಶುಕ್ರವಾರ ಭೇಟಿ ನೀಡಿ ನಷ್ಟದ ಪರಿಶೀಲನೆ ನಡೆಸಿದರು.



ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿರುಗಾಳಿ ಸಹಿತ ಮಳೆಯಿಂದಾಗಿ ಹೊಳೆಹೊನ್ನೂರು ಭಾಗದ 33 ಗ್ರಾಮದಲ್ಲಿ ಮನೆ ಮತ್ತು ಬೆಳೆ ಹಾನಿಯಾಗಿದೆ. ಮನೆಗಳಿಗೆ ಪರಿಹಾರ ಮತ್ತು ಹೊಸ ಮನೆಗಳನ್ನು ಹಂಚಲಾಗುವುದು. ಸೂಕ್ತ ಸಮೀಕ್ಷೆಗೆ ಮತ್ತು ಪರಿಹಾರಕ್ಕೆ ಸಿಎಂ ಸೂಚನೆ ನೀಡಿದ್ದಾರೆ. ಡಿಸಿ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ ಎಂದರು. 20 ಮನೆಗಳು ಸಂಪೂರ್ಣವಾಗಿ ಹಾಳಾಗಿವೆ. 600 ಮನೆಗಳು ಭಾಗಶಃ ಉರುಳಿವೆ. ನಿಯಮಾವಳಿ ಪ್ರಕಾರ ಮನೆಗಳನ್ನು ಸಂಪೂರ್ಣ ಕಳೆದುಕೊಂಡವರಿಗೆ ಪರಿಹಾರ ಜೊತೆಗೆ ಪ್ರತ್ಯೇಕ ಮನೆ ಕೊಡಲು ಸೂಚಿಸಲಾಗಿದೆ. ಬೆಳೆ ಪರಿಹಾರಕ್ಕೆ ಜಂಟಿ ಸಮೀಕ್ಷೆಗೆ ಸೂಚಿಸಲಾಗಿದೆ ಎಂದರು.

ಇಲ್ಲಿನ ಸ್ಥಳೀಯ ರೈತ ಮುಖಂಡರು ವಿಶೇಷ ಪರಿಹಾರ ನೀಡುವಂತೆ ಒತ್ತಾಯಿಸುತ್ತಿದ್ದಾರೆ. ಉಸ್ತುವಾರಿ ಸಚಿವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಅಂತಿಮ ತೀರ್ಮಾನವನ್ನು ಸದನದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು. ಹೆಚ್ಚುವರಿ ಪರಿಹಾರದ ಬಗ್ಗೆ ಸಂಪುಟ ಸಭೆ ತೀರ್ಮಾನಿಸಲಿದೆ. 350 ವಿದ್ಯುತ್ ಕಂಬ ಬಿದ್ದಿವೆ. ಅದನ್ನು ಮೆಸ್ಕಾಂ ನೋಡಿಕೊಳ್ಳಲಿದೆ ಎಂದರು.

ಅನಾಹುತ ಮಾಡಿಕೊಳ್ಳಬೇಡಿ: ಸಾಲ ಸೋಲ ಮಾಡಿ ಬೆಳೆ ಬೆಳೆದಿದ್ದೆವು. ಭಾರೀ ಪ್ರಮಾಣದ ಮಳೆಯಿಂದ ಬೆಳೆ ನಷ್ಟವಾಗಿದೆ. ಈಗ ದಾರಿ ಕಾಣುತ್ತಿಲ್ಲ, ಕೆಲವರು ವಿಷ ಸೇವಿಸಲು ಮುಂದಾಗಿದ್ದನ್ನು ತಪ್ಪಿಸಿದ್ದೇವೆ ಎಂದು ರೈತರು ಸಚಿವರ ಬಳಿ ಅಳಲು ತೋಡಿಕೊಂಡರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರ ರೈತರ ಪರವಾಗಿದೆ ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಶಾಸಕಿ ಶಾರದಾ ಪೂರ್ಯಾನಾಯ್ಕ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಇದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ನನಗೆ ಯಶಸ್ವೀ ವ್ಯಕ್ತಿಗಳೆಂದರೆ ಇಷ್ಟವಿಲ್ಲ, ನಾನು ಸೋತವರ ಜತೆ ಇರಲು ಬಯಸುತ್ತೇನೆ – ಟ್ರಂಪ್
- ಸಮಾನರಲ್ಲಿ ಸ್ನೇಹ ಸಹಜ!

ದಿನ ಭವಿಷ್ಯ

ಮೇಷ
ಉದಾಸೀನತೆ ಕಾಡಲಿದೆ. ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಹೊಸ ವ್ಯವಹಾರದಲ್ಲಿ ಹಣ ಹೂಡಬೇಡಿ.

ವೃಷಭ
ವೃತ್ತಿ ಕಡೆಗೇ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯಕ್ಕೂ ಆದ್ಯತೆ ಕೊಡಿ. ಆಪ್ತರ ಹಿತ ಗಮನಿಸಿ. ಹೂಡಿಕೆಯಿಂದ ಲಾಭ.

ಮಿಥುನ
ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

ಕಟಕ
ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

ಸಿಂಹ
ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

ಕನ್ಯಾ
ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

ತುಲಾ
ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಕೆಲ ವಿಚಾರಗಳಲ್ಲಿ ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

ವೃಶ್ಚಿಕ
ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ಧನು
ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

ಮಕರ
ನಿಮ್ಮ ಕಲ್ಪನೆ, ಆಕಾಂಕ್ಷೆ ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ವಾಹನ ಚಾಲನೆಯಲ್ಲಿ ತುಸು ಎಚ್ಚರವಿರಲಿ.

ಕುಂಭ
ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

ಮೀನ
ಏಕತಾನತೆಯಿಂದ ಹೊರಬಂದು ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,7,0,3

50 ಕಡೆಗಳಲ್ಲಿ ಓಪನ್ ಹೌಸ್ ಕೌಂಟರ್: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್
ನನ್ನ ಇ-ಖಾತಾ ಆಂದೋಲನ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಎಲ್ಲಾ ಐದು ಪಾಲಿಕೆಗಳಲ್ಲಿ ಮೇ 16 ರಿಂದ ಪ್ರತಿ ಶನಿವಾರ ಸುಮಾರು 50 ಕಡೆಗಳಲ್ಲಿ ಓಪನ್ ಹೌಸ್ ಕೌಂಟರ್ ತೆರೆದು ನನ್ನ ಇ-ಖಾತಾ ಆಂದೋಲನ ನಡೆಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಅವರು ಶುಕ್ರವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ವಿವರಗಳನ್ನು ನೀಡಿದರು. ಪಾಲಿಕೆ ಕಚೇರಿಗಳಲ್ಲಿ ಜನಸಂದಣಿ ಉಂಟಾಗಬಹುದೆಂದು ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲಿ ಈ ಆಂದೋಲನ ಹಮ್ಮಿಕೊಳ್ಳಲಾಗುವುದು. ಪ್ರತಿವಾರ ಅಂದಾಜು 5 ಸಾವಿರ ಜನರ ದೂರುಗಳಿಗೆ ಪರಿಹಾರ ನೀಡಲಾಗುವುದು. ಪ್ರತಿ ಪಾಲಿಕೆಗಳಲ್ಲಿ 5-10 ಕೌಂಟರ್‌ಗಳನ್ನು ತೆರೆಯಲಾಗುವುದು. ದಟ್ಟಣೆಯಿರುವ ಕಡೆ ಹೆಚ್ಚು ಕೌಂಟರ್‌ಗಳು, ಕಡಿಮೆ ದಟ್ಟಣೆಯಿರುವಲ್ಲಿ ಕಡಿಮೆ ಕೌಂಟರ್‌ಗಳನ್ನು ತೆರೆಯಲಾಗುವುದು ಎಂದು ಹೇಳಿದರು.

ಕೌಂಟರ್‌ಗಳ ಬಗ್ಗೆ ಜಾಹೀರಾತು, ಕಟೌಟ್, ವೆಬ್‌ಸೈಟ್ ಸೇರಿದಂತೆ ಎಲ್ಲೆಡೆ ಮಾಹಿತಿ ನೀಡಲಾಗುವುದು. ದಾಖಲೆ ತಕರಾರು ಇರುವೆಡೆ, ಅನುಮಾನ ಇರುವ ಕಡೆ ಕಂದಾಯ ಅಧಿಕಾರಿಗಳು ತೆರಳಿ ಸ್ಥಳ ಪರಿಶೀಲನೆ ನಡೆಸಿ ಅರ್ಜಿ ಸಲ್ಲಿಸಿದ 15 ದಿನಗಳ ಒಳಗೆ ಬಗೆಹರಿಸಲಾಗುವುದು. ಫೋಟೋ, ಸ್ಕೆಚ್, ನಕ್ಷೆ, ಜಿಪಿಎಸ್ ಸೇರಿದಂತೆ ಭಾವಚಿತ್ರ ಎಲ್ಲವೂ ದಾಖಲೆಯಲ್ಲಿ ಇರುವುದು. ಆಧಾರ್ ಸೇರಿದಂತೆ ನಿಗದಿತ ಸಂಖ್ಯೆ ನೀಡಿದರೆ ಈ ದಾಖಲೆಗಳನ್ನು ಯಾರು ಬೇಕಾದರೂ ನೋಡಬಹುದು. ಕಂದಾಯ ಅಧಿಕಾರಿ, ಉಪ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಇದರ ಜವಾಬ್ದಾರಿ ಹೊಂದಿರುತ್ತಾರೆ.

ಏಳು ಸಾವಿರ ಅರ್ಜಿ ವಿಲೇ

ಮೊದಲು ಭೂಮಿಯನ್ನು ಸಕ್ರಮ ಮಾಡಲಾಗುವುದು, ನಂತರ ಕಟ್ಟಡ. ಏಕೆಂದರೆ ಇದಕ್ಕೆ ಸಾಕಷ್ಟು ಹಂತಗಳಿವೆ. 7 ಸಾವಿರ ಆಸ್ತಿಗಳಿಗೆ ಎ ಖಾತೆ ಅರ್ಜಿ ವಿಲೇ ಮಾಡಲು ಕ್ರಮವಹಿಸಲಾಗಿದೆ. ಇವರು ಹಣ ಕಟ್ಟಿದ ತಕ್ಷಣ ಖಾತೆಯನ್ನು ಹಸ್ತಾಂತರಿಸಲಾಗುವುದು. ಇವರು ಹಣ ಕಟ್ಟಿದರೆ 300 ಕೋಟಿ ರೂ. ಆದಾಯ ಬರಲಿದೆ. ಏರಿಯಾಗೆ ಅನುಗುಣವಾಗಿ ಸ್ಲಾಬ್‌ಗಳನ್ನು ನಿಗದಿ ಮಾಡಲಾಗಿದೆ. ಪ್ರತಿಯೊಂದು ಹೊಸ ಅರ್ಜಿಯನ್ನು 15 ದಿನಗಳಲ್ಲಿ ವಿಲೇ ಮಾಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಎರಡನೇ, ನಾಲ್ಕನೇ ಶನಿವಾರ ಕೆಲಸ ಮಾಡುವ ಅಧಿಕಾರಿಗಳಿಗೆ ಪರ್ಯಾಯವಾಗಿ ಇನ್ನೊಂದು ದಿನ ರಜೆ ನೀಡಲಾಗುವುದು ಎಂದು ವಿವರಿಸಿದರು.

ಹತ್ತು ತಿಂಗಳಲ್ಲಿ 23 ಲಕ್ಷಕ್ಕೂ ಅಧಿಕ ಖಾತೆ

ಸ್ವಾಧೀನ ಪತ್ರ ಹೊಂದಿರುವ ಅಪಾರ್ಟ್‌ಮೆಂಟ್‌ಗಳ ಖಾತೆಗಳನ್ನು ಸ್ವಯಂಚಾಲಿತವಾಗಿ ಮಾಡಿಕೊಡಲಾಗುವುದು. ಹತ್ತು ತಿಂಗಳಲ್ಲಿ ಆನ್‌ಲೈನ್ ಮೂಲಕ 23 ಲಕ್ಷಕ್ಕೂ ಹೆಚ್ಚು ಖಾತೆಗಳನ್ನು ಮಾಡಿರುವುದು ಇಡೀ ದೇಶದಲ್ಲಿ ದಾಖಲೆ ಬರೆದಿದೆ. 37,480 ಫ್ಲಾಟ್‌ಗಳಿಗೆ ಓಸಿ ನೀಡಲಾಗಿದೆ. 10 ಲಕ್ಷ ಜನರಿಗೆ ಈಗಾಗಲೇ ವಾಟ್ಸಪ್ ಮೂಲಕ ಖಾತೆಗಳ ಡಿಜಿಟಲ್ ಪ್ರತಿ ಕಳುಹಿಸಲಾಗಿದೆ. ಮಿಕ್ಕವರಿಗೆ ಕಳುಹಿಸಲಾಗುತ್ತದೆ. ಭೌತಿಕ ಪ್ರತಿಗಳನ್ನು ಮನೆಗಳಿಗೆ ಕಳುಹಿಸಲಾಗುತ್ತದೆ. ನಮ್ಮ ಈ ಭೂಮಿ ಗ್ಯಾರಂಟಿ ಮೆಚ್ಚಿ ಕೇಂದ್ರ ಸರ್ಕಾರ ರಾಷ್ಟ್ರೀಯ ಇ ಆಡಳಿತ ಚಿನ್ನದ ಪ್ರಶಸ್ತಿ ನೀಡಿದೆ. ನಾವು ಇಂತಹ ದಾಖಲೆ ಮಾಡುತ್ತೇವೆ ಎಂದು ಕೇಂದ್ರ ಸರ್ಕಾರ ಎಣಿಸಿರಲಿಲ್ಲ. 13 ಲಕ್ಷ ಇ ಖಾತೆಗಳನ್ನು ಆಸ್ತಿ ತೆರಿಗೆ ಆದಾರದಲ್ಲಿ ಸೃಷ್ಟಿಸಿ ಒಂದೇ ದಿನದಲ್ಲಿ ಎಸ್‌ಎಂಎಸ್ ಮೂಲಕ ನೀಡಲಾಗಿದೆ ಎಂದು ತಿಳಿಸಿದರು.

> ಈ ಹಿಂದೆ ನನ್ನ ತಂಗಿಗೆ ಆಸ್ತಿ ಖರೀದಿ ಮಾಡಿದ್ದೇ. ಆದರೆ, ಬೇರೆಯವರಿಗೆ ಖಾತೆಯಾಯಿತು. ನಮಗೆ ಖಾತೆಯೇ ಆಗಲಿಲ್ಲ. ಇಂತಹ ಹಗರಣಗಳು ನಡೆಯುವುದನ್ನು ತಪ್ಪಿಸಲು ನನ್ನ ಇ-ಖಾತೆ ಈ ಕ್ರಮ ತೆಗೆದುಕೊಳ್ಳಲಾಗಿದೆ.
> ■ **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಬಿ ಖಾತೆಯಿಂದ ಎ ಖಾತೆ ನೀಡುವ ಅಭಿಯಾನ ಪ್ರಾರಂಭ ಮಾಡಲಾಗುವುದು. ಕೆಳ ಹಂತದ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆಯಿರುವುದರಿಂದ ಮನೆ ಬಾಗಿಲಿಗೆ ತೆರಳಿ ಖಾತೆ ನೀಡಲಾಗುವುದು. ಅನೇಕ ಕಡೆ 10 ರಿಂದ 5 ಸಾವಿರ ರೂ. ಲಂಚ ಬೇಡಿಕೆ ಬಂದಿದೆ ಎನ್ನುವ ದೂರು ಬಂದಿದೆ. ಇದರ ಬಗ್ಗೆ ನಾನೂ ತನಿಖೆ ನಡೆಸಿದ್ದೇನೆ. ಅದಕ್ಕೆ ಈ ದುರುಪಯೋಗ ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ನಾವು ಪಾರದರ್ಶಕ ಆಡಳಿತ ನೀಡಬೇಕೆಂದು ಹೊರಟಿದ್ದೇವೆ. ನಾಳೆಯಿಂದಲೇ ಅರ್ಜಿ ಸಲ್ಲಿಕೆ ಮಾಡಬಹುದು ಎಂದರು.

ತೂಗುಯ್ಯಾಲೆಯಲ್ಲಿ ಕೆಎಟಿ

ಪುಟ ೧ → ಮೇ 30ರ ಒಳಗಾಗಿ ತಮ್ಮ ಸಂಘದ ವತಿಯಿಂದ ಏನಾದರೂ ಅಭಿಪ್ರಾಯ, ಸಲಹೆಗಳು ಇದ್ದಲ್ಲಿ ಲಿಖಿತವಾಗಿ ಸಮಿತಿಗೆ ಸಲ್ಲಿಸುವಂತೆ ಕೋರಿದೆ. ಕಮಿಟಿ ನೀಡುವ ವರದಿಯ ಮೇಲೆ ಕೆಎಸ್‌ಎಟಿ ರದ್ದಾಗುತ್ತದೆಯೋ ಅಥವಾ ಮುಂದುವರಿಯುತ್ತದೆಯೋ ಎಂದು ಗೊತ್ತಾಗಲಿದೆ.

ನ್ಯಾಯ ಮಂಡಳಿಯ ಸ್ಥಾಪನೆಯ ಮೂಲ ಉದ್ದೇಶವೇ ಸರ್ಕಾರಿ ನೌಕರರಿಗೆ ತಮ್ಮ ಸೇವಾ ಸಂಬಂಧಿತ ವ್ಯಾಜ್ಯಗಳಿಗೆ ವೇಗವಾದ ಹಾಗೂ ಪರಿಣಾಮಕಾರಿ ಪರಿಹಾರ ಒದಗಿಸುವುದಾಗಿದೆ. ಪ್ರಸ್ತುತ ಬೆಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ಪೀಠಗಳಲ್ಲಿ ವರ್ಷಕ್ಕೆ ಸರಾಸರಿ 6 ಸಾವಿರ ಪ್ರಕರಣಗಳು ದಾಖಲಾಗುತ್ತಿದ್ದು, ಸಮಾನ ಪ್ರಮಾಣದಲ್ಲಿ ಪ್ರಕರಣಗಳು ಇತ್ಯರ್ಥಗೊಳ್ಳುತ್ತಿವೆ. ಆದಾಗ್ಯೂ, ಸುಮಾರು 10 ಸಾವಿರ ಪ್ರಕರಣಗಳು ಬಾಕಿ ಉಳಿದಿವೆ.

ಒಂದು ವೇಳೆ ಆಡಳಿತ ನ್ಯಾಯ ಮಂಡಳಿಯನ್ನು ರದ್ದುಪಡಿಸಿದಲ್ಲಿ, ಸರ್ಕಾರಿ ನೌಕರರ ಎಲ್ಲಾ ಸೇವಾ ವಿಷಯಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯವ್ಯಾಪ್ತಿಗೆ ಸೇರುತ್ತದೆ. ಇದರಿಂದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮತ್ತಷ್ಟು ಹೊರೆಯಾಗಿ ತೀರ್ಪು ನೀಡುವುದು ಮತ್ತಷ್ಟು ವಿಳಂಬವಾಗಬಹುದು, ಇದು ನ್ಯಾಯ ವಿಳಂಬವಾದರೆ ನ್ಯಾಯ ನಿರಾಕರಿಸಲಾಗಿದೆ ಎಂಬ ಸನ್ನಿವೇಶಕ್ಕೆ ಕಾರಣವಾಗಬಹುದು.

ನೌಕರರಿಗೆ ಅನಾನುಕೂಲ

ಪುಟ ೧ → ಇದಲ್ಲದೆ, ವರ್ಗಾವಣೆ ವಿಷಯಗಳನ್ನು ನ್ಯಾಯಮಂಡಳಿಯ ವ್ಯಾಪ್ತಿಯಿಂದ ಹೊರಗಿಟ್ಟಲ್ಲಿ ರಾಜ್ಯದ ಸಾವಿರಾರು ನೌಕರರಿಗೆ ಗಂಭೀರ ಅನಾನುಕೂಲತೆಗಳು ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ, ಈ ವಿಷಯವನ್ನೂ ನ್ಯಾಯಮಂಡಳಿಯ ವ್ಯಾಪ್ತಿಯಲ್ಲಿಯೇ ಉಳಿಸಬೇಕು ಎಂಬುದು ನೌಕರರ ಸಂಘಗಳ ಒತ್ತಾಯವಾಗಿದೆ.

> ರಾಜಕೀಯ ಒತ್ತಡದಿಂದ ಪಾರಾಗಲು, ಹೈಕೋರ್ಟ್ ಒತ್ತಡ ಕಡಿಮೆ ಮಾಡಲು ಕೆಎಸ್‌ಎಟಿ ಸರ್ಕಾರಿ ನೌಕರರಿಗೆ ನೆರವಾಗಲಿದೆ. ಶೇ.6ರಷ್ಟು ಮಾತ್ರ ವರ್ಗಾವಣೆಗೆ ಅವಕಾಶ ಇರುವುದರಿಂದ ಬೇಕಾಬಿಟ್ಟಿ ವಾರ್ಗಾವಣೆ ಮಾಡಿದರೆ, ಕೆಎಸ್‌ಎಟಿ ಮೂಲಕ ತಡೆಯಾಜ್ಞೆ ತರಲಾಗುತ್ತದೆ. ಹೀಗಾಗಿ ಇದನ್ನು ತಗೆಯಲು ಷಡ್ಯಂತ್ರ ಮಾಡಲಾಗುತ್ತಿದ್ದು, ಕೆಎಸ್‌ಎಟಿ ಮೊಟಕುಗೊಳಿಸಿದರೆ ಹೋರಾಟ ಹಾದಿ ಹಿಡಿಯಬೇಕಾಗುತ್ತದೆ.
> ■ **ರಮೇಶ ಸಂಗಾ,** ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ಅಧ್ಯಕ್ಷ

1,745 ಕೋಟಿ ಮೌಲ್ಯದ ಡ್ರಗ್ಸ್ ವಶ

ಪುಟ ೧ → ಆಪರೇಷನ್ ಗ್ಲೋಬಲ್-ಹಂಟ್ ಕಾರ್ಯಾಚರಣೆಯಲ್ಲಿ ಟರ್ಕಿಯಿಂದ ಭಾರತಕ್ಕೆ ಬಂದಿದ್ದ ದಾವೂದ್ ಇಬ್ರಾಹಿಂನ ಆಪ್ತ ಸಹಚರ ಹಾಗೂ ಡ್ರಗ್ಸ್ ಕಳ್ಳಸಾಗಣೆ ಆರೋಪಿ ಸಲೀಂ ಡೋಲಾನನ್ನು ಎನ್‌ಸಿಬಿ ಅಧಿಕಾರಿಗಳು ಹೊಸದಿಲ್ಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದ ಬೆನ್ನಲ್ಲೇ ಈ ದಾಳಿ ನಡೆದಿರುವುದು ಗಮನಾರ್ಹವಾಗಿದೆ.

ನಾಗ್ಪುರದಲ್ಲೂ ಎಲ್‌ಎಸ್‌ಡಿ ಪತ್ತೆ: ಇತ್ತೀಚೆಗೆ ಮಹಾರಾಷ್ಟ್ರದ ನಾಗ್ಪುರದಲ್ಲೂ ಮೊದಲ ಬಾರಿಗೆ ಎಲ್‌ಎಸ್‌ಡಿ ಮಾದಕ ವಸ್ತು ಪತ್ತೆಯಾಗಿದ್ದು, ಪ್ರಕರಣ ಸಂಬಂಧ ಇಬ್ಬರು ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದರು. ಬಂಧಿತರಿಂದ ಸುಮಾರು 1.7 ಲಕ್ಷ ರೂ. ಮೌಲ್ಯದ ಪಾರ್ಟಿ ಡ್ರಗ್ಸ್ ವಶಪಡಿಸಿಕೊಳ್ಳಲಾಗಿತ್ತು. ನಾಗ್ಪುರ ಎಂಐಡಿಸಿ ಪೊಲೀಸ್ ಠಾಣಾ ವ್ಯಾಪ್ತಿಯ ಚೈತಲಾ ಪ್ರದೇಶದಲ್ಲಿ ನಡೆದ ಜಂಟಿ ಕಾರ್ಯಾಚರಣೆಯಲ್ಲಿ, ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ಇಬ್ಬರನ್ನು ತಪಾಸಣೆ ನಡೆಸಿದಾಗ 17 ಎಲ್‌ಎಸ್‌ಡಿ ಡಾಟ್‌ಗಳು ಪತ್ತೆಯಾಗಿದ್ದವು. ಈ ಮೂಲಕ ನಗರದಲ್ಲಿ ಸಕ್ರಿಯವಾಗಿದ್ದ ಪಾರ್ಟಿ ಡ್ರಗ್ಸ್ ಜಾಲದ ಸುಳಿವು ದೊರೆತಿತ್ತು.



> ದೇಶದಲ್ಲಿ ಮಾದಕ ವಸ್ತುಗಳ ಜಾಲವನ್ನು ಸಂಪೂರ್ಣವಾಗಿ ಹತ್ತಿಕ್ಕಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕೆಳಮಟ್ಟದಿಂದ ಮೇಲಿನವರೆಗೆ ಎನ್‌ಸಿಬಿ ನಡೆಸಿದ ಕಾರ್ಯಾಚರಣೆ ದೊಡ್ಡ ಯಶಸ್ಸಿಗೆ ಕಾರಣವಾಗಿದೆ. ಅಂತಾರಾಷ್ಟ್ರೀಯ ಮಾದಕ ಜಾಲಕ್ಕೆ ದೊಡ್ಡ ಹೊಡೆತ ನೀಡಲಾಗಿದೆ.
> ■ **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ

ಪುಟ ೧ → ಈ ತಿಂಗಳು 52,140 ಕೋಟಿ ರೂ. ಹಾಗೂ 61,331 ಕೋಟಿ ರೂ. ಸಂಗ್ರಹವಾಗಿದ್ದು, 1.29 ಲಕ್ಷ ಕೋಟಿ ರೂ.ಗೂ ಅಧಿಕವಾಗಿದೆ. ಈ ಅವಧಿಯಲ್ಲಿ ಮರುಪಾವತಿಗಳು ಶೇ.19.3 ಏರಿಕೆಯಾಗಿ 31,793 ಕೋಟಿ ರೂ.ಗೆ ತಲುಪಿವೆ. ಮರುಪಾವತಿಗಳನ್ನು ಹೊಂದಿಸಿಕೊಂಡ ನಂತರದ ನಿಖರ ಜಿಎಸ್‌ಟಿ ಸಂಗ್ರಹ ಶೇ.7.3 ಹೆಚ್ಚಾಗಿ ಸುಮಾರು 2.11 ಲಕ್ಷ ಕೋಟಿ ರೂ. ಆಗಿದೆ. ಒಟ್ಟಾರೆ ವಿತ್ತೀಯ ವರ್ಷ 2025-26ರಲ್ಲಿ ಜಿಎಸ್‌ಟಿ ಸಂಗ್ರಹ, ತಂತ್ರಜ್ಞಾನ ಆಧಾರಿತ ಆಡಳಿತ ಮತ್ತು ಆರ್ಥಿಕ ಸ್ಥಿರತೆಯು ಉತ್ತಮ ಆದಾಯ ನೀಡುತ್ತಿರುವುದನ್ನು ಸೂಚಿಸುತ್ತದೆ. 2025ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದ ಜಿಎಸ್‌ಟಿ 2.0 ಪ್ರಾರಂಭದಲ್ಲಿ ಕುಸಿತ ಕಂಡರೂ, ಬಳಿಕ ಜಿಎಸ್‌ಟಿ ಸಂಗ್ರಹದಲ್ಲಿ ನಿರಂತರ ಏರಿಕೆ ಕಂಡುಬರುತ್ತಿದೆ. ಈ ಪರಿಷ್ಕರಣೆಯಲ್ಲಿ ಸುಮಾರು 375 ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಕಡಿತಗೊಳಿಸಲಾಗಿದ್ದು, ಶೇ.5, 12, 18 ಮತ್ತು 28 ಇದ್ದ ನಾಲ್ಕು ಸ್ಲ್ಯಾಬ್‌ಗಳನ್ನು ಶೇ.5 ಮತ್ತು ಶೇ.18 ಎಂಬ ಎರಡು ಸ್ಲ್ಯಾಬ್‌ಗಳಿಗೆ ವಿಲೀನಗೊಳಿಸಲಾಗಿದೆ. ಕೆಲವು ಅತಿ ಐಷಾರಾಮಿ ವಸ್ತುಗಳು ಮತ್ತು ತಂಬಾಕು ಉತ್ಪನ್ನಗಳಿಗೆ ಮಾತ್ರ ಶೇ.40 ಗರಿಷ್ಠ ತೆರಿಗೆ ದರವನ್ನು ಉಳಿಸಲಾಗಿದೆ.

ನಮ್ಮದು ಯಾವಾಗಲೂ ಕಾರ್ಮಿಕ ಪರ ಸರ್ಕಾರ

ಪುಟ ೧ → ಕಾಯಕವೇ ಕೈಲಾಸ ಎಂದು ಬಸವಣ್ಣ ಹೇಳಿದ್ದರು, ಯಾವುದೇ ಕೆಲಸ ಮಾಡಿದರೂ ಅದಕ್ಕೆ ಸಮಾನ ಗೌರವ ನೀಡಬೇಕು ಎಂದರು. ದೇಶದಲ್ಲಿ 75%ಗಿಂತ ಹೆಚ್ಚು ಅಸಂಘಟಿತ ಕಾರ್ಮಿಕರಿದ್ದಾರೆ. ಕೇಂದ್ರ ಸರ್ಕಾರ ಕಾರ್ಮಿಕರ ವಿರೋಧಿಯಾಗಿದ್ದು, ಕಾರ್ಪೊರೇಟ್ ಸಂಸ್ಥೆಗಳ ಪರವಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು. ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಲಿ



2026-27ಕ್ಕೆ ಶ್ರಮಿಕ ವರ್ಗಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ ಕಾರ್ಮಿಕರ ಮಕ್ಕಳಿಗೆ 104 ವಸತಿ ಶಾಲೆಗಳನ್ನು ತೆರೆಯಲಾಗಿದೆ. ವಸತಿ ಶಾಲೆಗಳಲ್ಲಿ 99.42% ವಿದ್ಯಾರ್ಥಿಗಳು ತೇರ್ಗಡೆ ಯಾಗಿದ್ದಾರೆ. ಕಾರ್ಮಿಕರ ಮಕ್ಕಳೂ ಉನ್ನತ ಶಿಕ್ಷಣ ಪಡೆಯಲು ಈ ಶಾಲೆಗಳು ನೆರವಾಗಲಿವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಮಮತಾ ಹೈಡ್ರಾಮಾ

ಪುಟ ೧ → ಇವಿಎಂ ಸಂಗ್ರಹ ಕೇಂದ್ರಗಳ ಬಳಿ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರು ಹಗಲು-ರಾತ್ರಿ ನಿಗಾ ವಹಿಸಬೇಕೆಂದು ಪಕ್ಷ ಸೂಚಿಸಿದೆ.

ಡ್ರಾಮಾಬಾಜಿ ಮಾತ್ರ, ಫಲಿತಾಂಶ ಬದಲಾಗಲ್ಲ: ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡೆಗೆ ಬಿಜೆಪಿ ಮುಖಂಡ ಸುವೇಂದು ಅಧಿಕಾರಿ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ. ಇನ್ನೂ ಎರಡು ದಿನ ಅವರು ಇಂತಹ ಡ್ರಾಮಾಬಾಜಿ ಮಾಡಬಹುದು. ಆದರೆ, ಅದರಿಂದ ಫಲಿತಾಂಶ ಬದಲಾಗುವುದಿಲ್ಲ ಎಂದು ಭವಾನೀಪುರ ಕ್ಷೇತ್ರದಲ್ಲಿ ಮಮತಾ ವಿರುದ್ಧ ಸ್ಪರ್ಧಿಸುತ್ತಿರುವ ಸುವೇಂದು ಅಧಿಕಾರಿ ಹೇಳಿದರು.

15 ಮತಗಟ್ಟೆಗಳಲ್ಲಿ ಇಂದು ಮರುಮತ

ಪುಟ ೧ → ಫಲ್ತಾ ಪ್ರದೇಶದಲ್ಲಿ ಇವಿಎಂ ಯಂತ್ರಗಳ ಬಟನ್‌ಗಳನ್ನು ಟೇಪ್ ಬಳಸಿ ತೊಂದರೆಗೊಳಿಸಲಾಗಿದೆ ಎಂದು ಬಿಜೆಪಿ ಆರೋಪಿಸಿದ ನಂತರ ಮರುಮತದಾನದ ನಿರ್ಧಾರ ಕೈಗೊಳ್ಳಲಾಗಿದೆ. ಮತದಾರರು ಹಾಗೂ ರಾಜಕೀಯ ಪಕ್ಷಗಳು ಇವಿಎಂ ದೋಷ, ಮತಗಟ್ಟೆಯಲ್ಲಿ ಹಿಂಸಾಚಾರ ಹಾಗೂ ಅಕ್ರಮ ಮತದಾನದ ಬಗ್ಗೆ ದೂರುಗಳನ್ನು ದಾಖಲಿಸಿದ್ದವು.

ಸುಪ್ರೀಂ ಮೆಟ್ಟಿಲೇರಿದ ಟಿಎಂಸಿ, ಇಂದು ವಿಚಾರಣೆ

ಪುಟ ೧ → ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೊಯ್ಮಲ್ಯ ಭಾಗ್ಚಿ ಅವರ ವಿಶೇಷ ಪೀಠ ಈ ಅರ್ಜಿಯ ತುರ್ತು ವಿಚಾರಣೆಯನ್ನು ಶನಿವಾರ ನಡೆಸಲಿದೆ.

> ಸೋಲು ಖಚಿತವಾಗುತ್ತಿದ್ದಂತೆ ಟಿಎಂಸಿ ಸುಳ್ಳು ಆರೋಪಗಳನ್ನು ಮಾಡುತ್ತಿದೆ. ಜನರ ಸಹಾನುಭೂತಿ ಪಡೆಯಲು ರಾಜಕೀಯ ನಡೆಸುತ್ತಿದೆ.
> ■ **ಶೆಹಜಾದ್ ಪೂನಾವಾಲಾ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಡಿಸಿ ನೇತೃತ್ವದಲ್ಲಿ ತನಿಖೆಗೆ ಚುರುಕು

ಪುಟ ೧ → ಏಳು ದಿನದೊಳಗಾಗಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರ ಸೂಚಿರುವ ಹಿನ್ನೆಲೆಯಲ್ಲಿ ಎರಡು ತಂಡಗಳು ಮೃತರ ಮಾಹಿತಿ ಸಂಗ್ರಹಕ್ಕೆ ಮುಂದಾಗಿವೆ. ಡಿಜೆ ಹಳ್ಳಿ, ಕೆ.ಜಿ ಹಳ್ಳಿ ಹಾಗೂ ಜೆ.ಸಿನಗರದ ಮೃತರ ಬಗ್ಗೆ ಮಾಹಿತಿ ದೊರೆಯಲಿದೆ. ಆದರೆ, ಅಸ್ಸಾಂ, ಕೇರಳ ಉ.ಪ್ರದೇಶ ಮೂಲದ ಮೃತರ ಮಾಹಿತಿ ಕಲೆ ಹಾಕುವುದು ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸಲಿದೆ. ಮೇಲ್ನೋಟಕ್ಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಗೋಡೆ ಕುಸಿತವಾಗಿರುವ ಪರಿಣಾಮ ತನಿಖಾ ತಂಡದ ವರದಿ ಆಧರಿಸಿ ಲೋಕೋಪಯೋಗಿ, ಆರೋಗ್ಯ ಇಲಾಖೆ ಅಧಿಕಾರಿಗಳ ತಲೆದಂಡವಾಗಲಿದೆ ಎನ್ನಲಾಗಿದೆ.

ರಾಜ್ಯ ಆಡಳಿತಯಂತ್ರ ಕುಸಿತ: ಬಿವೈವಿ

ಪುಟ ೧ → ಇವರೇನು ನಮ್ಮ ರಾಜ್ಯದ ಶಾಸಕರೋ ಅಥವಾ ದಿಲ್ಲಿ ಶಾಸಕರೋ ಎಂಬ ಅನುಮಾನ ಬರುತ್ತಿದೆ ಎಂದರು. ರಾಜ್ಯದ ಸರ್ಕಾರಿ ನೌಕರರಿಗೆ ಎರಡು ತಿಂಗಳಿಂದ ವೇತನ ಬಿಡುಗಡೆ ಮಾಡಿಲ್ಲ. ಇದರಿಂದಲೇ ಈ ಸರ್ಕಾರ ದಿವಾಳಿ ಆಗಿದೆ ಎಂದು ತಿಳಿಯುತ್ತದೆ. ಗುತ್ತಿಗೆದಾರರು ರಾಜ್ಯ ಸರ್ಕಾರದ ಧೋರಣೆಯಿಂದ ಬೇಸತ್ತು ಬೇರೆ ರಾಜ್ಯಗಳಿಗೆ ಓಡಿ ಹೋಗಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿ ಬಂದಿದೆ. ಕೇಂದ್ರ ಸರ್ಕಾರವನ್ನು ದೂರುವ ಬದಲು ರಾಜ್ಯ ಸರ್ಕಾರ ಏನು ಅಭಿವೃದ್ಧಿ ಮಾಡುತ್ತಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.



ಧಾರವಾಡದಲ್ಲಿ ಪೊಲೀಸರಿಂದ ದೌರ್ಜನ್ಯ: ಧಾರವಾಡದಲ್ಲಿ ಆದಿತ್ಯ ಮ್ಯಾಗೇರಿ ಎಂಬ ಕಾಲೇಜಿಗೆ ಹೋಗುವ ಯುವಕನನ್ನು ಪೊಲೀಸ್ ಇಲಾಖೆಯವರು ಡ್ರಗ್ಸ್ ಪ್ರಕರಣದಲ್ಲಿ ವಿನಾಕಾರಣ ಸಿಲುಕಿಸಿದರು. ಅವನು ನಿರಪರಾಧಿ ಎಂದು ಗೊತ್ತಾದ ನಂತರವೂ ತಂದೆ ಇಲ್ಲದಿರುವ ಆತನ ತಾಯಿಯನ್ನು ಪೀಡಿಸಿ ಸಾವಿರಾರು ರೂಪಾಯಿ ವಸೂಲಿ ಮಾಡಿದ್ದಾರೆ. ರಾಜ್ಯದ ಪೊಲೀಸ್ ಇಲಾಖೆ ಎಷ್ಟೊಂದು ಕೀಳುಮಟ್ಟಕ್ಕೆ ಹೋಗಿದೆ ಎಂದು ಇದರಿಂದ ಗೊತ್ತಾಗುತ್ತದೆ. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ತಕ್ಷಣ ಈ ಘಟನೆಯಿಂದ ಎಚ್ಚೆತ್ತುಕೊಂಡು ಯಾವ ಅಧಿಕಾರಿಗಳು ಈ ಪ್ರಕರಣದ ಹಿಂದೆ ಇದ್ದಾರೋ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಬಡ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು.

ರಾಮಸ್ವಾಮಿ ಸಾಹಿತ್ಯ ಲೋಕದ ದಿಗ್ಗಜ: ಮುಕುಂದ್

ಬೆಂಗಳೂರು: ನಾಡೋಜ ಎಸ್.ಆರ್.ರಾಮಸ್ವಾಮಿ ಅವರು ಕೇವಲ ಸಾಹಿತ್ಯ ಲೋಕದ ದಿಗ್ಗಜರು ಮಾತ್ರವಾಗಿ ರದೆ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಸಂಸ್ಕಾರದ ಮಾದರಿ ಸ್ವಯಂಸೇವಕರಾಗಿದ್ದರು ಎಂದು ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಮುಕುಂದ್ ಸಿ.ಆರ್. ಹೇಳಿದರು.

ನಗರದ ಕೇಶವಶಿಲ್ಪ ಸಭಾಂಗಣದಲ್ಲಿ ನಡೆದ ನಾಡೋಜ ಎಸ್.ಆರ್.ರಾಮಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿ, ರಾಮಸ್ವಾಮಿಯವರು ಕೇವಲ ಸಾಹಿತಿ ಅಥವಾ ಚಿಂತಕರಾಗಿ ಮಾತ್ರವಲ್ಲ, ಸಂಘದ ಒಬ್ಬ ಸಾಮಾನ್ಯ ಸ್ವಯಂಸೇವಕನಾಗಿ ಕಾರ್ಯಕರ್ತರೊಂದಿಗೆ ಬೆರೆತ ರೀತಿ ಅನನ್ಯ. ಸಂಘದ ಶಾಖೆಗಳಿಗೆ ಚಾಚೂ ತಪ್ಪದೆ ಬರುತ್ತಿದ್ದ ಅವರು, ಸಣ್ಣ ವಯಸ್ಸಿನ ಬಾಲಕರಿಂದ ಹಿಡಿದು ಹಿರಿಯರವರೆಗೂ ಸಮಾನವಾಗಿ ಬೆರೆತು ಮಾತನಾಡುತ್ತಿದ್ದರು. ಅವರ ಹಾಸ್ಯಪ್ರಜ್ಞೆ ಮತ್ತು ಸರಳತೆ ಎಂತಹವರನ್ನೂ ಸೆಳೆಯುತ್ತಿತ್ತು ಎಂದು ಸ್ಮರಿಸಿದರು.

ನಿಸ್ವಾರ್ಥ ಪಯಣ: ರಾಮಸ್ವಾಮಿಯವರ ನಿಸ್ವಾರ್ಥ ಸೇವೆಗೆ ಸಾಕ್ಷಿ ಅವರ ವೃತ್ತಿಜೀವನ. ಸುಧಾ ಪತ್ರಿಕೆಯ ಉಪಸಂಪಾದಕರಾಗಿ ಸಾವಿರಾರು ರೂಪಾಯಿ ವೇತನ ಪಡೆಯುತ್ತಿದ್ದ ಅವರು, ಸಂಘದ ಉತ್ಥಾನ ಪತ್ರಿಕೆಗೆ ಸಂಪಾದಕರ ಅಗತ್ಯವಿದೆ ಎಂದಾಕ್ಷಣವೇ ಸುಧಾ ಪತ್ರಿಕೆಗೆ ರಾಜೀನಾಮೆ ನೀಡಿದರು ಎಂದು ತಿಳಿಸಿದರು.



ಸಾರ್ಥಕ ಬದುಕಿನ ಸಮನ್ವಯ ಚೇತನ- ವೆಂಕಟಾಚಲ ಶಾಸ್ತ್ರಿ

ಅಪ್ರತಿಮ ಪಾಂಡಿತ್ಯ, ಅಪಾರ ಪರಿಶ್ರಮ ಮತ್ತು ಶೀಲವಂತಿಕೆಯ ಸಮನ್ವಯವಾಗಿದ್ದ ಎಸ್.ಆರ್ ರಾಮಸ್ವಾಮಿ ಬೌದ್ಧಿಕ ಲೋಕದ ಧ್ರುವತಾರೆ. ಅವರ ಸಾಧನೆ ಒಂದು ತ್ರಿಭುಜವಿದ್ದಂತೆ. ಅದರಲ್ಲಿ ಪ್ರತಿಭೆ, ಪಾಂಡಿತ್ಯ ಮತ್ತು ಪರಿಶ್ರಮದ ಜೊತೆಗೆ ಶೀಲವಂತಿಕೆಯೂ ಅಗ್ರಸ್ಥಾನದಲ್ಲಿತ್ತು. ರಾಮಸ್ವಾಮಿ ಅವರ ಸಾಹಿತ್ಯ ಕೃಷಿ ಕೇವಲ ಬರವಣಿಗೆಗೆ ಸೀಮಿತವಾಗಿರಲಿಲ್ಲ. ಅದು ಸಮಾಜದ ಹಿತಚಿಂತನೆಯ ಒಂದು ಭಾಗವಾಗಿತ್ತು. ಅವರು ಬಿಟ್ಟುಹೋದ ಸಾಹಿತ್ಯ ಕೃತಿಗಳು ಮುಂದಿನ ತಲೆಮಾರಿಗೆ ದಾರಿದೀಪವಾಗಿವೆ ಎಂದು ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಹೇಳಿದರು.

ಶತಾವಧಾನಿ ಡಾ. ಆರ್. ಗಣೇಶ್ ಮಾತನಾಡಿ, ರಾಮಸ್ವಾಮಿ ಅವರದ್ದು ಕೆಲಸಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದ ಅಚಲ ವ್ಯಕ್ತಿತ್ವ. ಸಮಾಜದ ಸ್ವಾಸ್ಥ್ಯಕ್ಕಾಗಿ ಮೌಲ್ಯಾಧಾರಿತ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. ಡಿ.ವಿ.ಜಿ ಅವರ ಆಶಯದಂತೆ ಗೋಖಲೆ ಸಂಸ್ಥೆ ಹಾಗೂ ರಾಷ್ಟ್ರೋತ್ಥಾನವನ್ನು ಕಟ್ಟಿ ಬೆಳೆಸಿದರು. ಡಿವಿಜಿಯವರ ಗರಡಿಯಲ್ಲಿ ಬೆಳೆದ ರಾಮಸ್ವಾಮಿ; ಶಿಸ್ತು, ದಕ್ಷತೆ ಮೈಗೂಡಿಸಿಕೊಂಡಿದ್ದರು. ಹೊಸಬರಿಗೆ ವೇದಿಕೆ ಕಲ್ಪಿಸಿ ಪ್ರೋತ್ಸಾಹಿಸುತ್ತಿದ್ದರು. ರಾಮಸ್ವಾಮಿ ಅವರು ಹಾಕಿಕೊಟ್ಟ ದಕ್ಷತೆ, ಪ್ರಾಮಾಣಿಕತೆ ಮತ್ತು ಸಾಂಸ್ಕೃತಿಕ ಬದ್ಧತೆಯ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ತಿಳಿಸಿದರು.

ನಾಲ್ಕು ನೂತನ ಕಾರ್ಮಿಕ ಸಂಹಿತೆ ಜಾರಿಗೆ ಯತ್ನ

ಹುಬ್ಬಳ್ಳಿ: ದೇಶದಲ್ಲಿ ಮೊದಲ ಬಾರಿಗೆ ಕಾರ್ಮಿಕರ ಇಲಾಖೆಯಲ್ಲಿ 29 ಕಾಯ್ದೆಗಳನ್ನು ತಿದ್ದುಪಡಿ ಮಾಡಿ 4 ನೂತನ ಸಂಹಿತೆ (ಕೋಡ್)ಗಳನ್ನು ಜಾರಿಗೆ ತರುವ ಪ್ರಯತ್ನ ನಡೆಸಲಾಗುತ್ತಿದೆ. ಸಾಮಾಜಿಕ ಭದ್ರತಾ ಸಂಹಿತೆಯಡಿ 32 ಕೋಟಿ ಅಸಂಘಟಿತ ಕಾರ್ಮಿಕರನ್ನು ಇಎಸ್‌ಐ, ಇಪಿಎಫ್‌ಒ ವ್ಯಾಪ್ತಿಗೆ ಸೇರಿಸಲಾಗುತ್ತಿದೆ ಎಂದು ರಾಜ್ಯ ಕಾರ್ಮಿಕ, ಉದ್ಯೋಗ ಇಲಾಖೆಯ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಎಲ್ಲ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಪಿಂಚಣಿ, ಇಎಸ್‌ಐಸಿ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಜಾರಿಗೆ 4 ಸಂಹಿತೆಗಳು ಜಾರಿಗೊಂಡಿವೆ. ಈ ಸಂಹಿತೆಗಳನ್ನು ಬಹುತೇಕ ರಾಜ್ಯಗಳು ಒಪ್ಪಿಕೊಂಡಿದ್ದು, ವಿವಿಧ ರಾಜ್ಯಗಳ ಕೈಗಾರಿಗೆ, ಉತ್ಪಾದನೆಗೆ ಅನುಗುಣವಾಗಿ ಮೇ 5ರಂದು 4 ಸಂಹಿತೆಗಳು ಕಾನೂನಾಗಿ

ಮಾರ್ಪಾಡಾಗಲಿವೆ. ಭಾರತ ಸರ್ಕಾರ ಇಪಿಎಫ್‌ಒಗೆ ಪ್ರತಿ ವರ್ಷ ಸುಮಾರು 10-13 ಸಾವಿರ ಕೋಟಿಗೂ ಅಧಿಕ ಹಣವನ್ನು ನೀಡುತ್ತಿದೆ. ಇದರೊಟ್ಟಿಗೆ ವಿವಿಧ ರಾಜ್ಯಗಳು ಶೇ.1ರಷ್ಟು ಸೆಸ್ ಸಂಗ್ರಹಿಸುತ್ತಿವೆ. ಇದರ ಸದುಪಯೋಗವಾಗದೇ ಹಗರಣಗಳ ವಾಸನೆ ಬರುತ್ತಿದೆ. ಅವುಗಳನ್ನು ತನಿಖೆ ಮಾಡಲಾಗುವುದು ಎಂದರು.

ADVERTORIAL


ಹಾಲಗುಂಡಿ ಬಸವೇಶ್ವರ ದೇವಸ್ಥಾನ


ಚಂದ್ರಮೌಳೇಶ್ವರ ದೇವಸ್ಥಾನ


ಮಲ್ಲಿಕಾರ್ಜುನ ದೇವಾಲಯ


ಕನ್ನೇರಭಾವಿ


ವೀರುಪಾಕ್ಷೇಶ್ವರ ದೇವಸ್ಥಾನ


ಕಲ್ಮಠ

ಲಕ್ಕುಂಡಿಯ ಐತಿಹಾಸಿಕ ಪರಂಪರೆಗೆ ಹೊಸ ಸ್ಪರ್ಶ

ಗದಗ ಜಿಲ್ಲೆಯ ಇತಿಹಾಸ ಪ್ರಸಿದ್ಧ ಲಕ್ಕುಂಡಿಯ ಗತವೈಭವವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಗುತ್ತಿದೆ. ಈ ಬಾರಿ ಒಟ್ಟು 6 ಸ್ಮಾರಕಗಳ ಸಂರಕ್ಷಣೆ, ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಜತೆಗೆ ದಶ ದೇವಾಲಯ, ದಶ ಬಾವಿಗಳ ಅನಾವರಣ ಹಾಗೂ ಪ್ರಾಚ್ಯಾವಶೇಷಗಳ ಅನ್ವೇಷಣೆ ಸಪ್ತಾಹಕ್ಕೂ ಚಾಲನೆ ದೊರೆಯಲಿದೆ.

10.16 ಕೋಟಿ ರೂ. ವೆಚ್ಚದ ಕಾಮಗಾರಿಗೆ ಇಂದು ವಿಧ್ಯುಕ್ತ ಚಾಲನೆ

ಕರ್ನಾಟಕ ಒಂದು ರಾಜ್ಯ. ಹಲವು ಜಗತ್ತುಗಳು.

ಮೇ 2ರಂದು ಬೆಳಗ್ಗೆ 10.30ಕ್ಕೆ ಲಕ್ಕುಂಡಿ ಗ್ರಾಮದ ಹಾಲಗುಂಡಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಈ ಐತಿಹಾಸಿಕ ಕಾರ್ಯಕ್ರಮ ನಡೆಯಲಿದೆ. ಗದಗ ಜಿಲ್ಲಾ ಡಳಿತ, ಜಿಪಂ, ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಒಟ್ಟು 10.16 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೊಳ್ಳುವ ಮೂಲಕ ಲಕ್ಕುಂಡಿ ಗತವೈಭವ ಮರುಸೃಷ್ಟಿಗೆ ಮತ್ತೊಂದು ಹೆಜ್ಜೆ ಇಡಲಾಗುತ್ತಿದೆ.

ಈ ಕಾರ್ಯಕ್ರಮ ಸಭಾಪತಿ ಬಸವರಾಜ ಹೊರಟ್ಟಿ ಘನ ಉಪಸ್ಥಿತಿಯಲ್ಲಿ ನಡೆಯಲಿದೆ. ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅವರು ಶಿಲಾನ್ಯಾಸ ನೆರವೇರಿಸಲಿದ್ದಾರೆ. ನರಗುಂದ ಶಾಸಕ ಸಿ. ಸಿ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ರೋಣ ಶಾಸಕ ಹಾಗೂ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ. ಗದ್ದಿಗೌಡರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ . ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ ಉಪಸ್ಥಿತರಿರುವರು.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎಂ. ವಿ. ವೆಂಕಟೇಶ್, ಪ್ರವಾಸೋದ್ಯಮ ಇಲಾಖೆ ಆಯುಕ್ತ ಅಕ್ರಂ ಪಾಷಾ, ಮತ್ತು ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ. ಎಂ., ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಸದಸ್ಯ ಸಿ. ಬಿ. ಬೆಟಸೂರಮಠ, ಸಿದ್ಧಲಿಂಗೇಶ್ವರ ಪಾಟೀಲ, ಗೀತಾಂಜಲಿ ರಾವ್, ಅ.ದ. ಕಟ್ಟಿಮನಿ ಹಾಗೂ ಗ್ರಾಮದ ಪ್ರಮುಖರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು ಎ., ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಾ. ಶರಣು ಗೋಗೇರಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ವರ ವಿಭೂತಿ ಕೋರಿದ್ದಾರೆ.


ಲಕ್ಕುಂಡಿ ಗ್ರಾಮದಲ್ಲಿ ಸಿಎಂ ಸಿದ್ದರಾಮಯ್ಯ ಉತ್ಖನನಕ್ಕೆ ಚಾಲನೆ ನೀಡಿದರು.


ಐತಿಹಾಸಿಕ ಲಕ್ಕುಂಡಿ 101 ದೇವಸ್ಥಾನ, 101 ಬಾವಿಗಳನ್ನು ಹೊಂದಿರುವ ಶಿಲ್ಪಕಲೆಗಳ ತೊಟ್ಟಿಲಾಗಿದೆ. ಇತಿಹಾಸದ ಪುಟಗಳಲ್ಲಿ ಹುದುಗಿ ಹೋಗಿರುವ ಲಕ್ಕುಂಡಿಯ ಗತವೈಭವವನ್ನು ಮರುಸೃಷ್ಟಿಸುವ ಜೊತೆಗೆ, ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೆ ಎಲ್ಲ ರೀತಿಯ ಪ್ರಯತ್ನಗಳು ನಡೆದಿವೆ.

-ಎಚ್.ಕೆ. ಪಾಟೀಲ ಜಿಲ್ಲಾ ಉಸ್ತುವಾರಿ ಸಚಿವರು


ಲಕ್ಕುಂಡಿಯನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಕೆಲಸಗಳನ್ನು ಸ್ವಾಗತಿಸುವೆ. ಲಕ್ಕುಂಡಿ ಇತಿಹಾಸವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಮೂಲಕ ನಮ್ಮ ನೆಲದ ಪರಂಪರೆ ಉಳಿಸಿ ಬೆಳಸಬೇಕಿದೆ.

-ಸಿ.ಸಿ. ಪಾಟೀಲ, ಶಾಸಕರು ನರಗುಂದ


ಲಕ್ಕುಂಡಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಪ್ರಾಚ್ಯಾವಶೇಷಗಳ ಡಿಜಿಟಲೀಕರಣಕ್ಕೆ ಚಾಲನೆ ನೀಡಿದರು.

ಅಭಿವೃದ್ಧಿಗೊಳ್ಳಲಿರುವ ಸ್ಮಾರಕಗಳು

- ಹಾಲಗುಂಡಿ ಬಸವೇಶ್ವರ ದೇವಾಲಯ- 1.58 ಕೋಟಿ.
- ಕನ್ನೇರ ಭಾವಿ (ಭಾಗ-2)- 1.70 ಕೋಟಿ.
- ಮಲ್ಲಿಕಾರ್ಜುನ ದೇವಾಲಯ, ಗದ್ದುಗೆ- 1.67 ಕೋಟಿ.
- ವಿರೂಪಾಕ್ಷೇಶ್ವರ ದೇವಾಲಯ- 1.81 ಕೋಟಿ.
- ಚಂದ್ರಮೌಳೀಶ್ವರ ದೇವಾಲಯ- 1.86 ಕೋಟಿ
- ಕಲ್ಮಠ ದ್ವಾರಬಾಗಿಲು ಹಾಗೂ ಬಾವಿ- 1.54 ಕೋಟಿ.

ಉತ್ಖನನಕ್ಕೆ ಸಿಎಂ ಚಾಲನೆ

2025 ಜೂನ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಕ್ಕುಂಡಿ ಭೇಟಿ ನೀಡಿ, ಬಯಲು ವಸ್ತು ಸಂಗ್ರಹಾಲಯ ವೀಕ್ಷಣೆ ಮಾಡಿದರು. ಅಲ್ಲದೇ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನಕ್ಕೆ ಚಾಲನೆ ನೀಡಿ, ಐತಿಹಾಸಿಕ ತಾಣಗಳ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಲಕ್ಕುಂಡಿ ಅಭಿವೃದ್ಧಿಯ ಘಟ್ಟಗಳು

- 2024 ನವೆಂಬರ್ 22ರಿಂದ ಮೂರು ದಿನಗಳ ಕಾಲ ಪ್ರಾಚ್ಯಾವಶೇಷಗಳ ಅನ್ವೇಷಣೆ, 1500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆ
- 2024-25ನೇ ಸಾಲಿನಲ್ಲಿ ಒಟ್ಟು 5 ಕೋಟಿ ರೂ. ವೆಚ್ಚದಲ್ಲಿ 11 ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ.
- ದೆಹಲಿಯಲ್ಲಿ ನಡೆದ 2025ರ ಗಣರಾಜ್ಯೋತ್ಸವ ಪರೇಡ್ ನಲ್ಲಿ ಲಕ್ಕುಂಡಿಯ ಸರ್ವ ಜನಾಂಗದ ಶಾಂತಿಯ ತೋಟ ಟ್ಯಾಬ್ಲೋ ಪ್ರದರ್ಶನ
- ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ನಡೆದ ಉತ್ಖನನದಲ್ಲಿ 50ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳ ಸಂರಕ್ಷಣೆ
- ಲಕ್ಕುಂಡಿ ಸಮಗ್ರ ಅಭಿವೃದ್ಧಿಗೆ 1.80 ಕೋಟಿ ರೂ. ವೆಚ್ಚದಲ್ಲಿ ಸಮಗ್ರ ಡಿಪಿಆರ್ ತಯಾರಿಕೆಗೆ ಒಡಂಬಡಿಕೆ
- ಲಕ್ಕುಂಡಿಗೆ ಪ್ರವಾಸಿಗರನ್ನು ಆಕರ್ಷಿಸಲು 50 ಲಕ್ಷ ರೂ. ವೆಚ್ಚದಲ್ಲಿ ಪುಸ್ತಕ ಪ್ರಕಟಣೆ ಮತ್ತು ಸಾಕ್ಷ್ಯ ಚಿತ್ರ ನಿರ್ಮಾಣ
- 95 ಲಕ್ಷ ರೂ. ವೆಚ್ಚದಲ್ಲಿ ಪಂಚಬಾವಿ ಮತ್ತು ಪಂಚ ದೇವಾಲಯಗಳ ಅನಾವರಗೊಳಿಸಲಾಗಿದೆ
- ಲಕ್ಕುಂಡಿಯಲ್ಲಿ ಪತ್ತೆಯಾದ ನಿಧಿ ಮರಳಿಸಿದ ರಿತ್ತಿ ಕುಟುಂಬಕ್ಕೆ ನಿವೇಶನ, 5 ಲಕ್ಷ ರೂ. ಪ್ರೋತ್ಸಾಹ ಹಾಗೂ ಉದ್ಯೋಗ.
- ಲಕ್ಕುಂಡಿಯ 16 ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ತಾಣಗಳಾಗಿ ಘೋಷಣೆ
- ಐತಿಹಾಸಿಕ ಲಕ್ಕುಂಡಿಯನ್ನು ಯುನೆಸ್ಕೋ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರ್ಪಡೆಗೆ ಕ್ರಮ

ದಶ ದೇವಾಲಯಗಳ ಅನಾವರಣ

ನರಗುಂದವರ ಬಾವಿ ಹತ್ತಿರ ಈಶ್ವರ ದೇವಸ್ಥಾನ


ನರಗುಂದವರ ಬಾವಿ ಹತ್ತಿರ ಈಶ್ವರ ದೇವಸ್ಥಾನ ಇದ್ದು ಇದು ಪ್ರಾಚೀನ ಸ್ಮಾರಕವಾಗಿದ್ದು, ಗೋಡೆಗಳಲ್ಲಿ ಪ್ರಾಚ್ಯಾವಶೇಷಗಳು ಕಂಡುಬರುತ್ತದೆ, ಕಾಲಾಂತರದಲ್ಲಿ ಈ ದೇವಸ್ಥಾನವನ್ನು ರೂಪಾಂತರಗೊಳಿಸಲಾಗಿದೆ.

ಬ್ಯಾಳಿ ಬಸವಣ್ಣ ದೇವಾಲಯ


ಕಲ್ಯಾಣ ಚಾಲುಕ್ಯರ ಕಾಲದ ಬ್ಯಾಳಿ ಬಸವಣ್ಣ ದೇವಾಲಯ ಎಂದು ಕರೆಯುತ್ತಾರೆ. ಈ ಪ್ರಾಚೀನ ಸ್ಮಾರಕದಲ್ಲಿ ಬಸವಣ್ಣನ ನಂದಿಶಿಲ್ಪ ಹಾಗೂ ಕಲಾತ್ಮಕ ಕಂಬಗಳಿವೆ.

ರಾಮಲಿಂಗೇಶ್ವರ ದೇವಾಲಯ


ರಾಮಲಿಂಗೇಶ್ವರ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯ. ಗರ್ಭಗೃಹ, ಈಶ್ವರಲಿಂಗು, ಒಂದೇ ಗರ್ಭಗೃಹ ಎದುರಿಗೆ ಸಭಾಮಂಟಪ ವಿಸ್ತಾರವಾಗಿದೆ. ಶಾಸನೋಕ್ತವಾಗಿ ರಾಮಲಿಂಗೇಶ್ವರ ದೇವಾಲಯ ಪ್ರಾಚೀನ ದೇವಾಲಯವಾಗಿದೆ.

ಕೋಟಿ ಕೊತ್ತಲಮ್ಮ ದೇವಿಯ ದೇವಾಲಯ


ಕೋಟೆ ಕೊತ್ತಲಮ್ಮ ದೇವಾಲಯ ಕೋಟೆಗೆ ಹೊಂದಿಕೊಂಡಿರುವ ಪ್ರಾಚೀನ ಸ್ಮಾರಕ ದೇವಾಲಯವಾಗಿದೆ. ಒಂದೇ ಗರ್ಭಗೃಹ ಹೊಂದಿದ್ದು, ದೇವಾಲಯದ ಗರ್ಭಗೃಹದಲ್ಲಿ ಕೊತ್ತಲಮ್ಮ ದೇವಿಯ ಶಿಲ್ಪವಿದೆ. ಇದರ ಎದುರಿಗೆ ವಿಸ್ತಾರವಾದ ಸಭಾಮಂಟಪವಿದೆ.

ಕಲ್ಮೇಶ್ವರ ದೇವಾಲಯ


ಕಲ್ಯಾಣ ಚಾಲುಕ್ಯರ ಕಾಲದ ಈ ಪ್ರಾಚೀನ ಸ್ಮಾರಕ ದೇವಾಲಯ ಒಂದೇ ಗರ್ಭಗೃಹದಲ್ಲಿ ಈಶ್ವರಲಿಂಗು ಇದೆ. ಈ ಸ್ಮಾರಕವು ಶಾಸನೋಕ್ತವಾಗಿದ್ದು ಗರ್ಭಗೃಹಕ್ಕೆ ಹೊಂದಿ ಸಭಾಮಂಟಪವಿದೆ.

ಕಟಗಿ ಓಣಿ ಈಶ್ವರ ದೇವಾಲಯ


ಕಟಗಿಯವರ ಓಣಿಯ ಈಶ್ವರ ದೇವಾಲಯವು ಪ್ರಾಚೀನ ಸ್ಮಾರಕವಾಗಿದ್ದು, ಒಂದೇ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ಈಶ್ವರ ಲಿಂಗ ಇದೆ. ಇದರ ಹಿಂದೆ ಶಾಸನಗಳಿವೆ. ಪೀಠಭಾಗದಲ್ಲಿ ಗರುಡ ಲಾಂಛನದ ಉಬ್ಬು ಶಿಲ್ಪವೂ ಇದೆ.

ಹಾಲಗುಂಡಿ ಈಶ್ವರ ಮಂಟಪ


ಹಾಲಗುಂಡಿ ಈಶ್ವರ ಮಂಟಪ ಹಾಲಗುಂಡಿ ಕೆರೆಯ ಹತ್ತಿರ, ಪ್ರಾಚೀನ ಸ್ಮಾರಕ ಕಲಾತ್ಮಕ ಕೆತ್ತನೆ ಕಂಬಗಳು ಈಶ್ವರಲಿಂಗು ಮಂಟಪ ಇದೆ.

ಲೆಕ್ಕದ ವೀರಣ್ಣ ದೇವಾಲಯ


ಈ ಪ್ರಾಚೀನ ಸ್ಮಾರಕ ಒಂದೇ ಗರ್ಭಗೃಹವನ್ನು ಹೊಂದಿದೆ. ಗರ್ಭಗೃಹದಲ್ಲಿ ವೀರಭದ್ರ ಶಿಲ್ಪದ ಕೆಳಭಾಗದಲ್ಲಿ ಶಾಸನ ಇದೆ. ದೇವಾಲಯದ ಎದುರುಭಾಗದಲ್ಲಿ ಕಲಾತ್ಮಕವಾಗಿ ಕೆತ್ತಲಾದ ಕಂಬಗಳು ಇವೆ.

ಮಾಳಿ ಬಾವಿ ಹತ್ತಿರದ ಈಶ್ವರ ದೇವಾಲಯ


ಇದು ಪ್ರಾಚೀನ ಸ್ಮಾರಕವಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದೆ. ಈ ದೇವಾಲಯದಲ್ಲಿ ಒಂದೇ ಗರ್ಭಗೃಹವಿದ್ದು, ಅದರಲ್ಲಿ ಈಶ್ವರಲಿಂಗು ಇದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳ ನಿರ್ಮಾಣಗೊಂಡಿದೆ.

ಕನ್ನರ ಬಾವಿ ಮಾರುತಿ ದೇವಾಲಯ


ಪ್ರಾಚೀನ ಸ್ಮಾರಕ ಬಾವಿ, ಮಾರುತಿ ದೇವಾಲಯವು ಪೂರ್ವಾಭಿಮುಖ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ ಬಾವಿ. ಗರ್ಭಗೃಹದಲ್ಲಿ ರಾಮ, ಲಕ್ಷಣ, ಸೀತಾ ಶಿಲ್ಪವಿದೆ, ಬಾವಿಗೆ ಹೊಂದಿಕೊಂಡು ಈಶ್ವರ ದೇವಾಲಯವು ಇದೆ.

ದಶ ಬಾವಿಗಳ ಅನಾವರಣ

ಕುನ್ನಿ ಬಾವಿ


ಕಲ್ಯಾಣ ಚಾಲುಕ್ಯರ ಕಾಲದ ಪ್ರಾಚೀನ ಸ್ಮಾರಕ ಕೋಟೆಗೋಡೆಗೆ ಹೊಂದಿರುವ ಕುನ್ನಿ ಭಾವಿ ಪ್ರಾಚೀನ ಬಾವಿಯಾಗಿದ್ದು, ವೃತ್ತಾಕಾರದ ಮೆಟ್ಟಿಲುಗಳು ಕಪ್ಪಲಿ ಕೋಟೆಯ ಒಳಭಾಗದಲ್ಲಿದೆ. ಈ ಪ್ರಾಚೀನ ಸ್ಮಾರಕ ನನ್ನೇಶ್ವರ ದೇವಾಲಯದ ಹತ್ತಿರದಲ್ಲಿದೆ.

ಕುಂಬಾರ ಬಾವಿ-1


ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಬಾವಿಯಾಗಿದ್ದು, ಈ ಬಾವಿಯಲ್ಲಿ ಕನ್ನಡ ಶಾಸನವಿದೆ. ಇದು ಹೊಕ್ಕು ತುಂಬುವ ಬಾವಿಯಾಗಿದ್ದು, ಮೆಟ್ಟಿಲುಗಳೊಂದಿಗೆ ನಿರ್ಮಿಸಲಾದ ಕಪ್ಪಲಿ ಬಾವಿಯಾಗಿದೆ.ಈ ಬಾವಿ ಕೊಪ್ಪಳ ರಸ್ತೆಗೆ ಹೊಂದಿಕೊಂಡಿದೆ.

ಹನುಮನ ಬಾವಿ


ಹನುಮನ ಬಾವಿಯು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಇದು ಹೊಕ್ಕು ತುಂಬುವ ಬಾವಿಯಾಗಿದೆ. ಈ ಬಾವಿ ಹನುಮನ ಗುಡಿಯ ಹತ್ತಿರದಲ್ಲಿದೆ ಮತ್ತು ಸ್ಥಳೀಯವಾಗಿ 'ಹನುಮನ ಬಾವಿ' ಎಂದೇ ಪ್ರಸಿದ್ಧವಾಗಿದೆ.

ಕುಂಬಾರ ಬಾವಿ-2


ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ಪ್ರಾಚೀನ ಬಾವಿಯಾಗಿದೆ. ಈ ಬಾವಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲು ಶಾಸನವಿದೆ. ಈ ಬಾವಿ ಐತಿಹಾಸಿಕ ಮಹತ್ವ ಹೊಂದಿರುವ ಹಳೆಯ ಬಾವಿಗಳಲ್ಲೊಂದು ಆಗಿದೆ. ಅತ್ತಿಮಬ್ಬೆ ಮಹಾದ್ವಾರದ ಹತ್ತಿರದಲ್ಲಿಯೇ ಈ ಬಾವಿ ಇದೆ.

ನರಗುಂದದವರ ಬಾವಿ


ನರಗುಂದರವರ ಬಾವಿಯು ಪ್ರಾಚೀನ ಸ್ಮಾರಕವಾಗಿದ್ದು, ಇದು ಹೊಕ್ಕು ತುಂಬುವ ಮೆಟ್ಟಿಲುಗಳೊಂದಿಗೆ ನಿರ್ಮಿಸಲಾದ ಕಪ್ಪಲಿ ಬಾವಿಯಾಗಿದೆ. ಈ ಬಾವಿ ಕಲಾತ್ಮಕವಾಗಿ ಕರಿ ಕಲ್ಲಿನಿಂದ ನಿರ್ಮಿತವಾಗಿದ್ದು, ಅದರ ಗೋಡೆಗಳಲ್ಲಿ ಪ್ರಾಚ್ಯಾವಶೇಷಗಳು ಕಂಡುಬರುತ್ತವೆ.

ಕಣವಿಯವರ ಬಾವಿ


ಕಣವಿಯವರ ಬಾವಿ ಲಕ್ಕುಂಡಿಯಲ್ಲಿ ಇರುವ ಪ್ರಾಚೀನ ಸ್ಮಾರಕಗಳಲ್ಲಿ ಒಂದಾಗಿದ್ದು, ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಕಲೆಯ ಕಲಾತ್ಮಕ ಕೆತ್ತನೆಯ ಇದೆ. ಬಾವಿಯ ಗೋಡೆಗಳಲ್ಲಿ ಅತಿ ಸುಂದರವಾದ ಕೆತ್ತನೆಗಳು ಮತ್ತು ವಾಸ್ತುಶಿಲ್ಪ ಕಾಣಸಿಗುತ್ತವೆ.

ಪಾಟೀಲರ ಬಾವಿ


ಶಾವಗಿ ಭರಮಪ್ಪ ಹತ್ತಿರದಲ್ಲಿರುವ ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಕೋಟೆಯ ಪ್ರವೇಶ ದ್ವಾರದ ಸಮೀಪದಲ್ಲಿದೆ.ಈ ಬಾವಿ ಐತಿಹಾಸಿಕ ಮಹತ್ವ ಹೊಂದಿರುವ ಹಳೆಯ ಬಾವಿಗಳಲ್ಲೊಂದು ಆಗಿದೆ.

ಕಮತರ ಬಾವಿ


ಕಮತರ ಬಾವಿಯು ಕಲಾತ್ಮಕ ಕೆತ್ತನೆಯಿಂದ ನಿರ್ಮಿತವಾದ ಕರಿಯ ಕಲ್ಲಿನ ಪ್ರಾಚೀನ ಸ್ಮಾರಕ ಬಾವಿಯಾಗಿದೆ. ಈ ಬಾವಿಯಲ್ಲಿ ಮೂರು ಪ್ರವೇಶ ದ್ವಾರಗಳೊಂದಿಗೆ ಮೆಟ್ಟಿಲುಗಳ ವ್ಯವಸ್ಥೆಯಿದೆ. ಈ ಬಾವಿಯು ಜಂತ್ಲಿ- ಶಿರೂರ ರಸ್ತೆಯ ಎಡ ಭಾಗದಲ್ಲಿದೆ.

ಕಲ್ಮಠ ಬಾವಿ


ಇದು ಪ್ರಾಚೀನ ಸ್ಮಾರಕ ಬಾವಿಯಾಗಿದ್ದು, ಕಲ್ಮಠಕ್ಕೆ ಹೊಂದಿರುವ ಈ ಪ್ರಾಚೀನ ಸ್ಮಾರಕ ಬಾವಿಯು ಕುಡಿಯುವ ನೀರಿನ ಅರವಟಿಗೆ ರೂಪದಲ್ಲಿದೆ.

ಅಕ್ಕ ತಂಗಿಯರ ಬಾವಿ


ಅಕ್ಕ-ತಂಗಿಯರ ಬಾವಿ ಕರಿಯ ಕಲ್ಲಿನ ಪ್ರಾಚೀನ ಸ್ಮಾರಕ ಬಾವಿಯಾಗಿದೆ. ಈ ಬಾವಿ ಅಕ್ಕ ತಂಗಿಯರ ಭಾವಿ ಎಂಬ ಪ್ರತೀತಿ ಇದೆ. ಈ ಬಾವಿಯು ಪಾಪನಾಶಿ ರಸ್ತೆಯ ಎಡ ಭಾಗದಲ್ಲಿದೆ.

ಸಂಪಾದಕೀಯ

ಮಳೆ ಮತ್ತು ನಗರಗಳ ಅವ್ಯವಸ್ಥೆ

ಬುಧವಾರ ಸಂಜೆ ಸುರಿದ ಭಾರೀ ಮಳೆಯು ಬಿಸಿಲ ಬೇಗೆಯಿಂದ ತತ್ತರಿಸಿದ್ದ ಬೆಂಗಳೂರಿನ ಜನತೆಗೆ ತಂಪು ನೀಡಿದ್ದು ನಿಜವಾದರೂ, ಮಳೆಯು ತಂದ ಅನಾಹುತವು ಬೇಗೆಯ ಪ್ರಮಾಣ ಹೆಚ್ಚಿಸಿದ್ದೂ ದಿಟ. ಕೇವಲ ಗಂಟೆಗಳ ಕಾಲ ಸುರಿದ ಬಿರುಮಳೆಯು 10 ಮಂದಿಯ ಜೀವಹಾನಿಗೆ ಕಾರಣವಾದುದಷ್ಟೇ ಅಲ್ಲದೆ, ಕೋಟ್ಯಂತರ ರೂಪಾಯಿ ಮೌಲ್ಯದ ಸೊತ್ತು ನಾಶಕ್ಕೂ ಕಾರಣವಾಯಿತು. ನೀರು ಸರಾಗವಾಗಿ ಹರಿದು ಹೋಗದ ಕಾರಣ ಕೃತಕ ಪ್ರವಾಹ ಪರಿಸ್ಥಿತಿ ನಿರ್ಮಾಣವಾಯಿತು. ಅಂಗಡಿ ಮುಂಗಟ್ಟುಗಳೊಳಗೆ ನೀರು ನುಗ್ಗಿತು. ವಾಹನ ಸಂಚಾರ ವ್ಯತ್ಯಯವಾಯಿತು. ಜನಜೀವನ ಅಸ್ತವ್ಯಸ್ತಗೊಂಡಿತು.



ಇದು ಈ ವರ್ಷದ ಕಥೆಯೊಂದೇ ಅಲ್ಲ, ಪ್ರತಿವರ್ಷದ ವ್ಯಥೆ! ಇದು ಕೇವಲ ಬೆಂಗಳೂರಿನ ಕಥೆಯೂ ಅಲ್ಲ. ಇದು ರಾಜ್ಯದ ಪ್ರತಿಯೊಂದು ನಗರದ ವ್ಯಥೆಯೂ ಹೌದು. ಒಂದು ಮಳೆಗೆ ನಗರವು ಕೆರೆಯಂತಾಗುವುದು, ನೀರು ತೋಡುಗಳಲ್ಲಿ ಹರಿಯುವ ಬದಲಾಗಿ ರಸ್ತೆಯಲ್ಲೇ ಹರಿಯುವುದು, ತಗ್ಗು ಪ್ರದೇಶಗಳೆಲ್ಲ ಜಲಾವೃತವಾಗುವುದು ಸರ್ವೇಸಾಮಾನ್ಯವೆಂಬಂತಾಗಿದೆ. ಮುಂಗಾರುಪೂರ್ವದಲ್ಲಿ ಸುರಿಯುವ ಆರಂಭಿಕ ಮಳೆಗಳೇ ಇಂತಹ ಅನಾಹುತಗಳನ್ನು ಸೃಷ್ಟಿಸುವುದಾದರೆ ಆದರೆ ಇದಕ್ಕೆಲ್ಲ ಮಳೆಯನ್ನು ದೂರುವುದಕ್ಕಿಂತಲೂ ಮಾನವನನ್ನ ದೂರಬೇಕಾಗಿದೆ, ನಗರಾಡಳಿತವನ್ನು ದೂಷಿಸಬೇಕಾಗಿದೆ. ಮಳೆಯು ಪ್ರತಿವರ್ಷ ಎಸಗುವ ಹಾನಿಯ ಅರಿವಿದ್ದೂ ನಗರಾಡಳಿತವು ಮಳೆಗಾಲ ಆರಂಭಕ್ಕೆ ಮುನ್ನ ಸುರಕ್ಷತ ಉಪಕ್ರಮಗಳನ್ನು ಕೈಗೊಳ್ಳುವುದಿಲ್ಲ. ಮಳೆ ನೀರು ಹರಿದು ಹೋಗುವಂತಹ ಸುಸಜ್ಜಿತ ಚರಂಡಿ ವ್ಯವಸ್ಥೆಯಂತೂ ಯಾವುದೇ ನಗರದಲ್ಲೂ ಕಾಣಸಿಗುವುದಿಲ್ಲ. ರಾಜ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು, ನೀರು ಹರಿಯಬೇಕಾದ ತೋಡುಗಳಲ್ಲಿ ಕಸಕಡ್ಡಿಗಳು ತುಂಬಿರುವುದು, ಹೊಸ ಕಟ್ಟಡ ನಿರ್ಮಾಣ ಕಾಮಗಾರಿಯ ಉಪಕರಣಗಳು ನೀರು ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಹಾಕಲ್ಪಟ್ಟಿರುವುದು.... ಪ್ರತಿಯೊಂದು ನಗರದಲ್ಲೂ ಕಂಡುಬರುವ ಸಾಮಾನ್ಯ ದೃಶ್ಯವಾಗಿದೆ. ದುರಂತವೆಂದರೆ ಮಳೆಯಿಂದ ಇಂತಹ ಅನಾಹುತಗಳಾದಾಗಲೊಮ್ಮೆ ಆಡಳಿತವು ಎಚ್ಚೆತ್ತುಕೊಳ್ಳುತ್ತದೆ. ಪರಿಹಾರ ಕಾರ್ಯಕ್ಕೆ ಮುಂದಾಗುತ್ತದೆ. ಆದರೆ ಇವೆಲ್ಲವೂ ಅಲ್ಪಕಾಲೀನ ಪರಿಹಾರಗಳಿಗಷ್ಟೇ ಸೀಮಿತ. ಮತ್ತೊಂದು ಬಿರುಮಳೆ ಬಂದಾಗ ಮತ್ತದೇ ಸ್ಥಿತಿ! ಮತ್ತದೇ ಅಸ್ತವ್ಯಸ್ತತೆ! ಮತ್ತದೇ ಅನಾಹುತ!

ಇತ್ತೀಚಿನ ವರ್ಷಗಳಲ್ಲಿ ಮಳೆಯಿಂದಾಗುವ ಅನಾಹುತಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಂದು ನಗರ, ಪಟ್ಟಣವೂ ಮಳೆ ಅನಾಹುತ ತಡೆಯಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅಗತ್ಯವಾಗಿದೆ. ಮಳೆ ನೀರು ಹರಿದು ಹೋಗಲು ಸುಗಮ ವ್ಯವಸ್ಥೆ ಕಲ್ಪಿಸಬೇಕಾಗಿದೆ. ಅನಾಹುತವಾದ ಬಳಿಕ ಎಚ್ಚೆತ್ತುಕೊಳ್ಳುವುದಕ್ಕಿಂತ ಅನಾಹುತವಾಗದಂತೆ ತಡೆಯುವುದೇ ಮುಖ್ಯ.

ಸೂರ್ಯ ರೇಖೆಯ ಮೇಲಿನ ಚಿಹ್ನೆಗಳು

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಸೂರ್ಯ ರೇಖೆಯ ಮೇಲಿನ ಚಿಹ್ನೆಗಳ ಕುರಿತಂತೆ ಒಂದಿಷ್ಟು ವಿವರಗಳು.

ಕವಲು ಚಿಹ್ನೆ: ಕವಲು ಎಂದರೆ ಸೂರ್ಯ ರೇಖೆಯು ಎರಡಾಗುವುದು, ಮೂರಾಗುವುದು, ನಾಲ್ಕಾಗುವುದು ಹೀಗೆ. ಅದರಲ್ಲೂ ಮೇಲ್ಮುಖ ಕವಲು ಅಥವಾ ಕೆಳಮುಖ ಕವಲು. ಮೇಲ್ಮುಖವೆಂದರೆ ಉಂಗುರ ಬೆರಳಿನ ಕಡೆಗೆ ರೇಖೆಯು ಮೇಲ್ಮುಖವಾಗಿ ಎರಡು, ಮೂರು ಅಥವಾ ನಾಲ್ಕಾರು ಕವಲುಗಳನ್ನು ಒಡೆಯುತ್ತದೆ. ಹೀಗೆ ಶಕ್ತಿಯ ಹಂಚಿಕೆ ಸಹಾ ಆಗಿರಬಹುದು. ಇದು ಶುಭಫಲವನ್ನೇ ನೀಡುತ್ತದೆ. ಹೀಗೆ ಕವಲೊಡೆದಿರುವುದನ್ನು ನೋಡಿ ತರ್ಕ, ಮಿತಿ ಹಾಗೂ ವ್ಯಕ್ತಿಯ ನಡೆನುಡಿ ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕನ ಮಾಡಿ ಯಶಸ್ಸನ್ನು ನಿರ್ಧರಿಸಲಾಗುತ್ತದೆ.

ಮೇಲ್ಮುಖ ಕವಲು: ಕವಲು ಮೇಲ್ಮುಖವಾಗಿ ಇದ್ದು ಎಷ್ಟು ಕವಲುಗಳು ಒಡೆದಿರುತ್ತೋ ಅಷ್ಟು ದಿಕ್ಕುಗಳಿಂದ ಹಣ ಬರುತ್ತದೆ. ಕಲೆ, ವ್ಯಾಪಾರ, ಬರವಣಿಗೆ ಹೀಗೆ ಎಲ್ಲವನ್ನು ನಿಭಾಯಿಸುವ ತಾಕತ್ತು ನಿಮ್ಮದಾಗುತ್ತದೆ. ಕವಲು ಮೂಡಿದ ವಯಸ್ಸಿನಿಂದಲೇ [illegible]. ಜೀವನದಲ್ಲಿ ಮೇಲ್ಮುಖ ಗ್ರಾಫ್ ನಿಮ್ಮದು. ಬಹುಮುಖಿಯಾಗಿಯೂ ಸಲ್ಲುತ್ತೀರಿ.

ಉಂಗುರ ಬೆರಳಿನ ಕಡೆಗೆ ಮೂರು ಕವಲುಗಳು ಒಡೆದು ತ್ರಿಶೂಲದಂತೆ ಕಂಡರೆ, ಅತ್ಯಂತ ಶುಭದಾಯಕ. ಒಂದೆ ಸಮನೆ ಹಲವು ದಿಕ್ಕಿನಿಂದ ಹಣ ಹರಿದು ಬರುತ್ತದೆ. ಕಲೆಯಲ್ಲಿ ಯಶಸ್ಸು, ವ್ಯಾಪಾರದಲ್ಲಿ ಯಶಸ್ಸು, ಗೌರವ ನಿಮ್ಮದಾಗುತ್ತದೆ. ನಿಮ್ಮ ಜೀವನದಲ್ಲಿ ಎಲ್ಲಾ ಕೆಲಸಗಳೂ ಕವಲು ಇರುವವರೆಗೂ ನಿಮ್ಮಂತೆಯೇ ಆಗುತ್ತದೆ.

ಕವಲುಗಳು ಒಂದು ಸೂರ್ಯ ಪರ್ವತದಲ್ಲಿಯೇ ಇದ್ದು, ಇನ್ನೊಂದು ಬುಧ ಪರ್ವತಕ್ಕೆ ಹೋದರೆ ನಿಮ್ಮ ಯಶಸ್ಸು ಸಿನೆಮಾ+ ವ್ಯಾಪಾರ, ಬರವಣಿಗೆ+ ಮಾರ್ಕೇಟಿಂಗ್ ಹೀಗೆ ಸೇರಿಕೊಳ್ಳುತ್ತದೆ. ಕವಲುಗಳು ಒಂದು ಸೂರ್ಯ ಪರ್ವತದಲ್ಲೇ ಇದ್ದು ಇನ್ನೊಂದು ಶನಿ ಪರ್ವತಕ್ಕೆ ಹೋದರೆ ಅಂತಹಾ ವ್ಯಕ್ತಿಯು ಸ್ವಂತ ಪರಿಶ್ರಮದಿಂದ ಹೆಸರನ್ನು ಕೀರ್ತಿಯನ್ನು ಗಳಿಸುತ್ತಾರೆ. ವಿಜ್ಞಾನ, ಸಂಶೋಧನೆಗಳು ಇವರಿಗೆ ಲೀಲಾಜಾಲ. ಸರ್ಕಾರಿ ಹುದ್ದೆಯಲ್ಲಿ ಇದ್ದರೆ ಇವರು ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿ ಹೆಸರು ಮತ್ತು ಪ್ರಶಸ್ತಿಗಳನ್ನು ಪಡೆದುಕೊಳ್ಳುತ್ತಾರೆ.

ಕವಲು ಮಧ್ಯದಲ್ಲಿದ್ದು ಬಳಿಕ ರೇಖೆಯು ತೆಳುವಾದರೆ, ಆಗ ವ್ಯಕ್ತಿಯು ತನ್ನ ಅಲ್ಲಿಯವರೆಗಿನ ಉತ್ತುಂಗದ ಯಶಸ್ಸಿನ ಬಳಿಕ ಆಸಕ್ತಿಯನ್ನು ಕಳೆದುಕೊಳ್ಳುತ್ತಾನೆ. ಅಥವಾ ಆರೋಗ್ಯ ಅಥವಾ ಕೌಟುಂಬಿಕ ಕಾರಣದಿಂದಾಗಿ ತನ್ನ ಕೆಲಸದಿಂದ ಹಿಂದೆಸರಿಯುತ್ತಾನೆ. ಅರ್ಥಾತ್ ಕವಲಿನ ಬಳಿಕ ಸೂರ್ಯ ರೇಖೆಯು ಸ್ಪಷ್ಟವಾಗಿ ಮತ್ತು ದಪ್ಪವಾಗಿ ಇದ್ದರೆ ಶುಭ ಫಲವು ದ್ವಿಗುಣವಾಗುತ್ತದೆ. ಒಂದೊಮ್ಮೆ ಅಡ್ಡಗೆರೆ ಅಥವಾ ಗುಣಿಸು ಚಿಹ್ನೆ ಇದ್ದರೆ ಕವಲಿನಿಂದ ಯಾವುದೇ ಲಾಭ ಸಿಗುವುದಿಲ್ಲ.

ಕೆಳಮುಖ ಕವಲು: ಸೂರ್ಯ ರೇಖೆಯು ಮಣಿಕಟ್ಟಿನಿಂದ ಅಥವಾ ಅಂಗೈ ಮಧ್ಯದಿಂದ ಹೀಗೆ ಎಲ್ಲಿಂದಲಾದರೂ ಪ್ರಾರಂಭವಾಗಿರಬಹುದು. ಮಣಿಕಟ್ಟಿನ ದಿಕ್ಕಿಗೆ ಅಂದರೆ ಕೆಳಮುಖವಾಗಿ ಕವಲು ಉಂಟಾದರೆ; ಒಂದು ಎಚ್ಚರಿಕೆಯ ಸಂಕೇತ! ಯಶಸ್ಸು ನಿಮ್ಮ ಬುಡದವರೆಗೆ ಬಂದು ಹೊರಟು ಹೋಗಬಹುದು. ನಿಮ್ಮ ಮುಂದೆ ಎರಡು ದಾರಿಗಳು ಉಂಟಾಗಿ ನಿಮಗೆ ಆಯ್ಕೆ ಮಾಡಿಕೊಳ್ಳಲಾಗದೇ ಗೊಂದಲ ಉಂಟಾಗಬಹುದು. ನೀವು ಪಾಲುದಾರಿಕೆಯಲ್ಲಿ ಮಾಡಿದ ಕೆಲಸವು ಹಾಳಾಗಬಹುದು. ಅಥವಾ ನಿಮಗೆ ಮಾತ್ರ ಮೋಸವಾಗಬಹುದು. ಹಣ ಬಂದಿದ್ದೆಲ್ಲಾ ಸರಿಯಾಗಿ ವಿನಿಯೋಜನೆ ಮಾಡಲಾಗದೇ ಖರ್ಚಾಗಿ ಬಿಡಬಹುದು. ನಿಮ್ಮ ಕೀರ್ತಿ, ಗೌರವಗಳು ಕ್ಷೀಣಿಸಬಹುದು. ಆಗ ನೀವು ಒಂದೇ ಕ್ಷೇತ್ರದ ಮೇಲೆ ಕೇಂದ್ರೀಕರಿಸಬೇಕಾಗುತ್ತದೆ. ಏಕಾಗ್ರತೆಯನ್ನು ಸಾಧಿಸಿ ಅದರಂತೆ ನಡೆದುಕೊಳ್ಳಬೇಕಾಗುತ್ತದೆ. ನೀವು ಸಾಧನೆಯನ್ನು ಹಠ ಮಾಡಿ ಸಾಧಿಸಬೇಕಾಗುತ್ತದೆ. ಸತತ ಧ್ಯಾನದ ಮೂಲಕ, ಯೋಗದ ಮೂಲಕ ಸಾಧನೆಯನ್ನು ಮಾಡುವುದು ಅಗತ್ಯ.

ತ್ರಿಶೂಲದ ಚಿಹ್ನೆ: ಇದೊಂದು ಅಪೂರ್ವವಾದ ಚಿಹ್ನೆ. ಒಂದು ಲಕ್ಷ ಜನರಲ್ಲಿ ಒಬ್ಬರಿಗೆ ಇದು ಇರುವ ಸಾಧ್ಯತೆ ಮಾತ್ರ. ಅದರಲ್ಲೂ ಈ ಚಿಹ್ನೆಯು ಸೂರ್ಯ ಪರ್ವತದ ಮೇಲೆ ಇದ್ದರೆ ಇವರಿಗೆ ಮಹಾರಾಜ ಯೋಗ ಪ್ರಾಪ್ತಿ. ಶೂಲದ ಮೂರು ಸನಿಕೆಗಳು ಮೇಲ್ಮುಖವಾಗಿರುತ್ತವೆ. ಅವುಗಳು ಧನ, ಕೀರ್ತಿ ಮತ್ತು ಅಧಿಕಾರಗಳನ್ನು ಸೂಚಿಸುತ್ತವೆ. ಹಲವು ಕ್ಷೇತ್ರಗಳಲ್ಲಿ ಏಕ ಕಾಲಕ್ಕೆ ಸಾಧನೆ ಮಾಡುವ ಶಕ್ತಿ ಇಂತಹವರಿಗೆ ಇರುತ್ತದೆ. ತ್ರಿಶೂಲವು ಶಿವನ ಆಯುಧ. ಹೀಗಾಗಿ ದೈವಬಲ ಇವರಿಗೆ ಸದಾ ಇರುತ್ತದೆ. ಎಂತಹಾ ದುಷ್ಟ ಶಕ್ತಿಗಳು ಎದುರಾದರೂ ರಕ್ಷಣೆ ಇರುತ್ತದೆ. ಅತೀಂದ್ರಿಯ ಶಕ್ತಿಯು ಇವರಿಗೆ ವಶವಾಗುತ್ತದೆ. ಕಷ್ಟಗಳು ಬರುವುದೇ ಇಲ್ಲ ಎಂದಲ್ಲ, ಬಂದರೂ ಅದನ್ನು ತ್ರಿಶೂಲವೇ ನಾಶ ಮಾಡುತ್ತದೆ.

ಒಂದು ಮುಳ್ಳು ಸೂರ್ಯ ಪರ್ವತ, ಒಂದು ಮುಳ್ಳು ಬುಧ ಪರ್ವತ ಹಾಗೂ ಇನ್ನೊಂದು ಮುಳ್ಳು ಶನಿ ಪರ್ವತದ ಕಡೆ ಇದ್ದರೆ ಅಂತಹಾ ವ್ಯಕ್ತಿಯು ವ್ಯಾಪಾರ+ ವಿದ್ಯೆ + ಕಲೆಗಳಿಂದ ಹಣ ಗಳಿಸುತ್ತಾರೆ. ಕೀರ್ತಿಯನ್ನು ಪಡೆಯುತ್ತಾರೆ. ಗೌರವವನ್ನು ಗಳಿಸುತ್ತಾರೆ.

ಮೂರೂ ಮುಳ್ಳುಗಳೂ ಸೂರ್ಯ ಪರ್ವತದ ಕಡೆಗೇ ಮುಖ ಮಾಡಿದ್ದರೆ, ಇವರನ್ನು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ಕಲೆ, ಸಿನೀಮಾ, ರಾಜಕೀಯ, ಅಧಿಕಾರ, ನಾಯಕತ್ವ ಎಲ್ಲವೂ ಇವರದಾಗುತ್ತದೆ. ಅಪಾರ ಜನಮನ್ನಣೆ ಗಳಿಸುತ್ತಾರೆ. ಚಕ್ರವರ್ತಿಯಾಗುತ್ತಾರೆ. ಇವರು ಬದುಕಿದ್ದಾಗ ಹೆಸರು ಮಾಡಿದಂತೆ ಮರಣದ ಬಳಿಕವೂ ಅಜರಾಮರವಾಗಿ ಇರುತ್ತಾರೆ.

ಎರಡು ಮುಳ್ಳುಗಳು ಸೂರ್ಯ ಪರ್ವತದಲ್ಲೂ ಒಂದು ಮಾತ್ರ ಗುರು ಪರ್ವತದ ಕಡೆ ತಿರುಗಿದ್ದರೆ, ಇವರು ಮಹಾನ್ ಗುರುವಾಗುತ್ತಾರೆ. ಧರ್ಮಭೀರುವಾಗುತ್ತಾರೆ. ಧರ್ಮದ ಕುರಿತು ಉಪದೇಶಗಳನ್ನು, ಉಪನ್ಯಾಸಗಳನ್ನು ಅತ್ಯಂತ ನಿಖರವಾಗಿ ನೀಡುವವರಾಗುತ್ತಾರೆ. ಕೀರ್ತಿ, ಹಣ, ಮತ್ತು ಅಧಿಕಾರ ಸಹಾ ಬರುತ್ತದೆ.

ನೆನಪಿಡಿ ತ್ರಿಶೂಲವು ಸ್ಪಷ್ಟವಾಗಿ ಇರಬೇಕು. ಮೂರೂ ಗೆರೆಗಳು ಸಮಾನವಾಗಿ ಅಥವಾ ಮಧ್ಯದ ಗೆರೆ ಮಾತ್ರ ಉದ್ದವಾಗಿ ಇರಬೇಕು. ಯಾವುದೇ ಅಡ್ಡ ಗೆರೆಗಳು, ಗುಣಾಕಾರದ, ದ್ವೀಪದ, ಗುಂಡಿಯ, ಬಿಂದುವಿನ ಚಿಹ್ನೆಗಳು ಅದರ ಮೇಲೆ ಇರಬಾರದು. ಮಚ್ಚೆಯಂತೂ ಇರಲೇಬಾರದು. ಇವೆಲ್ಲಾ ಯಶಸ್ಸನ್ನು ಮಾತ್ರವಲ್ಲ ವಿವಾದ, ಅನುಮಾನಗಳನ್ನು ಹುಟ್ಟುಹಾಕುತ್ತವೆ. ತ್ರಿಶೂಲದ ಮೇಲೆ ಮಚ್ಚೆ ಇದ್ದರಂತೂ ಆತ ಅಘೋರಿಯಾಗುತ್ತಾನೆ.

ತ್ರಿಶೂಲ ಚಿಹ್ನೆ ಇದ್ದವರಿಗೆ ಆಗುವ ವೇಗದ ಬೆಳವಣಿಗೆಯ ಕಾರಣ ಅವರು ಅಹಂಕಾರಿಯಾಗಬಹುದು. ಆಗ ಪತನವೂ ಸಹಾ ಅಷ್ಟೇ ವೇಗದಲ್ಲಿ ಆಗುತ್ತದೆ. ಯಾರು ನಮ್ರವಾಗಿ ಇರುತ್ತಾರೋ ಅಂತಹವರು ಮಾತ್ರ ತಮ್ಮ ಸ್ಥಾನವನ್ನು, ಗೌರವವನ್ನು, ಕೀರ್ತಿಯನ್ನು, ಹಣವನ್ನು, ಮಾನವನ್ನು ಉಳಿಸಿಕೊಳ್ಳುತ್ತಾರೆ.

ದ್ವೀಪದ ಚಿಹ್ನೆ: ಸೂರ್ಯ ರೇಖೆಯ ಮೇಲೆ ದ್ವೀಪದ ಚಿಹ್ನೆಯು ಶಕ್ತಿ ಸೋರಿಕೆ ಸಂಕೇತ. ಅದು ಸೂರ್ಯ ರೇಖೆಯ ಮೇಲೆ ಎಲ್ಲಿದೆ ಎನ್ನುವುದರ ಮೇಲೆ ಅವಲಂಬಿತ. ಬುಡದಲ್ಲಿ ಇದ್ದರೆ ಬಾಲ್ಯದಲ್ಲಿ, ಮಧ್ಯದಲ್ಲಿ ಇದ್ದರೆ ಯೌವನ ಮತ್ತು ಮಧ್ಯವಯಸ್ಸಿನಲ್ಲಿ, ತುದಿಯಲ್ಲಿ ಇದ್ದರೆ ವೃದ್ಧಾಪ್ಯದಲ್ಲಿ ಸಮಸ್ಯೆಗಳು ಬರುತ್ತವೆ. ದ್ವೀಪ ಇರುವ ಸ್ಥಳದ ಮೇಲೆ ಆಯಾ ವಯಸ್ಸಿನಲ್ಲಿ ಆರ್ಥಿಕ ನಷ್ಟ, ಹಣಕಾಸಿನಲ್ಲಿ ಮೋಸ, ಪಾಲುದಾರಿಕೆಯಲ್ಲಿ ನಂಬಿಕೆ ದ್ರೋಹ, ಮಾಡದೇ ಇರುವ ತಪ್ಪಿಗೆ ಅಪವಾದ, ಸಮಾಜದಲ್ಲಿ ಹೆಸರಿಗೆ ಕಳಂಕ ಇವೆಲ್ಲಾ ಆಗುತ್ತದೆ.

ಎಷ್ಟೇ ಶ್ರಮ ಪಟ್ಟರೂ ಫಲ ಸಿಗುವುದೇ ಇಲ್ಲ, ಪ್ರಮೋಶನ್ ಮತ್ತು ಪ್ರಶಸ್ತಿಗಳು ಕೈತಪ್ಪುತ್ತವೆ, ಯಾವುದೇ ಒಪ್ಪಂದಗಳೂ, ಕೆಲಸ ಕಾರ್ಯಗಳು ಕೈಗೂಡುವುದಿಲ್ಲ. ಕಣ್ಣಿನ ಕಾಯಿಲೆ, ಹೃದಯದ ಕಾಯಿಲೆ ಅಥವ ಮಾನಸಿಕ ಕಾಯಿಲೆಗಳು ಬರಬಹುದು. ರೇಖೆಯ ಬುಡದಲ್ಲಿ ದ್ವೀಪ ಇದ್ದರೆ ವಿದ್ಯೆ ಕುಂಟಿತ. ಯಾವುದೇ ಕೆಲಸಕ್ಕೂ ತಂದೆತಾಯಿಯರ ಸಹಕಾರ ಸಿಗುವುದಿಲ್ಲ, ಮಧ್ಯದಲ್ಲಿ ಇದ್ದರೆ, ವ್ಯಾಪಾರ ಅಥವಾ ಉದ್ಯೋಗದಲ್ಲಿ ಹಿನ್ನಡೆ. ನಷ್ಟ, ಮಾನಹಾನಿ. ಸಂಬಂಧಿಕರೇ ಮೋಸ ಮಾಡುತ್ತಾರೆ. ತುದಿಯಲ್ಲಿ ಸೂರ್ಯ ಪರ್ವತದಲ್ಲಿ ಇದ್ದರಂತೂ ಮುಗಿದೇ ಹೋಯಿತು; ನೀವೇ ಸ್ವಯಾರ್ಜಿತವಾಗಿ ಕಷ್ಟಪಟ್ಟು ಗಳಿಸಿದ ಎಲ್ಲಾ ಆಸ್ತಿಯೂ ಪರಬಾರೆಯಾಗುತ್ತದೆ. ನೀವು ಬೀದಿಗೆ ಬೀಳುತ್ತೀರಿ. ಮಕ್ಕಳೂ, ಬಂಧುಬಾಂಧವರು, ಸ್ನೇಹಿತರು, ಸಮಾಜದಿಂದಲೂ ಬಹಿಷ್ಕೃತರಾಗುತ್ತೀರಿ.

ದ್ವೀಪದ ಬಳಿಕ ರೇಖೆಯು ಸ್ಪಷ್ಟವಾಗಿ ಮತ್ತು ದಟ್ಟವಾಗಿ ಇದ್ದರೆ ಮಾತ್ರ ಕಳೆದುಹೋದ ಮಾನ, ಆಸ್ತಿ ಎಲ್ಲವೂ ಮರಳಿ ಲಭ್ಯವಾಗುತ್ತದೆ. ರೇಖೆ ಮುಂದುವರೆಯದೇ ಹೋದಲ್ಲಿ ನೀವು ಆ ಪ್ರದೇಶವನ್ನೇ ಬಿಟ್ಟು ಹೋಗಬೇಕಾಗುತ್ತದೆ. ಅಥವಾ ವಿಧಿಯು ನಿಮ್ಮನ್ನು ಊರು ಬಿಡುವಂತೆ ಮಾಡುತ್ತದೆ. ದ್ವೀಪವನ್ನು ಸುತ್ತುವರೆದು ಚೌಕವಿದ್ದರೆ ದೇವರು ನಿಮ್ಮ ಕಷ್ಟಗಳನ್ನು ತಪ್ಪಿಸುತ್ತಾನೆ. ತ್ರಿಕೋನವಿದ್ದರೆ ನೀವೇ ನಿಮ್ಮ ಬುದ್ಧಿಬಲದಿಂದ ಕಷ್ಟಗಳಿಂದ ತಪ್ಪಿಸಿಕೊಳ್ಳುತ್ತೀರಿ.

ದಿನಾಲೂ ಸೂರ್ಯನ ಆರಾಧನೆ ಮಾಡಿ, ಅರ್ಘ್ಯ ಕೊಡಿ. ಸೂರ್ಯ ನಮಸ್ಕಾರ ಮಾಡಿ. ಆದಿತ್ಯ ಹೃದಯ ಪಾರಾಯಣ ಮಾಡಿ. ತಂದೆಯ ಸೇವೆ ಮಾಡಿ. ಕೆಂಪು ಅಥವಾ ಕಿತ್ತಲೆ ಬಣ್ಣದ ಬಟ್ಟೆ ದಾನ ಮಾಡಿ. ಭಾನುವಾರ ಖಾಯಮ್ಮಾಗಿ ಉಪವಾಸ ಮಾಡಿ. ಮಣಿಪುರ ಚಕ್ರದ ಸಮತೋಲನ ಮತ್ತು ಧ್ಯಾನದಿಂದ ನಿಯಂತ್ರಣ ಮಾಡಬಹುದು. ಯಾವುದೇ ರೀತಿಯಲ್ಲಿ ಸಾಲ ಮಾಡಬೇಡಿ ಮತ್ತು ಕೊಡಬೇಡಿ. ಪಾಲುದಾರಿಕೆಯಲ್ಲಿ ವ್ಯವಹಾರ ಮಾಡಬೇಡಿ. ದೊಡ್ಡ ರಿಸ್ಕ್‌ಗಳನ್ನು ತೆಗೆದುಕೊಳ್ಳಬೇಡಿ. ದ್ವೀಪವು ದೊಡ್ಡದಾಗಿದ್ದರೆ, ಕಂಟಕ ಅಥವಾ ಜೈಲುವಾಸ ಖಚಿತ. ಸಣ್ಣ ಸಣ್ಣ ದ್ವೀಪಗಳಿದ್ದರೆ ಸಣ್ಣ ಕಷ್ಟಗಳು, ಕಿರಿಕಿರಿಗಳು ಇದ್ದೇ ಇರುತ್ತವೆ.

ಪ್ರಯತ್ನಿಸದಿರುವುದು ಮೂರ್ಖತನ

ನಾಪ್ನೋತಿ ಯತ್ನಂ ಕೃತ್ವಾಪಿ ಚೇತ್ ಫಲಂ ದೋಷೋ ನಚೇ ತದಾ।
ಯತ್ನಾಕರಣಂ ಮೌರ್ಖ್ಯಂ ದೈವಾಧೀನಂ ಫಲಂ ಸದಾ ॥ -ಸುಭಾಷಿತಶತಕಂ

ಪ್ರಯತ್ನವನ್ನು ಮಾಡಿದರೂ ನಿನಗೆ ಫಲ ಸಿಕ್ಕದಿದ್ದರೆ ನಿನ್ನ ತಪ್ಪು ಇಲ್ಲ. ಪ್ರಯತ್ನವನ್ನೇ ಮಾಡದಿರುವುದು ಮೂರ್ಖತೆ. ಫಲವು ಸದಾ ದೈವಾಧೀನ -ಎಂಬುದು ಶ್ಲೋಕಾರ್ಥ.

ಪ್ರತಿಯೊಂದು ಸಾಧನೆಗೂ ಪ್ರಯತ್ನ ಬೇಕು. ಪ್ರಯತ್ನವಿಲ್ಲದೇ ಯಾವುದೂ ಸಿದ್ಧಿಸುವುದಿಲ್ಲ. ಒಂದೊಮ್ಮೆ ಫಲ ದೊರೆತರೂ ಬಹುಕಾಲ ಉಳಿಯುವುದಿಲ್ಲ. ಪ್ರಯತ್ನ ಅತೀ ಮುಖ್ಯ. ಅದನ್ನೆಂದೂ ನಿಲ್ಲಿಸಬಾರದು ಎಂಬ ವಿಷಯವನ್ನು ಪ್ರಸ್ತುತ ಸುಭಾಷಿತ ಸಾದರಪಡಿಸುತ್ತದೆ.

ಶ್ಲೋಕ ಸಾಗರ

• ಡಾ.ಸೋಂದಾ ಭಾಸ್ಕರ ಭಟ್

ನಾವು ಪ್ರಯತ್ನ ನಡೆಸಿದಾಗೆಲ್ಲ ಫಲ ಸಿಗುತ್ತದೆ ಎಂಬ ನಿಯಮವೇನೂ ಇಲ್ಲ. ಕೆಲವು ಮಾತ್ರ ಫಲಿಸುತ್ತವೆ. ಹಲವು ಪ್ರಯತ್ನ ವ್ಯರ್ಥವಾಗುತ್ತದೆ. ಹಾಗೆಂದ ಮಾತ್ರಕ್ಕೆ ಪ್ರಯತ್ನದಿಂದ ವಿಮುಖರಾಗಬಾರದು. ಪ್ರಯತ್ನಿಸಿಯೂ ಫಲ ದೊರೆಯದಿದ್ದರೆ ನಮ್ಮ ತಪ್ಪಲ್ಲ. ಮರದಲ್ಲಿ ಬಿಟ್ಟ ಹೂಗಳೆಲ್ಲ ಮಿಡಿಯಾಗುವುದಿಲ್ಲ. ಮಿಡಿಗಳೆಲ್ಲವೂ ಹಣ್ಣಾಗುವುದಿಲ್ಲ. ಬಿಟ್ಟ ಹಣ್ಣೆಲ್ಲವೂ ಸಿಗುವುದಿಲ್ಲ. ನಮ್ಮ ಪ್ರಾಪ್ತಿ ಎಷ್ಟಿದೆಯೋ ಅಷ್ಟೇ ಸಿಗುತ್ತದೆ. ಪ್ರಾಪ್ತಿಯನ್ನು ಮೀರಿದ್ದು ಎಂದೂ ಉಳಿಯುವುದಿಲ್ಲ. ದೊರೆಯುವುದಿಲ್ಲ. ದೊರೆತರೂ ದಕ್ಕುವುದಿಲ್ಲ.

ಫಲ ಸಿಕ್ಕಿಲ್ಲವೆಂಬ ಕಾರಣಕ್ಕೆ ಪ್ರಯತ್ನವನ್ನು ನಿಲ್ಲಿಸಬಾರದು. ಹಾಗೆ ನಿಲ್ಲಿಸುವುದಂತು ಸಾಧಕನ ಲಕ್ಷಣವಲ್ಲ. ನಿಲ್ಲಿಸದಿರುವುದು ಗುಣವೆನಿಸುತ್ತದೆ. ನಿಲ್ಲಿಸುವುದು ದೋಷವೆನಿಸಿಕೊಳ್ಳುತ್ತದೆ. 'ಯತ್ನೇಕೃತೇ ಯದಿನ ಸಿಧ್ಯತಿ ಕೋಽತ್ರ ದೋಷಃ' ಎಂಬ ಸೂಕ್ತಿಯಿದೆ. ಪ್ರಯತ್ನಿಸಿಯೂ ಫಲ ಸಿಗದಿದ್ದರೆ ದೋಷವಿಲ್ಲ. ಪ್ರಯತ್ನದಲ್ಲಿ ಏನೋ ಕೊರತೆಯಿದೆ ಎಂದು ಭಾವಿಸಿ ಮುಂದಿನ ಪ್ರಯತ್ನವನ್ನು ಚೆನ್ನಾಗಿ ನಡೆಸಬೇಕು.

ಒಂದೇ ವಿಷಯದ ಕುರಿತು ಅನೇಕರು ಪ್ರಯತ್ನಿಸಿದರೂ ಕೆಲವರಿಗೆ ಮಾತ್ರ ಸಿಗುತ್ತದೆ. ಕೆಲವರಿಗೆ ಸಿಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರೆಲ್ಲ ನಿಷ್ಪ್ರಯೋಜಕರು ಎಂದಲ್ಲ. ಅವರಿಗಾಗಿ ಇನ್ನೇನೋ ಕಾದಿದೆ ಎಂದು ತಿಳಿದುಕೊಳ್ಳಬೇಕು. ಯಾವಾಗಲೂ ಮಾಡಿದ ಪ್ರಯತ್ನವೆಂದೂ ವ್ಯರ್ಥವಾಗದು.

ಪ್ರಯತ್ನ ಮಾಡದೇ ಇರುವುದು ಮೂರ್ಖತನ. ಪ್ರಯತ್ನಿಸದೇ ಸಿಗಬೇಕು ಎಂಬುದು ಶತಮೂರ್ಖತನ. ಪ್ರಯತ್ನ, ಪರಿಶ್ರಮಗಳಿಲ್ಲದೇ ಏನನ್ನೂ ಅನುಭವಿಸುವ ಅಧಿಕಾರ ನಮಗಿಲ್ಲ. ಪ್ರಯತ್ನಿಸದೇ ಫಲ ಸಿಗಲಿ ಎಂದುಕೊಳ್ಳುವುದು ಮೂರ್ಖತನದ ಪರಮಾವಧಿ. ಪ್ರಯತ್ನ ನಮ್ಮ ಕರ್ತವ್ಯ. ಫಲ ದೈವಾಧೀನ. ದೈವವು ನಮ್ಮ ನಮ್ಮ ಪರಿಶ್ರಮದ ಹಿನ್ನೆಲೆಯಲ್ಲಿ ಫಲವೀಯುತ್ತದೆ. ನಾವು ಮಾಡುವ ಕರ್ಮದಲ್ಲಿ ನಮಗೆ ಅಧಿಕಾರ. ಫಲದಲ್ಲಲ್ಲ. ಇದನ್ನೇ ಭಗವದ್ಗೀತೆಯಲ್ಲಿ ''ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಹೇಳಿದ್ದಾರೆ.

ನಾವು ನಡೆಸುವ ಕರ್ಮ, ಅದಕ್ಕೆ ಪೂರಕವಾದ ಪ್ರಯತ್ನ ಇತ್ಯಾದಿಗಳು ಸರಿಯಾಗಿದ್ದರೆ ಇಂದಲ್ಲ ನಾಳೆ ಫಲ ದೊರೆಯುತ್ತದೆ. ಫಲವನ್ನೇ ಗಮನದಲ್ಲಿರಿಸಿ ಕರ್ಮದಲ್ಲಿ ಆಲಸ್ಯವನ್ನೆಂದೂ ತೋರಿಸಬಾರದು. ಪ್ರತಿಯೊಬ್ಬರಿಗೂ ಅವರದೇ ಆದ ಪರಿಧಿಯಲ್ಲಿ ಪ್ರಾಪ್ತಿ ಎಂಬುದಿರುತ್ತದೆ. ಅದು ನಮ್ಮ ಕಾರ್ಯಾವಿಧಾನ, ಜ್ಞಾನ, ಸಿದ್ಧತೆ... ಇತ್ಯಾದಿಗಳನ್ನು ಅವಲಂಬಿಸಿರುತ್ತದೆ. ಅದಕ್ಕನುಗುಣವಾಗಿ ದೈವವು ಫಲಿಸುವಂತೆ ಮಾಡುತ್ತದೆ.

ಸಂಪ್ರದಾಯ-ಆಚರಣೆ-ನಂಬಿಕೆ-ಮೂಢನಂಬಿಕೆ

ಒಳನೋಟ

• ಹೆ.ಬಾ. ಮಲ್ಯ



ಸನಾತನ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಋಷಿ-ಮುನಿಗಳು ತಪಸ್ಸಿನ ಮೂಲಕ ಸೃಷ್ಟಿಯ ಅನೇಕ ರಹಸ್ಯಗಳನ್ನು ಕಂಡುಹಿಡಿದು ವೇದ, ಉಪನಿಷತ್ತು, ದರ್ಶನಗಳು, ಧರ್ಮಶಾಸ್ತ್ರಗಳನ್ನು ಬರೆದಿಟ್ಟು ಹೋಗಿದ್ದಾರೆ. ಧರ್ಮಶಾಸ್ತ್ರಗಳು ಅಥವಾ ಸ್ಮೃತಿಗಳು, ಮಾನವನು ಹೇಗೆ ಆದರ್ಶ ಜೀವನ ನಡೆಸಬೇಕು ಎಂದು ತಿಳಿಸುತ್ತವೆ. ಮಾತ್ರವಲ್ಲ ಅದರಲ್ಲಿ ಹೇಳಲಾದ ಆಚರಣೆಗಳು ಮಾನವ ಜೀವನದ ಅಂತಿಮ ಲಕ್ಷ್ಯವಾದ ಮೋಕ್ಷ ಸಾಧನೆಗೆ ಪೂರಕವಾಗಿವೆ.

ಮಾನವ ಅನುಕರಣ ಪ್ರಿಯ. ಮಗುವಾಗಿರುವಾಗ ತನ್ನ ತಾಯಿ, ತಂದೆ ಹಾಗೂ ಕುಟುಂಬದ ಹಿರಿಯರು ಹೇಳಿಕೊಟ್ಟಂತೆ ಮಾತನಾಡಲು, ಅವರು ಮಾಡಿದಂತೆ ಅನುಕರಿಸಲು ಕಲಿಯುತ್ತಾನೆ. ಮಕ್ಕಳು, ತಂದೆ -ತಾಯಿ ಹೇಳಿದಂತೆ ಮಾಡುವುದಿಲ್ಲ, ಅವರು ಮಾಡಿದಂತೆ ಮಾಡುತ್ತಾರೆ. ಮಕ್ಕಳ ಹಿಂದಿನ ಅನೇಕ ಜನ್ಮಗಳ ಜ್ಞಾನ ಅವರ ಸುಪ್ತ ಮನಸ್ಸಿನಲ್ಲಿ ಅಡಗಿರುತ್ತದೆ, ನೆನಪಿರುವುದಿಲ್ಲ. ಈ ಜನ್ಮದಲ್ಲಿ ಎಲ್ಲವನ್ನೂ ಹೊಸತಾಗಿ ಕಲಿಯಬೇಕಾಗುತ್ತದೆ. ಮಕ್ಕಳು ಬೆಳೆದಂತೆ ಶಾಲೆಯ ವಾತಾವರಣ, ಅಲ್ಲಿ ಪಾಠ ಮಾಡುವ ಶಿಕ್ಷಕರು, ಸಹಪಾಠಿಗಳು, ಸುತ್ತಮುತ್ತಲ ಸಮಾಜ, ಪರಿಸರಗಳನ್ನು ನೋಡಿ ಕಲಿಯ ತೊಡಗುತ್ತಾರೆ. ಯುವಾವಸ್ಥೆಯ ವರೆಗೆ ಅವರಿಗೆ ಸ್ವಂತ ನಿರ್ಣಯ ತೆಗೆದುಕೊಳ್ಳುವ ಬುದ್ಧಿ, ವಿವೇಚನಾಶಕ್ತಿಗಳಿರುವುದಿಲ್ಲ. ಹೆಚ್ಚಿನವರು ವಯಸ್ಸು ಬೆಳೆದ ಮೇಲೂ ಆಳವಾಗಿ ಚಿಂತಿಸಿ ನಿರ್ಣಯ ತೆಗೆದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಕಣ್ಣು ಮುಚ್ಚಿಕೊಂಡು ಇತರರನ್ನು ಅನುಕರಿಸುತ್ತಾರೆ. ಬುದ್ಧಿಶಕ್ತಿ, ವಿವೇಚನಾ ಶಕ್ತಿಯನ್ನು ಕಿಂಚಿತ್ತೂ ಉಪಯೋಗಿಸದೆ ಮಾಡುವ ಅನುಕರಣೆ ಅಂತಿಮವಾಗಿ ಮೂಢನಂಬಿಕೆಗೆ ದಾರಿ ಮಾಡಿಕೊಡುತ್ತದೆ.

ಮೂಢನಂಬಿಕೆ ಹೇಗೆ ಬೆಳೆಯುತ್ತದೆ ಎಂಬುದಕ್ಕೆ ಒಂದು ಸುಂದರ ಉದಾಹರಣೆಯ ಸುಭಾಷಿತ ಹೀಗಿದೆ:-

ಗತಾನುಗತಿಕೋ ಲೋಕಃ ನಾ ಲೋಕಃ ಪಾರಮಾರ್ಥಿಕಃ।
ಗಂಗಾ ಸೈಕತಲಿಂಗೇನ ನಷ್ಟಂ ಮೇ ತಾಮ್ರ ಭಾಜನಮ್॥

ಇದರ ಭಾವಾರ್ಥ ಹೀಗಿದೆ: ''ಜನರು ಅನುಕರಣೆ ಮಾಡುತ್ತಾರೆಯೇ ಹೊರತು ಅದರ ಹಿಂದೆ ಪಾರಮಾರ್ಥಿಕದ ಚಿಂತನೆ ಇರುವುದಿಲ್ಲ. ಅದು ಅವರಿಗೆ ಅಗತ್ಯವಿಲ್ಲ. ಇಂಥ ಮೂಢರ ಅಂಧ ಅನುಕರಣೆಯ ಕಾರಣ ಗಂಗಾ ತಟದ ಮರಳಿನಲ್ಲಿ ನಾನು ನನ್ನ ತಾಮ್ರದ ಚೊಂಬನ್ನು ಕಳೆದುಕೊಂಡೆ''.

ಈ ಸುಭಾಷಿತದ ಹಿಂದೆ ಬಹಳ ರೋಚಕವಾದ ಕಥೆಯೊಂದಿದೆ. ಓರ್ವ ಯಾತ್ರಿಕ ಎಲ್ಲರಿಗಿಂತ ಮುಂಚೆ ಸ್ನಾನ ಪೂರೈಸಲು ನಸುಕಿನಲ್ಲೇ ಗಂಗಾ ತಟಕ್ಕೆ ಹೋದ. ಆತನ ಬಳಿ ಹಣ ತುಂಬಿದ ತಾಮ್ರದ ಚೊಂಬೊಂದಿತ್ತು. ಚತುರನಾದ ಆತ ದಂಡದಲ್ಲಿ ಉಸುಕಿನ ಮೇಲೆ ಚೊಂಬನ್ನಿಟ್ಟು ಅದರ ಮೇಲೆ ಮರುಳನ್ನು ಪೇರಿಸಿ ಸುಂದರವಾದ ಉಸುಕಿನ ಲಿಂಗವನ್ನೊಂದನ್ನು ಮಾಡಿ ಸ್ನಾನಕ್ಕಿಳಿದ. ಸ್ನಾನ ಮುಗಿಸಿ ದಡಕ್ಕೆ ಬಂದು ನೋಡುವುದೇನು? ಆತನ ಎದೆಯೇ ಒಡೆದು ಹೋದಂತೆನಿಸಿತು. ನೂರಾರು ಉಸುಕಿನ ಲಿಂಗಗಳು. ಅವನ ನಂತರ ಬಂದ ಯಾತ್ರಿಕರು ಆತನ ಉಸುಕಿನ ಲಿಂಗವನ್ನು ಕಂಡು, ಅದು ಅಲ್ಲಿನ ಸಂಪ್ರದಾಯವಿರಬೇಕೆಂದು ಭಾವಿಸಿ ಪ್ರತಿಯೊಬ್ಬರೂ ಒಂದೊಂದು ಲಿಂಗವನ್ನು ರಚಿಸಿಟ್ಟು ಸ್ನಾನಕ್ಕಿಳಿಯುತ್ತಿದ್ದರು. ನೂರಾರು ಮರಳಿನ ಲಿಂಗಗಳ ರಾಶಿಯಲ್ಲಿ ಆ ಯಾತ್ರಿಕ ತನ್ನ ಚೊಂಬು ಇರುವ ಲಿಂಗವನ್ನು ಕಂಡುಹಿಡಿಯಲಾರದೆ ಹೋದ. ತನ್ನ ಹಣ ತುಂಬಿದ ತಾಮ್ರದ ಚೊಂಬು ಹಾಗೂ ಕಾರಣ ತಿಳಿಯದೆ ಇತರರನ್ನು ಕಣ್ಣು ಮುಚ್ಚಿ ಅನುಸರಿಸುವ ಮೂಢ ಜನರ ಬಗ್ಗೆ ಆಕ್ರೋಶಗೊಂಡು ಆತ ಮೇಲಿನ ಸುಭಾಷಿತದಲ್ಲಿನ ಮಾತನ್ನು ಹೇಳಿದ. ಆದ್ದರಿಂದ ನಮ್ಮ ಆಚಾರ -ವಿಚಾರಗಳಲ್ಲಿ ಪರಮಾತ್ಮನು ಕರುಣಿಸಿರುವ ಬುದ್ಧಿಶಕ್ತಿ ಹಾಗೂ ವಿವೇಚನಾ ಶಕ್ತಿಯನ್ನು ಉಪಯೋಗಿಸಬೇಕು. ಪ್ರತಿಯೊಂದು ನಡವಳಿಕೆಯ ಕಾರಣ, ಹಿನ್ನೆಲೆಗಳನ್ನು ಅರಿತುಕೊಳ್ಳಬೇಕು. ಇದನ್ನೇ ಸ್ವಂತಿಕೆ ಎನ್ನುತ್ತಾರೆ.

ಇಂಥದ್ದೇ ಇನ್ನೊಂದು ಘಟನೆಯು ನಮ್ಮ ಸಮಾಜದಲ್ಲಿ ಅಂಧ ಶ್ರದ್ಧೆಗಳು ಹೇಗೆ ನಮಗೆ ಗೊತ್ತಿಲ್ಲದೆಯೇ ಹುಟ್ಟಿ ಬೆಳೆದುಕೊಂಡು ಬಂದು ಸಂಪ್ರದಾಯದ ಮುದ್ರೆಯನ್ನೊತ್ತಿಸಿಕೊಳ್ಳುತ್ತವೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಹಿಂದೆ ಓರ್ವ ಗೃಹಸ್ಥ ನಿತ್ಯ ಸ್ನಾನದ ನಂತರ ವಿಧಿವತ್ತಾಗಿ ದೇವರ ಪೂಜೆ ಮಾಡುತ್ತಿದ್ದ. ತನ್ನ ಮಗುವೂ ಅದನ್ನು ನೋಡಿ ಕಲಿಯಲಿ. ತನ್ನ ಕಾಲಾನಂತರ ಪೂಜೆ ಮುಂದುವರಿಸಿಕೊಂಡು ಹೋಗಲಿ ಎಂಬ ಆಶಯದಿಂದ ಹತ್ತಿರ ಕೂರಿಸಿಕೊಳ್ಳುತ್ತಿದ್ದ. ಬಾಲಕ ಪೂಜಾ ವಿಧಿಯನ್ನು ನೋಡುತ್ತಿದ್ದ. ಆತನ ಮನೆಯಲ್ಲಿ ಒಂದು ಬೆಕ್ಕು ಇತ್ತು. ಅದು ಪೂಜೆಯ ವೇಳೆ ಯಜಮಾನನ ಹತ್ತಿರ ಬಂದು ತೊಂದರೆ ಕೊಡುತ್ತಿದ್ದುದರಿಂದ ಅದನ್ನು ಪಕ್ಕದಲ್ಲಿಟ್ಟುಕೊಂಡು ಒಂದು ಬುಟ್ಟಿಯನ್ನು ಅದರ ಮೇಲೆ ಕವುಚಿ ಹಾಕಿ ಪೂಜೆ ಮಾಡುತ್ತಿದ್ದ. ಆ ಬಾಲಕ ಇದನ್ನು ನೋಡುತ್ತಿದ್ದ. ಬಹಳ ವರ್ಷಗಳ ನಂತರ ಮಗ ಬೆಳೆದು ದೊಡ್ಡವನಾದ. ಅಕಸ್ಮಾತ್ ತಂದೆ ತೀರಿಕೊಂಡ. ನಿತ್ಯ ದೇವರ ಪೂಜೆಯ ಜವಾಬ್ದಾರಿ ಮಗನ ಹೆಗಲ ಮೇಲೆ ಬಿತ್ತು. ಆ ಬೆಕ್ಕು ಸತ್ತು ಹೋಗಿತ್ತು- ಆದರೆ ವಯಸ್ಸಿಗೆ ಬಂದ ಮಗ ಕಷ್ಟಪಟ್ಟು ಹುಡುಕಾಡಿ ಎಲ್ಲಿಂದಲೋ ಒಂದು ಬೆಕ್ಕನ್ನು ತಂದು ಬುಟ್ಟಿ ಒಳಗೆ ಬಂಧಿಸಿ ಇಟ್ಟು ಪೂಜೆ ಮಾಡಲಾರಂಭಿಸಿದ. ಒಮ್ಮೆ ಆ ಮನೆಗೆ ಬಂದ ಆಗಂತುಕ ಈ ವಿಚಿತ್ರ ನಡವಳಿಕೆಯನ್ನು ನೋಡಿ ಆ ಬಗ್ಗೆ ಮಗನನ್ನು ವಿಚಾರಿಸಿದಾಗ ಆತ ''ಅದು ಈ ಮನೆಯ ಸಂಪ್ರದಾಯ, ನಮ್ಮ ತಂದೆ ಇದ್ದಾಗ ಹೀಗೆ ಮಾಡುತ್ತಿದ್ದರು'' ಎಂದ. ಅಚ್ಚರಿಗೊಂಡ ಅತಿಥಿ ಆತನ ತಾಯಿಯನ್ನು ಕೇಳಿದಾಗ ಆಕೆ ನಕ್ಕು ತಂದೆ ಯಾವ ಉದ್ದೇಶದಿಂದ ಬೆಕ್ಕನ್ನು ಮುಚ್ಚಿಡುತ್ತಿದ್ದರು ಎಂದು ಹೇಳಿದರು. ತಂದೆ ಸಾಯುವ ಮೊದಲು ಮಗನಿಗೆ ಅದರ ಕಾರಣ ತಿಳಿಸಿರಲಿಲ್ಲ. ಮಾತ್ರವಲ್ಲ ತಾನು ಅದರ ನಿಜವಾದ ಕಾರಣವನ್ನು ತಿಳಿಸಿದಾಗಲೂ ಆತ ಅದಕ್ಕೆ ಒಪ್ಪಲು ಸಿದ್ಧನಿರಲಿಲ್ಲ. ಹೀಗೆ ಮಗ ಕಾರಣ ತಿಳಿಯದೆ ಅದನ್ನು ಒಂದು ಸಂಪ್ರದಾಯವನ್ನಾಗಿ ಮಾಡಿಬಿಟ್ಟ. ಇಂದಿಗೂ ಸಮಾಜದಲ್ಲಿ ಅರ್ಥವರಿಯದೇ ಅನೇಕ ಅರ್ಥಶೂನ್ಯ ರೂಢಿಗಳನ್ನು ಆಚರಿಸಿಕೊಂಡು ಬರುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದಲೇ ''ಅಜ್ಜ ನೆಟ್ಟ ಗೋಳಿ ಮರಕ್ಕೇ ನೇಣು ಹಾಕಿಕೊಳ್ಳುವುದು'' ಎಂಬ ಗಾದೆ ಮಾತು ಬಂದಿರುವುದು. ಹಿರಿಯರು ಆಚರಿಸಿದ್ದನ್ನು ಅರ್ಥ ತಿಳಿದು ಮುಂದುವರಿಸಬೇಕು. ಹಿರಿಯರ ಬಳಿ ಕಾರಣ ಕೇಳಬೇಕು. ಅರ್ಥ ಶೂನ್ಯ ಎಂದು ಕಂಡು ಬಂದರೆ ಅದರ ಆಚರಣೆಯನ್ನು ತ್ಯಜಿಸಬೇಕು. ಇತರರಿಗೆ, ಸಮಾಜಕ್ಕೆ ಹಾನಿ ಇಲ್ಲವೆಂದಾದರೆ ಅಂಥ ನಂಬಿಕೆಗಳನ್ನು, ಆಚರಣೆಗಳನ್ನು ಆಚರಿಸಿಕೊಂಡು ಹೋಗುವುದು ತಪ್ಪಲ್ಲ. ನಂಬಿಕೆ, ಆಚರಣೆಗಳಿಂದ ಒಂದು ಸಮಾಜದ ಅಸ್ಮಿತೆ, ಸಂಸ್ಕೃತಿ ಉಳಿದುಕೊಂಡು ಬರುತ್ತದೆ.

ಕೆಲವೊಂದು ಪರಿಸ್ಥಿತಿಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಗೊತ್ತಾಗದೆ ಇರುವ ಸಂದರ್ಭಗಳು ಅನೇಕ ಬಾರಿ ಎದುರಾಗುತ್ತವೆ. ಅಂಥ ಸಂದರ್ಭಗಳಲ್ಲಿ ಅಧ್ಯಯನ ಮಾಡಿದ, ಅನುಭವಿಗಳೂ ಜ್ಞಾನಿಗಳೂ ಆದ ಹಿರಿಯರಿಂದ ಕೇಳಿ, ಅವರು ಹೇಗೆ ಹೇಳುತ್ತಾರೋ ಹಾಗೆ ನಡೆದುಕೊಳ್ಳುವುದು ಶ್ರೇಯಸ್ಕರ ಎಂದು ಶಾಸ್ತ್ರಗಳು ಹೇಳುತ್ತವೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ।
ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

ಶ್ರೇಷ್ಠವ್ಯಕ್ತಿಗಳನ್ನು ಇತರ ಜನರು ಅನುಸರಿಸುತ್ತಾರೆ. ಅವರು ಯಾವುದನ್ನು ಪ್ರಮಾಣವೆಂದು ಹೇಳುತ್ತಾರೋ ಅದನ್ನೇ ಇತರರು ನಂಬಿ ಅನುಸರಿಸುತ್ತಾರೆ ಎಂದು ಈ ಶ್ಲೋಕದ ಅರ್ಥ. ಒಂದೋ ಸ್ವಂತ ಬುದ್ಧಿ ಇರಬೇಕು, ಇಲ್ಲವೇ ಇತರರ, ದೊಡ್ಡವರ, ಅನುಭವಿಗಳ, ಜ್ಞಾನಿಗಳ ಮಾತನ್ನು ಕೇಳಬೇಕು, ಅನುಸರಿಸಬೇಕು. ಈ ಎರಡನ್ನೂ ಮಾಡದವರು ನಷ್ಟಕ್ಕೊಳಗಾಗುತ್ತಾರೆ ಎಂದು ಕನ್ನಡದಲ್ಲಿ ಒಂದು ನಾಣ್ಣುಡಿ ಇದೆ. ಇದೆಲ್ಲದರ ತಾತ್ಪರ್ಯವೆಂದರೆ ನಂಬಿಕೆ, ಆಚರಣೆ ತಪ್ಪಲ್ಲ, ಆದರೆ ಅರ್ಥವರಿತು ಆಚರಿಸುವುದರಿಂದ ಅದು ವೈಯಕ್ತಿಕವಾಗಿ ತನಗೂ, ತನ್ನ ಕುಟುಂಬಕ್ಕೂ ಹಾಗೂ ಸಮಾಜದ ಬೆಳವಣಿಗೆಗೂ ಲಾಭಕರವಾಗುತ್ತದೆ.

ಪ್ರಶ್ನಿಸುವುದು ತಪ್ಪಲ್ಲ. ನಮ್ಮಲ್ಲಿ ತರ್ಕ ಶಾಸ್ತ್ರಕ್ಕೆ ಬಹಳ ಮಹತ್ವ ನೀಡಲಾಗಿದೆ. ಅಭಿಪ್ರಾಯಭೇದಗಳಿರುವುದು ಸ್ವಾಭಾವಿಕ. ತನ್ನ ನಂಬಿಕೆಯನ್ನು, ಅಭಿಪ್ರಾಯವನ್ನು ಬಲವಾಗಿಟ್ಟುಕೊಂಡು ಇತರರ ಅಭಿಪ್ರಾಯಗಳನ್ನು ಗೌರವಿಸುವುದು ಸಭ್ಯತೆಯ ಲಕ್ಷಣ. ಇದನ್ನೇ ಸಹಿಷ್ಣುತೆ ಎನ್ನುವುದು. ಸ್ವಾಮಿ ವಿವೇಕಾನಂದರು ಹಿಂದು ಸಮಾಜದಲ್ಲಿನ ಕೆಟ್ಟ ಆಚರಣೆಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ನೇರವಾಗಿ ಹೇಳಿದ್ದಾರೆ. ಸರಿ ತಪ್ಪುಗಳ ಬಗ್ಗೆ ವಿವರಣೆಗಳನ್ನು ನೀಡಿದ್ದಾರೆ. ಪ್ರತಿಯೊಬರೂ ಅವರ ಪ್ರವಚನಗಳನ್ನು ಓದಬೇಕು.

ಹಾಗಂತ ಕುತರ್ಕ ಸಲ್ಲದು. ಹಿಂದೆ ಲೋಕಾಯತನ ಎಂಬ ಗುಂಪು ಇತ್ತು. ಇವರು ನಾಸ್ತಿಕರು. ವೇದವನ್ನೊಪ್ಪದವರು. ಚಾರ್ವಾಕನೆಂಬ ನಾಸ್ತಿಕನಿದ್ದ. ಆತನ ಬೋಧನೆ ಹೀಗಿರುತ್ತಿತ್ತು:

ಯಾವಜ್ಜೀವಂ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂಕುತಃ॥

ಜೀವನದಲ್ಲಿ ಹೇಗಾದರೂ ಮಾಡಿ ಸುಖ ಪಡಬೇಕು. ಸಾಲ ಮಾಡಿಯಾದರೂ ತುಪ್ಪದಲ್ಲೇ ಊಟ ಮಾಡಬೇಕು. ಪಾಪ-ಪುಣ್ಯ ಸುಳ್ಳು. ಪುನರ್ಜನ್ಮ ಎಂಬುದಿಲ್ಲ. ಈ ಜೀವನದಲ್ಲೇ ಸುಖ ಪಡಬೇಕು. ಸತ್ತ ಮೇಲೆ ಬೂದಿಯಾಗುವ ಈ ದೇಹಕ್ಕೆ ಪುನರ್ಜನ್ಮ ಎಲ್ಲಿಯದು? ಎಂದು ಈತನ ಬೋಧನೆ. ಆದರೆ ಇದು ಕುತರ್ಕವಲ್ಲದೆ ಇನ್ನೇನೂ ಅಲ್ಲ. ಹಾಗಾಗಿ ಆತನಿಗೆ ಋಷಿಯ ಸ್ಥಾನಮಾನ ಕೊಟ್ಟಿದ್ದರೂ ಇಂದು ಯಾರಿಗೂ ಆತನ ನೆನಪಿಲ್ಲ. ಏಕೆಂದರೆ ಆತನ ಬೋಧನೆ ಜೀವನ ಸ್ನೇಹಿಯಲ್ಲ. ನಂಬಿಕೆ, ಆಚರಣೆಗಳು ಮುಂದುವರೆಯಲಿ, ಆದರೆ ಅರ್ಥವರಿತು ಆಚರಿಸಬೇಕು. ಮೂಢನಂಬಿಕೆಗಳನ್ನು ಮುಲಾಜಿಲ್ಲದೆ ತ್ಯಜಿಸಬೇಕು.

ಒಪೆಕ್‌ನಿಂದ ಹೊರಬಂದ ಯುಎಇ: ಭಾರತಕ್ಕೆ ಲಾಭ!

▸ ದಿನೇಶ್ ನಾಯಕ್

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಹಠಾತ್ತನೆ ಪೆಟ್ರೋಲಿಯಂ ರಫ್ತು ದೇಶಗಳ ಒಕ್ಕೂಟ(ಒಪೆಕ್)ದಿಂದ ಹೊರಬರಲು ನಿರ್ಧರಿಸಿರುವುದು ಜಾಗತಿಕವಾಗಿ ಸಂಚಲನ ಸೃಷ್ಟಿಸಿದೆ. ಮೇ 1ರಿಂದ ತಾನು ಅಧಿಕೃತವಾಗಿ ಒಪೆಕ್‌ನಿಂದ ಹೊರಬರುವುದಾಗಿ ಯುಎಇ ಘೋಷಿಸಿದೆ. ಇರಾನ್ ಸಮರದ ಮಧ್ಯೆಯೇ ಯುಎಇ ಈ ಘೋಷಣೆ ಮಾಡಿರುವುದು ಜಾಗತಿಕ ತೈಲ ವ್ಯಾಪಾರದ ಮೇಲೆ ಭಾರೀ ದೊಡ್ಡ ಪರಿಣಾಮ ಬೀರಲಿದೆ. ಭಾರತದ ಪಾಲಿಗಂತೂ ಇದೊಂದು ವರದಾನವಾಗಲಿದೆ. ಯುಎಇ ನಿರ್ಧಾರದಿಂದ ಜಾಗತಿಕ ತೈಲ ಬೆಲೆಯಲ್ಲಿ ಇಳಿಕೆಯಾಗುವ ಹಾಗೂ ಉತ್ಪಾದನೆಯಲ್ಲಿ ಹೆಚ್ಚಳವಾಗಿ ನಿರೀಕ್ಷೆಯನ್ನು ಹೊಂದಲಾಗಿದೆ.

ಒಪೆಕ್ ಎಂಬುದು 1960ರಲ್ಲಿ ಸ್ಥಾಪಿಸಲ್ಪಟ್ಟ ತೈಲ ರಫ್ತುದಾರ ರಾಷ್ಟ್ರಗಳ ಒಕ್ಕೂಟ. ಮೊದಲಿಗೆ ಇರಾನ್, ಕುವೈಟ್, ಇರಾಕ್, ಸೌದಿ ಅರೇಬಿಯಾ ಮತ್ತು ವೆನಿಜುವೆಲಾ ಈ ಒಕ್ಕೂಟದಲ್ಲಿದ್ದರೆ ಬಳಿಕ ಅದು ವಿಸ್ತರಣೆಗೊಂಡಿತು. ಯುಎಇ 1967ರಲ್ಲಿ ಅದನ್ನು ಸೇರಿತ್ತು.

ಮೊದಲೆಲ್ಲಾ ಜಾಗತಿಕ ತೈಲ ಬೆಲೆಯನ್ನು ಪಾಶ್ಚಿಮಾತ್ಯ ಬಹುರಾಷ್ಟ್ರೀಯ ತೈಲ ಕಂಪೆನಿಗಳು ನಿಯಂತ್ರಿಸುತ್ತಿದ್ದವು. ಇದರಿಂದ ಗಲ್ಫ್ ರಾಷ್ಟ್ರಗಳಿಗೆ ನಷ್ಟವಾಗುತ್ತಿತ್ತು. ಇದನ್ನು ತಡೆಯಲು ಒಪೆಕ್ ರೂಪುಗೊಂಡಿತು. ಪ್ರತಿದಿನ ಎಷ್ಟು ಪ್ರಮಾಣದ ತೈಲವನ್ನು ಮಾತ್ರ ಹೊರತೆಗೆಯಬೇಕು ಎಂಬುದನ್ನು ಒಪೆಕ್ ನಿರ್ಧರಿಸುತ್ತದೆ. ಅದೇರೀತಿ ಜಾಗತಿಕ ಮಾರುಕಟ್ಟೆ ಬೆಲೆಯನ್ನೂ ಅದು ನಿಯಂತ್ರಿಸುತ್ತದೆ. ತೈಲ ಬೆಲೆ ಇಳಿಯುವ ಸಂಕೇತ ತೋರಿದರೆ ಕೂಡಲೇ ತೈಲ ಹೊರತೆಗೆಯುವ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಒಪೆಕ್‌ನ ಆದೇಶವನ್ನು ಮೀರಿ ಯಾವುದೇ ದೇಶವು ತನ್ನಿಷ್ಟ ಬಂದಂತೆ ತೈಲವನ್ನು ಹೊರತೆಗೆಯುವಂತಿಲ್ಲ.

ಇದೀಗ ಯುಎಇ ಒಪೆಕ್‌ನಿಂದ ಹೊರಬಂದಿರುವುದರಿಂದ ತನಗಿಷ್ಟ ಬಂದಷ್ಟು ತೈಲವನ್ನು ಹೊರತೆಗೆದು ಮಾರಬಹುದು. ಇದರಿಂದ ಜಾಗತಿಕ ತೈಲ ಪೂರೈಕೆ ಹೆಚ್ಚಾಗಿ ತೈಲದ ಬೆಲೆ ಕಡಿಮೆಯಾಗುವ ಸಾಧ್ಯತೆಗಳಿವೆ.

ಭಾರತಕ್ಕೆ ಲಾಭ

ಯುಎಇ ನಿರ್ಧಾರವು ಭಾರತಕ್ಕೆ ಒಳಿತುಂಟು ಮಾಡಲಿದೆ. ಅದಕ್ಕೆ ಕಾರಣ ಭಾರತವು ಯುಎಇ ಜತೆಗೆ ನಿಕಟ ಸಂಬಂಧ ಹೊಂದಿರುವುದು. ಎರಡನೆಯದಾಗಿ, ಯುಎಇಯಿಂದ ತೈಲವನ್ನು ಆಮದು ಮಾಡಿಕೊಳ್ಳಲು ಹೊರ್ಮುಜ್ ಜಲಸಂಧಿಯನ್ನು ಅವಲಂಬಿಸುವ ಅಗತ್ಯವಿಲ್ಲದಿರುವುದರಿಂದ ಭಾರತಕ್ಕೆ ಪೆಟ್ರೋಲಿಯಂ ಉತ್ಪನ್ನ ತರಿಸಿಕೊಳ್ಳಲು ಸುಲಭಸಾಧ್ಯವಾಗಲಿದೆ.



ಭಾರತ ಮತ್ತು ಯುಎಇ ನಡುವಿನ ಅಂತರ ಕೂಡಾ ಕಡಿಮೆಯಾಗಿರುವುದು ಸಾಗಣಾ ವೆಚ್ಚ ಮತ್ತು ಸಮಯದ ಉಳಿತಾಯಕ್ಕೂ ಕಾರಣವಾಗಲಿದೆ.

ಯುಎಇ ನಿರ್ಧಾರಕ್ಕೆ ಕಾರಣ

ಸೌದಿ ಅರೇಬಿಯಾದೊಂದಿಗೆ ಹೊಂದಿರುವ ವಿರಸವೇ ಯುಎಇ ನಿರ್ಧಾರಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಒಪೆಕ್‌ನ ಸ್ಥಾಪಕ ಸದಸ್ಯನಾದ ಸೌದಿ ಅರೇಬಿಯಾ ಜತೆ ಯುಎಇಗೆ ಕಳೆದ ಕೆಲ ವರ್ಷಗಳಿಂದ ವಿರಸ ಹೆಚ್ಚುತ್ತಲೇ ಇದೆ. ಹಲವಾರು ವಿಚಾರಗಳಲ್ಲಿ ಇವೆರಡೂ ದೇಶಗಳು ವಿಭಿನ್ನ ಧೋರಣೆ ಹೊಂದಿವೆ. ಸುಡಾನ್, ಸೋಮಾಲಿಯಾ, ಲಿಬಿಯಾ ಮತ್ತು ಯೆಮೆನ್‌ನ ಆಂತರಿಕ ಕಲಹದಲ್ಲಿ ಯುಎಇ ಮತ್ತು ಸೌದಿ ವಿಭಿನ್ನ ಪಕ್ಷಗಳನ್ನು ಬೆಂಬಲಿಸುತ್ತಿವೆ. ಹಾಗಾಗಿ ಸೌದಿ ನೇತೃತ್ವ ಹೊಂದಿರುವ ಒಪೆಕ್‌ಗೆ ಗುಡ್‌ಬೈ ಹೇಳುವುದು ಯುಎಇಗೆ ಅನಿವಾರ್ಯವಾಗಿದೆ.

ಯುಎಇ ನಿರ್ಧಾರದ ಹಿಂದೆ ಆರ್ಥಿಕ ಕಾರಣವೂ ಇದೆ. ಇರಾನ್ ಸಮರದಿಂದ ಯುಎಇ ಆರ್ಥಿಕತೆಗೆ ದೊಡ್ಡ ಹೊಡೆತ ಬಿದ್ದಿದೆ. ಆರ್ಥಿಕತೆಯನ್ನು ಬಲಪಡಿಸಿಕೊಳ್ಳುವುದಕ್ಕಾಗಿ ಹೆಚ್ಚು ತೈಲ ಉತ್ಪಾದಿಸಿ, ಮಾರಾಟ ಮಾಡುವುದು ಅನಿವಾರ್ಯವಾಗಿದೆ.

ಯುಎಇ ನಿರ್ಧಾರಕ್ಕೆ ಇದಷ್ಟೇ ಕಾರಣವಲ್ಲ, ಅದು ಇನ್ನೂ ಹಲವಾರು ಆಯಾಮಗಳಿಂದ ಚಿಂತಿಸಿ, ಇತರ ಅರಬ್ ರಾಷ್ಟ್ರಗಳಿಂದ ಹೊರತಾದ ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಲು ಯತ್ನಿಸುತ್ತಿದೆ. ಇತ್ತೀಚೆಗೆ ಅದು ಇಸ್ರೇಲಿನೆಡೆಗೆ ಸ್ನೇಹಹಸ್ತ ಚಾಚಿದ್ದು ಕೂಡಾ ಅದಕ್ಕೆ ನಿದರ್ಶನ. ಇರಾನ್‌ನಿಂದ ಆಗುತ್ತಿರುವ ಕ್ಷಿಪಣಿ ದಾಳಿ ತಪ್ಪಿಸಲು ಇಸ್ರೇಲ್‌ನಿಂದ 'ಐರನ್ ಡೋಮ್' ಗೆ ಕೋರಿಕೆ ಸಲ್ಲಿಸಿತ್ತು. ಇಸ್ರೇಲ್ ನೀಡಿದ ನೆರವಿನಿಂದ ಅದು ಇರಾನ್‌ನ ಕ್ಷಿಪಣಿ ದಾಳಿ ತಡೆಯಲು ಸಫಲವಾಗಿತ್ತು.

ಇಸ್ಲಾಮಿಕ್ ಜಿಹಾದ್‌ಗೆ ವಿರೋಧ

ಯುಎಇ ಇಸ್ಲಾಮಿಕ್ ಮೂಲಭೂತವಾದದ ಪ್ರಭಾವದಿಂದ ಹೊರಬರಲೂ ಯತ್ನಿಸುತ್ತಿದೆ. ಯುಎಇಯ ಅಧ್ಯಕ್ಷನಾಗಿರುವ ಮೊಹಮ್ಮದ್ ಬಿನ್ ಝಾಯೆದ್ ಸುಧಾರಣವಾದಿ ಮನಸ್ಥಿತಿಯವರು. 'ಮೂಲಭೂತವಾದಿ ವಹಾಬಿಸಂ' ಅಪಾಯಕಾರಿ ಎಂಬುದಾಗಿ ಅವರು ಬಹಳ ಹಿಂದೆಯೆ ಅಮೆರಿಕದ ರಾಯಭಾರಿ ಜತೆ ಕಳವಳ ಹಂಚಿಕೊಂಡಿದ್ದರು. ತಮ್ಮ ದೇಶದಲ್ಲಿ ವಿವಿಧ ಜನಾಂಗಗಳವರಿಗೆ ಆಶ್ರಯ ಕಲ್ಪಿಸುವ ಮತ್ತು ಧಾರ್ಮಿಕ ಸಹಿಷ್ಣುತೆ ಬೆಳೆಸುವ ಉದ್ದೇಶ ಅವರದು.

ಅರಬ್ ದೇಶಗಳಲ್ಲಿ ಚಾಲ್ತಿಯಲ್ಲಿರುವ 'ಮುಸ್ಲಿಂ ಬ್ರದರ್ ಹುಡ್' ಅಪಾಯಕಾರಿ ಹಾಗೂ ಅದು ತಮ್ಮ ದೇಶಕ್ಕೂ ಮುಂದೊಮ್ಮೆ ಅಪಾಯವೊಡ್ಡಬಹುದು ಎಂದು ಝಾಯೆದ್ ಭಾವಿಸಿದ್ದಾರೆ. ಯುಎಇ 1994ರಲ್ಲಿ 'ಇಸ್ಲಾಮಿಕ್ ಜಮಾತ್ ಇ ಇಸ್ಲಾಹ್' ಎಂಬ ಮೂಲಭೂತವಾದಿ ಸಂಘಟನೆಯನ್ನು ನಿಷೇಧಿಸಿತ್ತು. 1979ರಲ್ಲಿ ನಡೆದ ಇರಾನಿನ ಇಸ್ಲಾಮಿಕ್ ಕ್ರಾಂತಿ, ಅಫಘಾನಿಸ್ತಾನಕ್ಕೆ ಸೋವಿಯತ್ ಒಕ್ಕೂಟದ ದಾಳಿ, ಅಫಘಾನಿಸ್ತಾನದಲ್ಲಿ ನಡೆದ ಮುಜಾಹಿದ್ದೀನ್ ಮತ್ತು ತಾಲಿಬಾನ್ ಸಂಸ್ಕೃತಿ ಬೆಳೆದ ರೀತಿ ಮುಂತಾದವುಗಳನ್ನು ಕಂಡ ಯುಎಇ ಕಟ್ಟರ್ ಇಸ್ಲಾಮಿಕ್ ವಾದವು ತನ್ನ ದೇಶಕ್ಕೆ ಬರದಂತೆ ತಡೆಯುವುದು ಅಗತ್ಯ ಎಂದೂ ಭಾವಿಸಿದೆ. ಅಪಾಯಕಾರಿ ಎಂಬುದಾಗಿ ಪರಿಗಣಿಸಿದೆ.

ಒಟ್ಟಿನಲ್ಲಿ ಒಪೆಕ್‌ನಿಂದ ಹೊರಬರುವ ಯುಎಇ ನಿರ್ಧಾರವು ತೈಲ ಬೆಲೆ ನಿಯಂತ್ರಿಸುವಲ್ಲಿ ಒಪೆಕ್ ಹೊಂದಿರುವ ಬಿಗಿಹಿಡಿತವನ್ನು ಸಡಿಲಿಸಲಿದೆ. ಭಾರತಕ್ಕಂತೂ ಇದು ವರದಾನವಾಗಲಿದೆ.

ಲಡಾಖ್ ಧರ್ಮದ ಜೀವಂತ ನೆಲೆಬೀಡು: ಶಾ

ಬುದ್ಧ-ಲಡಾಖ್‌ನ ಚಾರಿತ್ರಿಕ ಸಂಗಮ



ಲೇಹ್-ಜಮ್ಮು: ಭಗವಾನ್ ಬುದ್ಧನ ಪವಿತ್ರ ಅವಶೇಷಗಳು 75 ವರ್ಷಗಳ ತರುವಾಯ ಲಡಾಖ್‌ಗೆ ಮರಳಿರುವುದು ಚಾರಿತ್ರಿಕ ಮರು ಸಂಗಮವಾಗಿದೆ. ಬುದ್ಧನ ಸಂದೇಶಗಳು, ಬೋಧನೆಗಳನ್ನು ಸಹಸ್ರಾರು ವರ್ಷಗಳಿಂದ ಯಥಾವತ್ ಸಂರಕ್ಷಿಸಿಕೊಂಡು ಬಂದಿರುವ ಲಡಾಖ್ ಧರ್ಮದ ಜೀವಂತ ನೆಲೆಬೀಡು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ.

ಆಧುನಿಕ ಕಾಲದಲ್ಲೀಗ ಬುದ್ಧದ ಬೋಧನೆಗಳ ಪ್ರಸ್ತುತತೆಯನ್ನು ವಿವರಿಸಿದ ಸಚಿವರು ಶಾಂತಿ, ದಯೆ ಮತ್ತು ಮಧ್ಯಮ ಹಾದಿಯು 2500 ವರ್ಷಗಳ ಹಿಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಶತ ಶತಮಾನಗಳಿಂದ ಲಡಾಖ್ ಧರ್ಮದ ಜೀವಕಳೆಯಿರುವ ನೆಲವಾಗಿದೆ. ಈ ನಾಡು ಭೌಗೋಳಿಕ ಭೂಮಿಯಷ್ಟೇ ಅಲ್ಲ, ಬೌದ್ಧ ಸಂಸ್ಕೃತಿ ಮತ್ತು ಕರುಣೆಗಳಿಂದ ಸಂಪನ್ನ ಜೀವಂತ ಪ್ರಯೋಗಾಲಯವಾಗಿದೆ ಎಂದು ಹಿಂದೆ ದಲೈಲಾಮಾ ಇಲ್ಲಿಗೆ ಭೇಟಿ ನೀಡಿದ್ದ ಸಂದರ್ಭ ಬಣ್ಣಿಸಿದ್ದರು ಎಂದು ಸಚಿವರು ನೆನಪಿಸಿದರು. ಲೇಹ್‌ನ ಜೀವಿತ್‌ಸಲ್‌ನಲ್ಲಿ 2569ನೇ ಬುದ್ಧ ಪೂರ್ಣಿಮೆ ಆಚರಣೆಗಳು ಮತ್ತು ತಥಾಗತ ಬುದ್ಧನ ಪವಿತ್ರ ಅವಶೇಷಗಳ ಪ್ರದರ್ಶನ ಉದ್ಘಾಟಿಸಿ ಸಚಿವರು ಮಾತನಾಡಿದರು.

ಬುದ್ಧನ ಸಂದೇಶಗಳ ಸಂರಕ್ಷಿಸಿದ ನಾಡಿದು: ಲಡಾಖ್ ಸಹಾನುಭೂತಿ ತುಂಬಿ ತುಳುಕುವ ನಾಡೆಂದು ಬಣ್ಣಿಸಿದ ಗೃಹ ಸಚಿವ ಶಾ, ಜ್ಞಾನಧಾರೆಯನ್ನು ಪೋಷಿಸಿದ , ಸಂರಕ್ಷಿಸಿದ ನಾಡಿದು. ಬೌದ್ಧ ಧರ್ಮಕ್ಕೆ ಸಂಕಷ್ಟಗಳು ಎದುರಾದಾಗೆಲ್ಲ ಬುದ್ಧನ ಸಂದೇಶಗಳು, ಬೋಧನೆಗಳ ಸಂರಕ್ಷಿಸಲು ಶ್ರಮಿಸಿದ ನಾಡಿದು. ಶಾಂತಿ ಮರಳುತ್ತಲೇ ಬುದ್ಧನ ಸಂರಕ್ಷಿತ ಸಂದೇಶಗಳು, ವಿಚಾರಧಾರೆಗಳನ್ನು ವಿಸ್ತರಿಸಲು, ಮುಂಚೂಣಿಗೊಯ್ಯಲು ನೆರವಾದ ನಾಡಿದು ಎಂದು ನೆನಪಿಸಿದರು.

ಜ್ಞಾನ ರಹಿತ ಅನುಷ್ಠಾನ ವ್ಯರ್ಥ: ಜ್ಞಾನವನ್ನು ಅರ್ಥೈಸಿಕೊಂಡು ಬದುಕಿನ ಭಾಗವಾಗಿ ಪರಿವರ್ತಿಸಿಕೊಳ್ಳದ ವಿನಾ ಮೋಕ್ಷ ಅಸಂಭವ. ಆಧ್ಯಾತ್ಮಿಕ ಅನುಷ್ಠಾನದ ವಿನಾ ಜ್ಞಾನಧಾರೆ ಅಪೂರ್ಣ. ಇದೇ ತೆರ ಜ್ಞಾನರಹಿತ ಆಧ್ಯಾತ್ಮಿಕ ಅನುಷ್ಠಾನಗಳು ಕೂಡ ಕುರುಡೆನಿಸುತ್ತವೆ. ಹಾಗಾಗಿ ಆಧ್ಯಾತ್ಮಿಕ ಅನುಷ್ಠಾನ ಮತ್ತು ಜ್ಞಾನಧಾರೆಗಳ ಸಂಗಮ ಸರಿಯಾದ ಹಾದಿ. ಇಷ್ಟಿದ್ದೂ ನೈತಿಕ ಅನುಶಾಸನವಿಲ್ಲದಿದ್ದರೆ ವ್ಯಕ್ತಿ ನೈಜ ಬುದ್ಧಿವಂತಿಕೆಯೊಂದಿಗೆ ಬದುಕನ್ನು ನಿಭಾಯಿಸಲಾರ. ಬುದ್ಧಿವಂತಿಕೆಯ ಬದುಕಿನ ಮೂಲಧಾರ ನೈತಿಕ ಅನುಶಾಸನವೆಂದು ಸಚಿವ ಶಾ ಅರ್ಥಪೂರ್ಣವಾಗಿ ವಿವರಿಸಿದರು. ತಥಾಗತ ಬುದ್ಧನ ಸಂದೇಶಗಳು ಉಗಮಸ್ಥಾನ ಭಾರತದಿಂದ ಚೀನಾ ಮತ್ತಿತರ ಹಲವಾರು ರಾಷ್ಟ್ರಗಳಿಗೆ ಪ್ರಸಾರವಾದ್ದು ಲಡಾಖ್ ಮತ್ತು ನೆರೆಹೊರೆಯ ಮಾರ್ಗಗಳಿಂದಾಗಿ ಎಂದು ಹೇಳಿದರು.

ಬದುಕಿಗೆ ಮಾರ್ಗದರ್ಶಿ: ಲಡಾಖ್‌ನಿಂದ ಹೊರಹೊಮ್ಮಿದ ಬುದ್ಧನ ಸಂದೇಶಗಳು ಅದೆಷ್ಟೋ ಜನರಿಗೆ ತಮ್ಮ ಬದುಕಲ್ಲಿ ಉನ್ನತಿ ಸಾಧಿಸಲು ಮುನ್ನಡೆ ಸಾಧಿಸುವಲ್ಲಿ ಮಾರ್ಗದರ್ಶಕ ಶಕ್ತಿಯಾಗಿ ಪರಿಣಮಿಸಿದೆ. ಸಾವಿರಾರು ವರ್ಷಗಳಿಂದ ಭಾರತದ ನಾಗರೀಕತೆಯು ಶಾಂತಿ, ಸಹಬಾಳ್ವೆಯ ಸಂದೇಶವನ್ನು ಜಗತ್ತಿಗೆ ನೀಡಿತ್ತೆಂಬುದನ್ನು ಲಡಾಖ್‌ನಲ್ಲಿರುವ ಭಗವಾನ್ ಬುದ್ಧನ ಪವಿತ್ರ ಅವಶೇಷಗಳು ನೆನಪಿಸುತ್ತವೆ. ವಿಭಿನ್ನ ವಲಯವಾಗಿರುವ ಲಡಾಖ್‌ಗೆ ಈ ಸಂದೇಶವು ಹೆಚ್ಚು ಪ್ರಸ್ತುತವಾಗುತ್ತದೆ. ಸಂಘರ್ಷ, ಅರಾಜಕತೆಗಳ ಮಧ್ಯೆ ಶಾಂತಿ, ದಯೆಯ ಹಾದಿಯೇ ಪರಿಹಾರವೆಂಬುದನ್ನು ಪ್ರಸ್ತುತ ಪರಂಪರೆ ನಮಗೆ ಸಾರಿ ಹೇಳುತ್ತಿವೆ ಎಂದು ಗಮನ ಸೆಳೆದ ಸಚಿವ ಶಾ, ಬುದ್ಧನ ಅವಶೇಷಗಳ ಮರಳುವಿಕೆಯೊಂದಿಗೆ ಲಡಾಖ್ ಜನರ ಪಾಲಿಗೆ ಬುದ್ಧ ಪೂರ್ಣಿಮೆಯ ಮಹತ್ತ್ವವು ನೂರ್ಮಡಿಯಾಗಿದೆ ಎಂದು ಬಣ್ಣಿಸಿದರು.

ದೋಣಿ ದುರಂತಕ್ಕೆ 9 ಬಲಿ: ತನಿಖೆಗೆ ಆದೇಶ

ಜಬಲ್ಪುರ: ಮಧ್ಯಪ್ರದೇಶದ ಜಬಲ್ಪುರದಲ್ಲಿ ಪ್ರವಾಸಿ ದೋಣಿ ದುರಂತಕ್ಕೀಡಾಗಿದ್ದು, 9 ಮಂದಿ ಬಲಿಯಾಗಿದ್ದಾರೆ. ಮೊದಲಿಗೆ 4 ಮೃತದೇಹಗಳನ್ನು ಪತ್ತೆಯಾಗಿದ್ದವು. ಶುಕ್ರವಾರ ಎನ್‌ಡಿಆರ್‌ಎಫ್ ಮತ್ತು ಭಾರತೀಯ ಸೇನಾ ಸಿಬ್ಬಂದಿ ಆಗಮನದ ಬಳಿಕ ಇನ್ನೂ 5 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಮಧ್ಯಪ್ರದೇಶ ಪ್ರವಾಸೋದ್ಯಮ ಸಚಿವ ಧರ್ಮೇಂದ್ರ ಸಿಂಗ್ ಲೋಧಿ ವಿಸ್ತೃತ ತನಿಖೆಗೆ ಆದೇಶ ನೀಡಿದ್ದಾರೆ. ಒಂದೇ ಕುಟುಂಬದ ಸದಸ್ಯರು ಸಂತೋಷದಿಂದ ಪ್ರವಾಸಿ ದೋಣಿಯಲ್ಲಿ ವಿಹರಿಸುತ್ತಿದ್ದ ವೇಳೆ ದೋಣಿಯೊಳಗೆ ಏಕಾಏಕಿ ನೀರು ನುಗ್ಗಿದ್ದು, ತನ್ನ ಅಜ್ಜಿ ನೀರಿನಲ್ಲಿ ಮುಳುಗುತ್ತಿರುವುದನ್ನು ಬಾಲಕಿಯೊಬ್ಬಳು ಕಣ್ಣಾರೆ ಕಂಡಿದ್ದಾಳೆ. ತಂದೆಯ ಕೈಹಿಡಿದುಕೊಂಡಿದ್ದ ಬಾಲಕಿ ಬಚಾವಾಗಿದ್ದು, ಆಕೆಯ ತಾಯಿ, ಸಹೋದರ ಮತ್ತು ತಾತ ಗದ್ದಲದ ಮಧ್ಯೆ ಕಾಣೆಯಾಗಿದ್ದರು ಎಂದು ಆಕೆ ಕಣ್ಣೀರು ಹಾಕಿದ್ದಾಳೆ. ಶುಕ್ರವಾರ ನರ್ಮದಾ ನದಿಯ ಬರ್ಗಿ ಅಣೆಕಟ್ಟಿನ ಬಳಿ ನಡೆದ ಈ ದೋಣಿ ದುರಂತ ಸಂಭವಿಸಿದೆ.

ಭಾರತದ ಹೈಸ್ಪೀಡ್ ಕನಸು ಸಾಕಾರ

ಭಾರತದ ಮೊದಲ ಸ್ವದೇಶಿ ಬುಲೆಟ್ ರೈಲು ಯೋಜನೆ ವೇಗ ಪಡೆದುಕೊಂಡಿದೆ. ಅಹಮದಾಬಾದ್-ಮುಂಬೈ ಹೈಸ್ಪೀಡ್ ರೈಲು ಕಾರಿಡಾರ್ ಮೂಲಕ 508 ಕಿಮೀ ದೂರವನ್ನು ಕೇವಲ 2 ಗಂಟೆಗಳಲ್ಲಿ ಕ್ರಮಿಸುವ ಕನಸು 2027ರಲ್ಲಿ ನನಸಾಗಲಿದೆ. ಜಪಾನಿನ ಶಿಂಕನ್ಸೆನ್ ತಂತ್ರಜ್ಞಾನದ ಬೆಂಬಲದೊಂದಿಗೆ, ಭಾರತೀಯ ರೈಲ್ವೆ ಮತ್ತು ಬಿಇಎಂಎಲ್ ಸೇರಿ ದೇಶೀಯ ಬುಲೆಟ್ ಟ್ರೈನ್ ಅಭಿವೃದ್ಧಿಪಡಿಸುತ್ತಿವೆ.

2027ರಲ್ಲಿ ಟ್ರ್ಯಾಕ್‌ಗೆ ಇಳಿಯಲಿದೆ ಮೊದಲ ಸ್ವದೇಶಿ ಬುಲೆಟ್ ಟ್ರೈನ್

ಗುಜರಾತ್‌ನಿಂದ ಮುಂಬೈಗೆ ಕೇವಲ 2 ಗಂಟೆ ಪ್ರಯಾಣ

ಏನಿದರ ಮಹತ್ವ



- ಇದು ಭಾರತಕ್ಕೆ ತಾಂತ್ರಿಕ ಸ್ವಾವಲಂಬನೆ ಹೆಚ್ಚಿಸುತ್ತದೆ
- ದೇಶದ ಮೂಲಸೌಕರ್ಯ ಆಧುನೀಕರಣಕ್ಕೆ ಸಹಕಾರಿ
- ಪ್ರಮುಖ ಆರ್ಥಿಕ ನಗರಗಳ ನಡುವಿನ ಪ್ರಯಾಣ ಸಮಯವನ್ನು ಕಡಿಮೆ ಮಾಡುತ್ತದೆ
- ಜಪಾನ್, ಚೀನಾ ಮತ್ತು ಫ್ರಾನ್ಸ್ ದೇಶಗಳಂತೆ ಭಾರತವೂ ಹೈಸ್ಪೀಡ್ ರೈಲು ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆಯಲು ಸಹಾಯ ಮಾಡುತ್ತದೆ



ಸುದ್ದಿ ಸಮಗ್ರ

ಭಾರತದಲ್ಲೇ ತಯಾರು

2017ರಲ್ಲಿ ಶಂಕುಸ್ಥಾಪನೆಗೊಂಡ ಮುಂಬೈ-ಅಹಮದಾಬಾದ್ ಬುಲೆಟ್ ರೈಲು ಯೋಜನೆ ಈಗ ಅಂತಿಮ ಹಂತದತ್ತ ಸಾಗುತ್ತಿದೆ. ಜಪಾನ್ ಸರ್ಕಾರದ ತಾಂತ್ರಿಕ ಮತ್ತು ಆರ್ಥಿಕ ನೆರವಿನೊಂದಿಗೆ ಭಾರತೀಯ ರೈಲ್ವೆ ಹಾಗೂ ಬಿಇಎಂಎಲ್ (ಭಾರತ್ ಅರ್ಥ್ ಮೂವರ್ ಲಿಮಿಟೆಡ್) ಈ ಮಹತ್ವಾಕಾಂಕ್ಷಿ ಯೋಜನೆಯನ್ನು ರೂಪಿಸುತ್ತಿವೆ. ಈಗಾಗಲೇ ನೂರಾರು ಕಿಲೋಮೀಟರ್‌ಗಳ ಅಡಿಪಾಯ, ಪಿಯರ್ ಮತ್ತು ಗರ್ಡರ್ ಕಾಮಗಾರಿ ಪೂರ್ಣಗೊಂಡಿದ್ದು, ಯೋಜನೆಗೆ ವೇಗ ಸಿಕ್ಕಿದೆ. ವಿದೇಶಿ ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ರೈಲಿನ ಬಹುತೇಕ ನಿರ್ಮಾಣ ಕಾರ್ಯ ಭಾರತದಲ್ಲೇ ನಡೆಯುತ್ತಿದೆ.

ಗಂಟೆಗೆ ಗರಿಷ್ಠ 320 ಕಿ.ಮೀ ವೇಗ

ಅಹಮದಾಬಾದ್‌ನ ಸಬರಮತಿಯಿಂದ ಮುಂಬೈವರೆಗೆ 508 ಕಿಮೀ ದೂರವನ್ನು ಈ ರೈಲು ಸಂಪರ್ಕಿಸಲಿದೆ. ಗಂಟೆಗೆ ಗರಿಷ್ಠ 320 ಕಿಮೀ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿರುವ ಈ ಬುಲೆಟ್ ಟ್ರೈನ್, ಪ್ರಸ್ತುತ ರೈಲುಗಳಿಗಿಂತ ಪ್ರಯಾಣ ಸಮಯವನ್ನು ಭಾರೀ ಪ್ರಮಾಣದಲ್ಲಿ ಕಡಿಮೆ ಮಾಡಲಿದೆ. ಇದರಿಂದ ಅಹಮದಾಬಾದ್ ಮತ್ತು ಮುಂಬೈ ನಡುವಿನ ಪ್ರಯಾಣ ಕೇವಲ 2 ಗಂಟೆಗಳಲ್ಲಿ ಸಾಧ್ಯವಾಗಲಿದೆ.

ಹಂತ ಹಂತವಾಗಿ ಆರಂಭವಾಗಲಿದೆ ಸೇವೆ

2027ರ ಆಗಸ್ಟ್‌ನಲ್ಲಿ ಪ್ರಾರಂಭಿಕ ಹಂತವಾಗಿ ಸೂರತ್-ವಾಪಿ ಮಾರ್ಗದಲ್ಲಿ ಬುಲೆಟ್ ಟ್ರೈನ್ ಸಂಚಾರ ಆರಂಭವಾಗುವ ಸಾಧ್ಯತೆಯಿದೆ. ನಂತರ ವಾಪಿ-ಅಹಮದಾಬಾದ್ ಮತ್ತು ಥಾಣೆ-ಅಹಮದಾಬಾದ್ ಮಾರ್ಗಗಳಿಗೆ ವಿಸ್ತರಣೆ ನಡೆಯಲಿದೆ. ಅಂತಿಮವಾಗಿ ಸಂಪೂರ್ಣ ಮುಂಬೈ-ಅಹಮದಾಬಾದ್ ಕಾರಿಡಾರ್ ಸಾರ್ವಜನಿಕ ಸೇವೆಗೆ ಮುಕ್ತವಾಗಲಿದೆ.

ಯಾವ ಯಾವ ಮಾರ್ಗ

- ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಮಾರ್ಗದಲ್ಲಿ
- ಭವಿಷ್ಯದ ಇತರೆ ಹೈಸ್ಪೀಡ್ ಕಾರಿಡಾರ್‌ಗಳಲ್ಲಿಯೂ ಈ ರೈಲು ಕಾರ್ಯನಿರ್ವಹಿಸುವ ಸಾಧ್ಯತೆ
- ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಯೋಜನೆಗೆ ಈಗಾಗಲೇ ವೇಗ

ಮುಖ್ಯಾಂಶಗಳು

- ಭಾರತದಲ್ಲಿ ನಿರ್ಮಿತ ವೇಗದ ಬುಲೆಟ್ ಟ್ರೈನ್ ಭಾರತೀಯ ರೈಲ್ವೆ ಮತ್ತು ಬಿಇಎಂಎಲ್ ಸಹಯೋಗದಲ್ಲಿ ಅಭಿವೃದ್ಧಿ
- ಭಾರತೀಯ ಹವಾಮಾನ ಮತ್ತು ಭೌಗೋಳಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ನಿರ್ಮಾಣ
- ವಿದೇಶಿ ಬುಲೆಟ್ ಟ್ರೈನ್ ವ್ಯವಸ್ಥೆಗಳಿಗಿಂತ ಕಡಿಮೆ ವೆಚ್ಚದ, ಹೆಚ್ಚು ಕೈಗೆಟುಕುವ ಮಾದರಿ
- ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಅಭಿಯಾನದ ಭಾಗವಾಗಿದ್ದು, ವಿದೇಶಿ ತಂತ್ರಜ್ಞಾನದ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶ



ವೇಗ, ತಂತ್ರಜ್ಞಾನ, ವಿನ್ಯಾಸ

- ಈ ಬುಲೆಟ್ ಟ್ರೈನ್ ಸುಮಾರು ಗರಿಷ್ಠ 320 ಕಿಮೀ ವೇಗದಲ್ಲಿ ಸಂಚರಿಸುವ ನಿರೀಕ್ಷೆ
- ಹೆಚ್ಚಿನ ಸ್ಥಿರತೆಗಾಗಿ ಆಧುನಿಕ ಏರೋಡೈನಾಮಿಕ್ ವಿನ್ಯಾಸ
- ಜಾಗತಿಕ ಮಟ್ಟದ ಪ್ರಯಾಣಿಕರ ಸೌಲಭ್ಯ
- ಇಂಧನ ಉಳಿತಾಯ ಮತ್ತು ಸುರಕ್ಷತೆ ಗಮನದಲ್ಲಿಟ್ಟು ವಿನ್ಯಾಸ
- ಜಪಾನ್‌ನ ಶಿಂಕನ್ಸೆನ್ ರೈಲುಗಳಿಗಿಂತ ಸ್ವಲ್ಪ ಕಡಿಮೆ ವೇಗವಾದರೂ, ಭಾರತದ ಮೂಲಸೌಕರ್ಯಕ್ಕೆ ತಕ್ಕಂತೆ ವೆಚ್ಚ-ಕಾರ್ಯಕ್ಷಮತೆ ಆದ್ಯತೆಯಾಗಿ ಪರಿಗಣನೆ

ಬುಲೆಟ್ ಟ್ರೈನ್ ವರ್ಸಸ್ ವಂದೇ ಭಾರತ್

ಭಾರತದಲ್ಲಿ ಈಗಾಗಲೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು 130ರಿಂದ 160 ಕಿಮೀ ವೇಗದಲ್ಲಿ ಸಂಚರಿಸುತ್ತಿವೆ. ಹೊಸ ವಂದೇ ಭಾರತ್ ಸ್ಲೀಪರ್ ಆವೃತ್ತಿ ಪರೀಕ್ಷೆಯಲ್ಲಿ 180 ಕಿಮೀ ವೇಗ ತಲುಪಿದೆ. ಆದರೆ ಬುಲೆಟ್ ಟ್ರೈನ್ ಸಂಪೂರ್ಣ ಹೈಸ್ಪೀಡ್ ತಂತ್ರಜ್ಞಾನ ಆಧಾರಿತವಾಗಿದ್ದು, ವಿಶೇಷ ಟ್ರ್ಯಾಕ್‌ಗಳಲ್ಲಿ ಮಾತ್ರ ಸಂಚರಿಸುತ್ತದೆ. ವೇಗ, ಸುಧಾರಿತ ಸಿಗ್ನಲಿಂಗ್ ವ್ಯವಸ್ಥೆ ಮತ್ತು ಅತ್ಯುನ್ನತ ಸುರಕ್ಷತಾ ವ್ಯವಸ್ಥೆಗಳು ಇದರ ಪ್ರಮುಖ ವಿಶೇಷತೆಗಳಾಗಿವೆ.



ಮೇಕ್ ಇನ್ ಇಂಡಿಯಾಗೆ ಹೊಸ ಮೈಲಿಗಲ್ಲು

ಈ ಯೋಜನೆ ಕೇವಲ ವೇಗದ ರೈಲು ಸೇವೆಗೆ ಸೀಮಿತವಾಗಿಲ್ಲ. ದೇಶೀಯ ತಂತ್ರಜ್ಞಾನ, ಸ್ವದೇಶಿ ಉತ್ಪಾದನೆ ಮತ್ತು ಭವಿಷ್ಯದ ಹೈಸ್ಪೀಡ್ ಸಾರಿಗೆ ವ್ಯವಸ್ಥೆಗೆ ಇದು ಹೊಸ ದಿಕ್ಕು ತೋರಿಸುತ್ತಿದೆ. ಯೋಜನೆ ಯಶಸ್ವಿಯಾದರೆ, ಭಾರತ ಜಾಗತಿಕ ಹೈಸ್ಪೀಡ್ ರೈಲು ಜಾಲದಲ್ಲಿ ಪ್ರಮುಖ ಸ್ಥಾನ ಪಡೆಯುವುದರ ಜತೆಗೆ ವಿದೇಶಿ ಆಮದು ಅವಲಂಬನೆಯಿಂದ ಹೊರಬರುವತ್ತ ದೊಡ್ಡ ಹೆಜ್ಜೆ ಇಡಲಿದೆ.

ಕಿರುಸುದ್ದಿ

ಅಮೆರಿಕದ 16 ಸೇನಾನೆಲೆಗಳಿಗೆ ಹಾನಿ?

ಟೆಹ್ರಾನ್: ಇರಾನ್ ಹಾಗೂ ಅದರ ಮೈತ್ರಿ ಪಡೆಗಳು ನಡೆಸಿದ ದಾಳಿಗಳಲ್ಲಿ ಗಲ್ಫ್ ಪ್ರದೇಶದ 8 ದೇಶಗಳಲ್ಲಿರುವ ಕನಿಷ್ಠ 16 ಅಮೆರಿಕದ ಸೇನಾನೆಲೆಗಳು ಹಾನಿಗೊಳಗಾಗಿವೆ ಎಂದು ವರದಿ ತಿಳಿಸಿದೆ. ಸಿಎನ್‌ಎನ್ ನಡೆಸಿದ ತನಿಖಾ ವರದಿಯ ಪ್ರಕಾರ, ಈ ದಾಳಿಗಳಿಂದ ಕೆಲವು ತಾಣಗಳು ಸಂಪೂರ್ಣವಾಗಿ ಕಾರ್ಯನಿರ್ವಹಣೆಗೆ ಅಸಮರ್ಥವಾಗಿವೆ. ಪ್ರಮುಖವಾಗಿ ರಾಡಾರ್ ಮತ್ತು ಸಂವಹನ ವ್ಯವಸ್ಥೆಗಳನ್ನೇ ಗುರಿಯಾಗಿಸಿಕೊಂಡಿದ್ದು, ಇದರಿಂದ ಅಮೆರಿಕಕ್ಕೆ ಭಾರೀ ಆರ್ಥಿಕ ನಷ್ಟ ಉಂಟಾಗಿದೆ. ಯುದ್ಧದ ಒಟ್ಟು ವೆಚ್ಚವು ಸುಮಾರು 25 ಶತಕೋಟಿ ಡಾಲರ್‌ನಿಂದ 40-50 ಶತಕೋಟಿ ಡಾಲರ್‌ವರೆಗೆ ಇರಬಹುದೆಂದು ಅಂದಾಜಿಸಲಾಗಿದೆ. ಅಮೆರಿಕದ ಗಲ್ಫ್ ಮೈತ್ರಿ ರಾಷ್ಟ್ರಗಳೂ ಈ ದಾಳಿಗಳಿಂದ ತೀವ್ರವಾಗಿ ಹಾನಿಗೊಂಡಿದ್ದು, ಅಮೆರಿಕದ ಮೇಲೆ ಖಾಸಗಿಯಾಗಿ ಟೀಕೆ ವ್ಯಕ್ತಪಡಿಸಿರುವುದಾಗಿ ವರದಿಯಲ್ಲಿ ಉಲ್ಲೇಖವಾಗಿದೆ. ಅಮೆರಿಕದೊಂದಿಗಿನ ಮೈತ್ರಿಯ ನಂಬಿಕೆಯನ್ನು ಅವರು ಪ್ರಶ್ನಿಸುತ್ತಿರುವುದಾಗಿ ತಿಳಿದುಬಂದಿದೆ.

XV ಕಾರ್ಪ್ಸ್‌ಗೆ ಲೆ.ಜನರಲ್ ಬಲ್ಬೀರ್ ಮುಖ್ಯಾಧಿಕಾರಿ

ಶ್ರೀನಗರ: ಸೇನೆಯು ಶ್ರೀನಗರ ಮೂಲದ ವ್ಯೂಹಾತ್ಮಕ 15 ಕಾರ್ಪ್ಸ್ (ಚಿನಾರ್ ಕಾರ್ಪ್ಸ್) ಕಮಾಂಡ್ ಆಗಿ ಲೆ.ಜ. ಬಲ್ಬೀರ್ ಸಿಂಗ್ ಶುಕ್ರವಾರ ನೇಮಕಗೊಂಡಿದ್ದಾರೆ. ಈ ಹುದ್ದೆಯಲ್ಲಿದ್ದ ಲೆ.ಜ. ಪ್ರಶಾಂತ್ ಶ್ರೀವಾಸ್ತವ ಸೇನಾ ಪ್ರಧಾನ ಕಚೇರಿಯ ಕ್ವಾರ್ಟರ್ ಮಾಸ್ಟರ್ ಜನರಲ್ ಹುದ್ದೆಗೆ ನಿಯುಕ್ತರಾಗಿರುವ ಹಿನ್ನೆಲೆಯಲ್ಲಿ, ತೆರವಾಗಿದ್ದ ಸ್ಥಾನಕ್ಕೆ ಲೆ.ಜ. ಬಲ್ಬೀರ್ ಸಿಂಗ್ ನೇಮಕ ನಡೆಯಿತು.



ವಲಯದಲ್ಲಿ ಶಾಂತಿ, ಸ್ಥಿರತೆ ಕಾಪಾಡುವುದು ಮತ್ತು ವಲಯದ ಸಂಪನ್ನತೆ ನಿಟ್ಟಿನಲ್ಲಿ ನಾಗರಿಕ ಆಡಳಿತ ಮತ್ತು ಕಾಶ್ಮೀರದ ಜನತೆಯೊಂದಿಗೆ ಕೈಜೋಡಿಸಿ ದುಡಿಯಲು ತಾನು ಸಂಕಲ್ಪಬದ್ಧನಾಗಿರುವೆ ಎಂದು ಲೆ.ಜನರಲ್ ಸಿಂಗ್ ಹೊಸ ಜವಾಬ್ದಾರಿ ವಹಿಸಿಕೊಂಡ ನಂತರ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಿರಂತರ ಸವಾಲುಗಳ ಎದುರಿಸುವಲ್ಲಿ ಭದ್ರತಾ ಪಡೆಗಳೊಂದಿಗೆ ಕೈಜೋಡಿಸುವಂತೆ ಅವರು ಸಮಾಜದ ಎಲ್ಲಾ ವರ್ಗಗಳ ಜನತೆಗೆ ಸಲಹೆ ಮಾಡಿದ್ದಾರೆ. ಲೆ.ಜ.ಸಿಂಗ್ ಈ ಮುನ್ನ ದಕ್ಷಿಣ ಮತ್ತು ಮಧ್ಯಕಾಶ್ಮೀರದಲ್ಲಿ ಬಂಡಾಯ -ಭಯೋತ್ಪಾದನೆ ಪಿಡುಗಿನ ವಿರುದ್ಧ ಕಾರ್ಯಾಚರಣೆಗಳ ಉಸ್ತುವಾರಿ ಹೊಂದಿದ್ದ ವಿಕ್ಟರ್ ಫೋರ್ಸ್‌ನ ಕಮಾಂಡರ್ ಆಗಿದ್ದರು. ಸೈನಿಕ ಮುಖ್ಯಾಧಿಕಾರಿಯಾಗಿ ಲೆ.ಜ. ಬಲ್ಬೀರ್ ಸಿಂಗ್ ನೇಮಕಗೊಂಡಿದ್ದಾರೆ ಎಂದು 15 ಕಾರ್ಪ್ಸ್ (ಚಿನಾರ್ ಕಾರ್ಪ್ಸ್) ಎಕ್ಸ್‌ನಲ್ಲಿ ತಿಳಿಸಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 993 ರೂ. ಏರಿಕೆ

ಹೊಸದಿಲ್ಲಿ: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ 993 ರೂ.ಗಳ ಭಾರೀ ಬೆಲೆ ಏರಿಕೆಯಾಗಿದೆ. ಅನಿಲ ಕಂಪನಿಗಳು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಹೆಚ್ಚಿಸಿದ್ದರಿಂದ ಹೋಟೆಲ್‌ಗಳು, ರಸ್ತೆ ಬದಿಯ ಊಟದ ಅಂಗಡಿಗಳು, ಕ್ಯಾಟರಿಂಗ್ ಸೇವೆಗಳು, ಬೇಕರಿಗಳು ಮತ್ತು ಕ್ಲೌಡ್ ಕಿಚನ್‌ಗಳಂತಹ ಸಣ್ಣ ಉದ್ಯಮಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಬೆಂಗಳೂರಿನಲ್ಲಿ ವಾಣಿಜ್ಯ ಎಲ್‌ಪಿಜಿ ದರ 3,125 ರೂ. ತಲುಪಿದೆ.

ದಿನನಿತ್ಯ ಜನರಿಗೆ ಆಹಾರ ಒದಗಿಸುವ ಉದ್ಯಮ ಜಾಲದ ಮೇಲೆ ದೊಡ್ಡ ಹೊಡೆತವಾಗಿದೆ. ಈ ಉದ್ಯಮಗಳಿಗೆ ಅಡುಗೆ ಅನಿಲವು ಕೇವಲ ಇನ್ನೊಂದು ವೆಚ್ಚವಲ್ಲದೆ, ಹೋಟೆಲ್ ವ್ಯವಹಾರದ ಜೀವಾಳವಾಗಿದೆ. ಇಂತಹ ಅನಿಶ್ಚಿತತೆಯ ಸಂದರ್ಭ ತೀವ್ರ ಬೆಲೆ ಏರಿಕೆ ನೇರವಾಗಿ ಅವರ ಲಾಭದ ಮೇಲೆ ಹೊಡೆತ ನೀಡುತ್ತದೆ. ಸಣ್ಣ ಮಟ್ಟದ ವ್ಯಾಪಾರಿಗಳು ಹೆಚ್ಚುವರಿ ವೆಚ್ಚವನ್ನು ತಾಳಲು ಸಾಧ್ಯವಾಗದೆ, ಆಹಾರದ ಬೆಲೆಗಳನ್ನು ಹೆಚ್ಚಿಸುವ ಸಾಧ್ಯತೆಯೂ ಇದೆ.

ವಾಣಿಜ್ಯ ಎಲ್‌ಪಿಜಿ 19 ಕೆ.ಜಿ ಬೆಲೆ ಏರಿಕೆಯು ಅಂತಿಮವಾಗಿ ಗ್ರಾಹಕರ ಮೇಲೆ ಹೊರೆ ಬೀಳಲಿದೆ. ಏಕೆಂದರೆ ಹೋಟೆಲ್‌ಗಳು ಮತ್ತು ಆಹಾರ ಸೇವಾ ಸಂಸ್ಥೆಗಳು ತಮ್ಮ ವೆಚ್ಚವನ್ನು ಸಮತೋಲನ ಮಾಡುವುದಕ್ಕಾಗಿ ಮೆನು ದರಗಳನ್ನು ಹೆಚ್ಚಿಸಬಹುದು. ಒಟ್ಟಿನಲ್ಲಿ, ಈ ಎಲ್‌ಪಿಜಿ ದರ ಏರಿಕೆ ಸಣ್ಣ ಆಹಾರ ಉದ್ಯಮಗಳ ಮೇಲೆ ಆರ್ಥಿಕ ಒತ್ತಡವನ್ನು ಹೆಚ್ಚಿಸಿ, ಆಹಾರ ದರಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಗೃಹಬಳಕೆ ಎಲ್‌ಪಿಜಿ 913 ರೂ.ನಲ್ಲಿ ಸ್ಥಿರವಾಗಿದೆ.

ಸದನಕ್ಕೆ ಪಾನಮತ್ತರಾಗಿ ಬಂದ ಸಿಎಂ: ಕೈ ಆರೋಪ

ಅಮೃತಸರ: ಪಂಜಾಬ್ ಮುಖ್ಯಮಂತ್ರಿ ಭಗ್ವಂತ್ ಮನ್ ಅವರು ಮದ್ಯಪಾನ ಮಾಡಿ ವಿಧಾನಸಭೆಗೆ ಬಂದಿದ್ದಾರೆಂದು ಪ್ರತಿಪಕ್ಷ ಕಾಂಗ್ರೆಸ್ ಶಾಸಕ ಪ್ರತಾಪ್ ಸಿಂಗ್ ಬಾಜ್ವಾ ಆರೋಪಿಸಿದ್ದು, ಪಂಜಾಬ್ ವಿಧಾನಸಭೆಯಲ್ಲಿ ಭಾರೀ ಗದ್ದಲದ ವಾತಾವರಣ ಸೃಷ್ಟಿಯಾಗಿತ್ತು. ಮುಖ್ಯಮಂತ್ರಿ ಪಾನಮತ್ತರಾಗಿದ್ದರೇ ಇಲ್ಲವೇ ಎಂದು ತಿಳಿಯಲು ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕೆಂದು ಪ್ರತಿಪಕ್ಷ ನಾಯಕ ಪ್ರತಾಪ್ ಸಿಂಗ್ ಆಗ್ರಹಿಸಿದ್ದಾರೆ.

ಮೇ ದಿನದಂದೇ ವಿಶ್ವಾಸಮತ ಯಾಚನೆಗಾಗಿ ನಡೆದ ವಿಶೇಷ ಅಧಿವೇಶನ ಸಂದರ್ಭ ಮುಖ್ಯಮಂತ್ರಿ, ಆಮ್ ಆದ್ಮಿ (ಆಪ್) ನಾಯಕ ಭಗ್ವಂತ್ ಮನ್ ಮದ್ಯಪಾನ ಮಾಡಿ ಬಂದಿದ್ದರೆಂಬ ಗಂಭೀರ ಆರೋಪವನ್ನು ಪ್ರತಿಪಕ್ಷ ಕಾಂಗ್ರೆಸ್ ಮಾಡಿದೆ. ಇದರಿಂದ ಆಡಳಿತ ಪಕ್ಷ ಆಪ್ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಶಾಸಕರ ನಡುವೆ ತೀವ್ರ ವಾಗ್ವಾದ ನಡೆಯಿತು.

ಸತ್ಯಾಸತ್ಯತೆ ಸಾಬೀತು ಮಾಡಲು ಮುಖ್ಯಮಂತ್ರಿ ಮತ್ತು ಶಾಸಕರೆಲ್ಲರ ಉಸಿರಾಟದ ಪರಿಶೀಲನೆ ಮತ್ತು ವೈದ್ಯಕೀಯ ಪರೀಕ್ಷೆ ನಡೆಸಬೇಕೆಂದು ಪ್ರತಿಪಕ್ಷಗಳು ಒಗ್ಗಟ್ಟಿನಿಂದ ಆಗ್ರಹಿಸಿವೆ. ಈ ಗದ್ದಲದೊಂದಿಗೆ ಸಭೆ ಕೊನೆಗೊಂಡಿತು. ಘಟನೆಯ ತನಿಖೆ ನಡೆಸಬೇಕೆಂದು ಪ್ರತಿಪಕ್ಷ ನಾಯಕ ಪ್ರತಾಪ್ ಸ್ಪೀಕರ್‌ಗೆ ಪತ್ರ ಬರೆದಿದ್ದಾರೆ. ಮನ್ ವಿಶ್ವಾಸಮತ ಯಾಚಿಸಿ ಗೆದ್ದಿದ್ದಾರೆ.

ಆತಂಕಕಾರಿ ವರ್ತನೆ: ರಾಜ್ಯ ಮುಖ್ಯಮಂತ್ರಿ ವಿಧಾನಸಭೆಗೆ ಪಾನಮತ್ತರಾಗಿ ಬರುವ ವಿಷಯ ಗಂಭೀರವಾದದ್ದು, ಇದರಿಂದ ಜನರಿಗೆ ವಿಧಾನಸಭೆ ಮೇಲಿನ ನಂಬಿಕೆ ಕಳೆದುಕೊಳ್ಳುತ್ತಾರೆ ಎಂದು ಕಾಂಗ್ರೆಸ್ ನಾಯಕ ಬಾಜ್ವಾ ಆತಂಕ ವ್ಯಕ್ತಪಡಿಸಿದ್ದಾರೆ.

ಸೋಲಾರ್‌ಗೆ ಒತ್ತು: ದೇಶಕ್ಕಿಲ್ಲ ಪವರ್‌ಕಟ್

ಹೊಸದಿಲ್ಲಿ: ಈ ಬಾರಿಯ ಬೇಸಿಗೆಯ ಬಿರುಬಿಸಿಲಿಗೆ ಜನಜೀವನ ತತ್ತರಿಸುವಂತಾಗಿದ್ದು, ದೇಶದಲ್ಲಿ ವಿದ್ಯುತ್‌ಗಾಗಿ ಬೇಡಿಕೆ ದಾಖಲೆಯ ಪ್ರಮಾಣದಲ್ಲಿ ಏರಿಕೆಯಾಗಿದ್ದರೂ ವಿದ್ಯುತ್ ಕಡಿತ (ಪವರ್ ಕಟ್) ಇಲ್ಲದಿರುವುದು ಗಮನ ಸೆಳೆದಿದೆ. ಇದಕ್ಕೆ ಕೇಂದ್ರ ಸರಕಾರ ಉಷ್ಣ ವಿದ್ಯುತ್ ಸ್ಥಾವರಗಳ ದಕ್ಷತೆಯನ್ನು ಕಾಯ್ದುಕೊಂಡಿರುವುದು ಮತ್ತು ಇದೇ ವೇಳೆ ಸೋಲಾರ್ ವಿದ್ಯುತ್ ಉತ್ಪಾದನೆಗೆ ನೀಡಿದ ಆದ್ಯತೆ ಕಾರಣವಾಗಿದೆ. ವಿದ್ಯುತ್ ಬೇಡಿಕೆ ಭಾರೀ ಪ್ರಮಾಣದಲ್ಲಿ ಹೆಚ್ಚಿದ್ದರೂ ದೇಶದಲ್ಲಿ ಲೋಡ್‌ಶೆಡ್ಡಿಂಗ್‌ನ ಸಮಸ್ಯೆ ಕಂಡುಬಂದಿಲ್ಲ. ಇದಕ್ಕೆ ಹೆಚ್ಚುವರಿ ವಿದ್ಯುತ್ ಬೇಡಿಕೆಯನ್ನು ಪೂರೈಸುವಲ್ಲಿ ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳ ಜೊತೆಗೆ ಸೋಲಾರ್ ವಿದ್ಯುತ್ ಉತ್ಪಾದಕ ಘಟಕಗಳ ಕೊಡುಗೆಯೂ ಕಾರಣವಾಗಿದೆ. ಏ.25ರಂದು ವಿದ್ಯುತ್ ಬೇಡಿಕೆಯು 256ಗಿಗಾವ್ಯಾಟ್‌ಗಳ ದಾಖಲೆಯ ಮಟ್ಟಕ್ಕೇರಿತ್ತು. ಆದರೂ ಈ ಪ್ರಮಾಣದ ವಿದ್ಯುತ್ ಬೇಡಿಕೆಯನ್ನು ನಿರಾತಂಕವಾಗಿ ಪೂರೈಸುವ ಮೂಲಕ ಜನತೆಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಯಿತು.

ದೇಸಿ ವಿನ್ಯಾಸ, ನಿರ್ಮಾಣದ ಯುದ್ಧನೌಕೆ | ಬ್ರಹ್ಮೋಸ್, ಬರಾಕ್-8 ಕ್ಷಿಪಣಿಗಳ ನಿಯೋಜನೆ

ನೌಕಾಪಡೆಗೆ ಸ್ವದೇಶಿ ಮಹೇಂದ್ರಗಿರಿ ಸೇರ್ಪಡೆ

ಹೊಸದಿಲ್ಲಿ: ಸಾಕಷ್ಟು ಸಮರ್ಥ ಶಸ್ತ್ರಾಸ್ತ್ರಸಜ್ಜಿತ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡ ಸ್ವದೇಶಿ ಯುದ್ಧ ನೌಕೆ ಮಹೇಂದ್ರಗಿರಿಯನ್ನು ಶುಕ್ರವಾರ ಭಾರತೀಯ ನೌಕಾಪಡೆಗೆ ವಿಧ್ಯುಕ್ತವಾಗಿ ಹಸ್ತಾಂತರಿಸಲಾಯಿತು. ನೀಲ್‌ಗಿರಿ ದರ್ಜೆಯ (ಪ್ರಾಜೆಕ್ಟ್ 17ಎ) ಆರನೇ ನೌಕೆಯನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಸ್‌ಎಲ್)ನಲ್ಲಿ ನೌಕಾಪಡೆಗೆ ಸೇರ್ಪಡೆಮಾಡಲಾಯಿತು. ಯುದ್ಧನೌಕೆ, ದೇಶೀಯ ವಿನ್ಯಾಸ ಮತ್ತು ನಿರ್ಮಾಣ ಸಾಕಾರದಲ್ಲಿ ಇದೊಂದು ಮಹತ್ವದ ಮೈಲಿಗಲ್ಲೆಂದು ಅಧಿಕಾರಿಗಳು ಮಹೇಂದ್ರಗಿರಿಯನ್ನು ಬಣ್ಣಿಸಿದ್ದಾರೆ.

ಬಹುಮುಖಿ ಸಾಮರ್ಥ್ಯ: ಸಮುದ್ರ -ಸಾಗರ ವಲಯದಲ್ಲಿ ಪ್ರಸಕ್ತ ಎದುರಾಗುವ ಅನ್ಯಾನ್ಯ ಸವಾಲುಗಳ ನಿಭಾಯಿಸಬಲ್ಲ ಬಹುಮುಖೀ ಸಾಮರ್ಥ್ಯದ ನೌಕೆಯಾಗಿದೆ ಪ್ರಾಜೆಕ್ಟ್ 17ಎಯ ಯುದ್ಧನೌಕೆಗಳು. ನೌಕಾ ವಿನ್ಯಾಸ, ರಹಸ್ಯ ಕಾರ್ಯಾಚರಣೆ, ಶಸ್ತ್ರಾಸ್ತ್ರ ಸಾಮರ್ಥ್ಯ, ಆಟೊಮೇಶನ್, ರಕ್ಷಿಸಿಕೊಳ್ಳುವಿಕೆ ಇತ್ಯಾದಿ ಎಲ್ಲಾ ಅಂಶಗಳಲ್ಲೂ ಸಾಕಷ್ಟು ನಾವೀನ್ಯತೆ ಒಳಗೊಂಡಿರುವ, ಅತ್ಯಾಧುನಿಕ ತಂತ್ರಜ್ಞಾನಸಂಪನ್ನ ಮಹೇಂದ್ರಗಿರಿ, ಅತ್ಯಾಧುನಿಕ ಸಮರ ನೌಕೆ ನಿರ್ಮಾಣದಲ್ಲಿ ಆತ್ಮನಿರ್ಭರತೆಗೆ ಪ್ರಶಂಸಾರ್ಹ ದ್ಯೋತಕವಾಗಿದೆ ಎಂದು ರಕ್ಷಣಾ ಖಾತೆ ಹೇಳಿಕೆಯಲ್ಲಿ ತಿಳಿಸಿದೆ.

ಪೀಳಿಗೆವಾರು ಜಿಗಿತ: ಮಹೇಂದ್ರಗಿರಿ -ಯಾರ್ಡ್ 12654 ಎಂಡಿಎಸ್‌ಎಲ್‌ನಲ್ಲಿ ನಿರ್ಮಾಣಗೊಂಡ ಪ್ರಸ್ತುತ ದರ್ಜೆಯ ನಾಲ್ಕನೇ ನೌಕೆಯಾಗಿದೆ. ವಾರ್‌ಶಿಪ್ ಡಿಸೈನ್ ಬ್ಯೂರೋ (ಡಬ್ಲ್ಯೂಡಿಬಿ) ಮತ್ತು ವಾರ್‌ಶಿಪ್ ಓವರ್‌ಸೀಯಿಂಗ್ ಟೀಮ್ ಮುಂಬೈಯ ಮೇಲುಸ್ತುವಾರಿಯಲ್ಲಿ ನಿರ್ಮಾಣಗೊಂಡ ಮಹೇಂದ್ರಗಿರಿ ಸಮರ ನೌಕೆ ದೇಶೀ ಸಮರನೌಕೆ ವಿನ್ಯಾಸ, ನಿಗೂಢ ಕಾರ್ಯಾಚರಣೆ, ಶತ್ರುನಿಗ್ರಹ ಸಾಮರ್ಥ್ಯ ಇತ್ಯಾದಿಗಳಲ್ಲಿ ಪೀಳಿಗೆವಾರು ಜಿಗಿತವನ್ನು ಪ್ರತಿಬಿಂಬಿಸಿದೆ ಅಥವಾ ದಿಢೀರ್ ಮುನ್ನಡೆ ಸಾಧಿಸಿದೆ . ಸಮಗ್ರ ನಿರ್ಮಾಣ ಸಿದ್ಧಾಂತಾಧಾರಿತ ನೌಕೆಯನ್ನು ಅಂದಾಜಿತ ಕಾಲಮಿತಿಯೊಳಗೆ ನಿರ್ಮಿಸಿ ನೌಕಾಪಡೆಗೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



- ವರ್ಗ: ನೀಲಗಿರಿ-ವರ್ಗ (ಪ್ರಾಜೆಕ್ಟ್ 17ಎ ಸ್ಟೆಲ್ತ್ ಫ್ರಿಗೇಟ್)
- ಭಾರ: 6,600ರಿಂದ 6,700 ಟನ್‌ಗಳು
- ಉದ್ದ: 149 ಮೀ.
- ವೇಗ: ಪ್ರತಿ ಗಂಟೆಗೆ 51.856 ಕಿ.ಮೀ. (28 ನಾಟ್ಸ್)
- ಸಿಬ್ಬಂದಿ: 170ರಿಂದ 200
- ಸ್ವದೇಶಿ: ಶೇ.75ರಷ್ಟು ದೇಸಿ ಉಪಕರಣಗಳ ಬಳಕೆ
- ದಾಳಿ ಸಾಮರ್ಥ್ಯ: ಬ್ರಹ್ಮೋಸ್ ನಿಯೋಜನೆ, 300ರಿಂದ 500+ ಕಿ.ಮೀ. ದೂರದವರೆಗೆ
- ವಾಯು ರಕ್ಷಣಾ ವ್ಯವಸ್ಥೆ: ಬರಾಕ್-8 ವಾಯು ರಕ್ಷಣಾ ಕ್ಷಿಪಣಿಗಳ ನಿಯೋಜನೆ (70-100 ಕಿ.ಮೀ. ದೂರದವರೆಗೆ ಡ್ರೋನ್, ಕ್ಷಿಪಣಿ ಧ್ವಂಸಗೊಳಿಸುವ ಸಾಮರ್ಥ್ಯ)
- ಸಬ್‌ಮರೀನ್ ನಿರೋಧಕ ವ್ಯವಸ್ಥೆ: ಜಲಾಂತರ್ಗಾಮಿ ನಿರೋಧಕ ಟೋರ್ಪಿಡೋ ಕ್ಷಿಪಣಿಗಳ ನಿಯೋಜನೆ

ದೇಶದ ಕೆಲವೆಡೆಗಳಲ್ಲಿ ತಾಪಮಾನವೂ ಏರಿಕೆ: ಐಎಂಡಿ

ಮೇನಲ್ಲಿ ಸರಾಸರಿಗೂ ಹೆಚ್ಚು ಮಳೆ

ಹೊಸದಿಲ್ಲಿ: ಮೇ ತಿಂಗಳು ದೇಶದಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಿನ ಮಳೆಯಾಗಲಿದೆ. ಇದರೊಂದಿಗೆ ದೇಶದ ಕೆಲವು ಭಾಗಗಳಲ್ಲಿ ತಾಪಮಾನವೂ ಏರಿಕೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹವಾಮಾನ ನಿರೀಕ್ಷಿಸಿದೆ.

ಮಹಾರಾಷ್ಟ್ರ, ಗುಜರಾತ್, ಪೂರ್ವ ಕರಾವಳಿ ರಾಜ್ಯಗಳು, ಹಿಮಾಲಯದ ತಪ್ಪಲು ಪ್ರದೇಶಗಳ ಕೆಲವು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ಬಿಸಿಗಾಳಿ ಬೀಸುವ ಅಪಾಯವಿದೆ. ನೈಋತ್ಯ ಮುಂಗಾರು ಮೇ 14-16ರ ಅಂದಾಜು ಅಂಡಮಾನ್- ನಿಕೋಬಾರ್ ದ್ವೀಪ ಪ್ರವೇಶಿಸಲಿದ್ದು, ಮೇನಲ್ಲಿ ದೇಶದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನ ಕೂಡ ಸಾಮಾನ್ಯಕ್ಕಿಂತ ಅಧಿಕವಿರುವ ನಿರೀಕ್ಷೆ ಇದೆ ಎಂದು ಭಾರತ ಪವನಶಾಸ್ತ್ರ ಇಲಾಖೆ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದ್ದಾರೆ.

ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಕಡಿಮೆ: ಈಶಾನ್ಯ ಭಾರತದ ದಕ್ಷಿಣ ಭಾಗಗಳು, ದಕ್ಷಿಣ ಪ್ರಸ್ಥಭೂಮಿಯ ಅಚ್ಚುಕಟ್ಟಿನ ಪ್ರದೇಶಗಳು, ಮಧ್ಯ ಭಾರತದ ಕೆಲವು ಭಾಗಗಳ ಸಹಿತ, ವಾಯವ್ಯ ಭಾರತದ ಹಲವು ಪ್ರದೇಶಗಳಲ್ಲಿ ಈ ಬಾರಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಕಡಿಮೆ ಅನುಭವವಾಗಲಿದೆ. ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತ, ಪೂರ್ವ ಭಾರತದ ಕೆಲವು ಪ್ರದೇಶಗಳಲ್ಲಿ ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆ ಬೀಳಲಿದೆ. ಮಿಕ್ಕಂತೆ ದೇಶಾದ್ಯಂತ ಮಳೆಯ ಪ್ರಮಾಣ ಸಾಮಾನ್ಯಕ್ಕಿಂತ ಅಧಿಕವಿರುವುದು ಎಂದವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಸ್ತುತ ಸಮಭಾಜಕ ಪೆಸಿಫಿಕ್ ಮೇಲೆ ಎಲ್-ನಿನೋ ದಕ್ಷಿಣ ಪ್ರವಾಹವು ತಟಸ್ಥ ಸ್ಥಿತಿಯಲಿ ಎಲ್‌ನಿನೋ ಕಡೆ ತೆರಳುತ್ತಿದೆ ಅಥವಾ ಶಾಂತಸಾಗರದ ಮಧ್ಯ ಭಾಗದಲ್ಲಿ ನಿಯತ ನೆಲೆಯಲ್ಲಿ ಸಾಗರದ ಮೇಲ್ಮೈ ತಾಪಮಾನ ಏರತೊಡಗಿದೆ. ನೈಋತ್ಯ ಮುಂಗಾರಿನ ಸಂದರ್ಭ ಎಲ್-ನಿನೋ ಸ್ಥಿತಿಗತಿಗಳು ವಿಕಸನಗೊಳ್ಳುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯ ಮುನ್ಸೂಚನೆ ವ್ಯವಸ್ಥೆ ಅಂದಾಜಿಸಿದೆ. ಏಪ್ರಿಲ್‌ನಲ್ಲಿ ದಕ್ಷಿಣ ಪ್ರಸ್ಥಭೂಮಿ ಹೊರತು ದೇಶದ ಬಹುತೇಕ ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯದಿಂದ ಸಾಮಾನ್ಯಕ್ಕಿಂತ ಕಡಿಮೆ ಅನುಭವವಾಗಿದೆ. ದಕ್ಷಿಣ ಪ್ರಸ್ಥಭೂಮಿಯಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಅಧಿಕವಿದೆ ಎಂದು ಹೇಳಿಕೆ ತಿಳಿಸಿದೆ.

ಪೂರ್ವಭಾವಿ ಸಭೆಯಲ್ಲಿ ಎನ್.ರವಿಕುಮಾರ್ ಮಾತು

ಉ.ಕ ಅಭಿವೃದ್ಧಿಗೆ ಅಡಿಗಲ್ಲು ಇಟ್ಟವರೇ ಬಿಎಸ್‌ವೈ

ಕಲಬುರಗಿ: ರಾಜ್ಯದ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಕೊಡುವ ಮೂಲಕ ಹಾಗೂ ಮೊಟ್ಟ ಮೊದಲ ಬಾರಿಗೆ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಅಡಿಗಲ್ಲು ಇಟ್ಟವರು ಯಾರಾದರೂ ಇದ್ದರೆ ಅದು ರೈತ ನಾಯಕ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಎಂದು ವಿಧಾನ ಪರಿಷತ್ ಸದಸ್ಯ, ಪರಿಷತ್ತಿನ ಮುಖ್ಯ ಸಚೇತಕ ಎನ್.ರವಿಕುಮಾರ್ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ರೈತ ನಾಯಕ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಜನರ ಮಡಿಲಲ್ಲಿ 50 ವರ್ಷದ ಸಾರ್ಥಕ ಜೀವನ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದ ಆಗಿ ಹೋಗಿರುವ ಸಿಎಂಗಳ ಪೈಕಿ ಅತಿ ಹೆಚ್ಚು ಕಲಬುರಗಿಗೆ ಬಂದು ಹೋಗಿದ್ದು ಬಿಎಸ್‌ವೈ. ಬೆಂಗಳೂರು ಹೊರತು ಪಡಿಸಿ ಕಲಬುರಗಿಯಲ್ಲಿ 3 ಸಚಿವ ಸಂಪುಟ ಸಭೆ ನಡೆಸಿದ್ದು ಬಿಎಸ್‌ವೈ. ಮೊಟ್ಟ ಮೊದಲ ಬಾರಿಗೆ ಕಲಬುರಗಿ ಮಹಾನಗರ ಪಾಲಿಕೆಗೆ 100 ಕೋಟಿ ಅನುದಾನ ನೀಡಿದ್ದು ಇದೆ ಬಿ.ಎಸ್. ಯಡಿಯೂರಪ್ಪನವರು ಎಂದರು.



ಕಲಬುರಗಿಗೆ ಹಾಗೂ ಮಾಜಿ ಸಿಎಂ ಯಡಿಯೂರಪ್ಪಗೆ ಅವಿನಾಭಾವ ಸಂಬಂಧ. ಹೀಗಾಗಿ ಮುಂಬರುವ ಮೇ 9ರಂದು ನಡೆಯಲಿರುವ ಐತಿಹಾಸಿಕ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಲಬುರಗಿ ಜನ ಬಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಹೇಳಿದರು.

ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಶಾಸಕ ಅವಿನಾಶ್ ಜಾಧವ್, ಮಾಜಿ ಸಂಸದ ಡಾ.ಉಮೇಶ್ ಜಾಧವ್,ಮಾಜಿ ಸಚಿವ ಬಾಬುರಾವ್ ಚೌಹಾಣ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ವಿಭಾಗ ಪ್ರಭಾರಿ ಶರಣಪ್ಪ ತಳವಾರ, ಒಬಿಸಿ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರ, ಲಿಂಗರಾಜ ಬಿರಾದಾರ,ನಗರ ಪ್ರಧಾನ ಕಾರ್ಯದರ್ಶಿ ಉಮೇಶ್ ಪಾಟೀಲ್, ಮಹಾದೇವ ಬೆಳಮಗಿ, ಶಿವಯೋಗಿ ನಾಗೇನಹಳ್ಳಿ, ಧರ್ಮಣ್ಣ ಇಟಗಾ, ನಿತೀನ್ ಗುತ್ತೇದಾರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಗೌರಿ ಚಿಚಕೋಟಿ,ಡಾ.ಸುಧಾ ಹಾಲಕಾಯಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ರೈತ ಬಜೆಟ್ ಮಂಡಿಸಿದ ಹೆಗ್ಗಳಿಕೆ ಪಾತ್ರವಾಗಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಹಿನ್ನೆಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ತೆರಳಿ ರಾಜ್ಯ ಕಂಡ ಧೀಮಂತ ನಾಯಕನಿಗೆ ಗೌರವ ಸಲ್ಲಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ.

■ ಬಸವರಾಜ ಮತ್ತಿಮಡು, ರಾಜ್ಯ ಕಾರ್ಯದರ್ಶಿ, ಶಾಸಕ

ನವಿಲುಗಳ ಸಾವಿಗೆ ಎಚ್5ಎನ್1 ಕಾರಣ

ತುಮಕೂರು: ನವಿಲುಗಳ ಸಾವಿಗೆ H5N1 ವೈರಾಣು ಸೋಂಕು ಕಾರಣ ಎಂದು ದೃಢಪಟ್ಟಿದೆ. ಆದರೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಡಿಸಿ ಕಚೇರಿಯಲ್ಲಿ ನಡೆದ ತುರ್ತು ಸಭೆ ಬಳಿಕ ಮಾತನಾಡಿ, ಕಳೆದ ಏಪ್ರಿಲ್ 16 ರಂದು ಊರ್ಡಿಗೆರೆ ಹೋಬಳಿಯ ಕೋಳಿಹಳ್ಳಿ ಅರಣ್ಯ ಪ್ರದೇಶದಲ್ಲಿ ನವಿಲುಗಳ ಅಸಾಧಾರಣ ಸಾವು ಸಂಭವಿಸಿತ್ತು. ಮೃತ ನವಿಲು ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿತ್ತು. ಎಚ್5ಎನ್1 ವೈರಾಣು ಮಾರಣಾಂತಿಕ ಸೋಂಕುವಾದ್ದರಿಂದ ಸಾರ್ವಜನಿಕರೂ ಜಗೃತಿ ವಹಿಸುವ ಅಗತ್ಯವಿದೆ. ಯಾವುದಾದರೂ ಕೋಳಿ ಫಾರಂಗಳಲ್ಲಿ ಕೋಳಿಗಳು ಅಸಾಧಾರಣ ಸಾವು ಕಂಡುಬಂದಲ್ಲಿ ಸ್ಮಾರ್ಟ್ ಸಿಟಿ ಕಂಟ್ರೋಲ್ ರೂಮ್ ನಂಬರಿಗೆ ತಿಳಿಸಬೇಕು ಎಂದರು. ಶುಕ್ರವಾರ ಬೊಮ್ಮನಹಳ್ಳಿ ಕೋಳಿ ಫಾರಂನಲ್ಲಿ 15 ಕೋಳಿಗಳು ಮೃತಪಟ್ಟಿದ್ದು, ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಲಾಗಿದೆ. ರಾಜ್ಯ ಜಾಗೃತಿ ಸಮಿತಿ ಮಾರ್ಗದರ್ಶನದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಂಟೈನ್ಮೆಂಟ್ ವಲಯ ಎಂದು ಘೋಷಣೆ

ಪ್ರಯೋಗಾಲಯದ ವರದಿಗಳು, H5N1 ಸೋಂಕಿನಿಂದ ತುಮಕೂರಿನಲ್ಲಿ ನವಿಲುಗಳು ಮೃತಪಟ್ಟಿವೆ. ಸೋಂಕು ಹರಡುವುದನ್ನು ತಡೆಯಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಸೋಂಕು ಪೀಡಿತ ಪ್ರದೇಶಗಳ 10 ಕಿಮೀ ವ್ಯಾಪ್ತಿಯಲ್ಲಿ ಕಂಟೈನ್ಮೆಂಟ್ ವಲಯವನ್ನು ಘೋಷಿಸಲಾಗಿದೆ. ವಲಯದೊಳಗಿನ ಎಲ್ಲಾ ಕೋಳಿ ಸಾಕಣೆ ಕೇಂದ್ರಗಳಿಗೆ ಪ್ರೋಟೋಕಾಲ್ ಪ್ರಕಾರ ಎಚ್ಚರಿಕೆ ನೀಡಲಾಗಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕಿರುಸುದ್ದಿ

ಬಾಲ್ಯ ವಿವಾಹ ತಡೆದ ಅಕ್ಕಪಡೆ

ಬೆಳಗಾವಿ: ಇಲ್ಲಿನ ಶಹಪೂರದ ಶಾಸ್ತ್ರಿನಗರದಲ್ಲಿ 13 ವರ್ಷದ ಬಾಲಕಿಯ ಬಾಲ್ಯವಿವಾಹ ನಡೆಯುತ್ತಿರುವುದ ಬಗ್ಗೆ ಖಚಿತ ಮಾಹಿತಿ ಮೇರೆಗೆ ಮದುವೆ ಮಂಟಪಕ್ಕೆ ಅಕ್ಕ ಪಡೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದೊಂದಿಗೆ ಬಾಲಕಿಯ ಮನೆಗೆ ಭೇಟಿ ನೀಡಿ ಬಾಲಕಿಯರ ರಕ್ಷಣೆ ಮಾಡಿದ್ದಾರೆ. ಬಾಲಕಿಯನ್ನು ಮೂಡಲಗಿಯ ನಿವಾಸಿಯೊಂದಿಗೆ ಮದುವೆ ಮಾಡಲಾಗುತ್ತಿತ್ತು. ಸ್ಥಳಕ್ಕೆ ಭೇಟಿ ಮಾಡಿ ಬಾಲಕಿಯ ದಾಖಲಾತಿಗಳನ್ನು ಪರಿಶೀಲಿಸಿದಾಗ ಬಾಲಕಿಗೆ 13 ವರ್ಷ ಎಂದು ತಿಳಿದು ಬಂದಿದೆ. ತಕ್ಷಣ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ದಿಲೀಪ ಪಿ.ನಿಂಬಾಳ್ಕರ್ ನಿರ್ದೇಶನದಂತೆ ಅಕ್ಕಪಡೆಯ ಸಿಬ್ಬಂದಿ ಮಕ್ಕಳ ಸಹಾಯವಾಣಿ ತಂಡದವರು ಬಾಲ್ಯ ವಿವಾಹ ತಡೆಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಬಾಲಕಿಯನ್ನು ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಲಾಗಿದೆ. ಹಾಗೂ ಬಾಲ್ಯ ವಿವಾಹ ನಡೆಸುತ್ತಿದ್ದ ಬಾಲಕಿಯ ತಂದೆ ಹಾಗೂ ಮದುವೆ ಮಾಡಿಕೊಳ್ಳುತ್ತಿದ್ದ ವರನ ಮೇಲೆ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಗ್ರಾಹಕರಿಗೆ ವಿದ್ಯುತ್ ದರ ಏರಿಕೆ ಬಿಸಿ

ಬೆಂಗಳೂರು: ಬೆಂಗಳೂರು ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಗ್ರಾಹಕರಿಗೆ ವಿದ್ಯುತ್ ದರ ಏರಿಕೆಯ ಬಿಸಿ ತಟ್ಟಿದೆ. ಮೇ 1ರಿಂದ ಅನ್ವಯವಾಗುವಂತೆ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳ ಮಾಡಲಾಗಿದೆ. ಈಗಾಗಲೇ ಬೆಲೆ ಏರಿಕೆಯ ಬಿಸಿ ಅನುಭವಿಸುತ್ತಿರುವ ನಾಗರಿಕರಿಗೆ ವಿದ್ಯುತ್ ದರ ಏರಿಕೆ ಮತ್ತೊಂದು ಹೊಡೆತವಾಗಿದೆ. ಬೆಸ್ಕಾಂ ಸುಮಾರು 2000 ಕೋಟಿ ರೂ. ನಷ್ಟವನ್ನು ಅನುಭವಿಸಿತ್ತು. ಇದನ್ನು ಸರಿದೂಗಿಸುವ ಸಲುವಾಗಿ ವಿದ್ಯುತ್ ದರ ಹೆಚ್ಚಳಕ್ಕೆ ಕರ್ನಾಟಕ ವಿದ್ಯುತ್ ಶಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸಮ್ಮತಿಸಿತ್ತು. ಬೆಸ್ಕಾಂ ಅನುಭವಿಸುತ್ತಿರುವ ಆರ್ಥಿಕ ನಷ್ಟವೇ ಈ ದರ ಏರಿಕೆಗೆ ಪ್ರಮುಖ ಕಾರಣವಾಗಿದೆ. 2024–25ರ ಆರ್ಥಿಕ ವರ್ಷದಲ್ಲಿ ವಿದ್ಯುತ್ ಮಾರಾಟದಿಂದ 34,084 ಕೋಟಿ ರೂ. ಆದಾಯದ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ ವಾಸ್ತವವಾಗಿ ಸಂಗ್ರಹವಾದ ಆದಾಯ ಕೇವಲ 32,019 ಕೋಟಿ ರೂ. ಮಾತ್ರ. ಇದರಿಂದಾಗಿ ಬೆಸ್ಕಾಂಗೆ ಬರೊಬ್ಬರಿ 2,068 ಕೋಟಿ ರೂ. ಗಳಷ್ಟು ಆದಾಯದ ಕೊರತೆ ಉಂಟಾಗಿತ್ತು. ಈ ನಷ್ಟವನ್ನು ತುಂಬಿಕೊಳ್ಳಲು ಈಗ ಗ್ರಾಹಕರ ಮೇಲೆ ಹೊರೆ ಹಾಕಲಾಗುತ್ತಿದೆ. ಮೇ.1 ರಿಂದ ಅನ್ವಯವಾಗುವಂತೆ ಹೊಸ ದರಗಳು ಜಾರಿಗೆ ಬರಲಿವೆ ಎಂದು ಹಿಂದೆ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿತ್ತು. ಆದರಂತೆ ಪ್ರತಿ ಯೂನಿಟ್‌ಗೆ 56 ಪೈಸೆ ಹೆಚ್ಚಳವಾಗಲಿದೆ.

ಕೈ ಮಹಿಳಾ ವಿರೋಧಿ: ಜೋಶಿ

ಹುಬ್ಬಳ್ಳಿ: ಕಾಂಗ್ರೆಸ್ ಹಿಂದಿನಿಂದಲೂ ಮಹಿಳಾ ವಿರೋಧಿಯಾಗಿದೆ. ಮೋದಿ ಸರ್ಕಾರ ಮಹಿಳೆಯರ ಪರವಾಗಿದೆ. ಮುಂದಿನ ಅಧಿವೇಶನದಲ್ಲಿ ಪ್ರಧಾನಿ ಮೋದಿ ಅವರು ಮತ್ತೊಮ್ಮೆ ಮಹಿಳಾ ಮೀಸಲಾತಿ ಮಸೂದೆ ಮಂಡಿಸುವ ಕುರಿತು ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು. ರಾಜ್ಯ ಬಿಜೆಪಿ ಮಹಿಳಾ ಘಟಕ ಶುಕ್ರವಾರ ನಗರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ವಿರುದ್ಧದ ಜನಾಕ್ರೋಶ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹಿಂದೆ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿಯೂ ಮಹಿಳಾ ಮೀಸಲಾತಿ ಮಸೂದೆ ಮಂಡಿಸಲಾಗಿತ್ತು. ಆಗಲೂ ಅಂದಿನ ಕಾಂಗ್ರೆಸ್ ಅದಕ್ಕೆ ಸಹಕಾರ ನೀಡಿರಲಿಲ್ಲ. ಈಗಿನ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೊಮ್ಮೆ ಸ್ಪಷ್ಟನೆ

ಊಹಾಪೋಹ ಹರಡಬೇಡಿ

ಕಲಬುರಗಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ದಿನಾಂಕ ನಿಗದಿಯಾಗಿಲ್ಲ. ಈ ಕುರಿತು ಅಂತಿಮ ನಿರ್ಧಾರ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೊಮ್ಮೆ ಸ್ಪಷ್ಟಪಡಿಸಿದರು.



ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿರುವ ಮುಖ್ಯಮಂತ್ರಿ ಬದಲಾವಣೆಯ ಕುರಿತು ನಗರದ ಐವಾನ್–ಎ–ಶಾಹಿ ಪ್ರದೇಶದ ತಮ್ಮ ನಿವಾಸದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪದೇ ಪದೆ ಸಿಎಂ ಬದಲಾವಣೆ ಎಂದು ಕೇಳಿದರೆ ನಾನು ಏನು ಹೇಳಲಿ? ನಾನು ಒಂದು ಹೇಳಿದರೆ ನೀವು ಮತ್ತೊಂದನ್ನು ಬಿತ್ತರಿಸುತ್ತೀರಿ. ಈ ಬಗ್ಗೆ ಯಾರೂ ಊಹಾಪೋಹ ಹರಡಬೇಡಿ ಎಂದರು.

ನಾನು, ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕುಳಿತು ಒಟ್ಟಾಗಿ ನಿರ್ಧಾರ ಮಾಡುತ್ತೇವೆ. ಹೈಕಮಾಂಡ್ ಎಂದರೆ ನಾವೆಲ್ಲರೂ ಸೇರಿ ವಿಚಾರ ಮಾಡುವುದು ಎಂದೇ ಅರ್ಥ ಎಂದು ವಿವರಿಸಿದರು.

ಸಿಎಂ ಬದಲಾವಣೆಯ ಬಗ್ಗೆ ಇನ್ನು ದಿನಾಂಕ ನಿಗದಿಯಾಗಿಲ್ಲ. ಸಮಯ ನಿಗದಿಯಾಗದೆ ಈ ಕ್ಷಣದಲ್ಲೇ ಬದಲಾವಣೆ ಆಗುತ್ತದೋ ಅಥವಾ ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ. ನಾವು ತೆಗೆದುಕೊಳ್ಳುವ ಯಾವುದೇ ನಿರ್ಧಾರವು ಪಕ್ಷದ ಮೇಲಾಗುವ ಪರಿಣಾಮ ಮತ್ತು ರಾಜ್ಯದ ಹಿತದೃಷ್ಟಿಯನ್ನು ಆಧರಿಸಿರುತ್ತದೆ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಣಯ ಪಕ್ಷದ ಪ್ರತಿಯೊಬ್ಬರೂ ಬೆಂಬಲಿಸಬೇಕು. ಮಾಧ್ಯಮಗಳು ಸುಮ್ಮನೆ ತಪ್ಪು ಸಂದೇಶಗಳನ್ನು ಹರಡಬಾರದು ಎಂದು ಮನವಿ ಮಾಡಿದರು.

ಸಿಲಿಂಡರ್ ದರ ಏರಿಕೆಗೆ ಕಿಡಿ: ಇದೇ ವೇಳೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಯನ್ನು ತೀವ್ರವಾಗಿ ಖಂಡಿಸಿದರು. ಪ್ರಧಾನಿ ಮೋದಿಯವರು ಬೆಲೆ ಏರಿಕೆ ಮಾಡುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ, ಇಂದು ರಾತ್ರೋರಾತ್ರಿ ವಾಣಿಜ್ಯ ಸಿಲಿಂಡರ್ ದರವನ್ನು ಏರಿಕೆ ಮಾಡಲಾಗಿದೆ. ಇಷ್ಟೊಂದು ಬೆಲೆ ಏರಿಕೆಯಾಗುತ್ತಿದ್ದರೂ ಜನರು ಇನ್ನೂ ಅವರನ್ನು ಬೆಂಬಲಿಸುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಶಾಸಕ ಅಲ್ಲಮಪ್ರಭು ಪಾಟೀಲ್, ಎಂಎಲ್ಸಿಗಳಾದ ಜಗದೇವ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ ಉಪಸ್ಥಿತರಿದ್ದರು.

ಪ್ರಪಂಚಕ್ಕೆ ಯುದ್ಧ ಬೇಡ, ಬುದ್ಧನ ಶಾಂತಿ ಬೇಕು

ಜಾಗತಿಕ ಯುದ್ಧಗಳು ಮತ್ತು ಕಲಹಗಳಿಗೆ ಬುದ್ಧನ ಶಾಂತಿ ಮಾರ್ಗವೊಂದೇ ಪರಿಹಾರ. ಪ್ರಪಂಚಕ್ಕೆ ಇಂದು ಯುದ್ಧದ ದಾಹಕ್ಕಿಂತ ಬುದ್ಧನ ಅಷ್ಟಾಂಗ ಮಾರ್ಗಗಳ ಅವಶ್ಯಕತೆ ಹೆಚ್ಚಿದೆ. ಬುದ್ಧನ ಅಷ್ಟಾಂಗ ಮಾರ್ಗಗಳು ಇಂದಿಗೂ ವಿಶ್ವಕ್ಕೆ ಪ್ರೇರಣೆ. ಎರಡು ದೇಶಗಳ ನಡುವಿನ ಯುದ್ಧ ನೂರಾರು ರಾಷ್ಟ್ರಗಳ ಮೇಲೆ ಪರಿಣಾಮ ಬೀರುತ್ತಿದೆ. ಪ್ರಧಾನಿ ಮೋದಿಯವರು ನೆಹರೂ ಕಾಲದ ವಿದೇಶಾಂಗ ನೀತಿಯನ್ನು ಅರ್ಥಮಾಡಿಕೊಳ್ಳಬೇಕು. ಭಾರತವು ಯಾವುದೇ ಒಂದು ದೇಶ ಅಥವಾ ವ್ಯಕ್ತಿಯ ಪರ ನಿಲ್ಲದೆ, ತಟಸ್ಥ ನೀತಿ ಪಾಲಿಸುವುದು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಪಾದಿಸಿದರು.

ಕಾರ್ಮಿಕ ಕಾಯ್ದೆಗಳ ತಿರುಚುವಿಕೆ: ಆಕ್ರೋಶ

ವಿಶ್ವ ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕರ ಸ್ಥಿತಿಗತಿ ಬಗ್ಗೆ ಕಳವಳ ವ್ಯಕ್ತಪಡಿಸಿದ ಖರ್ಗೆ, ಡಾ.ಬಿ.ಆರ್.ಅಂಬೇಡ್ಕರ್ ಅವರು ರೂಪಿಸಿದ ಕಾರ್ಮಿಕ ಕಾನೂನುಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ತಿರುಚಿದೆ. ಕಾರ್ಮಿಕರ ರಕ್ಷಣಾ ಕವಚಗಳನ್ನು ನಾಶಪಡಿಸಿರುವುದರಿಂದ ಕಾರ್ಪೊರೇಟ್ ಕಂಪನಿಗಳು ಮನಬಂದಂತೆ ವರ್ತಿಸುತ್ತಿವೆ. ಇದರಿಂದಾಗಿ ಲಕ್ಷಾಂತರ ಕಾರ್ಮಿಕರ ಉದ್ಯೋಗ ಭದ್ರತೆ ಮರೀಚಿಕೆಯಾಗಿದೆ. ಯುಪಿಎ ಅವಧಿಯ 'ಮನರೇಗಾ' ಯೋಜನೆಯನ್ನು ಪ್ರಸ್ತಾಪಿಸಿದ ಅವರು, ಬಡವರ ಹಸಿವು ನೀಗಿಸಲು ತಂದ ಯೋಜನೆಯನ್ನು ಈ ಸರ್ಕಾರ ಹಳ್ಳ ಹಿಡಿಸುತ್ತಿದೆ. ಇಂತಹ ತಾರತಮ್ಯದ ನೀತಿಗಳಿಂದಲೇ ದೆಹಲಿ ಮತ್ತು ಹರಿಯಾಣದಲ್ಲಿ ಗಲಾಟೆಗಳು ಸಂಭವಿಸುತ್ತಿವೆ ಎಂದು ಟೀಕಿಸಿದರು.

ಬೆಲೆ ಹೆಚ್ಚಳಕ್ಕೆ ಹೊಣೆ ಯಾರು?: ಡಿಕೆಶಿ

ಬೆಂಗಳೂರು: ಕೇಂದ್ರ ಸರ್ಕಾರ ಜನಸಾಮಾನ್ಯರ ನೋವನ್ನು ಅರ್ಥ ಮಾಡಿಕೊಳ್ಳಬೇಕಿತ್ತು. ಎಲ್ಲಾ ಪದಾರ್ಥಗಳ ಬೆಲೆ ಆಕಾಶಕ್ಕೇರಿದೆ. ಆದಾಯ ಪಾತಳಕ್ಕೆ ಕುಸಿದಿದೆ. ಬೆಲೆ ಹೆಚ್ಚಳಕ್ಕೆ ಹೊಣೆ ಯಾರು? ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.



ಗಾಂಧಿನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಅಡುಗೆ ಅನಿಲ ಸಿಲಿಂಡರ್ ಬೆಲೆ ಹಾಗೂ ಇತರೆ ಅಗತ್ಯ ಸೇವೆಗಳ ಬೆಲೆ ಏರಿಕೆ ಕುರಿತ ವಾಣಿಜ್ಯ ಸಿಲಿಂಡರ್ ಬೆಲೆ ಹೆಚ್ಚಳದ ಹೊರೆ ಜನಸಾಮಾನ್ಯರ ಮೇಲೆಯೇ ಹೋಗುತ್ತದೆ. ಇದರಿಂದಾಗಿ ಅನೇಕ ಹೊಟೇಲ್‌ಗಳು ಬಂದ್ ಆಗಿವೆ.

ಇದರ ಬಗ್ಗೆ ಕೇಂದ್ರ ಸರ್ಕಾರ ಗಮನವಿಡಬೇಕಿತ್ತು. ಸರ್ಕಾರ ಜನರ ಮೇಲಿನ ಹೊರೆ ಇಳಿಸಬೇಕು. ಬೆಲೆ ಏರಿಕೆಯಿಲ್ಲದೇ ಜನಸಾಮಾನ್ಯ ನಿಶ್ಚಿಂತೆಯಿಂದ ಬದುಕುವ ದಾರಿಯನ್ನು ಕೇಂದ್ರ ಸರ್ಕಾರ ಮಾಡಬೇಕಿದೆ ಎಂದರು.

ಯುದ್ಧ ನಡೆಯುತ್ತಿರುವ ಹೊತ್ತಿನಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳನ್ನು ಮಿತ್ರ ರಾಷ್ಟ್ರಗಳ ಜತೆ ಉಳಿಸಿಕೊಳ್ಳಬೇಕಿರುವುದು ಅತ್ಯವಶ್ಯ. ಅನೇಕ ದೇಶಗಳು ಭಾರತವನ್ನು ಅನೇಕ ರೀತಿಯಲ್ಲಿ ಬೆಂಬಲಿಸಿವೆ. ನಮ್ಮ ವಿದೇಶಾಂಗ ನೀತಿ ವಿಫಲವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ

ಸಚಿವ ಸಂಪುಟ ಸಭೆಯಲ್ಲಿ ಅಲ್ಪಸಂಖ್ಯಾತರ ಪ್ರದೇಶ ಅಭಿವೃದ್ಧಿಗೆ 600 ಕೋಟಿ ರೂ. ಅನುದಾನ ಬಿಡುಗಡೆ ಬಗ್ಗೆ ಕೇಳಿದಾಗ, ಅದನ್ನು ಮಾತ್ರ ಯಾಕೆ ದೊಡ್ಡದಾಗಿ ಬಿಂಬಿಸುತ್ತೀರಿ? ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 18 ಸಾವಿರ ಕೋಟಿ ರೂ. ವೆಚ್ಚದಲ್ಲಿ ಬಿಡದಿ ಬಳಿ ಸ್ಯಾಟಲೈಟ್ ಟೌನ್‌ಶಿಪ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ. ಈ ವಿಚಾರ ಬಿಟ್ಟು ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಅನುದಾನ ಬಗ್ಗೆ ಮಾತ್ರ ಮಾತನಾಡುವುದೇಕೆ? ಎಂದು ತಿಳಿಸಿದರು.

ರವಿ ಕೋಟ ಅಧಿಕಾರ ಸ್ವೀಕಾರ

ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನ 22ನೇ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕ(ಸಿಎಂಡಿ)ರಾಗಿ ಉಡುಪಿ ಮೂಲದ ರವಿ ಕೋಟ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಬುಧವಾರ ನಿವೃತ್ತರಾದ ಡಾ. ಡಿ.ಕೆ. ಸುನೀಲ್ ಅವರಿಂದ ನೂತನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರವಿ ಕೆ. ಅವರು ಅಧಿಕಾರ ವಹಿಸಿಕೊಂಡರು. ರವಿ ಕೆ. ಅವರು ಅನಲಾಗ್ ಮತ್ತು ಡಿಜಿಟಲ್, ಉತ್ಪಾದನೆ ಹಾಗೂ ಎಲೆಕ್ಟ್ರಾನಿಕ್ಸ್‌ನಂತಹ ವಿವಿಧ ಕ್ಷೇತ್ರಗಳಲ್ಲಿ 30 ವರ್ಷಗಳ ಅನುಭವ ಹೊಂದಿದ್ದಾರೆ. ಇದಕ್ಕೂ ಮೊದಲು, ಅವರು ಎಚ್‌ಎಎಲ್‌ನಲ್ಲಿ ನಿರ್ದೇಶಕ (ಕಾರ್ಯಾಚರಣೆ)ರಾಗಿದ್ದರು. ಅಲ್ಲಿ ಅವರು ಕಾರ್ಯತಂತ್ರದ ಯೋಜನೆ ಮುನ್ನಡೆಸಿ ದ್ದಾರೆ ಮತ್ತು ಎಚ್‌ಎಎಲ್ ಮಹಾರತ್ನ ಸ್ಥಾನಮಾನ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ತೇಜಸ್ ಹಿಂದಿನ ಶಕ್ತಿ: ಅವರು ಎಲ್‌ಸಿಎ ತೇಜಸ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ, ಜನರಲ್ ಮ್ಯಾನೇಜರ್ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ (ಕಾರ್ಪೊರೇಟ್ ಯೋಜನೆ)ಸೇರಿದಂತೆ ಪ್ರಮುಖ ನಾಯಕತ್ವದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ತಮ್ಮ ಈ ಅಧಿಕಾರಾವಧಿಯಲ್ಲಿ ಅವರು ಎಚ್‌ಎಎಲ್‌ಗಾಗಿ ವಿವಿಧ ದೊಡ್ಡ ಒಪ್ಪಂದಗಳನ್ನು ಮಾಡಿಕೊಂಡರು. ಅವುಗಳಲ್ಲಿ ಭಾರತೀಯ ವಾಯುಪಡೆಗೆ 180 ಎಲ್‌ಸಿಎ ತೇಜಸ್‌ಗಳನ್ನು ಪೂರೈಸುವ ಒಪ್ಪಂದ, ಭಾರತೀಯ ಸೇನೆ, ಭಾರತೀಯ ವಾಯುಪಡೆಗೆ 156 ಪ್ರಚಂಡ್ ಹೆಲಿಕಾಪ್ಟರ್‌ಗಳನ್ನು ಪೂರೈಸುವ ಒಪ್ಪಂದ ಮಹತ್ವದ್ದಾಗಿದೆ. ವಾಯುಪಡೆಯಲ್ಲಿ ಎಲ್‌ಸಿಎ ತೇಜಸ್ ಫ್ಲೀಟ್‌ನ ಕಾರ್ಯಾಚರಣೆಗೆ ಅವರು ಕಾರಣರಾಗಿದ್ದಾರೆ.



ಎಚ್‌ಎಎಲ್ ಅನ್ನು ಜಾಗತಿಕವಾಗಿ ಸ್ಪರ್ಧಾತ್ಮಕ ಏರೋಸ್ಪೇಸ್ ಮತ್ತು ರಕ್ಷಣಾ ಉದ್ಯಮವಾಗಿ ಪರಿವರ್ತಿಸುವುದು ನನ್ನ ದೃಷ್ಟಿಕೋನವಾಗಿದೆ. ಇದು ನಾವೀನ್ಯತೆ, ಕೃತಕ ಬುದ್ಧಿಮತ್ತೆ (ಎಐ), ಕಾರ್ಯಾಚರಣೆಯ ಶ್ರೇಷ್ಠತೆ ಮತ್ತು ಜನರಿಂದ ನಡೆಸಲ್ಪಡುತ್ತದೆ.

■ ರವಿ ಕೆ., ಎಚ್‌ಎಎಲ್ ಸಿಎಂಡಿ

ದೇಶಕ್ಕೆ ಶ್ರಮಿಕರ ಕೊಡುಗೆ ಅಪಾರ

ಬೆಂಗಳೂರು: ದೇಶ ಅಭಿವೃದ್ಧಿಯ ಪಥದಲ್ಲಿ ಸಾಗಲು ಮಹತ್ವದ ಕೊಡುಗೆ ನೀಡುತ್ತಿರುವ ಶ್ರಮಿಕ ವರ್ಗದ ಕಲ್ಯಾಣಕ್ಕಾಗಿ ಕೇಂದ್ರದ ಬಿಜೆಪಿ ಸರ್ಕಾರ ಹಲವು ಯೋಜನೆಗಳನ್ನು ಜಾರಿ ಮಾಡಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗಲೂ ಕಾರ್ಮಿಕರ ಅನುಕೂಲಕ್ಕಾಗಿ ಸಾಕಷ್ಟು ನೆರವು ನೀಡಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ವಿಶ್ವಕಾರ್ಮಿಕರ ದಿನಾಚರಣೆ ಅಂಗವಾಗಿ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಬಿಜೆಪಿ ಅಸಂಘಟಿತ ಕಾರ್ಮಿಕರ ಪ್ರಕೋಷ್ಠದ ವತಿಯಿಂದ ಹಮ್ಮಿಕೊಂಡಿದ್ದ ಶ್ರಮಿಕ ದಿವಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ದೇಶ ಹಾಗೂ ಸಮಾಜಕ್ಕೆ ಶ್ರಮಿಕ ವರ್ಗ ನೀಡುತ್ತಿರುವ ಕೊಡುಗೆಯನ್ನು ಎಂದಿಗೂ ಮರೆಯಲಾಗದು. 2047ನೇ ಇಸವಿಗೆ ಭಾರತ ಅಭಿವೃದ್ಧಿಶೀಲ ರಾಷ್ಟ್ರವಾಗಿ ಪರಿವರ್ತನೆ ಮಾಡಲು ಶ್ರಮಿಕರ ಪಾತ್ರ ದೊಡ್ಡದು.

ಕಾರ್ಮಿಕರು ಇಲ್ಲದೇ ದೇಶ ನಿರ್ಮಾಣವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕ ವರ್ಗಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಇ–ಶ್ರಮ್ ಅನ್ನು ಆರಂಭಿಸಿ ಅಸಂಘಟಿತ ಕಾರ್ಮಿಕರ ಅಂಕಿ ಅಂಶ ಪಡೆದು ಅವರಿಗೆ ಪಿಂಚಣಿ, ಆರೋಗ್ಯ ಸೇರಿದಂತೆ ಹಲವು ರೀತಿಯ ಸಹಾಯ ಮಾಡಿದರು ಎಂದು ವಿವರಿಸಿದರು.



4 ಹೊಸ ಕಾರ್ಮಿಕ ಸಂಹಿತೆಗಳನ್ನು ರೂಪಿಸಿತು. ಇದರಿಂದ ಕಾರ್ಮಿಕರಿಗೆ ಸಾಕಷ್ಟು ಅನುಕೂಲವಾಗಿದೆ. ಎನ್‌ಡಿಎ ಸರ್ಕಾರದ ಈ ನಿರ್ಧಾರ ಮಹತ್ವದ್ದಾಗಿದೆ. ದೇಶದ ಅಭಿವೃದ್ಧಿಗೆ ಎಲ್ಲ ವರ್ಗದ ಶ್ರಮಿಕರ ಕೊಡುಗೆಯಿದೆ ಎಂಬುದನ್ನು ಅರಿತಿರುವ ಕೇಂದ್ರ ಸರ್ಕಾರ, ವಿಶ್ವಕರ್ಮ ಯೋಜನೆ ಜಾರಿಗೆ ತಂದಿದೆ. ಅವರ ಶ್ರಮಕ್ಕೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಬಿಜೆಪಿ ಸರ್ಕಾರ ಮಾಡುತ್ತಿದೆ. ಸರ್ಕಾರ ಜಾರಿ ಮಾಡಿದ ಸುಧಾರಣೆಗಳನ್ನು, ಕಲ್ಯಾಣ ಯೋಜನೆಗಳನ್ನು ಶ್ರಮಿಕರಿಗೆ ತಲುಪಿಸುವ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮಾಜಿ ಶಾಸಕ ಎಂ.ಡಿ.ಲಕ್ಷ್ಮಿನಾರಾಯಣ್, ದಕ್ಷಿಣ ಜಿಲ್ಲಾ ಉಪಾಧ್ಯಕ್ಷ ಅರುಣ್ ಸೋಮಣ್ಣ, ಕಾರ್ಮಿಕ ಪ್ರಕೋಷ್ಠದ ಸಂಚಾಲಕರು ಇದ್ದರು.

ಸಿಲಿಂಡರ್ ಬೆಲೆ ಏರಿಕೆ ವಿರುದ್ಧ ಹೆಬ್ಬಾಳ್ಕರ್ ಆಕ್ರೋಶ

ಬೆಳಗಾವಿ: ವಾಣಿಜ್ಯ ಗ್ಯಾಸ್ ಸಿಲಿಂಡರ್ ದರವನ್ನು ರೂ.2162ರಿಂದ ರೂ.3153ಕ್ಕೆ ಏರಿಸಿರುವುದು ಸೇರಿದಂತೆ ಒಟ್ಟು ರೂ. 991ಭಾರೀ ಏರಿಕೆ ಮಾಡಿದ್ದು, ಕೇಂದ್ರ ಸರ್ಕಾರದ ಜನವಿರೋಧಿ ನಿರ್ಧಾರವಾಗಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕೇಂದ್ರದ ವಿರುದ್ಧ ಗಂಭೀರವಾಗಿ ಖಂಡಿಸಿದರು.



ಈ ಪ್ರಮಾಣದ ಬೆಲೆ ಏರಿಕೆ ಹಿಂದೆ ಎಂದೂ ಕಂಡಿಲ್ಲ. ಕೆಲವು ರಾಜ್ಯಗಳ ಚುನಾವಣೆ ಮುಗಿದ ತಕ್ಷಣ ಇಂತಹ ಜನ ವಿರೋಧಿ ನಿರ್ಧಾರ ತೆಗೆದುಕೊಂಡಿರುವುದು ಜನರಿಗೆ ನೀಡಿದ ಭರವಸೆಗಳನ್ನೇ ಮರೆತಂತಾಗಿದೆ. ಇದು ನೇರವಾಗಿ ಹೋಟೆಲ್ ಉದ್ಯಮದ ಮೇಲೆ ಹಾಗೂ ಸಾಮಾನ್ಯ ಜನರ ಬದುಕಿನ ಮೇಲೆ ಗದಾ ಪ್ರಹಾರ ಕೇಂದ್ರವು ಪ್ರಾರಂಭಿಸಿದೆ ಎಂದರು.

ಹೋಟೆಲ್ ಮಾಲೀಕರು ಈಗಾಗಲೇ ಬೆಲೆ ಏರಿಕೆಯ ಒತ್ತಡವನ್ನು ಎದುರಿಸುತ್ತಿದ್ದಾರೆ. ಈ ನಿರ್ಧಾರದಿಂದ ಆಹಾರ ಪದಾರ್ಥಗಳ ಬೆಲೆ ಮತ್ತಷ್ಟು ಏರಿಕೆಯಾಗಲಿದೆ. ಅದರ ಪರಿಣಾಮವಾಗಿ ದಿನನಿತ್ಯ ಜೀವನ ನಡೆಸುವ ಸಾಮಾನ್ಯ ಜನರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಜನರ ಜೀವನೋಪಾಯವನ್ನು ಕಷ್ಟಕರಗೊಳಿಸುವ ಬದಲು, ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಆದರೆ, ಚುನಾವಣೆಯ ಬಳಿಕ ಜನರಿಗೆ ಮತ್ತೊಮ್ಮೆ ಮೋಸ ಮಾಡುತ್ತಿರುವುದು ಸ್ಪಷ್ಟವಾಗಿದೆ. ತಕ್ಷಣವೇ ಈ ಅನ್ಯಾಯಕರ ಬೆಲೆ ಏರಿಕೆಯನ್ನು ಹಿಂಪಡೆಯಬೇಕು ಹಾಗೂ ಜನಪರ ನೀತಿಗಳನ್ನು ಅನುಸರಿಸಬೇಕು ಎಂದು ಸಚಿವೆ ಹೆಬ್ಬಾಳ್ಕರ್ ಆಗ್ರಹಿಸಿದ್ದಾರೆ.

ಪೆಂಡಾಲ್ ನಿರ್ಮಾಣ ಕಾಮಗಾರಿ ಪರಿಶೀಲಿಸಿದ ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ

ಅಭಿಮಾನಿಗಳಿಂದ ಯಡಿಯೂರಪ್ಪ ಅಭಿಮಾನೋತ್ಸವ

ಚಿತ್ರದುರ್ಗ: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ರಾಜ್ಯದ ಮೂಲೆ ಮೂಲೆಗಳಿಂದ ಬಿಎಸ್‌ವೈ ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ ಎಂದು ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಹೇಳಿದರು.

ಬಿ.ಎಸ್. ಯಡಿಯೂರಪ್ಪನವರು 50 ವರ್ಷಗಳ ಸುದೀರ್ಘ ರಾಜಕೀಯ ಜೀವನ ಪೂರೈಸಿದ ಹಿನ್ನೆಲೆಯಲ್ಲಿ ನಗರದ ಹೊರವಲಯದ ಶಿವಶರಣ ಮಾದಾರ ಚನ್ನಯ್ಯ ಗುರು ಪೀಠದ ಪಕ್ಕದಲ್ಲಿನ ಮೈದಾನದಲ್ಲಿ ಹಮ್ಮಿಕೊಂಡಿರುವ ಬಿ.ಎಸ್.ವೈ. ಅಭಿಮಾನೋತ್ಸವದ ಪೆಂಡಾಲ್ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಅವರು ಮಾತನಾಡಿದರು.

ಬಿ.ಎಸ್.ಯಡಿಯೂರಪ್ಪನವರು 50 ವರ್ಷ ರಾಜಕೀಯ ಜೀವನದಲ್ಲಿ ಬಡವರು, ದೀನದಲಿತರು, ರೈತರು, ಮಹಿಳೆಯರು, ಮಕ್ಕಳ ಪರವಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಪಕ್ಷಾತೀತವಾಗಿ ಅಪಾರ ಸಂಖ್ಯೆಯ ಅಭಿಮಾನಿಗಳಿದ್ದಾರೆ. ಸುಮಾರು 10 ಲಕ್ಷದಷ್ಟು ಜನ ಕಾರ್ಯಕ್ರಮಕ್ಕೆ ಆಗಮಿಸುವ ನಿರೀಕ್ಷೆ ಇದೆ. ಹಿಂದೆಂದೂ ನಡೆದಿರದಂತಹ ಕಾರ್ಯಕ್ರಮ ಇದಾಗಲಿದೆ ಎಂದು ತಿಳಿಸಿದರು.



ಇದೊಂದು ಪಕ್ಷಾತೀತ ಕಾರ್ಯಕ್ರಮ. ಇದರಲ್ಲಿ ಯಾವುದೇ ಪಕ್ಷದ ಗುರುತು ಇರುವುದಿಲ್ಲ. ಸಾವಿರಾರು ಸಂಖ್ಯೆಯ ವಿವಿಧ ಮಠಾಧೀಶರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಕಳೆದ ಒಂದು ವಾರದಿಂದ ಎಲ್ಲ ಅಗತ್ಯ ಸಿದ್ಧತೆಗಳು ನಡೆಯುತ್ತಿವೆ. ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಅವರು ಕಾರ್ಯಕ್ರಮದ ಸಿದ್ಧತೆಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎಂದರು. ಬಿ.ಎಸ್.ವೈ. ಅಭಿಮಾನೋತ್ಸವದ ಉಸ್ತುವಾರಿ ಹಾಗೂ ಬಿಜೆಪಿ ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ ಮಾತನಾಡಿ, ಕಾರ್ಯಕ್ರಮಕ್ಕಾಗಿ ಸುಮಾರು 25 ಲಕ್ಷ ಚದರ ಮೀಟರ್ ಪೆಂಡಾಲ್ ನಿರ್ಮಾಣ ಮಾಡಲಾಗುತ್ತಿದೆ. ಇದು ಸಮಾವೇಶವಲ್ಲ, ಉತ್ಸವದ ರೀತಿ ನಡೆಯಬೇಕು. ಈ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ರಾಜ್ಯದ ವಿವಿಧೆಡೆಗಳಿಂದ ಬರುವ ಜನರಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಲಾಗುವುದು. ಬೆಂಗಳೂರು ಭಾಗದ ಶಾಸಕರು ಊಟದ ವ್ಯವಸ್ಥೆ ಜವಾಬ್ದಾರಿ ತೆಗೆದು ಕೊಂಡಿದ್ದಾರೆ. ಕುಡಿಯುವ ನೀರು, ಮಜ್ಜಿಗೆ ವ್ಯವಸ್ಥೆ ಮಾಡಲಾಗುವುದು. ಬಿಸಿಲಿನ ಝಳದಿಂದ ಜನರನ್ನು ರಕ್ಷಿಸಲು ಹೈದ್ರಾಬಾದನಿಂದ ವಿಶೇಷ ಫ್ಯಾನ್‌ಗಳನ್ನು ತರಿಸಲಾಗುತ್ತಿದೆ ಎಂದು ಹೇಳಿದರು. ಇದೇ ವೇಳೆ ಜಿಲ್ಲಾ ರಕ್ಷಣಾಧಿಕಾರಿ ರಂಜಿತ್ ಕುಮಾರ್ ಬಂಡಾರು ಸ್ಥಳಕ್ಕೆ ಆಗಮಿಸಿ ಭದ್ರತೆ ಕುರಿತು ಸ್ಥಳ ಪರಿಶೀಲನೆ ಮಾಡಿದರು. ಬಿಜೆಪಿ ವಿಭಾಗ ಸಹಪ್ರಭಾರಿ ಎ. ಮುರುಳಿ, ಜಿಲ್ಲಾಧ್ಯಕ್ಷ ಡಾ. ಸಿದ್ಧಾರ್ಥ ಗುಂಡಾರ್ಪಿ, ಬಾಳೇಕಾಯಿ ರಾಮದಾಸ್, ಗ್ರಾಮಾಂತರ ಅಧ್ಯಕ್ಷ ನಾಗರಾಜ್, ಸಂಪತ್‌ಕುಮಾರ್, ಚಾಲುಕ್ಯ ನವೀನ್, ದಗ್ಗೆ ಶಿವಪ್ರಕಾಶ್ ಮತ್ತಿತರರಿದ್ದರು.

ಎಲ್ಲ ಅಗತ್ಯ ಸಿದ್ಧತೆ

ಬಿ.ಎಸ್.ವೈ. ಅಭಿಮಾನೋತ್ಸವದ ಯಶಸ್ಸಿಗೆ ಶಕ್ತಿಮೀರಿ ಶ್ರಮಿಸಲಾಗುವುದು. ಯಾವುದೇ ಚಿಕ್ಕ ಲೋಪದೋಷವಾಗದಂತೆ ಎಚ್ಚರವಹಿಸಬೇಕೆಂಬುದು ನಮ್ಮ ಬಯಕೆ. ಈ ನಿಟ್ಟಿನಲ್ಲಿ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪೆಂಡಾಲ್ ಸುತ್ತಮುತ್ತ ಒಂದು ಕಿ.ಮೀ. ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಆಯಾ ಭಾಗದಿಂದ ಬರುವ ವಾಹನಗಳಿಗೆ ತಕ್ಕಂತೆ ವ್ಯವಸ್ಥೆ ಮಾಡಲಾಗುವುದು. ಹಬ್ಬದ ರೀತಿಯಲ್ಲಿ ಕಾರ್ಯಕ್ರಮದ ಸಂಭ್ರಮ ಇರುತ್ತದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ ತಿಳಿಸಿದರು.


ಪ್ರಾಚೀನ ಭಾರತೀಯ ಸಮುದಾಯಗಳ ಅಧ್ಯಯನ

ಮಸ್ಕಿ ಆಯ್ಕೆ ಮಾಡಿದ ಕೇಂದ್ರ

ಸಿದ್ದಯ್ಯ ಹೆಸರೂರು

ಮಸ್ಕಿ: ಸಂಸ್ಕೃತಿ ಸಚಿವಾಲಯದ ಆಶ್ರಯದಲ್ಲಿ ಕಾರ್ಯ ನಿರ್ವಹಿಸುವ ಆಂಥ್ರೊ ಪೊಲಾಜಿಕಲ್ ಸರ್ವೇ ಆಫ್ ಇಂಡಿಯಾ (ಎಎನ್‌ಎಸ್‌ಐ) ಮೂಲಕ ಈ ಅಧ್ಯಯನ ವನ್ನು ಕೈಗೊಳ್ಳಲಾಗುತ್ತಿದೆ.

ಪ್ರಾಚೀನ ಭಾರತೀಯ ಸಮುದಾಯಗಳ ಮೂಲದ ಬಗ್ಗೆ ವಿರೋಧಾಭ್ಯಾಸ ಸಿದ್ಧಾಂತಗಳ ಮಧ್ಯೆ, ದಕ್ಷಿಣ ಏಷ್ಯಾದ ಜನಸಂಖ್ಯೆಯ ಇತಿಹಾಸವನ್ನು ''ನಿರ್ಣಾಯಕವಾಗಿ'' ಕಂಡುಹಿಡಿಯಲು ಪ್ರಾಚೀನ ಮತ್ತು ಆಧುನಿಕ ಜೀನೋಮಿಕ್ಸ್ ಅನ್ನು ಬಳಸಿಕೊಂಡು ಸಮಗ್ರ ವೈಜ್ಞಾನಿಕ ಅಧ್ಯಯನವನ್ನು ಸರ್ಕಾರ ಕೈಗೊಂಡಿದೆ. 'ಪ್ರಾಚೀನ, ಆಧುನಿಕ ಜೀನೋಮಿಕ್ಸ್ ಬಳಸಿ ದಕ್ಷಿಣ ಏಷ್ಯಾದ ಜನಸಂಖ್ಯೆಯ ಇತಿಹಾಸದ ಪುನರ್ ನಿರ್ಮಾಣ' ಎಂಬ ಶೀರ್ಷಿಕೆ ಈ ಯೋಜನೆಯು ಭಾರತ, ಪಾಕಿಸ್ತಾನದ ವಿವಿಧ ಪುರಾತತ್ವ ಸ್ಥಳಗಳಿಂದ ಸಂಗ್ರಹಿಸಿದ 300 ಪ್ರಾಚೀನ ಅಸ್ಥಿಪಂಜರದ ಅವಶೇಷಗಳನ್ನು ಅಧ್ಯಯನ ಮಾಡುತ್ತದೆ. ಇವುಗಳಲ್ಲಿ ಸಿಂಧೂ ಕಣಿವೆ ನಾಗರೀಕತೆಯ ತಾಣಗಳಾದ ಹರಪ್ಪ, ಮೊಹೆಂಜೊ–ದಾರೊ (ಈಗ ಪಾಕಿಸ್ತಾನದಲ್ಲಿದೆ). ಬುರ್ಜಾಹೋಮ್ (ಜಮ್ಮು, ಕಾಶ್ಮೀರ), ನಾಗಾರ್ಜುನಕೊಂಡ (ಆಂಧ್ರಪ್ರದೇಶ), ಮಸ್ಕಿ (ಕರ್ನಾಟಕ), ರೋಪರ್ (ಪಂಜಾಬ್) ಮತ್ತು ಲೋಥಾಲ್ (ಗುಜರಾತ್) ಗಳಲ್ಲಿ ಸ್ವಾತಂತ್ರ್ಯದ ಮೊದಲು ಮತ್ತು ನಂತರ ನಡೆಸಿದ ಉತ್ಖನನದ ಸಮಯದಲ್ಲಿ ಸಂಗ್ರಹಿಸಿದ ಅವಶೇಷಗಳು ಸೇರಿವೆ.



ಅಸ್ಥಿಪಂಜರದ ಅವಶೇಷಗಳನ್ನು 1922 ಮತ್ತು 1958ರ ನಡುವೆ ಭಾರತೀಯ ಪುರಾತತ್ವ ಸಮೀಕ್ಷೆಯು ಉತ್ಖನನ ಮಾಡಿತು ಮತ್ತು ನಂತರ ಎಎನ್‌ಎಸ್‌ಐಗೆ ವಹಿಸಲಾಯಿತು. ಯಾವ ಹಂತದಲ್ಲಿದೆ ಎಂಬುದನ್ನು ಸಂಬಂಧಿಸಿದ ಅಧಿಕಾರಿಗಳೇ ತಿಳಿಸಬೇಕಾಗಿದೆ.

ಮೇ 4ಕ್ಕೆ ಉಪಚುನಾವಣೆಯ ಫಲಿತಾಂಶ | ಎಲ್ಲರ ಚಿತ್ತ ಫಲಿತಾಂಶದತ್ತ

ಅದೃಷ್ಟ ಲಕ್ಷ್ಮೀ ಯಾರ ಕೊರಳಿಗೆ?

▶ ಜಗದೀಶ ಎಂ.ಗಾಣಿಗೇರ

◆ **ಬಾಗಲಕೋಟೆ:** ರಾಜ್ಯದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆಯ ಫಲಿತಾಂಶ ಹೊರಬೀಳಲು ಎರಡು ದಿನ ಬಾಕಿ ಇದ್ದು, ಈಗ ಅದೃಷ್ಟದ ಫಲಿತಾಂಶ ಯಾರ ಕೊರಳಿಗೆ ಬೀಳಲಿದೆ ಎಂಬುದು ಮಾತ್ರ ಮೇ 4ರತ್ತ ಎಲ್ಲರ ಚಿತ್ತ ನೆಟ್ಟಿದೆ.





ಬಾಗಲಕೋಟೆಯ ಉಪಚುನಾವಣೆಯಲ್ಲಿ ಬಿಜೆಪಿಯಿಂದ ವೀರಣ್ಣ ಚರಂತಿಮಠ, ಕಾಂಗ್ರೆಸ್ ಪಕ್ಷದಿಂದ ದಿ.ಶಾಸಕ ಎಚ್.ವೈ.ಮೇಟಿಯವರ ಪುತ್ರ ಉಮೇಶ ಮೇಟಿಯವರು ಸ್ಪರ್ಧೆ ಮಾಡಿದ್ದು, ಫಲಿತಾಂಶ ಯಾರ ಪರ ಬರಲಿದೆ ಎಂಬುದು ಮಾತ್ರ ಲೆಕ್ಕಾಚಾರ ಬಲು ಜೋರಾಗಿ ನಡೆದಿದೆ. ಸೋಮವಾರ ಅದೃಷ್ಟ ಯಾರ ಪಾಲಾಗಲಿದೆ ಎಂಬುದು ಅಭ್ಯರ್ಥಿಗಳು ಕಾತೂರದಿಂದ ಕಾಯುತ್ತಿದ್ದಾರೆ.

ಬಾಗಲಕೋಟೆಯು ಬಿಜೆಪಿಯ ಭದ್ರಕೋಟೆ ಎಂದು ಪ್ರಸಿದ್ಧಿ ಪಡೆದಿರುವ ಬೆನ್ನಲ್ಲೇ ಎರಡು ಬಾರಿ ಮೇಟಿಯವರು ಕೂಡ ಕೋಟೆಯನ್ನು ಭೇದಿಸಿದ್ದರೂ ಎರಡು ಬಾರಿ ಬಿಜೆಪಿಯ ವೀರಣ್ಣ ಚರಂತಿಮಠ ಶಾಸಕರಾಗಿ ವಿಧಾನಸಭೆಯ ಪ್ರವೇಶ ಮಾಡಿದ್ದರು. ಈಗ ಇವರ ವಿರುದ್ಧ ಮೊದಲ ಬಾರಿ ಸ್ಪರ್ಧೆ ಮಾಡಿರುವ ಕಾಂಗ್ರೆಸ್ ಪಕ್ಷದ ಉಮೇಶ ಮೇಟಿಯವರಿಗೆ ಈ ಬಾರಿಯ ಚುನಾವಣೆಯ ಫಲಿತಾಂಶ ಯಾವ ರೀತಿ ನೀಡುತ್ತಿದೆ ಎಂಬುದು ಮಾತ್ರ ನಿಗೂಢವಾಗಿದೆ.

> ಬಾಗಲಕೋಟೆಯ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರು ಅಧಿಕ ಮತಗಳ ಅಂತರದಿಂದ ಗೆಲ್ಲುತ್ತಾರೆ. ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ನಮ್ಮ ಪರವಾಗಿ ಮತದಾನವಾಗಿದೆ ನಮ್ಮ ಗೆಲುವು ನಿಶ್ಚಿತ.
> ■ ರಾಜು ನಾಯ್ಕರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ

> ಸರ್ಕಾರದ ಗ್ಯಾರಂಟಿ ಯೋಜನೆ, ನಮ್ಮ ಪಕ್ಷದ ಶಾಸಕರಾಗಿದ್ದ ಎಚ್.ವೈ. ಮೇಟಿಯವರು ಕ್ಷೇತ್ರದಲ್ಲಿ ಮಾಡಿದ ಕೆಲಸ ನೋಡಿ ಕ್ಷೇತ್ರದ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದು ಮೇ 4ಕ್ಕೆ ನಮ್ಮ ಪರ ಫಲಿತಾಂಶ ಬರಲಿದೆ.
> ■ ನಾಗರಾಜ ಹದ್ಲಿ, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ

ಕಳೆದ ಒಂದು ತಿಂಗಳ ಹಿಂದೆ ಬಾಗಲಕೋಟೆಯ ಉಪಚುನಾವಣೆಗೆ ಮತದಾರರು ಮುದ್ರೆ ಒತ್ತಿದ್ದು ಮತಪೆಟ್ಟಿಗೆಯಲ್ಲಿ ಅಭ್ಯರ್ಥಿಗಳ ಭವಿಷ್ಯ ಭದ್ರವಾಗಿದೆ. ಆದರೆ, ಮೇ 4ರಂದು ನಡೆಯುವ ಮತದಾನದ ಎಣಿಕೆಯಲ್ಲಿ ಮತಪೆಟ್ಟಿಗೆಯಲ್ಲಿರುವ ಭವಿಷ್ಯ ಯಾರನ್ನು ವಿಧಾನಸಭೆಗೆ ಹೋಗುತ್ತಾರೆ ಎಂಬುದು ಮಾತ್ರ ತಿಳಿಯಲು ಇನ್ನೂ ಎರಡು ದಿನ ಕಾಯಬೇಕಾಗಿದೆ.

ಕಳೆದ ಒಂದು ತಿಂಗಳ ಹಿಂದೆ ಮತದಾನವಾಗಿದ್ದರೂ ನಿತ್ಯ ಒಂದಿಲ್ಲೊಂದು ಕಡೆ ಬಾಗಲಕೋಟೆಯಲ್ಲಿ ಅಭ್ಯರ್ಥಿಗಳ ಪರ ಎರಡೂ ಪಕ್ಷದಲ್ಲಿ ಲೆಕ್ಕಾಚಾರ ನಡೆದೇ ಇದೆ. ಕಾರ್ಯಕ್ರಮ, ಸಭೆ ಸಮಾರಂಭಗಳಲ್ಲಿ ಸೇರುವ ಕಾರ್ಯಕರ್ತರು, ಮುಖಂಡರು ಯಾವ ಊರಿನಲ್ಲಿ ಎಷ್ಟು ಬಂದಿದೆ. ನಗರದಲ್ಲಿ ಯಾವ ಕಡೆ ನಮ್ಮ ಪಕ್ಷದ ಪರ ಮತಗಳು ಬಂದಿರಬಹುದು, ಇನ್ನೂ ಗ್ರಾಮೀಣ ಭಾಗದಲ್ಲಿ ನಮ್ಮ ಪಕ್ಷ ಹಿಡಿಯಬಹುದು ಎಂಬೆಲ್ಲಾ ಲೆಕ್ಕಾಚಾರ ಬಲು ಜೋರಾಗಿ ನಡೆದಿದೆ.

ಬಾಗಲಕೋಟೆ ವಿಧಾನಸಭೆಯ ಮತಕ್ಷೇತ್ರದಲ್ಲಿ 1,26,999, ಪುರುಷ, 1,32,775 ಮಹಿಳಾ ಮತದಾರರು ಹಾಗೂ 23 ಇತರೆ ಸೇರಿ 2,59,797 ಮತದಾರರು ಇದ್ದರು. ಇದರಲ್ಲಿ 68.73ರಷ್ಟು ಮತದಾನವಾಗಿದ್ದು, ಕ್ಷೇತ್ರದಲ್ಲಿ ಹೆಚ್ಚು ಮಹಿಳೆಯರು ಮತದಾನ ಮಾಡಿದ್ದು ಮಹಿಳಾ ಮತದಾರರು ಯಾರಿಗೆ ಆಶೀರ್ವಾದ ಮಾಡಿದ್ದಾರೆ ಎಂಬುದು ಮಾತ್ರ ಕುತೂಹಲ ಕೆರಳಿಸಿದೆ.

ಭವಿಷ್ಯದ ಪ್ರಶ್ನೆ : ಬಾಗಲಕೋಟೆಯ ಉಪಚುನಾವಣೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಭವಿಷ್ಯದ ಚುನಾವಣೆಯಾಗಿದೆ. ಇನ್ನೂ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರಿಗೂ ಕೂಡ ಈ ಚುನಾವಣೆ ಪ್ರತಿಷ್ಠೆಯಾಗಿದ್ದು ಯಾರು ಗೆಲ್ಲುತ್ತಾರೆ ಎಂಬುದು ಮಾತ್ರ ಮೇ 4ಕ್ಕೆ ಅಂತಿಮವಾಗಿ ಹೊರಬೀಳಲಿದೆ. ಇನ್ನೂ ನಮ್ಮ ಪಕ್ಷದ ನಾಯಕ ಗೆಲ್ಲುವುದು, 10 ಸಾವಿರ, 20 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ಆಯಾ ಪಕ್ಷದ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ಗಳನ್ನು ಬಿಡುಗಡೆ ಮಾಡುತ್ತಿರುವುದು ನಿತ್ಯ ಸಾಮಾನ್ಯವಾಗಿದೆ.

ದಿಗಂತ ವಿಶೇಷ

ಗಣಿ ಮತ್ತು ಭೂವಿಜ್ಞಾನ ಇಲಾಖೆ ಜಾಣ ಕುರುಡುತನ

ನಾಗಾವಿ, ಕಳಸಾಪುರದಲ್ಲಿ ಮತ್ತೆ ಗಣಿಗಾರಿಕೆ

▶ ರುದ್ರಗೌಡ ಪಾಟೀಲ



◆ **ಗದಗ:** ಜಿಲ್ಲೆಯಾದ್ಯಂತ ಅನುಮತಿ ಪಡೆಯದೇ ಜಿಲ್ಲೆಯಲ್ಲಿ ಅಕ್ರಮ ಮಣ್ಣು ಗಣಿಗಾರಿಕೆ ನಡೆಸುತ್ತಿರುವ ಅಡ್ಡೆಗಳೇ ಅಧಿಕವಾಗಿವೆ. ಇದರಲ್ಲಿ ಕಳಸಾಪುರ ಮತ್ತು ನಾಗಾವಿ ಗ್ರಾಮದ ವ್ಯಾಪ್ತಿ, ಆರ್‌ಟಿಓ ಕಚೇರಿ ಮುಂಭಾಗದಲ್ಲಿ ಅನುಮತಿ ಪಡೆಯದೇ ಮಣ್ಣು ಗಣಿಗಾರಿಕೆ ನಡೆಯುತ್ತಿದೆ. ಹೀಗಾಗಿ ಸರ್ಕಾರದ ಬೊಕ್ಕಸಕ್ಕೆ ಕೊಟ್ಯಂತರ ರೂ.ನಷ್ಟವಾಗುತ್ತಿದೆ. ಈ ಬಗ್ಗೆ ತಿಳಿದೂ ತಿಳಿಯದಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಜಾಣ ಕುರುಡುತನ ಅನುಸರಿಸುತ್ತಿದ್ದಾರೆ.

ಇಲಾಖೆಯಿಂದ ಅನುಮತಿ ಪಡೆಯದೇ ಅಂದಾಜು 30 ಎಕರೆಗೂ ಹೆಚ್ಚು ಗುಡ್ಡ ಈಗಾಗಲೇ ಮಾಯವಾಗಿದೆ. ಬಳ್ಳಾರಿಯನ್ನೇ ಹೋಲುವಂತೆ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ ನಮಗೆ ಗೊತ್ತೇ ಇಲ್ಲದಂತೆ ಇಲಾಖಾ ಅಧಿಕಾರಿಗಳು ನಡೆದುಕೊಳ್ಳುತ್ತಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ.

ಈ ಮೊದಲು ನೆಪಮಾತ್ರಕ್ಕೆ ಅನುಮತಿ ಪಡೆದು ಭೂಮಿ ಸಮತಟ್ಟು ನೆಪದಲ್ಲಿ ಮಣ್ಣು ಗಣಿಗಾರಿಕೆ ನಡೆಸುತ್ತಿದ್ದರು. ಈಗ ಅನುಮತಿ ಪಡೆಯದೇ ಕಪ್ಪತಗುಡ್ಡಕ್ಕೆ ಹೊಂದಿಕೊಂಡಿರುವ ನಾಗಾವಿ ಮತ್ತು ಕಳಸಾಪೂರ ಗ್ರಾಮದ ಗುಡ್ಡಗಳಲ್ಲಿ ಮೈನಿಂಗ್ ಆರಂಭಿಸಿದ್ದಾರೆ. ಮಣ್ಣು ಗಣಿಗಾರಿಕೆ ನಡೆಸುವ ಸ್ಥಳದಲ್ಲಿ ಬೆಳೆದ ಗಿಡಮರಗಳ ಮಾರಣಹೋಮವು ನಡೆದಿದೆ.

ಅರಣ್ಯ ಇಲಾಖೆ ಸಹ ಈ ಬಗ್ಗೆ ಮೌನ ವಹಿಸಿದ್ದು, ಅನುಮಾನ ಮುಡುವಂತೆ ಮಾಡಿದೆ. ಕಳಸಾಪುರ, ನಾಗಾವಿ ಗ್ರಾಮದಲ್ಲಿ ಕೆಲವರು ರಾಜ್ಯಪಾಲರ ಹೆಸರಿನಲ್ಲಿ ಇರುವ ಭೂಮಿಯನ್ನೇ ನುಂಗಿದ್ದಾರೆ. ಮಣು ಗಣಿಗಾರಿಕೆಯಿಂದ ಭೂಗಳ್ಳರಿಗೆ ಕೋಟ್ಯಂತರ ರೂ.ಲಾಭ ಸಿಗುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂ.ನಷ್ಟವಾಗುತ್ತಿದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಈ ಹಿಂದೆ ದಾಳಿ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದರು. ಅತ್ಯಧಿಕ ಮಣ್ಣು ಗಣಿಗಾರಿಕೆ ನಡೆಸಿದವರಿಗೆ ಸಾವಿರಾರು ರೂ.ಗಳಲ್ಲಿ ದಂಡ ಹಾಗೂ ಕೆಲವರಿಗೆ ಕೋಟ್ಯಮತರ ರೂ ದಂಡ ವಿಧಿಸಿದ್ದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರ ವರೆಗೂ ಇಲಾಕಾ ಅಧಿಕಾರಿಗಳ ಮೇಲೆ ದೂರ ನೀಡಲಾಗಿತ್ತು. ಜನತಾ ದರ್ಶನದಲ್ಲೂ ಭೂವಿಜ್ಞಾನ ಇಲಾಖೆ ಅಧಿಕಾರಿಗಳನ್ನು ಸಚಿವರು ತರಾಟೆ ತೆಗೆದುಕೊಂಡಿದ್ದರು.

ದಂಡ ವಿಧಿಸುವ ಪ್ರಕ್ರಿಯೆ ಹಿಂದೆ ಕುರುಡು ಕಾಂಚಾಣದ ಶಬ್ಧ ಕೇಳಿತ್ತು ಎಂದು ಜಿಲ್ಲಾಡಳಿತ ಭವನದಲ್ಲಿ ಮಾತುಗಳು ಕೇಳಿ ಬಂದಿದ್ದವು. ತದನಂತೆ ತಣ್ಣಗಾಗಿದ್ದ ಮಣ್ಣು ಗಣಿಗಾರಿಕೆ ಈಗ ಎಗ್ಗಿಲ್ಲದೇ ನಡೆದಿದೆ.

ಅಕ್ರಮ ತಡೆಯಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದು, ರಾತ್ರಿ ಸ್ಥಳಕ್ಕೆ ಧಾವಿಸಿ ಅಕ್ರಮ ಮುಟ್ಟುಗೋಲು ಹಾಕಲು ಭಯ ಬೀಳುತ್ತಿದ್ದಾರೆ ಎನ್ನಲಾಗುತ್ತಿದೆ. ಇನ್ನೊಂದೆಡೆ ಅಧಿಕಾರಿಗಳೇ ಮಾರ್ಗದರ್ಶನದಲ್ಲೇ ರಾತ್ರಿ ಸಮಯದಲ್ಲಿ ಅಕ್ರಮ ನಡೆಸಲಾಗುತ್ತಿದೆ ಎಂದು ಅಕ್ರಮ ಗಣಿಗಾರಿಕೆ ನಡೆಸುವ ಮೂಲಗಳು ತಿಳಿಸಿವೆ. ಇದರಲ್ಲಿ ಯಾವುದು ಸತ್ಯ? ಯಾವುದು ಮಿತ್ಯ ಎಂಬುದು ತನಿಖೆ ನಡೆದಾಗಲೇ ತಿಳಿದು ಬರಲಿದೆ.

> ಜಿಲ್ಲೆಯ ವಿವಿಧೆಡೆ ಅಕ್ರಮ ಮಣ್ಣು ಗಣಿಗಾರಿಕೆ ನಡೆಯುತ್ತಿದರೆ ಪೊಲೀಸ್ ಠಾಣೆಗೆ ತಿಳಿಸಬೇಕು. ನಾವು ಬಂದು ಮಹಜರು ಮಾಡುವಷ್ಟರಲ್ಲಿ ಭೂಗಳ್ಳರು ಸ್ಥಳದಿಂದ ಓಡಿ ಹೋಗುತ್ತಿದ್ದಾರೆ. ಟಿಪ್ಪರ್ ಲಾರಿ, ಜೆಸಿಬಿಗಳ ಜತೆಗೆ ಪರಾರಿ ಆಗುತ್ತಾರೆ.
> ■ ನಾಗಭೂಷಣ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ

> ಇಲಾಖೆಯಿಂದ ಯಾರಿಗೂ ಮಣ್ಣು ಗಣಿಗಾರಿಕೆಗೆ ಅನುಮತಿ ನೀಡಿಲ್ಲ. ಹೀಗಿದ್ದರೂ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದರೆ ಗ್ರಾಮ ಲೆಕ್ಕಾಧಿಕಾರಿಗಳ ಮೂಲಕ ವರದಿ ಪಡೆದು ಕ್ರಮಕ್ಕೆ ಸೂಚಿಸಲಾಗುವುದು.
> ■ ಅರುಣ ಮಂಟೂರು, ಕಂದಾಯ ಅಧಿಕಾರಿ

ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಸಮರ್ಪಕ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಕೇವಲ ಸಿಬ್ಬಂದಿಯಷ್ಟೇ ದಾಳಿ ನಡೆಸಲು ಸಾಧ್ಯವಿಲ್ಲ. ಸಿಬ್ಬಂದಿಗಳಿಗೆ ಪೊಲೀಸ್ ಭದ್ರತೆಯೂ ಇಲ್ಲ. ಜಿಲ್ಲೆಯಾದ್ಯಂತ ಅಕ್ರಮ ಅಡ್ಡೆಗಳ ಸ್ಥಳ ಮಹಜರು ನಡೆಸಲು ಇಲಾಖೆಗೆ ಒಂದೇ ವಾಹನ ಇದ್ದು ಸಮರ್ಪಕ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂಬುದಾಗಿದೆ ಇಲಾಖೆ ಮೂಲಗಳು ತಿಳಿಸಿವೆ.

ಡೆತ್‌ನೋಟ್ ಬರೆದಿಟ್ಟು ಪತಿ ನೇಣಿಗೆ ಶರಣು: ಪತ್ನಿ ಬಂಧನ

◆ **ದಾಂಡೇಲಿ:** ನಗರದ ಬಾಂಬೆಚಾಳದ ಮನೆಯಲ್ಲಿ ನೇಣಿಗೆ ಶರಣಾಗಿದ್ದ ರಾಘವೇಂದ್ರ ವಾಡಕರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಪಟೇಲ್ ನಗರದ ರುದ್ರಭೂಮಿಯಲ್ಲಿ ಪೊಲೀಸ್ ಭದ್ರತೆಯಲ್ಲಿ ನಡೆಯಿತು.

ಮಲೇಷ್ಯಾದಲ್ಲಿ ಕೆಲಸ ನಿರ್ವಹಿಸುತ್ತಿದ್ದ ರಾಘವೇಂದ್ರ ವಾಡಕರ ಕಳೆದ ನಾಲ್ಕೈದು ದಿನಗಳ ಹಿಂದೆ ಹುಟ್ಟೂರು ದಾಂಡೇಲಿಗೆ ಆಗಮಿಸಿದ್ದನು. ಕಳೆದ ಮೂರ್ನಾಲ್ಕು ವರ್ಷಗಳಿಂದ ಪತ್ನಿ ಮೇಘಾ ಪ್ರತ್ಯೇಕವಾಗಿ ವಾಸವಾಗಿದ್ದಳು ಹಾಗೂ ದಾಂಪತ್ಯದಲ್ಲಿ ಬಿರುಕು ಮೂಡಿತ್ತು ಎಂದು ತಿಳಿದುಬಂದಿದೆ.

ಆತನ ಪತ್ನಿ ಹಾಗೂ ಮಕ್ಕಳಿಬ್ಬರು ಆಕೆಯ ತವರು ಮನೆ ಧಾರವಾಡ ತಾಲೂಕಿನ ಸಲಕಿನಕೊಪ್ಪದಲ್ಲಿ ವಾಸವಾಗಿದ್ದರು. ಗುರುವಾರ ಮಧ್ಯಾಹ್ನ ಬಾಂಬೆಚಾಳದಲ್ಲಿರುವ ಮನೆಯಲ್ಲಿ ಯಾರು ಇಲ್ಲದಿದ್ದ ಸಮಯದಲ್ಲಿ ರಾಘವೇಂದ್ರ ವಾಡಕರ ಕೈ ಕೊಯ್ದುಕೊಂಡು, ನಂತರ ನೇಣಿಗೆ ಶರಣಾಗಿದ್ದನು. ಸಾಯುವ ಮುನ್ನ ಡೆತ್‌ನೋಟ್ ಬರೆದಿಟ್ಟು ಸಾವಿಗೆ ಪತ್ನಿ ಮತ್ತು ಅತ್ತೆಯೆ ಕಾರಣ ಎಂದು ಉಲ್ಲೇಖಿಸಿದ್ದಾನೆ ಎಂದು ಮಾಹಿತಿ ಲಭ್ಯವಾಗಿದೆ.

ಈ ಬಗ್ಗೆ ರಾಘವೇಂದ್ರ ವಾಡಕರ ಸಹೋದರ ದಾಂಡೇಲಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ನಂತರ ಮೃತದೇಹವನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಶುಕ್ರವಾರ ಬೆಳಗ್ಗೆ ಮೃತದೇಹವನ್ನು ಬಾಂಬೆಚಾಳದಲ್ಲಿರುವ ಮೃತನ ಸ್ವಗೃಹಕ್ಕೆ ತರಲಾಗಿತ್ತು.

ಮೃತ ರಾಘವೇಂದ್ರ ವಾಡಕರ ಈತನ ಮುಂದಿನ ಅಂತ್ಯಸಂಸ್ಕಾರದ ಕ್ರಿಯೆಗಾಗಿ ಪತ್ನಿ ಹಾಗೂ ಮಕ್ಕಳಿಬ್ಬರಿಗಾಗಿ ಕಾಯಲಾಯ್ತು. ಶುಕ್ರವಾರ ಮಧ್ಯಾಹ್ನ ರಾಘವೇಂದ್ರ ವಾಡಕರ ಪತ್ನಿ, ಇಬ್ಬರು ಮಕ್ಕಳು ಹಾಗೂ ಆಕೆಯ ಕುಟುಂಬಸ್ಥರು ಮೃತನ ಮನೆಗೆ ಬಂದು ಅಂತಿಮ ದರ್ಶನವನ್ನು ಪಡೆದುಕೊಂಡಿದ್ದರು.

ಈ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿತ್ತು. ಸಿಪಿಐ ಶಿವಾನಂದ ಅಂಬಿಗೇರ, ಪಿಎಸ್‌ಐಗಳಾದ ಜಗದೀಶ ನಾಯ್ಕ, ಅಮೀನ್ ಅತ್ತಾರ ಮತ್ತು ಶಿವಾನಂದ ನಾವದಗಿ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳದಲ್ಲಿ ಉಪಸ್ಥಿತರಿದ್ದರು. ರಾಘವೇಂದ್ರ ವಾಡಕರ ಅಂತ್ಯಕ್ರಿಯೆ ಸಂದರ್ಭದಲ್ಲಿ ಅವರ ಬಂಧು ಮಿತ್ರರು, ಸಮಾಜ ಬಾಂಧವರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಉಪಸ್ಥಿತರಿದ್ದರು.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೃತ ರಾಘವೇಂದ್ರನ ಮೊಬೈಲ್ ಮತ್ತು ಡೆತ್‌ನೋಟ್ ಪತ್ರವನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಮೃತನ ಪತ್ನಿ ಮೇಘಾ ರಾಘವೇಂದ್ರ ವಾಡಕರ ಇವಳನ್ನು ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ವಿದ್ಯುತ್ ತಗುಲಿ ಬಾಲಕಿ ಸಾವು

◆ **ಹೊನ್ನಾವರ:** ಮನೆ ಬಳಕೆಗೆ ಅಳವಡಿಸಿದ ಪಂಪ್‌ಸೆಟ್‌ನ ವಿದ್ಯುತ್ ತಂತಿಗೆ ಕಾಲು ತಾಗಿ 5 ವರ್ಷದ ಬಾಲಕಿ ಮರಣಪಟ್ಟ ಹೃದಯ ಕಲುಕುವ ಘಟನೆ ತಾಲೂಕಿನ ಹೊಸಪಟ್ಟಣದಲ್ಲಿ ಸಂಭವಿಸಿದೆ.

ಮೃತ ಬಾಲಕಿಯನ್ನು ಆಶಿಕಾ ಹರೀಶ ನಾಯ್ಕ (5) ಎಂದು ಗುರುತಿಸಲಾಗಿದೆ. ವಿದ್ಯುತ್ ಆಘಾತಕ್ಕೆ ಒಳಗಾದ ನಂತರ ಬಾಲಕಿಯನ್ನು ಆಸ್ಪತ್ರೆಗೆ ತಂದಾಗ ವೈದ್ಯರು ಆಕೆ ಮೃತಪಟ್ಟಿರುವ ಬಗ್ಗೆ ತಿಳಿಸಿದ್ದಾರೆ. ಮನೆಯ ಬಳಕೆಗೆ ಪಂಪ್‌ಸೆಟ್‌ನಿಂದ ನೀರು ತುಂಬುತ್ತಿರುವಾಗ ತೋಟದಲ್ಲಿ ಪಂಪ್‌ಸೆಟ್‌ಗೆ ಅಳವಡಿಸಿದ ತಂತಿಯನ್ನು ಬಾಲಕಿ ತುಳಿದಿದ್ದು, ಬಾಲಕಿ ಅಲ್ಲಿಯೇ ವಿದ್ಯುತ್ ಆಘಾತಕ್ಕೆ ಒಳಗಾಗಿ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಇದ್ದಾಗ ಇನ್ನೊಂದು ಕಾಲು ತಂತಿಯ ರಾಶಿಯಲ್ಲಿ ಸಿಲುಕಿ ಅಲ್ಲೆ ಕುಸಿದು ಬಿದ್ದಳು ಎನ್ನಲಾಗಿದೆ. ಮಂಕಿ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ.

ಶರಾವತಿ ನದಿಗೆ ಇಳಿದ ವಾಹನ

◆ **ಹೊನ್ನಾವರ:** ಪಟ್ಟಣದ ಬಿಕಾಸಿತಾರಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಟಿಟಿ ವಾಹನವೊಂದು ಪಾರ್ಕಿಂಗ್ ಸ್ಥಳದಿಂದ ಹಿಮ್ಮುಖವಾಗಿ ಚಲಿಸಿ ಶರಾವತಿ ನದಿಯಲ್ಲಿ ಇಳಿದ ಘಟನೆ ಶುಕ್ರವಾರ ಸಂಭವಿಸಿದೆ. ಬೋಟಿಂಗ್ ಹೆಸರುವಾಸಿಯಾಗಿರುವ ಪಟ್ಟಣದ ಕೆಳಗಿನಪಾಳ್ಯ ಸಮೀಪದಲ್ಲಿ ಶುಕ್ರವಾರ ರಜೆಯ ಕಾರಣದಿಂದ ಹೆಚ್ಚಿನ ಪ್ರವಾಸಿಗರು ಆಗಮಿಸಿದ್ದರು. ಇಕ್ಕಟ್ಟಾದ ಸ್ಥಳದಲ್ಲಿ ನಿಲ್ಲಿಸಲಾಗಿದ್ದ ಹಲವು ವಾಹನಗಳ ಮಧ್ಯೆ ಇದ್ದ ಟಿಟಿ ವಾಹನವು ಹಿಮ್ಮುಖವಾಗಿ ಚಲಿಸಿದ ಪರಿಣಾಮ ಶರಾವತಿ ನದಿಗೆ ಇಳಿದಿದೆ. ಹಿಮ್ಮುಖವಾಗಿ ವಾಹನ ಚಲಾಯಿಸುವಾಗ ಯಾವುದೇ ಪ್ರವಾಸಿಗರು ವಾಹನದಲ್ಲಿ ಹಾಗೂ ವಾಹನದ ಹಿಂದುಗಡೆ ಇರದೇ ಇರುದದರಿಂದ ದೊಡ್ಡ ಅನಾಹುತ ತಪ್ಪಿದೆ. ಚಾಲಕನ ಅಜಾಗರುಕತೆಯ ಚಾಲನೆಯಿಂದ ಈ ಘಟನೆ ಸಂಭವಿಸಿದೆ ಎನ್ನಲಾಗುತ್ತಿದ್ದು ಸಂಭವಿಸಬಹುದಾದ ದೊಡ್ಡ ಅನಾಹುತ ತಪ್ಪಿದೆ. ಕ್ರೇನ್ ಮೂಲಕ ವಾಹನವನ್ನು ಸುರಕ್ಷಿತವಾಗಿ ಮೇಲಕ್ಕೆ ಎತ್ತಲಾಗಿದೆ.



ಹುಸೂರು ನಿಪ್ಲಿ ಡ್ಯಾಮಿನಲ್ಲಿ ಈಜಲು ಹೋದ ಯುವಕ ಸಾವು



◆ **ಸಿದ್ದಾಪುರ:** ತಾಲೂಕಿನ ಹುಸೂರಿನ ನಿಪ್ಲಿ ಡ್ಯಾಮ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಮೂವರು ಈಜಾಡಲು ಹೋಗಿದ್ದು ಅವರ ಪೈಕಿ ಅಂಬಳಿಕೆಯ ರವಿಕಿರಣ ನಾಯ್ಕ (23) ಎಂಬ ಯುವಕನು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಮೃತನ ಶವವನ್ನು ಹುಡುಕಲು ಅಗ್ನಿಶಾಮಕ ದಳದವರು ಹಾಗೂ ಇತರರು ಎಷ್ಟೇ ಪ್ರಯತ್ನ ನಡೆಸಿದ್ದರೂ ಶವ ದೊರೆತಿರಲಿಲ್ಲ, ಕೊನೆಗೂ ಶವ ಪತ್ತೆಯಾಗದೇ ಶಿರಸಿಯ ಗೋಪಾಲ ಗೌಡ ನೇತೃತ್ವದ ಶ್ರೀ ಮಾರಿಕಾಂಬಾ ಲೈಫ್ ಗಾರ್ಡ್ ತಂಡದವರನ್ನು ಕರೆಸಿಕೊಂಡಿದ್ದು ಅವರು ಕಾರ್ಯಾಚರಣೆ ನಡೆಸಿ ರಾತ್ರಿ ಶವವನ್ನು ನೀರಿನಿಂದ ಹೊರತರುವಲ್ಲಿ ಯಶಸ್ವಿಯಾದರೆಂದು ತಿಳಿದುಬಂದಿದೆ.

ಸ್ಥಳೀಯ ಠಾಣೆಯ ಸಿಪಿಐ ಜೆ.ಬಿ.ಸೀತಾರಾಮ ಹಾಗೂ ಸಿಬ್ಬಂದಿಗಳು ಸ್ಥಳದಲ್ಲಿದ್ದು ಸಹಕರಿಸಿದರೆಂದು ಹೇಳಲಾಗಿದೆ.

ಡೆಡ್‌ಲೈನ್‌ಗೆ ಬೆಲೆ ಇಲ್ಲ: ಬೋಸರಾಜು

◆ **ವಿಜಯಪುರ:** ಮುಖ್ಯಮಂತ್ರಿ ಬದಲಾವಣೆಯಂತಹ ಈ ರೀತಿ ಡೆಡ್‌ಲೈನ್ ಬಹಳ ಆಗಿವೆ. ಅದಕ್ಕೆಲ್ಲ ಬೆಲೆ ಇಲ್ಲ ಎಂದು ಸಚಿವ ಎನ್.ಎಸ್. ಬೋಸರಾಜು ಹೇಳಿದರು. ಮುಖ್ಯಮಂತ್ರಿ ಬದಲಾವಣೆಗೆ ಮೇ 10ರ ಡೆಡ್‌ಲೈನ್ ಕುರಿತು ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಅದಕೆಲ್ಲ ಬೆಲೆ ಇಲ್ಲ, ಹಿಂದಿನ ಡೆಡ್ ಲೈನ್‌ನಿಂದ ಏನಾದರೂ ಆಗಿದಿಯಾ ?, ಬರ್ತಡೆ ಬರ್ತಾವೆ ಹೋಗ್ತಾವೆ ಅದರಿಂದ ಏನು ಆಗಲ್ಲ ಎಂದರು. ಕಾಂಗ್ರೆಸ್ ಪಾರ್ಟಿಯಲ್ಲಿ 57 ವರ್ಷದಿಂದ ಇದ್ದೇನೆ. ಅವರವರ ಅಭಿಪ್ರಾಯ ಹೇಳ್ತಿದ್ದಾರೆ ಅಷ್ಟೆ. ಯಾವುದೇ ಸಂದರ್ಭದಲ್ಲೂ ನಾವು ಹೈಕಮಾಂಡ್ ನಿರ್ಣಯಕ್ಕೆ ಬದ್ಧರಾಗಿ ಇರುತ್ತೇವೆ ಎಂದರು.

ಹೈಕಮಾಂಡ್ ನಿರ್ಧಾರಕ್ಕೆ ನಾವು ಬದ್ಧ: ಎಂಬಿಪಾ

◆ **ವಿಜಯಪುರ:** ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯದ ಕುರಿತು ಹೈಕಮಾಂಡ್ ನಿರ್ಧಾರಕ್ಕೆ ನಾವು ತಲೆ ಬಾಗಿ ಒಪ್ಪುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.



ನಗರದಲ್ಲಿ ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ನಮ್ಮ ಸುಪ್ರೀಂ. ಅವರು ಏನು ಹೇಳುತ್ತಾರೆ ಅದಕ್ಕೆ ನಾವು ಬದ್ಧರಾಗಿ ಇರುತ್ತೇವೆ. ಒಂದು ವೇಳೆ ಅಂತಹ ಸಂದರ್ಭ ಬಂದರೆ ರಾಹುಲ್ ಗಾಂಧಿ ಅವರ ಜೊತೆ ಚರ್ಚೆ ಮಾಡುತ್ತೇವೆ ಎಂದರು.

ಮೇ 3ರಂದು ಸಿಂಧನೂರಿಗೆ ಡಿಕೆಶಿ

◆ **ಸಿಂಧನೂರು:** ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮೇ 3ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅವರು ಅಂದು ಬೆಳಗ್ಗೆ 11.30ಕ್ಕೆ ಹೊಸಪೇಟೆ ತಾಲೂಕಿನ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹೆಲಿಪ್ಯಾಡ್ ಆವರಣದಿಂದ ನಿರ್ಗಮಿಸಿ, ಮಧ್ಯಾಹ್ನ 12 ಗಂಟೆಗೆ ಸಿಂಧನೂರಿನ ತಾಲೂಕು ಕ್ರೀಡಾಂಗಣಕ್ಕೆ ಆಗಮಿಸಿ, ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಇವರು ಶ್ರೀ ಬಸನಗೌಡ ಫೌಂಡೇಷನ್ ಸಿಂಧನೂರು ವತಿಯಿಂದ ಹಮ್ಮಿಕೊಂಡಿರುವ ಉಚಿತ ಸಾಮೂಹಿಕ ವಿವಾಹ ಹಾಗೂ ಇತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸಿಂಧನೂರು ತಾಲೂಕು ಕ್ರೀಡಾಂಗಣದಿಂದ ಹೆಲಿಕಾಪ್ಟರ್ ಮೂಲಕ ನಿರ್ಗಮಿಸಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಉಪಮುಖ್ಯಮಂತ್ರಿಗಳ ಹೆಚ್ಚುವರಿ ಕಾರ್ಯದರ್ಶಿ ಬಿ.ಎಸ್.ಶ್ರೀಧರ್ ತಿಳಿಸಿದ್ದಾರೆ.

ಬಂಗಾರದ ಆಭರಣ ಕಳುವು

◆ **ಹುಬ್ಬಳ್ಳಿ:** ಹಳೆ ಹುಬ್ಬಳ್ಳಿಯ ಹಿರೇಪೇಟೆಯ ಕರಿಯಮ್ಮದೇವಿ ದೇವಸ್ಥಾನ ಹತ್ತಿರ ವ್ಯಕ್ತಿಯೊಬ್ಬರ ಮನೆಯ ಬಾಗಿಲ ಮುರಿದ ಕಳ್ಳರು ಮನೆಯಲಿದ್ದ 1.40 ಲಕ್ಷ ರೂ. ಮೌಲ್ಯದ 28 ಗ್ರಾಂ ತೂಕದ ಆಭರಣ ಕಳುವು ಮಾಡಿ ಘಟನೆ ನಡೆದಿದೆ.


ವಿಠ್ಠಲ ಕಲಾಲ ಎಂಬುವರ ಮನೆಯಲ್ಲಿ ಕಳ್ಳತನ ಮಾಡಲಾಗಿದೆ. ಮನೆಯವರು ದಾವಣಗೆರೆಗೆ ಹೋದಾಗ ಬಂಗಾರದ ರಿಂಗ್, ಚೈನ್, ನತ್ತು ಸೇರಿ 28 ಗ್ರಾಂ ತೂಕದ ಆಭರಣ ಕಳ್ಳತನ ಮಾಡಲಾಗಿದೆ. ಹಳೇಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಮಹಿಳಾ ವಿರೋಧಿ: ಜೋಶಿ

◆ **ಹುಬ್ಬಳ್ಳಿ:** ಕಾಂಗ್ರೆಸ್ ಹಿಂದಿನಿಂದಲೂ ಮಹಿಳಾ ವಿರೋಧಿಯಾಗಿದೆ. ಮೋದಿ ಸರ್ಕಾರ ಮಹಿಳೆಯರ ಪರವಾಗಿದೆ. ಮುಂದಿನ ಅಧಿವೇಶನದಲ್ಲಿ ಪ್ರಧಾನಿ ಮೋದಿ ಅವರು ಮತ್ತೊಮ್ಮೆ ಮಹಿಳಾ ಮೀಸಲಾತಿ ಮಸೂದೆ ಮಂಡಿಸುವ ಕುರಿತು ನಿರ್ಧಾರ ಕೈಗೊಳಲಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ತಿಳಿಸಿದರು.

ರಾಜ್ಯ ಬಿಜೆಪಿ ಮಹಿಳಾ ಘಟಕ ಶುಕ್ರವಾರ ನಗರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ವಿರುದ್ಧದ ಜನಾಕ್ರೋಶ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಹಿಂದೆ ಎಚ್.ಡಿ.ದೇವೇಗೌಡ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿಯೂ ಮಹಿಳಾ ಮೀಸಲಾತಿ ಮಸೂದೆ ಮಂಡಿಸಲಾಗಿತ್ತು. ಆಗಲೂ ಅಂದಿನ ಕಾಂಗ್ರೆಸ್ ಅದಕ್ಕೆ ಸಹಕಾರ ನೀಡಿರಲಿಲ್ಲ. ಈಗಿನ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಮಹಿಳೆಯರು ಸಮಾಜದ ಮುಂಚೂಣಿಗೆ ಬರಬಾರದು ಎನ್ನುವುದು ಉದ್ದೇಶ ಕಾಂಗ್ರೆಸ್ ಉದ್ದೇಶವಾಗಿದೆ. ದೇಶಕ್ಕೆ ಏಪ್ರಿಲ್ 17 ದೇಶಕ್ಕೆ ಕರಾಳ ದಿನವಾಗಿದೆ ಎಂದು ತಿಳಿಸಿದರು. ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಷಡ್ಯಂತ್ರ ನಡೆಸುವ ಮೂಲಕ ತನ್ನ ನಿಜ ಬಣ್ಣ ಬಯಲಾಗಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಮಹಿಳೆಯರು ಕಾಂಗ್ರೆಸ್ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಜಗತ್ತಿನ ಪರಿಸ್ಥಿತಿ ಎಲ್ಲರಿಗೂ ತಿಳಿದಿದೆ. ಎಲ್ಲಾ ದೇಶಗಳಲ್ಲಿಯೂ ಇದೇ ಸ್ಥಿತಿ ನಿರ್ಮಾಣವಾಗಿದೆ. ಕಾಂಗ್ರೆಸ್‌ನವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ ಎಂದು ಗ್ಯಾಸ ಸಿಲಿಂಡರ್ ಅಭಾವದ ಕುರಿತು ತಿಳಿಸಿದರು.





ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	9	6	3	0	12	+0.617
ಗುಜರಾತ್	9	5	4	0	10	-0.192
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	8	2	6	0	4	-0.784
ಲಖನೌ	8	2	6	0	4	-1.106

ದಿಲ್ಲಿ ಕ್ಯಾಪಿಟಲ್ಸ್‌ಗೆ 226 ರನ್ ಗುರಿ | ಫೆರೇರಾ ಅರ್ಭಟ

ಪರಾಗ್ ಪರಾಕ್ರಮ

ಜೈಪುರ: ನಾಯಕನ ಆಟ ಪ್ರದರ್ಶಿಸಿದ ರಿಯಾನ್ ಪರಾಗ್(90; 50ಎ, 8ಬೌ, 5ಸಿ) ಈ ಬಾರಿಯ ಐಪಿಎಲ್‌ನಲ್ಲಿ ತಮ್ಮ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದು, ರಾಜಸ್ಥಾನ ದಿಲ್ಲಿ ಕ್ಯಾಪಿಟಲ್ಸ್‌ಗೆ ದೊಡ್ಡ ಗುರಿ ನೀಡಿದೆ.

ಪರಾಗ್, ಜುರೇಲ್ ಕಟ್ಟಿದ ಇನ್ನಿಂಗ್ಸ್‌ಗೆ ಕೊನೆಯಲ್ಲಿ ಡೊನೋವಾನ್ ಫೆರೀರಾ(47★; 14ಎ, 2ಬೌ, 6ಸಿ) ಬೂಸ್ಟರ್ ಸಿಕ್ಕಿದ್ದು ಆರ್‌ಆರ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿದೆ. ಬೇಗನೇ ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿಕೊಂಡರೂ ಧ್ರುವ್ ಜುರೇಲ್ ಮತ್ತು ಪರಾಗ್ ಉತ್ತಮ ಬ್ಯಾಟಿಂಗ್ ಮಾಡಿ ಆಸರೆಯಾದರು. ಅಂತಿಮದಲ್ಲಿ ಫೆರೇರಾ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಇದೇ ಪಂದ್ಯದ ಮೂಲಕ ಮೈದಾನಕ್ಕಿಳಿದ ಮಿಚೆಲ್ ಸ್ಟಾರ್ಕ್ 40 ರನ್ ನೀಡಿ 3 ವಿಕೆಟ್ ಪಡೆದುಕೊಂಡರು.

ಆರಂಭಿಕ ಕುಸಿತ: ಟಾಸ್ ಗೆದ್ದು ರಾಜಸ್ಥಾನ ಬ್ಯಾಟಿಂಗ್ ಆಯ್ದುಕೊಂಡಿತು. ಸ್ಟಾರ್ಕ್ ಬಲದೊಂದಿಗೆ ಮೈದಾನಕ್ಕಿಳಿದ ದಿಲ್ಲಿ ಆರಂಭದಲ್ಲೇ ಮಿಂಚಿತು. ಮೊದಲನೇ ಬಾಲ್‌ನಲ್ಲಿ ಸಿಕ್ಸರ್ ಬಾರಿಸಿದ ಜೈಸ್ವಾಲ್ ಮೂರನೇ ಎಸೆತದಲ್ಲೇ ಕ್ಯಾಚಿತ್ತರು. ಮುಂದಿನ ಓವರ್‌ನಲ್ಲಿ ವೈಭವ್ ಮೊದಲನೇ ಬಾಲ್‌ನಲ್ಲೇ ಬೌಂಡರಿ ಬಾರಿಸಿದರು. ಆದರೆ ಆಡಲಾಗದ ಯಾರ್ಕರ್ ಎಸೆದು ಪೆವಿಲಿಯನ್ ಹಾದಿ ತೋರಿಸಿಬಿಟ್ಟರು ಕೇಲ್ ಜಮಿಸನ್. ರಾಜಸ್ಥಾನಕ್ಕೆ ದೊಡ್ಡ ಆಘಾತ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಧ್ರುವ್ ಜುರೇಲ್ ಉತ್ತಮ ಬ್ಯಾಟಿಂಗ್ ಮಾಡುವತ್ತ ಸಾಗಿದರು.

ರಿಯಾನ್ ಪರಾಗ್ ಆಸರೆ: ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ನಾಯಕ ರಿಯಾನ್ ಪರಾಗ್ ಪಂದ್ಯಾವಳಿಯಲ್ಲಿ ತಮ್ಮ ಶ್ರೇಷ್ಠ ಬ್ಯಾಟಿಂಗ್ ಮಾಡಿದರು. ಆರಂಭದಲ್ಲಿ ಸಿಂಗಲ್, ಟು-ಡಿಗಳಿಂದ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡರು. ಅವರಿಗೆ ಜುರೇಲ್ ತಕ್ಕ ಸಾಥ್ ಕೊಟ್ಟರು. ಈ ನಡುವೆ ರಿಯಾನ್ ಬಾನೆತ್ತರದ ಸಿಕ್ಸರ್‌ಗಳನ್ನೂ ಬಾರಿಸಿದರು. ಪವರ್‌ಪ್ಲೇ ಮುಕ್ತಾಯಕ್ಕೆ ರಾಯಲ್ಸ್ 56 ರನ್ ಗಳಿಸಿತ್ತು. ಮಧ್ಯಮ ಓವರ್‌ನಲ್ಲಿ ಇಬ್ಬರ ಜೊತೆಯಾಟ ವಿಸ್ತರಿಸಿತು. ಪರಾಗ್ ಅರ್ಧಶತಕ ಬಾರಿಸಿದರು. ಧ್ರುವ್ ಜುರೇಲ್ ಕೂಡ ಅರ್ಧ ಶತಕದತ್ತ ಸಾಗಿದರು. ಈ ಜೋಡಿ 59 ಎಸೆತಲ್ಲಿ 102 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಜುರೇಲ್ 42 ರನ್‌ಗೆ ವಿಕೆಟ್ ಒಪ್ಪಿಸಿದರು. ರವೀಂದ್ರ ಜಡೇಜಾ ಕೂಡ ಪರಾಗ್ ಅವರೊಂದಿಗೆ ಆಸರೆಯಾದರು. ಮಧ್ಯಮ ಓವರ್ ಮುಕ್ತಾಯದವರೆಗೂ ಜಡೇಜಾ ಮತ್ತು ಪರಾಗ್ ಮಿಂಚಿದರು. ಡೆತ್ ಓವರ್ ಶುರುವಾಗುವ ಮುನ್ನ ರಾಜಸ್ಥಾನ 163 ರನ್ ಗಳಿಸತು. 17ನೇ ಓವರ್ ಬೌಲಿಂಗ್ ಮಾಡಲು ಬಂದ ಸ್ಟಾರ್ಕ್, ಜಡೇಜಾ(20; 13ಎ, 1ಬೌ, 1ಸಿ) ವಿಕೆಟ್ ಒಪ್ಪಿಸಿದರು. ಅದೇ ಓವರ್‌ನಲ್ಲಿ ಶತಕ ವಂಚಿತ ರಿಯಾನ್ ಪರಾಗ್(90; 50ಎ, 8 ಬೌ, 5ಸಿ) ಕೂಡ ವಿಕೆಟ್ ಒಪ್ಪಿಸಿದರು.



ಫೆರೇರಾ ಅಬ್ಬರ

ಡೆತ್ ಓವರ್‌ನಲ್ಲಿ ಫೆರೇರಾ ಅಬ್ಬರ. 18ನೇ ಓವರ್ ಮಾಡಲು ಬಂದ ಕುಲ್ದೀಪ್ ಬೆವರಿಳಿಸಿದರು. ಮೂರು ಸಿಕ್ಸರ್ ಬಾರಿಸಿದರು. 18ನೇ ಓವರ್‌ನಲ್ಲಿ ಸ್ಟಾರ್ಕ್ ಮತ್ತೆ ಕೌಂಟರ್ ಅಟ್ಯಾಕ್ ಮಾಡಲೆತ್ನಿಸಿದರು. ಆದರೆ ಫೆರೇರಾ ಅವರನ್ನೂ ದಂಡಿಸಿದರು. ಕೊನೆಯ ಓವರ್‌ನಲ್ಲಿ ನಟರಾಜನ್ ಬಂದರು. ಅವರ ಬಾಲಿಂಗ್‌ನಲ್ಲೂ 3 ಭರ್ಜರಿ ಸಿಕ್ಸರ್ ಬಾರಿಸಿದರು. ಈ ಮೂಲಕ ಕೇವಲ 14 ಎಸೆತ ಎದುರಿಸಿದ ಫೆರೇರಾ ಔಟಾಗದೆ 47 ರನ್ ಚಚ್ಚಿದರು. ಡೆತ್ ಓವರ್‌ಗಳಲ್ಲಿ ರಾಜಸ್ಥಾನ ಬರೋಬ್ಬರಿ 63 ರನ್ ಬಾರಿಸಿತು. ತಂಡ 225 ರನ್ ಮಾಡಿತು.

ಇಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಪಂದ್ಯ
ಮುಂಬೈ ಸೋತರೆ ಹೊರಬೀಳುವ ಸಾಧ್ಯತೆ

ಮುಂಬೈಗೆ ಸೇಡಿನ ತವಕ



ಚೆನ್ನೈ: ತವರು ಅಭಿಮಾನಿಗಳೆದುರು ಹೀನಾಯವಾಗಿ ಸೋಲಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸುವ ಗುರಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವಿದೆ. ಐಪಿಎಲ್ ರೋಚಕ ಹಂತಕ್ಕೆ ತಲುಪಿದೆ. ಪಂಜಾಬ್, ಆರ್‌ಸಿಬಿ ಮತ್ತು ರಾಜಸ್ಥಾನ ತಂಡಗಳು ಈಗಾಗಲೇ ಭರ್ಜರಿ ಪ್ರದರ್ಶನದೊಂದಿಗೆ ಮೂರು ಸ್ಥಾನಗಳಲ್ಲಿ ಗಟ್ಟಿಯಾಗಿ ನಿಂತುಕೊಂಡಿವೆ. ಇತ್ತ ನಾಲ್ಕನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ಕೂಡ ಕರಾರುವಾಕ್ ಪ್ರದರ್ಶನ ನೀಡುತ್ತಿದೆ. ಈ ಮಧ್ಯೆ ಗುಜರಾತ್, ಚೆನ್ನೈ ನಂತರದ ಸ್ಥಾನಗಳಲ್ಲಿವೆ. ಅಂಕಪಟ್ಟಿಯ ಹೊಡೆದಾಟದಲ್ಲಿ ಉಳಿಯಲು ಎಲ್ಲಾ ಪಂದ್ಯಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ಚೆನ್ನೈ ಮತ್ತು ಮುಂಬೈ ಎರಡೂ ತಂಡಗಳಿವೆ.

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದ ಮೂಲಕ ಸಿಎಸ್‌ಕೆಯ ಮಹೇಂದ್ರ ಸಿಂಗ್ ಧೋನಿ ಮತ್ತು ಮುಂಬೈನ ರೋಹಿತ್ ಶರ್ಮ ಐಪಿಎಲ್‌ಗೆ ಕಂಬ್ಯಾಕ್ ಮಾಡುವ ಸಾಧ್ಯತೆ ಇದೆ. ಆರ್‌ಸಿಬಿ ಪಂದ್ಯದ ವೇಳೆ ಗಾಯಗೊಂಡಿರುವ ನಿಟ್ಟಿನಲ್ಲಿ ರೋಹಿತ್ ಶರ್ಮ ಹೊರಗುಳಿದಿದ್ದಾರೆ. ಧೋನಿ ಐಪಿಎಲ್‌ನಲ್ಲಿ ಇದೂವರೆಗೂ ಕಣಕ್ಕಿಳದಿಲ್ಲ. ಚೆಪಾಕ್‌ನಲ್ಲಿ ನಡೆದ ಅಭ್ಯಾಸದ ವೇಳೆ ಧೋನಿ ಕೀಪಿಂಗ್ ಮಾಡಿದರೆ, ರೋಹಿತ್ ಶರ್ಮ ಕೂಡ ತಂಡದೊಂದಿಗೆ ಕಾಣಿಸಿಕೊಂಡಿದ್ದಾರೆ.

ಚೆನ್ನೈಗೆ ಒತ್ತಡ: ಸಂಜು ಸ್ಯಾಮ್ಸನ್ ಹೊರತುಪಡಿಸಿ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ಲಯದಲ್ಲಿಲ್ಲ. ಚೆನ್ನೈ ಆಡಿರುವ 8 ಪಂದ್ಯಗಳಲ್ಲಿ 3 ಪಂದ್ಯಗಳನ್ನು ಗೆದ್ದಿದೆ. ಇದರಲ್ಲಿ ಸಂಜು ಸ್ಯಾಮ್ಸನ್ ಎರಡು ಪಂದ್ಯದಲ್ಲಿ ಶತಕ ಬಾರಿಸಿದ್ದರು. ಗಾಯದ ಸಮಸ್ಯೆಗೆ ತುತ್ತಾಗಿರುವ ಚೆನ್ನೈಗೆ ಧೋನಿ ಅನುಭವದ ಬಲ ಸಿಗಬಹುದು. ರುತುರಾಜ್ ನಿಧಾನ ಇನ್ನಿಂಗ್ಸ್‌ನೊಂದಿಗೆ ಲಯಕ್ಕೆ ಬಂದಂತಿದೆ. ಉರ್ವಿಲ್ ಪಟೇಲ್‌ಗೆ ಮತ್ತೊಮ್ಮೆ ಅವಕಾಶಸಿಹಬಹುದು. ಮಧ್ಯಮ ಕ್ರಮಾಂಕದಲ್ಲಿ ಕಾರ್ತಿಕ್ ಶರ್ಮ, ಪ್ರಶಾಂತ್ ವೀರ್ ಲಯದ ಹುಡುಕಾಟದಲ್ಲಿದ್ದರೆ. ಶಿವಂ ದುಬೆ ವಿಫಲರಾಗಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಜೆಮಿ ಓವರ್‌ಟನ್, ಅನ್ಶುಲ್ ಮಾತ್ರವೇ ವಿಕೆಟ್ ಪಡೆದಿದ್ದು, ಇನ್ನುಳಿದವರು ದುಬಾರಿಯಾಗಿದ್ದಾರೆ.

ಮುಂಬೈಗೆ ಮಾಡು ಇಲ್ಲವೇ ಮಡಿ: ಅಂಕಪಟ್ಟಿಯ ತೀರಾ ಕೆಳಗಿನ ಸ್ಥಾನದಲ್ಲಿರುವ ಮುಂಬೈ ಇಂಡಿಯನ್ಸ್ ಭಾರೀ ಹಿನ್ನಡೆ ಅನುಭವಿಸಿದೆ. ಆಡಿರುವ ಪಂದ್ಯಗಳಲ್ಲಿ ಎರಡು ಮಾತ್ರ ಗೆಲುವು ಸಾಧಿಸಿರುವ ಹಾರ್ದಿಕ್ ಪಡೆ ಇನ್ನುಳಿದ ಎಲ್ಲಾ ಪಂದ್ಯಗಳಲ್ಲಿ ಸೋತಿದೆ. ಹೀಗಿರುವಾಗ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕಾದ ಅನಿವಾರ್ಯತೆಯಲ್ಲಿದ್ದು, ಚೆನ್ನೈ ಪಂದ್ಯ ಮಾಡು ಇಲ್ಲವೇ ಮಡಿ ಅಂತಯೇ ಇರಲಿದೆ. ಮುಖ್ಯವಾಗಿ ಮುಂಬೈನಲ್ಲಿ ಕಳೆದ ವಾರ ನಡೆದಿದ್ದ ಚೆನ್ನೈ ವಿರುದ್ಧದ ಪಂದ್ಯದಲ್ಲೇ ಸೋಲನುಭವಿಸಿದ್ದು, ಸೇಡಿನ ತವಕದಲ್ಲಿ ಕಾಣಿಸಿಕೊಂಡಿದೆ. ರಯಾನ್ ರಿಕೆಲ್ಟನ್ ಲಯಕ್ಕೆ ಬಂದಿದ್ದಾರೆ. ಇನ್ನೋರ್ವ ಆರಂಭಿಕ ವಿಲ್ ಜ್ಯಾಕ್ಸ್ ತಂಡಕ್ಕೆ ಶಕ್ತಿ ತುಂಬಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಬರಬೇಕಿದೆ. ಸೂರ್ಯಕುಮಾರ್ ಯಾದವ್ ಭಾರೀ ಪರದಾಟ ನಡೆಸಿರುವುದೇ ದೊಡ್ಡ ಹಿನ್ನಡೆ. ಬೌಲಿಂಗ್ ವಿಚಾರಕ್ಕೆ ಬಂದರೆ ತಂಡದಲ್ಲಿರುವ ದೊಡ್ಡ ದೊಡ್ಡ ಬೌಲರ್‌ಗಳು ದಂಡಿಸಿಕೊಂಡಿದ್ದಾರೆ. ಬೂಮ್ರಾ ಹಿಡಿದು ಬೋಲ್ಟ್ ತನಕ ಎಲ್ಲಾ ಬೌಲರ್‌ಗಳು ದುಬಾರಿಯಾಗಿದ್ದಾರೆ.

ಪಿಚ್

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬ್ಯಾಟರ್ ಹಾಗೂ ಬೌಲರ್‌ಗಳು ಸಮತೋಲಿತ ಪ್ರದರ್ಶನ ನೀಡುವ ಸಾಧ್ಯತೆ ಇದೆ. ಬ್ಯಾಟರ್‌ಗಳು 200ಕ್ಕೂ ಹೆಚ್ಚು ಸ್ಕೋರ್ ಮಾಡಬಹುದಾದರೂ, ಅತ್ಯಧಿಕ ಸ್ಕೋರ್ ಮಾಡಲಾಗುವುದಿಲ್ಲ. ಸ್ಪಿನ್ನರ್‌ಗಳಿಗೆ ಲಾಭ ನೀಡುತ್ತದೆ. ಹೆಚ್ಚಿನ ಬೌನ್ಸ್, ಎರಡನೇ ಇನ್ನಿಂಗ್ಸ್ ವೇಳೆ ತುಸು ಇಬ್ಬನಿ ಕಾಟ ಇರಲಿದೆ.

ಪಂದ್ಯದ ವಿವರ

ಯಾವಾಗ: ಶನಿವಾರ
ಎಲ್ಲಿ: ಚೆನ್ನೈ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಕಿರುಸುದ್ದಿ

ಕ್ರಿಕೆಟ್ ಕೆನಡಾಗೆ ಮಾಂಟಿ ದೇಸಾಯಿ ಕೋಚ್

ಹೊಸದಿಲ್ಲಿ: ಕ್ರಿಕೆಟ್ ಕೆನಡಾಗೆ ಭಾರತ ಮೂಲದ ಮಾಂಟಿ ದೇಸಾಯಿ ಅವರನ್ನು ಪ್ರಧಾನ ತರಬೇತುದಾರನ್ನಾಗಿ ನೇಮಕ ಮಾಡಲಾಗಿದೆ. ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗ ವಿಚಾರಕ್ಕೆ ಸಂಬಂಧಿಸಿದಂತೆ ಹಳೆಯ ತರಬೇತುದಾರರನ್ನು ಅಮಾನತುಗೊಳಿಸಿದ ಬೆನ್ನಲ್ಲೇ ಫ್ರಾಂಚೈಸಿ ಮತ್ತು ವಿದೇಶಿ ತಂಡಗಳಿಗೆ ತರಬೇತಿ ನೀಡಲು ಖ್ಯಾತರಾದ ಮಾಂಟಿ ಅವರನ್ನು ನೇಮಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮುಂದಿನ ಟಿ20 ವಿಶ್ವಕಪ್‌ಗೆ ತಯಾರಿ ನಡೆಸುವತ್ತ ಸಾಗಿರುವ ಕೆನಡಾ ತೀಕ್ಷ್ಣ ಅಭ್ಯಾಸ ಮತ್ತು ಗುರಿಯ ಯೋಜನೆಯ ಅಡಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ನೇಪಾಳ ಮತ್ತು ಅಫ್ಘಾನಿಸ್ತಾನ ಅಂಥ ತಂಡಗಳಿಗೆ ಅವರು ನೀಡಿದ ತರಬೇತಿ ಗಮನಾರ್ಹ. ಅವರ ಅನುಭವ ನಮ್ಮ ವಿಶ್ವಕಪ್ ಗುರಿಗೆ ಬೂಸ್ಟರ್ ನೀಡಲಿದೆ, ಮಾಂಟಿ ಅಂಥವರು ದೀರ್ಘಕಾಲದವರೆಗೂ ಕೋಚ್ ಆಗಿ ಇರುತ್ತಾರೆ ಎಂದು ಕ್ರಿಕೆಟ್ ಕೆನಡಾ ತಿಳಿಸಿದೆ.

ರಗ್ಬಿ ಪ್ರೀಮಿಯರ್ ಲೀಗ್ ಹರಾಜು ಪೂರ್ಣ

ಹೈದರಾಬಾದ್: ಜಿಎಂಆರ್ ಸ್ಪೋರ್ಟ್ಸ್ ಹಾಗೂ ರಗ್ಬಿ ಇಂಡಿಯಾ ಸಹಯೋಗದಲ್ಲಿ ಎಚ್‌ಎಸ್‌ಬಿಸಿ ರಗ್ಬಿ ಪ್ರೀಮಿಯರ್ ಲೀಗ್ ಎರಡನೇ ಆವೃತ್ತಿಗಾಗಿ ಆಟಗಾರರ ಹರಾಜು ಮತ್ತು ಡ್ರಾಫ್ಟ್ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಎಲ್ಲಾ ಫ್ರಾಂಚೈಸಿಗಳು ಸಮತೋಲನ ಹೊಂದಿದ ಬಲಿಷ್ಠ ತಂಡಗಳನ್ನು ರಚಿಸಿವೆ. ಈ ಬಾರಿ ಭಾರತೀಯ ರಗ್ಬಿ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ಫ್ರಾಂಚೈಸಿಗಳು ಕೂಡ ಹರಾಜಿನಲ್ಲಿ ಭಾಗವಹಿಸಿದ್ದು, ಚೆನ್ನೈ ಬುಲ್ಸ್, ಮುಂಬೈ ಡ್ರೀಮರ್ಸ್, ಕೊಲ್ಕತ್ತಾ ಬಂಗಾ ಟೈಗರ್ಸ್ ಹಾಗೂ ಡೆಲ್ಲಿ ರೆಡ್ಜ್ ತಂಡಗಳು ತಮ್ಮ ಮೊದಲ ತಂಡಗಳನ್ನು ಕಟ್ಟಿಕೊಂಡಿವೆ. ಪುರುಷ ಮತ್ತು ಮಹಿಳಾ ಎರಡೂ ಸ್ಪರ್ಧೆಗಳು ಜೂನ್ 16ರಿಂದ 28ರವರೆಗೆ ಹೈದರಾಬಾದ್‌ನ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಪುರುಷರ ವಿಭಾಗದಲ್ಲಿ ವೆಸ್ಟ್ ಬೆಂಗಾಲ್‌ನ ಸುಮಿತ್ ಕುಮಾರ್ ರಾಯ್ 3.75 ಲಕ್ಷ ರೂಪಾಯಿಗೆ ಹೈದರಾಬಾದ್ ಹೀರೋಸ್ ತಂಡಕ್ಕೆ ಸೇರ್ಪಡೆಯಾಗಿ ಅತಿ ದುಬಾರಿ ಭಾರತೀಯ ಆಟಗಾರರಾದರು. ಮೊಹಿತ್ ಖತ್ರಿ (3.5 ಲಕ್ಷ, ಚೆನ್ನೈ ಬುಲ್ಸ್), ದೀಪಕ್ ಕುಮಾರ್ ಪುನಿಯಾ (2.75 ಲಕ್ಷ, ಡೆಲ್ಲಿ ರೆಡ್ಜ್) ಮತ್ತು ಪ್ರಶಾಂತ್ ಅರವಿಂದ್ ಪ್ರತಾಪ್ ಸಿಂಗ್ (2.75 ಲಕ್ಷ, ಕೊಲ್ಕತ್ತಾ) ಪ್ರಮುಖ ಖರೀದಿಗಳಾಗಿದ್ದರು. ಮಹಿಳಾ ವಿಭಾಗದಲ್ಲಿ ಡೆಲ್ಲಿ ರೆಡ್ಜ್ ತಂಡದ ಶಿಖಾ ಯಾದವ್ 2.4 ಲಕ್ಷ ರೂಪಾಯಿಗೆ ಅತಿ ಹೆಚ್ಚು ಮೊತ್ತಕ್ಕೆ ಸೇರ್ಪಡೆಯಾದರು. ಮುಂಬೈ ಡ್ರೀಮರ್ಸ್‌ನ ಭೂಮಿಕಾ ಶುಕ್ಲಾ (2.2 ಲಕ್ಷ), ನಿರ್ಮಲ್ಯ ರೌತ್ (1.6 ಲಕ್ಷ, ಕೊಲ್ಕತ್ತಾ) ಹಾಗೂ ಅಮಂದೀಪ್ ಕೌರ್ (1.6 ಲಕ್ಷ, ಚೆನ್ನೈ) ಇತರ ಪ್ರಮುಖ ಖರೀದಿಗಳಾಗಿದ್ದಾರೆ.

ಶಾಟ್‌ಗನ್ ವಿಶ್ವಕಪ್‌ನಲ್ಲಿ 12 ಭಾರತೀಯರು

ಹೊಸದಿಲ್ಲಿ: ಸೋಮವಾರದಿಂದ ಶುರುವಾಗಲಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಕೂಟದಲ್ಲಿ ಭಾಗವಹಿಸಲು 12 ಭಾರತೀಯ ಶೂಟರ್‌ಗಳು ಸಿದ್ಧವಾಗಿದ್ದಾರೆ. ಕಜಕಿಸ್ತಾನದಲ್ಲಿ ನಡೆಯಲಿರುವ ಈ ಕೂಟಕ್ಕಾಗಿ ಶೂಟಿಂಗ್ ತಂಡ ಆತಿಥ್ಯ ದೇಶಕ್ಕೆ ತಲುಪಿದೆ. 284 ಶೂಟರ್‌ಗಳು 42 ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗಳನ್ನು ಪ್ರತಿನಿಧಿಸಲಿದ್ದಾರೆ. ಒಟ್ಟು ಐದು ಒಲಿಂಪಿಕ್ಸ್ ಇವೆಂಟ್‌ಗಳು 10ದಿನ ನಡೆಯಲಿವೆ. 8 ಜನರ ಭಾರತ ತಂಡವು ರ್ಯಾಂಕಿಂಗ್ ಪಾಯಿಂಟ್ಸ್ ಓನ್ಲಿ ವಿಭಾಗದಲ್ಲಿ ಸ್ಪರ್ಧಿಸಲು ಪ್ರಯಾಣಿಸಿದೆ. ಮಹಿಳೆಯರ ಸ್ಕೀಟ್ ವಿಭಾಗದ ಸ್ಪರ್ಧೆಯಿಂದ ಕೂಟ ಶುರುವಾಗಲಿದೆ. ಸೋಮವಾರದಂದು ಅರ್ಹತಾ ಸುತ್ತು ನಡೆಯಲಿದೆ. ಮುಂದಿನ ದಿನ ಫೈನಲ್ಸ್ ನಡೆಯಲಿವೆ. ಕೂಟದ ಮೊದಲ ದಿನ, ಮೈರಾಜ್ ಅಹ್ಮದ್, ಅನಂತಜೀತ್ ಸಿಂಗ್ ಮಹಿಳಾ ಶೂಟರ್ ರೈಝಾ ಧಿಲ್ಲೊನ್ ಭಾಗವಹಿಸಲಿದ್ದಾರೆ.

ಬಾಲಕ ಇಶಾಂಕ್ ಇತಿಹಾಸ!

ಏಳು ವರ್ಷದ ಬಾಲಕ ಇಶಾಕ್ ಸಿಂಗ್ ಜಗತ್ತೇ ನಿಬ್ಬೆರಗಾಗುವಂತಹ ಸಾಧನೆ ಮಾಡಿದ್ದು 29 ಕಿ.ಮೀ. ದೂರವನ್ನು ಈಜುತ್ತಾ ಕ್ರಮಿಸಿದ್ದಾರೆ. ರಾಂಚಿ ಮೂಲದ ಇಶಾಂಕ್ ಶ್ರೀಲಂಕಾ ಮತ್ತು ಭಾರತ ನಡುವೆ ಇರುವ ಅಪಾಯಕಾರಿ ಪಾಕ್ ಜಲಸಂಧಿಯನ್ನು ಕೇವಲ 9 ಗಂಟೆ 50 ನಿಮಿಷಗಳಲ್ಲಿ ಈಜುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.





29 ಕಿ.ಮೀ. ದೂರ ಈಜಿದ ಬಾಲಕ | **9** 9 ಗಂಟೆ 50 ನಿಮಿಷ ತೆಗೆದುಕೊಂಡ ಸಮಯ

ವಿಶ್ವದಾಖಲೆ
ಈ ಮಾರ್ಗ ದಾಟುದ ಅತ್ಯಂತ ಕಿರಿಯ

ಎಲ್ಲಿಂದ ಎಲ್ಲಿ
ಶ್ರೀಲಂಕಾದ ತಲೈಮನ್ನಾರ್‌ನಿಂದ ಭಾರತದ ಧನುಷ್ಕೋಡಿಯವರೆಗೆ

ಅಂಡರ್-17 ಫುಟ್ಬಾಲ್: ಏಷ್ಯಾಕಪ್‌ಗೆ ಭಾರತ ತಂಡ

ಹೊಸದಿಲ್ಲಿ: ಸೌದಿ ಅರೆಬಿಯಾದಲ್ಲಿ ನಡೆಯಲಿರುವ ಅಂಡರ್-17 ಫುಟ್ಬಾಲ್ ಏಷ್ಯನ್ ಕಪ್ ಪಂದ್ಯಾವಳಿಗಾಗಿ ಭಾರತ ತಂಡವನ್ನು ಎಐಎಫ್‌ಎಫ್ ಶುಕ್ರವಾರ ಪ್ರಕಟಿಸಿತು. ಭಾರತದ ಪ್ರಧಾನ ಕೋಚ್ ಬಿಬಿಯಾನೋ ಫರ್ನಾಂಡೀಸ್ 23 ಜನರ ತಂಡ ಬಿಡುಗಡೆ ಮಾಡಿದರು. ಭಾರತ ಡ್ರಾದಲ್ಲಿ ಆಸ್ಟ್ರೇಲಿಯಾ, ಉಜ್ಬೇಕಿಸ್ತಾನ, ಕೋರಿಯಾ ರಿಪಬ್ಲಿಕ್‌ನೊಂದಿಗೆ ಎ ಗುಂಪಿನಲ್ಲಿದೆ. ಕೋರಿಯಾ ತನ್ನ ಸ್ಪರ್ಧೆಯನ್ನು ಹಿಂಪಡೆದಿರುವ ನಿಟ್ಟಿನಲ್ಲಿ ಗುಂಪು ಕೇವಲ ಮೂರು ತಂಡಕ್ಕೆ ಸೀಮಿತವಾಗಿರಲಿದೆ. ಪಂದ್ಯಾವಳಿಯಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಥಾನ ಪಡೆಯಲಿವೆ.

ಭಾರತ ತಂಡ

ಗೋಲ್ ಕೀಪರ್‌ಗಳು: ಅಲೋಕ್ ನಿಶಾದ್, ಮನಶ್‌ಜ್ಯೋತಿ ಬರುವಾ, ರಾಜ್ ರೂಪ್ ಸರ್ಕಾರ್.

ಡಿಫೆಂಡರ್ಸ್: ಅಭಿಷೇಕ್ ಕುಮಾರ್ ಮೊಂಡಲ್, ಇಂದ್ರ ರಾಣಾ ಮಗರ್, ಕೊರೌ ಮೈತೆಯ್ ಕೊಂಥೌಜಮ್, ಲಾಮ್ಸಂಗ್ ಜುವಾಲಾ, ಲೆಸ್ವಿನ್ ರೆಬೆಲೊ, ಎಂಡಿ ಐಮಾನ್ ಬಿನ್, ಶುಭಂ ಪೂನಿಯಾ.

ಮಿಡ್‌ಫೀಲ್ಡರ್‌ಗಳು: ದಲ್ಲಾಲ್‌ಮುವಾನ್ ಗ್ಯಾಂಗ್ಟೆ, ಡೆನ್ನಿ ಸಿಂಗ್ ವಾಂಗ್‌ಖೇಮ್, ಡೈಮಂಡ್ ಸಿಂಗ್ ಥೋಕ್‌ಚೋಮ್, ಮೂಸಾ ಆಶಿಕ್ ಸೋಫಿ, ನಿತೀಶ್‌ಕುಮಾರ್ ಮೈತೇಯ್ ಯೆಂಗ್‌ಖೋಮ್.

ಫಾರ್ವರ್ಡ್‌ರ್‌ಗಳು: ಆದಿಲ್ ಅಮನ್ ಎ, ಅಜ್ಲಾನ್ ಶಾ ಖ್, ಗುನ್ಲೀಬಾ ವಾಂಗ್‌ಖೈರಕ್‌ಪಂ, ಹೀರಂಗಂಬಾ ಸೆರಾಮ್, ರಹಾನ್ ಅಹ್ಮದ್, ರಾಜ್ ಸಿಂಗ್ ವಾಹೆಂಗ್‌ಬಾಮ್, ವಾಷಿಂಗ್ಟನ್ ಸಿಂಗ್ ನ್ಗಾಂಗೊಮ್, ಯುವರಾಜ್ ಕದಮ್.

ಕ್ವಾರ್ಟರ್‌ನಲ್ಲಿ ತೈವಾನ್ ವಿರುದ್ಧ ಜಯ | ಸೆಮಿನಲ್ಲಿ ಜಪಾನ್/ಫ್ರಾನ್ಸ್ ಎದುರಾಳಿ

ಭಾರತಕ್ಕೆ ಥಾಮಸ್ ಕಪ್ ಪದಕ ಖಚಿತ

ಹೊಸದಿಲ್ಲಿ: ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಥಾಮಸ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ತೈವಾನ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ, ಪುರುಷರ ತಂಡ ಸ್ಪರ್ಧೆಯಲ್ಲಿ ತನ್ನ ಪದಕ ಖಚಿತಪಡಿಸಿಕೊಂಡಿದೆ.

ಆಯುಷ್ ಶೆಟ್ಟಿ ಅಂತಿಮ ಪಂದ್ಯದಲ್ಲಿ ವಿಶ್ವ ಕ್ರಮಾಂಕ 8 ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್ ಲಿನ್ ಚುನ್-ಯಿ ವಿರುದ್ಧ 21-16, 21-17 ಅಂಕಗಳಿಂದ 48 ನಿಮಿಷಗಳಲ್ಲಿ ಗೆದ್ದು ತಂಡದ ಗೆಲುವಿಗೆ ಮುದ್ರೆ ಹಾಕಿದರು. ಇದಕ್ಕೂ ಮೊದಲು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಡಬಲ್ಸ್ ಜೋಡಿ ವಾಂಗ್ ಚಿ-ಲಿನ್ ಚಿಯು ಹ್ಸಿಯಾಂಗ್ ಚಿಹ್ ವಿರುದ್ಧ 23-21, 19-21, 21-12 ಅಂತರದಲ್ಲಿ 75 ನಿಮಿಷಗಳ ಹೋರಾಟದ ಪಂದ್ಯದಲ್ಲಿ ಜಯ ಸಾಧಿಸಿತು.

ಸೇನ್‌ನಿಂದ ಶುಭಾರಂಭ: ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ ವಿಶ್ವ ಕ್ರಮಾಂಕ 6ರ ಅನುಭವೀ ಆಟಗಾರ ಚೌ ತಿಯೆನ್ ಚೆನ್ ವಿರುದ್ಧ 18-21, 22-20, 21-17 ಅಂಕಗಳಿಂದ 1 ಗಂಟೆ 28 ನಿಮಿಷಗಳ ರೋಚಕ ಹೋರಾಟದಲ್ಲಿ ಗೆಲುವು ಸಾಧಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಲಕ್ಷ್ಯ ಮತ್ತು ಚೌ ನಡುವಿನ ಮೊದಲ ಪಂದ್ಯದಲ್ಲಿ ಕಠಿಣ ಪೈಪೋಟಿ ಕಂಡುಬಂದಿತು. ಮೊದಲ ಗೇಮ್‌ನಲ್ಲಿ ಉತ್ತಮ ಆರಂಭ ಮಾಡಿದರೂ, ಲಕ್ಷ್ಯ 15-10 ಮುನ್ನಡೆಯನ್ನು ಕಳೆದುಕೊಂಡು 18-21 ಅಂತರದಲ್ಲಿ ಸೋತರು. ಎರಡನೇ ಗೇಮ್‌ನಲ್ಲಿ ಚೌ 13-7 ಮುನ್ನಡೆ ಪಡೆದಿದ್ದರೂ, ಲಕ್ಷ್ಯ 17-17 ಸಮಬಲ ಸಾಧಿಸಿ, ಎರಡು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು 22-20 ಅಂತರದಲ್ಲಿ ಗೆದ್ದು ಪಂದ್ಯವನ್ನು ಸಮಬಲಕ್ಕೆ ತಂದರು. ನಿರ್ಣಾಯಕ ಮೂರನೇ ಗೇಮ್‌ನಲ್ಲಿ ಲಕ್ಷ್ಯ 11-7 ಮುನ್ನಡೆಯೊಂದಿಗೆ ಮಧ್ಯಂತರ ಪ್ರವೇಶಿಸಿ, ನಂತರ 18-12 ಮುನ್ನಡೆಯನ್ನೂ ಪಡೆದರು. ಚೌ ಮತ್ತೆ ಹೋರಾಟ ನಡೆಸಿದರೂ, ಅಂತಿಮವಾಗಿ ಲಕ್ಷ್ಯ 21-17 ಅಂತರದಲ್ಲಿ ಗೆಲುವು ಸಾಧಿಸಿದರು.



ಡಬಲ್ಸ್ ಅಲ್ಲೂ ಭಾರತ ಕಮಾಲ್: ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್‌ಚಿರಾಗ್ ಮೊದಲ ಗೇಮ್‌ನಲ್ಲಿ ಎರಡು ಗೇಮ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಗೆದ್ದರು. ಎರಡನೇ ಗೇಮ್‌ನಲ್ಲಿ ಎದುರಾಳಿ ತಂಡ ಹಿಂತಿರುಗಿದರೂ, ಮೂರನೇ ಗೇಮ್‌ನಲ್ಲಿ ಭಾರತೀಯ ಜೋಡಿ ಸಂಪೂರ್ಣ ಮೇಲುಗೈ ಸಾಧಿಸಿ ಗೆಲುವು ತನ್ನದಾಗಿಸಿಕೊಂಡಿತು.

ಆಯುಷ್ ಅಬ್ಬರ: ಕೊನೆಯ ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ ಆರಂಭದಲ್ಲಿ 7-11 ಹಿನ್ನಡೆಯಲ್ಲಿದ್ದರು. ಆದರೆ ಮಧ್ಯಂತರದ ಬಳಿಕ ಅದ್ಭುತವಾಗಿ ಆಟ ತಿರುಗಿಸಿ ಮುಂದಿನ 11 ಪಾಯಿಂಟ್‌ಗಳಲ್ಲಿ 10ನ್ನು ಗೆದ್ದು ಮೊದಲ ಗೇಮ್ ಕೈಗಿಟ್ಟರು. ಎರಡನೇ ಗೇಮ್‌ನಲ್ಲಿ 7-7 ನಂತರ ಆಯುಷ್ ಮುನ್ನಡೆ ಸಾಧಿಸಿ ಅದನ್ನು ಕೊನೆವರೆಗೂ ಕಾಪಾಡಿಕೊಂಡರು. ಕೊನೆಯಲ್ಲಿ ಲಿನ್ ಚುನ್-ಯಿ ಸರ್ವ್ ತಪ್ಪಿದ ಕಾರಣ ಪಂದ್ಯ ಭಾರತ ಪರ ಅಂತ್ಯಗೊಂಡಿತು.

ಭಾರತಕ್ಕೆ ಐದನೇ ಪದಕ: 2022ರ ಚಾಂಪಿಯನ್ ಭಾರತ, ಸೆಮಿಫೈನಲ್‌ನಲ್ಲಿ ಜಪಾನ್ ಅಥವಾ ಫ್ರಾನ್ಸ್ ವಿರುದ್ಧ ಶನಿವಾರ ಮುಖಾಮುಖಿಯಾಗಲಿದೆ. ಭಾರತವು ಹಿಂದೆ 1952, 1955 ಮತ್ತು 1979ರಲ್ಲಿ ಕಂಚಿನ ಪದಕಗಳನ್ನು ಗೆದ್ದಿದೆ.

ಫಿಡೆಯಿಂದ ಬದಲಿ ದಿನಾಂಕ ಘೋಷಣೆ | ಬಿಡ್ಡಿಂಗ್‌ಗೆ ಬುಲಾವ್

ನವೆಂಬರ್‌ನಲ್ಲಿ ಚೆಸ್ ಚಾಂಪಿಯನ್‌ಶಿಪ್

ಹೊಸದಿಲ್ಲಿ: ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ಜೋವಿರ್ ಸಿಂಡ್ರೋವ್ ನಡುವೆ ನಡೆಯಲಿರುವ ಫಿಡೆ ವಿಶ್ವ ಚಾಂಪಿಯನ್‌ಶಿಪ್ ಫೈನಲ್ ಪಂದ್ಯವು ನವೆಂಬರ್ 23ರಿಂದ ಡಿಸೆಂಬರ್ 17ರವರೆಗೆ ನಡೆಯಲಿದೆ.


ವಿವಿಧ ಕಾರಣಗಳಿಂದ ಮುಂದೂಡಿದ ಬಹುದಿನಗಳ ನಂತರ ಬದಲಿ ದಿನಾಂಕವನ್ನು ಪ್ರಕಟಿಸಲಾಗಿದೆ. ಗುರುವಾರದಂದು ಈ ಬಗ್ಗೆ ಪ್ರಕಟಣೆಯಲ್ಲಿ ತಿಳಿಸಿರುವ ಫಿಡೆ, ಬಿಡ್ಡಿಂಗ್ ಮುಕ್ತಗೊಳಿಸಲಾಗಿದ್ದು ರಾಷ್ಟ್ರಗಳು ಭಾಗಿಯಾಗಬಹುದು ಎಂದು ಹೇಳಿದೆ. ಮಹಿಳೆಯರ ಚಾಲೆಂಜರ್ ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಪಂದ್ಯಾವಳಿಯನ್ನು ತಮಿಳು ನಾಡು ಆಯೋಜಿಸಲು ಎದುರು ನೋಡುತ್ತಿದ್ದು ಬಿಡ್ಡಿಂಗ್‌ನಲ್ಲಿ ಬಲಿಷ್ಠ ಆಸಕ್ತಿಯೊಂದಿಗೆ ಕಣಕ್ಕಿಳಿಯಲಿದೆ. ಸ್ಥಳೀಯ ಆಟಗಾರ್ತಿ ಆರ್. ವೈಶಾಲಿ ಈ ಬಾರಿ ಫೈನಲ್‌ನಲ್ಲಿ ಭಾಗವಹಿಸುತ್ತಿರುವುದು, ಮಹಿಳೆಯರಲ್ಲಿ ಮತ್ತು ಪುರುಷರಲ್ಲಿ ಭಾರತದ ಆಟಗಾರರು ಭಾಗವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಬಿಡ್ಡಿಂಗ್‌ನಲ್ಲಿ ಭಾರತ ಬಲಿಷ್ಠ ದೇಶವಾಗಿ ಭಾಗವಹಿಸಲಿದೆ ಎಂದು ಭಾರತೀಯ ಚೆಸ್ ಸಂಸ್ಥೆ ಈಗಾಗಲೇ ತಿಳಿಸಿದೆ. ಇದರೊಂದಿಗೆ ಫಿಡೆ ವಿಶ್ವ ಚಾಂಪಿಯನ್‌ಶಿಪ್‌ಗೆ ಬೇಕಾದ ವ್ಯವಸ್ಥೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪ್ರತಿಷ್ಠಿತ ಕೂಟಕ್ಕೊಂದು ಮೊತ್ತ ನಿಗದಿ ಮಾಡಲಾಗಿದ್ದು, ಅಂದಾಜು 8.5 ಯುಎಸ್ ಮಿಲಿಯನ್ ಡಾಲರ್ ಖರ್ಚು ಬರಬಹುದು ಎಂದು ಹೇಳಿದೆ. ಇದರಲ್ಲಿ 2.5 ಮಿಲಿಯನ್ ಡಾಲರ್ ಮೊತ್ತ ಬಹುಮಾನವಾದರೆ, 1.1 ಮಿಲಿಯನ್ ಡಾಲರ್ ಫಿಡೆ ಫೀ ಆಗಿರಲಿದೆ.



- ಭಾರತ ಬಲಿಷ್ಠ ಕಂಟೆಂಡರ್
- ಮಹಿಳೆಯರಲ್ಲಿ ವೈಶಾಲಿ, ಪುರುಷರಲ್ಲಿ ಗುಕೇಶ್ ಸ್ಪರ್ಧೆ

ಪದಬಂಧ

ರಾಜಾ ಸಂಗಮೇಶ ಹಿರೇಮಠ



5971

ಎಡದಿಂದ ಬಲಕ್ಕೆ
2.ಮನತಟ್ಟುವ ಕಲಾತ್ಮಕ ಪದರಚನೆ (3)
5.ಸರಕ್ಕನೆ ಒಳಗೆ ಬಂದ ರಾಕ್ಷಸ (3)
6.ಮನೋಭಿಲಾಷೆ ನೀಡುವ ದೈವ (3)
7.ನಾಟಕದ ಒಂದು ಭಾಗ-ಸಂಖ್ಯೆಯೂ ಹೌದು (2)
8.ಸ್ವಭಾವವಿಲ್ಲಿ ತಿರುಗಿ ಕಾಣುತ್ತಿದೆ (2)
10.ಆಕರ್ಷಣೆಯ ಸಮಾನಪದ (3)
11.ತತ್ವಶಾಸ್ತ್ರಕ್ಕೆ ಸಂಬಂಧಿಸಿದ್ದು (3)
13.ಮತಬೇಧದಿಂದುಂಟಾಗುವ ಕಲಹ (4)
15.ವ್ಯಾಪಾರದಲ್ಲಾಗುವ ಫಾಯಿದೆ-ನಷ್ಟ (4)
17.ಶರೀರದಲ್ಲಿ ಹರಿಯುವ ರಕ್ತ (3)

ಮೇಲಿನಿಂದ ಕೆಳಕ್ಕೆ
1.ನೂಲು ತೆಗೆಯುವ ಸಾಧನ (3)
2.ಬಿಳಿಯ ಬಣ್ಣದ ಸಾಂಬಾರುಕಾಳು (4)
3.ಕೆನೆ ಕಡೆದು ಹೊಸದಾಗಿ ಕಡೆದ ಬೆಣ್ಣೆ (4)
4.ಮೇನೆ-ಪಲ್ಲಕ್ಕಿಯಿದು (3)
7.ಸಂಖ್ಯೆಗಳ ಮೂಲಕ ಮಾಡುವ ಲೆಕ್ಕಶಾಸ್ತ್ರ (5)
9.ಇದು ಪನ್ನೀರಿನ ಪಾತ್ರೆ (5)
11.ಮಾರುತ್ತಾ ಇರುವುದು ಹೀಗೆ ಅರ್ಥವಿಲ್ಲದೆ (4)
12.ಸೃಜನಶೀಲ ಕುಶಲತೆಯುಳ್ಳವ (4)
14.ಅಭ್ಯಾಸ ಮಾಡುವ ಬಗೆಯಿದು (3)
16.ಇದು ಶಕುನದ ಹಕ್ಕಿ (3)

5970 ಉತ್ತರ

ಎಡದಿಂದ ಬಲಕ್ಕೆ:
2.ಅಡವಿ 5.ಲಾಭಕೋರ
6.ವರ್ಧಮಾನ 7.ದಕ್ಷಿಣೆ
8.ನಗದು 10.ಐನಾತಿ
12.ಅನುಜ 14.ಗಮನ
15.ಮಂಜುಳ 16.ತಿರುಕ
17.ಅನನ 18.ಜಲಸಾ

ಮೇಲಿನಿಂದ ಕೆಳಕ್ಕೆ:
1.ತೈಲಾಭ್ಯಂಜನ
2.ಅರವಿಂದ 3.ವಿವರಣೆ
4.ಜನವಸತಿ 9.ಗಜಗಮನ
11.ನಾಗಮಂಡಲ
12.ಅನತಿ 13.ಜಳಕ

ಕಿರುಸುದ್ದಿ

ಬ್ಯಾನರ್ ಗಲಾಟೆ ಪ್ರಕರಣ: ಸಿಐಡಿ ತನಿಖೆ ಚುರುಕು

ಬಳ್ಳಾರಿ: ಕಳೆದ ಜ.1ರಂದು ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಂಡಿದ್ದು, ಆರೋಪಿಗಳ ವಿಚಾರಣೆಗೆ ಸಿಐಡಿ ಅಧಿಕಾರಿಗಳ ತಂಡ ಬಳ್ಳಾರಿಗೆ ಆಗಮಿಸಿದೆ.ಘಟನೆಗೆ ಸಂಬಂಧಿಸಿದಂತೆ ಗುರುತಿಸಲಾದ ಆರೋಪಿಗಳನ್ನು ಸ್ಥಳದಲ್ಲಿ ಹಾಜರುಪಡಿಸಿ ಪ್ರತ್ಯೇಕವಾಗಿ ವಿಚಾರಣೆ ನಡೆಸಲೂ ಮುಂದಾಗಿದ್ದಾರೆ. ಗಲಭೆಗೆ ಕಾರಣವಾದ ಹಿನ್ನೆಲೆ, ಗಲಾಟೆ ಶುರುವಾಗಿದ್ದು ಹೇಗೆ, ಯಾರಿಂದ ಶುರುವಾಯ್ತು, ಇದಕ್ಕೆ ಸಂಚು ರೂಪಿಸಿದವರು ಯಾರು, ಇದರ ಹಿನ್ನೆಲೆ ಏನು ಸೇರಿದಂತೆ ಎಲ್ಲ ಆಯಾಮಗಳಿಂದ ಸಿಐಡಿ ಅಧಿಕಾರಿಗಳ ತಂಡ ತನಿಖೆ ನಡೆಸಲು ಮುಂದಾಗಿದೆ.ಈ ಹಿಂದೆ ಎರಡು ಬಾರಿ ಸ್ಥಳಕ್ಕೆ ಆಗಮಿಸಿ ಪ್ರಕರಣಕ್ಕೆ ಸಂಬಂಧಿಸಿ ಪೂರಕ ಮಾಹಿತಿ ಪಡೆದು, ಕೆಲ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು. ಜೊತೆಗೆ ಪ್ರಮುಖ ಆರೋಪಿಗಳನ್ನು ಕರೆದುಕೊಂಡು ಹೋಗಿ ವಿಚಾರಣೆ ನಡೆಸಿದ್ದರು. ಮತ್ತೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಅಧಿಕಾರಿಗಳು ನಗರಕ್ಕೆ ಆಗಮಿಸಿದ್ದು, ಕುತೂಹಲ ಮೂಡಿಸಿದೆ. ಈ ಪ್ರಕರಣ ಅತ್ಯಂತ ಸೂಕ್ಷ್ಮ ಹಾಗೂ ಗಂಭೀರವಾಗಿರುವ ಹಿನ್ನೆಲೆ ಅಧಿಕಾರಿಗಳು ಎಲ್ಲ ಆಯಾಮಗಳಿಂದಲೂ ತನಿಖೆ ಚುರುಕುಗೊಳಿಸಿದ್ದಾರೆ.

ಇಡಿ ಪ್ರಕರಣದ ತನಿಖೆ ಪೂರ್ಣಗೊಳಿಸಲು ಮೇಲಧಿಕಾರಿಗಳ ಸೂಚನೆ ಹಿನ್ನೆಲೆ ಅಧಿಕಾರಿಗಳು ನಾಲ್ಕು ದಿಕ್ಕಿನಿಂದಲೂ ತನಿಖೆ ಚುರುಕುಗೊಳಿಸಿದ್ದಾರೆ. ತನಿಖೆಯ ಭಾಗವಾಗಿ ಸ್ಥಳ ಪರಿಶೀಲನೆ ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಕೂಡ ದಾಖಲಿಸಲೂ ಮುಂದಾಗಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಗಲಾಟೆ: ಹಲ್ಲೆ

ಹುಬ್ಬಳ್ಳಿ: ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಗಳಿಬ್ಬರು ಪೊಲೀಸ್ ಠಾಣೆಯ ಎದುರಲ್ಲಿಯೇ ಹೊಡೆದಾಡಿಕೊಂಡ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗೇಶ ಬಿಲ್ಲಾ ಎಂಬಾತನಿಗೆ ಗಾಯವಾಗಿದ್ದು, ಆಥೋನಿ ಭಂಡಾರಿ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ಏ.18ರಂದು ರಾತ್ರಿ 9.40ರ ಸುಮಾರಿಗೆ ನಾಗೇಶ ಮತ್ತು ಗೆಳೆಯರಾದ ದಾಸರಿ ಪೀಟರ್, ವೆಂಕಟ್, ಬಿಲ್ಲಾ ಪೀಟರ್ ಸೇರಿ ಅಂಬೇಡ್ಕರ್ ಜಯಂತಿಗೆ ಇನ್ಸಪೆಕ್ಟರ್ ಅವರನ್ನು ಮುಖ್ಯಅತಿಥಿಯಾಗಿ ಕರೆಯಲು ಠಾಣೆಗೆ ಹೋಗಿದ್ದಾರೆ. ಈ ವೇಳೆ ಠಾಣೆಯಲ್ಲಿ ಇನ್ಸಪೆಕ್ಟರ್‌ಗಾಗಿ ಕಾಯುತ್ತಿದ್ದಾಗ ಆಂಥೋಣಿ ಹೊರಗಡೆಯಿಂದ ಬಂದು ಮೊಣಕಾಲಿನಿಂದ ಮುಖಕ್ಕೆ ಹೊಡೆದು ಹಲ್ಲೆ ಮಾಡಿದಲ್ಲದೆ, ಆಸ್ಪತ್ರೆಗೆ ಹೋಗದಂತೆ ತಡೆದ ಹಲ್ಲೆ ಮಾಡಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಬಂಟರ ಯಾನೆ ನಾಡವರ ಮಾತೃಸಂಘ: ಅಧ್ಯಕ್ಷರಾಗಿ ಕೆ. ಅಜಿತ್ ಕುಮಾರ್ ರೈ ಮಾಲಾಡಿ ಪುನರಾಯ್ಕೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ವಿದೇಶಗಳಲ್ಲೂ ಸದಸ್ಯರನ್ನು ಒಳಗೊಂಡ ಬಂಟರ ಯಾನೆ ನಾಡವರ ಮಾತೃ ಸಂಘದ 2026 –29ರ ಸಾಲಿಗೆ ಮಾಲಾಡಿ ಅಜಿತ್ ಕುಮಾರ್ ರೈ ಕೊಡಿಯಾಲ್‌ಗುತ್ತು ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ.

ಅಭಿವೃದ್ಧಿಗೆ ಶ್ರಮಿಸುವೆ

ಮುಂದಿನ ದಿನಗಳಲ್ಲಿ ಸಂಘದ ಮಹತ್ವಾಕಾಂಕ್ಷೆ ಯೋಜನೆಯಾದ ಶತಮಾನೋತ್ಸವ ಕಟ್ಟಡ ಸಂಕೀರ್ಣ, ವಿಶ್ವವ್ಯಾಪಿ ಸಮಾಜ ಬಾಂಧವರನ್ನು ಒಂದೇ ಸೂರಿನಡಿ ತರ ಬಯಸುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವೆ ಎಂದು ಕೆ. ಅಜಿತ್ ಕುಮಾರ್ ರೈ ಹೇಳಿದರು. ಮುಖ್ಯ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ವಕೀಲ ಉಮೇಶ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ ಅವರು ಅಧ್ಯಕ್ಷರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಉಪ ಚುನಾವಣಾಧಿಕಾರಿ, ವಕೀಲ ನವೀನ್ ಶೆಟ್ಟಿ ಹಾಗೂ ಚುನಾವಣಾಧಿಕಾರಿ ಸದಾಶಿವ ಶೆಟ್ಟಿ ಉಪಸ್ಥಿತರಿದ್ದರು.

ಮಲ್ಪೆ ಬಂದರಿನಲ್ಲಿ ಹಣಕಾಸಿನ ವಿಚಾರಕ್ಕೆ ಗಲಾಟೆ: ಪರಸ್ಪರ ದೂರು ದಾಖಲು

ಉಡುಪಿ: ಮೀನುಗಾರಿಕಾ ವ್ಯವಹಾರದ ಹಣಕಾಸಿನ ಬಾಕಿ ವಿಚಾರಕ್ಕೆ ಸಂಬಂಧಿಸಿದಂತೆ ಮಲ್ಪೆ ಬಂದರಿನ ಆಕ್ಷನ್ ದಕ್ಕೆಯಲ್ಲಿ ಗುರುವಾರ ಬೆಳಿಗ್ಗೆ ಹಲ್ಲೆ ನಡೆದಿದ್ದು, ಈ ಸಂಬಂಧ ಮಲ್ಪೆ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಹರೀಶ್ ಎಂಬುವವರು ದಕ್ಕೆಯಲ್ಲಿದ್ದಾಗ ಅಲ್ಲಿಗೆ ಕಾರಿನಲ್ಲಿ ಬಂದ ಜಯೇಶ್ ಕೋಟ್ಯಾನ್, ಅವರ ತಾಯಿ ಭಾರತಿ ಕೋಟ್ಯಾನ್ ಮತ್ತು ಇತರರು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಜಯೇಶ್ ಕೋಟ್ಯಾನ್ ಅವರು ಹರೀಶ್ ಅವರ ಎದೆ ಹಾಗೂ ಮರ್ಮಾಂಗಕ್ಕೆ ತುಳಿದು, ಚಾಕುವಿನಿಂದ ಇರಿಯಲು ಯತ್ನಿಸಿದ್ದಾರೆ ಎನ್ನಲಾಗಿದೆ. ಗಾಯಗೊಂಡ ಹರೀಶ್ ಅವರು ಉಡುಪಿಯ ಹೈಟೆಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

ಹಲ್ಲೆಯ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಘಟನೆಗೆಸಂಬಂಧಿಸಿ ಹರೀಶ್ ನೀಡಿದ ದೂರಿನನ್ವಯ ಜಯೇಶ್ ಕೋಟ್ಯಾನ್ ಮತ್ತು ತಂಡದ ವಿರುದ್ಧ ಕೊಲೆ ಯತ್ನ ಸೇರಿದಂತೆ ವಿವಿಧ ಕಲಂ ಅಡಿ ಪ್ರಕರಣ ದಾಖಲಾಗಿದೆ. ಇನ್ನೊಂದೆಡೆ, ಜಯೇಶ್ ಕೋಟ್ಯಾನ್ ಅವರ ತಾಯಿ ಭಾರತಿ ಕೋಟ್ಯಾನ್ ಅವರು ಕೂಡ ಹರೀಶ್ ವಿರುದ್ಧ ದೂರು ನೀಡಿದ್ದು, ಮಲ್ಪೆ ಪೊಲೀಸರು ಪ್ರತಿ ದೂರು ದಾಖಲಿಸಿಕೊಂಡಿದ್ದಾರೆ. ಸದ್ಯ ಎರಡು ಪ್ರಕರಣಗಳು ತನಿಖೆಯ ಹಂತದಲ್ಲಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ನಂತೂರು ಜಂಕ್ಷನ್ ಬಳಿ ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ

ಮಂಗಳೂರು: ನಗರದ ನಂತೂರು ಜಂಕ್ಷನ್ ಬಳಿಯ ಅಪಾರ್ಟ್ ಮೆಂಟ್ ವೊಂದರಲ್ಲಿ ಶುಕ್ರವಾರ ಸಂಜೆ ಬೆಂಕಿ ಅವಘಡ ಸಂಭವಿಸಿದೆ. ಕದ್ರಿ ಅಗ್ನಿಶಾಮಕದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಬೆಂಕಿ ಹೊತ್ತಿಕೊಂಡ ಕೊಠಡಿಯಲ್ಲಿ ಶೇಖರಿಸಿಟ್ಟಿದ್ದ ವಿವಿಧ ಸೊತ್ತುಗಳು ಹಾನಿಗೀಡಾಗಿವೆ. ಒಟ್ಟು ಎಷ್ಟು ನಷ್ಟವಾಗಿದೆ ಎನ್ನುವ ಬಗ್ಗೆ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸಕಾಲದಲ್ಲಿ ಬೆಂಕಿ ಶಮನಗೊಳಿಸಿದ ಪರಿಣಾಮ ಹೆಚ್ಚಿನ ಅನಾಹುತ ತಪ್ಪಿದೆ. ಅಪಾರ್ಟ್‌ಮೆಂಟ್ ಆಗಿದ್ದ ಕಾರಣ ಕೆಲ ಹೊತ್ತು ಆತಂಕಕ್ಕೆ ಕಾರಣವಾಯಿತು.

ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರಿನ ಪ್ರಮಾಣ ಇಳಿಕೆ: ಆತಂಕ

▸ ಮಲ್ಲಿಕಾರ್ಜುನ ತುಂಗಳ



ರಬಕವಿ-ಬನಹಟ್ಟಿ: ಬೇಸಿಗೆ ದಿನಗಳು ಇನ್ನೂ ಬಾಕಿಯಿರುವಾಗಲೇ ಹಿಪ್ಪರಗಿ ಬ್ಯಾರೇಜ್‌ನಲ್ಲಿ ನೀರಿನ ಪ್ರಮಾಣ ಇಳಿಕೆಯಾಗಿದ್ದು, ನೂರಾರು ಗ್ರಾಮ ಹಾಗೂ ಪಟ್ಟಣಗಳಿಗೆ ಬೇಸಿಗೆ ನೀಗಿಸುವ ಕೊನೆಯ ದಿನಗಳು ಆತಂಕಕಾರಿಯಾಗುವ ಸಾಧ್ಯತೆಯಿದೆ.

ರಬಕವಿ-ಬನಹಟ್ಟಿ ತಾಲೂಕಿನ 1 ನಗರಸಭೆ, 2 ಪುರಸಭೆ ಹಾಗೂ 17 ಗ್ರಾಮ ಪಂಚಾಯತಿ ಸೇರಿದಂತೆ ಒಟ್ಟು 30 ಗ್ರಾಮಗಳಲ್ಲಿ ಮೇ ಮಧ್ಯಂತರದಲ್ಲಿ ನೀರಿನ ಸಮಸ್ಯೆ ತಲೆದೋರುವ ಲಕ್ಷಣಗಳು ಕಾಣುತ್ತಿವೆ.

ಹಿಪ್ಪರಗಿ ಬ್ಯಾರೇಜ್‌ನಲ್ಲಿ ಕಳೆದ ತಿಂಗಳು ಭಾರೀ ಪ್ರಮಾಣದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿತ್ತು. ಕಳೆದ ತಿಂಗಳು ಮಹಾರಾಷ್ಟ್ರದ ರಾಜಾಪೂರ ಬ್ಯಾರೇಜ್‌ನಿಂದ ಅಲ್ಪ ಪ್ರಮಾಣದಲ್ಲಿನೀರು ಬಂದಿದ್ದರಕಾರಣದಿಂದಾಗಿ ಇದೀಗ ಮತ್ತೇ 1.5 ಟಿಎಂಸಿಯಷ್ಟು ನೀರು ಸಂಗ್ರಹವಾಗಿದೆ.

ದಿಗಂತ ವಿಶೇಷ

ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಸಂಜೀವಿನಿಯಾಗಿರುವ ಹಿಪ್ಪರಗಿ ಜಲಾಶಯದಲ್ಲಿನ ನೀರು ಬೇಸಿಗೆಯ ಬಾಷ್ಪೀಕರಣ ಹೊಡೆತಕ್ಕೆ ಸಂಗ್ರಹದಲ್ಲಿ ಭಾರೀ ಕುಸಿತಕ್ಕೆ ಕಾರಣವಾಗಿದೆ. ಹಿಪ್ಪರಗಿ ಜಲಾಶಯದಿಂದ ದಿನಂಪ್ರತಿ 10ರಿಂದ 13 ಸೆ.ಮೀ.ನಷ್ಟು ಅಂದರೆ 0.7 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿದೆ. ಇತ್ತ ಜನತೆ ಬಳಕೆಗೆ ಕಾರಣವಾದರೆ, ಮತ್ತೊಂದೆಡೆ ಬಿರು ಬಿಸಿಲಿನ ತಾಪಕ್ಕೆ ನೀರು ತೀವ್ರ ಕಡಿಮೆಯಾಗಲು ಕಾರಣವಾಗಿದೆ.

ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರಿ ಕುಸಿತ ಕಂಡ ಹಿನ್ನೆಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ನೀರಿನ ಸಮರ್ಪಕ ಬಳಕೆಯಿಂದ ಬೇಸಿಗೆ ದಿನಗಳನ್ನು ಸಂಪೂರ್ಣ ನಿರಾಯಾಸವಾಗಿ ಕಳೆಯಬಹುದಾಗಿದೆ.

ಎಲ್ಲ ಗ್ರಾಮಗಳಲ್ಲಿ ನೀರಿನ ಅಭಾವವಾಗದ ರೀತಿಯಲ್ಲಿ ಕೊಳವೆ ಬಾವಿಗಳನ್ನು ಸರ್ಕಾರಿ ಹಾಗೂ ರೈತರ ಪ್ರದೇಶದಲ್ಲಿರುವವೆಲ್ಲವನ್ನೂ ಗುರ್ತಿಸಿ ಮುಂದಿನ ದಿನಗಳಲ್ಲಿ ಬೇಸಿಗೆ ನೀಗಿಸಲು ತಾಲೂಕಾಡಳಿತ ಸಭೆಗಳ ಮೂಲಕ ಸರ್ವ ಸನ್ನದ್ಧವಾಗಿದೆ.

ಪ್ರತಿ ವರ್ಷ ಬೇಸಿಗೆ ಸಂದರ್ಭ ಹಿಪ್ಪರಗಿ ಜಲಾಶಯದಿಂದ ಮುಂಭಾಗಕ್ಕೆ ಅಂದಾಜು ಸುಮಾರು 0.5 ಟಿಎಂಸಿಯಷ್ಟು ನೀರನ್ನು ಜಮಖಂಡಿ ಭಾಗಕ್ಕೆ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಗೊಳಿಸುತ್ತಿದ್ದರು. ಪ್ರಸಕ್ತ ವರ್ಷ ಗೇಟ್ ನಂ.22ರಲ್ಲಿ ಆಗಿರುವ ಅವಘಡದಿಂದ 2 ಟಿಎಂಸಿಯಷ್ಟು ನೀರು ಪೋಲಾಗಿದ್ದು, ಇದೇ ಪರಿಣಾಮವಾಗಿ ಹಿಪ್ಪರಗಿ ಬ್ಯಾರೇಜ್‌ನ ಹಿನ್ನೀರನಲ್ಲಿರುವ ನಗರ, ಗ್ರಾಮ ಹಾಗೂ ರೈತ-ಜಾನುವಾರುಗಳಿಗೆ ಸಾಧ್ಯತೆಗಳಿವೆ. ಬೇಸಿಗೆ ಮುಗಿಯುವವರೆಗೂ ಇದೇ ನೀರು ನಿಯಂತ್ರಣದಲ್ಲಿದ್ದರೆ ಮಾತ್ರ ಮೇ ಮಧ್ಯಂತವರೆಗೆ ಅನುಕೂಲವಾಗುವುದು.

> **ಸದ್ಯಕ್ಕೆ ಎಲ್ಲಿಯೂ ನೀರಿನ ಅಭಾವವಿಲ್ಲ, ಅಽಕಾರಿಗಳ ನೇತೃತ್ವದಲ್ಲಿ ಸಭೆಗಳನು ನಡೆಸಲಾಗಿದೆ. ಮೇ ಮಧ್ಯಂತರ ನಂತರ ನೀರಿನ ಕೊರತೆಯಾದರೆ ಖಾಸಗಿ ಹಾಗೂ ಸರ್ಕಾರಿ ಕೊಳವೆ ಬಾವಿಗಳೇ ಆಧಾರವಾಗಲಿವೆ.**
> ■ ಗಿರೀಶ ಸ್ವಾದಿ, ತಹಶೀಲ್ದಾರ್, ರಬಕವಿ-ಬನಹಟ್ಟಿ

ಆರ್ಯಾಪು ಗ್ರಾಮ ಪಂಚಾಯತ್‌ನ ಪ್ರಯೋಗ | ಕಾಡುವ ಸಮಸ್ಯೆಗೆ ನಾಡಿನಲ್ಲೇ ಪರಿಹಾರ

ಇಲ್ಲಿ ಗಾಜು 'ಮರಳಾಗಿ' ಮರು ಬಳಕೆ!





ಪುತ್ತೂರು: ದೇಶದಲ್ಲಿಯೇ ಕಸ ವಿಲೇವಾರಿ ಎಲ್ಲರ ತಲೆಕೆಡಿಸುತ್ತಿರುವ ದೊಡ್ಡ ಪಿಡುಗು. ಇದರೊಂದಿಗೆ ಈ ಕಸ ವಿಲೇವಾರಿ ಮಾತ್ರವಲ್ಲ ಕಸ ವಿಂಗಡಣೆಯೂ ಸ್ಥಳೀಯ ಸರಕಾರಗಳ ಹೆಗಲಿಗೆ ಬಿದ್ದಿದೆ. ಹಾಗಾಗಿ ಗ್ರಾಮ ಪಂಚಾಯತ್‌ಗಳು ಬಹುತೇಕ ಶ್ರಮವನ್ನು ಈ ಯೋಜನೆಯ ಜಾರಿಗಾಗಿ ವಿನಿಯೋಗಿಸುತ್ತಿವೆ. ಇಂತಹ ಸಂದರ್ಭದಲ್ಲಿಯೇ ಪುತ್ತೂರಿನ ಆರ್ಯಾಪು ಗ್ರಾ.ಪಂ. ಇದೀಗ ಗಾಜಿನ ತ್ಯಾಜ್ಯದಿಂದ ಹೊಸ ಉತ್ಪನ್ನ ತಯಾರಿಗೆ ಮುಂದಾಗುವ ಮೂಲಕ ಜಿಲ್ಲೆಗೆ ಮಾದರಿಯಾಗುವತ್ತ ಹೆಜ್ಜೆ ಇಟ್ಟಿದೆ.

ಎಲ್ಲೆಂದರಲ್ಲಿಎಸೆಯುವಗಾಜಿನಬಾಟಲಿಗಳನ್ನು ಕಸ ವಿಲೇವಾರಿ ಸಂದರ್ಭದಲ್ಲಿ ವಿಂಗಡಿಸುವುದೂ ಸವಾಲು. ಈಗ ಗಾಜಿನ ವಸ್ತುಗಳನ್ನೂ ಬದುಕಿಗೆ ಪೂರಕವಾದ ಉತ್ಪನ್ನವಾಗಿ ಬದಲಾಯಿಸಲು ಹೊರಟಿರುವ ಆರ್ಯಾಪು ಗ್ರಾ.ಪಂ. ಗಾಜಿನ ತ್ಯಾಜ್ಯಕ್ಕೆ ಮೌಲ್ಯ ತಂದುಕೊಡಲು ಮುಂದಾಗಿದೆ. ಸ್ವಚ್ಛಭಾರತ್ ಯೋಜನೆಯಡಿ ಮನೆ ಮನೆಗಳಿಂದ ಕಸ ಸಂಗ್ರಹ ಮಾಡುವ ವೇಳೆ ಗ್ರಾ.ಪಂ.ಗಳಿಗೆ ಈ ಗಾಜಿನ ಹುಡಿ, ಬಾಟಲುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಹಾಗೆಯೇ ಇಟ್ಟರೆ ಇದು ಅಪಾಯಕಾರಿ ವಸ್ತುಗಳು. ಉತ್ತಮ ಗಾಜಿನ ಬಾಟಲುಗಳನ್ನು ಗುಜರಿ ಅಂಗಡಿಗಳಿಗೆ ಕೊಡಬಹುದಾದರೂ ತುಂಡಾದ ಗಾಜುಗಳನ್ನು ಯಾರೂ ಖರೀದಿ ಮಾಡುವುದಿಲ್ಲ.

ಗ್ರಾ.ಪಂ.ನಿಂದ ಪರಿಹಾರ

ಇದಕ್ಕೊಂದು ಪರಿಹಾರ ಹುಡುಕಲು ಆರ್ಯಾಪು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗೇಶ್ ಮಾಡಿದ ಪ್ರಯತ್ನವೇ ಗಾಜಿನ ಮರಳು ತಯಾರಿ. ಸಾಮಾಜಿಕ ಜಾಲತಾಣದಲ್ಲಿ ಹುಡುಕಾಟ ಮಾಡಿದಾಗ ಗಾಜಿನ ಬಾಟಲಿಗಳನ್ನು ಹುಡಿ ಮಾಡುವ ಯಂತ್ರದ ಬಗ್ಗೆ ಅರಿತುಕೊಂಡ ಅಭಿವೃದ್ಧಿ ಅಧಿಕಾರಿ ನಾಗೇಶ್ ಕೆನರಾ ಬ್ಯಾಂಕಿನ ಸಹಕಾರದೊಂದಿಗೆ ಈ ಯಂತ್ರ ಖರೀದಿ ಮಾಡುತ್ತಾರೆ. ತಮಿಳುನಾಡಿನಿಂದ ತರಿಸಲಾದ ರೂ.4.25 ಲಕ್ಷ ವೆಚ್ಚದ ಈ ಯಂತ್ರ ಈಗ ಬಾಟಲಿಗಳನ್ನು ಮರಳನ್ನಾಗಿ ಪರಿವರ್ತಿಸುವ ಕಾಯಕ ನಡೆಸುತ್ತಿದೆ.

ಸಾಕಷ್ಟು ಬೇಡಿಕೆ ಬಂದಿದೆ

ಪ್ರಾರಂಭಿಕ ಹಂತದಲ್ಲಿರುವ ಆರ್ಯಾಪು ಗಾಜಿನ ಮರಳು ತಯಾರಿಕಾ ಘಟಕ ಭವಿಷ್ಯದಲ್ಲಿ ಪುತ್ತೂರು ತಾಲೂಕಿನ 22 ಗ್ರಾ.ಪಂ.ಗಳು ಮಾತ್ರವಲ್ಲ ಕಡಬ, ಸುಳ್ಯ ತಾಲೂಕುಗಳ ಗಾಜಿನ ತ್ಯಾಜ್ಯಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ಬರಲಿದೆ. ಈಗಾಗಲೇ ಈ ಗಾಜಿನ ಮರಳಿಗೆ ಸಾಕಷ್ಟು ಬೇಡಿಕೆಗಳು ಬಂದಿವೆ. ಹಾಗಾಗಿ ಪುತ್ತೂರು ಉಪವಿಭಾಗದ ಗ್ರಾ.ಪಂ.ಗಳು ಇನ್ನು ಮುಂದೆ ಗಾಜಿನ ಬಾಟಲಿಗಳ ತ್ಯಾಜ್ಯದ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

ಗಾಜಿನ ಬಾಟಲಿಗಳ ಮೂಲವೂ ಮರಳು

ಗಾಜಿನ ಉತ್ಪನ್ನವನ್ನು ಮತ್ತೆ ಮರಳಾಗಿಸುವ ಯೋಜನೆ ಇಲ್ಲಿ ಸಾಕಾರಗೊಳ್ಳುತ್ತಿದೆ. ಆದರೆ ಬಾಟಲಿಗಳ ಬಣ್ಣದಲ್ಲಿಯೇ ಈ ಮರಳು ದೊರೆಯುತ್ತದೆ. ವಿವಿಧ ಬಣ್ಣಗಳ ಗಾಜುಗಳ ಮರಳು ಆಯಾಯ ಗಾಜಿನ ಬಣ್ಣದಂತೆ ಮರಳಿನ ರೂಪಪಡೆದುಕೊಳ್ಳುತ್ತಿವೆ. ಈ ಮರಳು ಗಾರೆ ಕೆಲಸದ ಪ್ರಯೋಗದಲ್ಲಿ ಯಶಸ್ಸು ಕಂಡರೆ ಪ್ರಕೃತಿದತ್ತ ಮರಳಿಗೆ ಪರ್ಯಾಯ ವಾಗಲಿದೆ. ಗಾರೆ ಕೆಲಸಕ್ಕೆ ಈ ಮರಳು ಬಳಸಿಕೊಳ್ಳಲು ಸಾಧ್ಯವಾಗಿಸುವ ಪ್ರಯೋಗವನ್ನು ಆರ್ಯಾಪು ಗ್ರಾ.ಪಂ. ನಡೆಸಲಿದೆ. ನೈಸರ್ಗಿಕ ಮರಳಿನ ಜತೆಗೆ ಈ ಗಾಜಿನ ಮರಳನ್ನು ಮಿಶ್ರಣ ಮಾಡಿ ಉಪಯೋಗಿಸಲು ಸಾಧ್ಯವಾದರೂ ಇದೊಂದು ಉತ್ತಮ ಯೋಜನೆಯಾಗಲಿದೆ. ಆರ್ಯಾಪು ಗ್ರಾ.ಪಂ.ನ ಈ ಗಾಜಿನ ಮರಳನ್ನು ಗಾರೆಗೆ ಬಳಸುವ ಯೋಜನೆ ಯಶಸ್ವಿ ಕಂಡರೆ ಗ್ರಾ.ಪಂ. ಆದಾಯಕ್ಕೂ ದೊಡ್ಡ ಪ್ರಮಾಣದ ಕೊಡುಗೆಯಾಗಲಿದೆ ಎಂಬುವುದರಲ್ಲಿ ಅನುಮಾನವಿಲ್ಲ.

> **ರಾಜ್ಯಕ್ಕೂ ಮಾದರಿ**
> **ಬಾಟಲ್ ವಿಲೇವಾರಿಗೆ ದೊಡ್ಡ ಸಮಸ್ಯೆ ಆಗುತ್ತಿತ್ತು. ರಸ್ತೆ ಬದಿಯಲ್ಲಿ ವ್ಯಾಪಕವಾಗಿ ಸಿಗುತ್ತದೆ. ಈ ಸಮಸ್ಯೆಗೊಂದು ಪರಿಹಾರ ಹುಡುಕುವ ನಿಟ್ಟಿನಲ್ಲಿ ಆರ್ಯಾಪಿನಲ್ಲಿ ಯಂತ್ರವನ್ನು ಬಳಸಿಕೊಂಡು ಗಾಜಿನ ಬಾಟಲಿಗಳನ್ನು ಮರಳನ್ನಾಗಿಸುವ ಕೆಲಸ ಆರಂಭವಾಗಿದೆ. ಇದು ರಾಜ್ಯಕ್ಕೂ ಮಾದರಿಯಾದ ಕೆಲಸವಾಗಿದ್ದು, ಹೊಸ ಆವಿಷ್ಕಾರವಾಗಿದೆ. ಪುತ್ತೂರಿನಲ್ಲಿ ಸ್ವಚ್ಛತೆಗೆ ಸಂಬಂಧಿಸಿದಂತೆ ವಿನೂತನ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಬರುತ್ತಿದ್ದೇವೆ. ಇದರಲ್ಲಿ ಆರ್ಯಾಪಿನಲ್ಲಿ ಆರಂಭಿಸಲಾದ ಗಾಜಿನ ಬಾಟಲಿನಿಂದ ಮರಳು ತಯಾರಿಕೆ ನಡೆಸುವುದೂ ಒಂದಾಗಿದೆ.**
> ■ ನವೀನ್ ಕುಮಾರ್ ಭಂಡಾರಿ,
> ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಪುತ್ತೂರು

ಚಿತ್ರದುರ್ಗದಲ್ಲಿ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ

ದ.ಕ.ದಿಂದ ಐದು ಸಾವಿರ ಮಂದಿ

ಮಂಗಳೂರು: ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಐದು ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ತಿಳಿಸಿದರು.



ಅಭಿಮಾನೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಈಗಾಗಲೇ ವಿಧಾನಸಭಾವಾರು ಸಭೆಗಳನ್ನು ನಡೆಸಲಾಗಿದೆ. ದ.ಕ. ಜಿಲ್ಲೆಯಲ್ಲಿ ಶಾಸಕ ವೇದವ್ಯಾಸಕಾಮತ್ ಅವರನೇತೃತ್ವದಲ್ಲಿ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಕುಮಾರ್ ಪುತ್ತೂರು, ಯುವಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ ಅವರು ಉಸ್ತುವಾರಿಗಳಾಗಿದ್ದು, ಸಿದ್ಧತೆ ನಡೆಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದು, 10 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಕುಮಾರ್ ಪುತ್ತೂರು ಮಾತನಾಡಿ, ಬಿ.ಎಸ್. ಯಡಿಯೂರಪ್ಪ ಅವರು ದಕ್ಷಿಣ ಕನ್ನಡ ಜಿಲ್ಲೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಸ್ಮಾರ್ಟ್ ಸಿಟಿ ಯೋಜನೆಗೂ ಮುನ್ನವೇ ಮಂಗಳೂರು ಮಹಾನಗರ ಪಾಲಿಕೆ ಅಭಿವೃದ್ಧಿ ಯೋಜನೆಗೆ 200 ಕೋಟಿ ರೂ. ಅನುದಾನ ಒದಗಿಸಿದ್ದರು. ಮೀನುಗಾರರಿಗೆ ಅನೇಕ ಕೊಡುಗೆ ನೀಡಿದ್ದಾರೆ. ರೈತರ ಸಾಲ ಮನ್ನಾ ಮಾಡಿದ್ದಾರೆ. ಪಕ್ಷ ಸಂಘಟನೆಗಾಗಿ ದ.ಕ. ಜಿಲ್ಲೆಗೆ ಅತಿ ಹೆಚ್ಚು ಭಾರಿ ಭೇಟಿ ನೀಡಿದ್ದಾರೆ. ಹೀಗಾಗಿ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಬೇಕು ಎಂದು ವಿನಂತಿಸಿದರು.

ಬಿಜೆಪಿ ಯಾರನ್ನೂ ಪಕ್ಷದಿಂದ ದೂರ ಮಾಡಿಲ್ಲ

ಪುತ್ತೂರಿನಲ್ಲಿ ಮದುವೆಯಾಗುವುದಾಗಿ ನಂಬಿಸಿ ಮಗು ಕರುಣಿಸಿ ವಂಚಿಸಿದ ಪ್ರಕರಣದಲ್ಲಿ ಪಿ.ಜಿ. ಜಗನ್ನಿವಾಸ ರಾವ್ ಅವರು ಬಿಜೆಪಿ ಮುಖಂಡ ಎಂದು ಮಾಧ್ಯಮಗಳಲ್ಲಿ ವರದಿ ಯಾಗುತ್ತಿರು ವುದು ಸರಿಯಲ್ಲ. ಪ್ರಕರಣ ಬೆಳಕಿಗೆ ಬಂದ ತಕ್ಷಣ ಜಗನ್ನಿವಾಸ ರಾವ್ ಅವರಿಗೆ ಬಿಜೆಪಿಯಿಂದ ನೋಟಿಸ್ ಜಾರಿಗೊಳಿಸಲಾಗಿತ್ತು. ಡಿಎನ್ಎ ವರದಿ ಬಂದ ಬಳಿಕವೂ ಕೃಷ್ಣ ಜೆ. ರಾವ್ ಮದುವೆಯಾಗಲು ನಿರಾಕರಿಸಿದಾಗ ಜಗನ್ನಿವಾಸ ರಾವ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಪ್ರಸ್ತುತ ಬಿಜೆಪಿಗೂ ಜಗನ್ನಿವಾಸ ರಾವ್ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದು ಸತೀಶ್ ಕುಂಪಲ ಸ್ಪಷ್ಟಪಡಿಸಿದರು. ಅರುಣ್‌ಕುಮಾರ್ ಪುತ್ತಿಲ ಅವರಿಗೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿ ಸಿದ ಅವರು, ಬಿಜೆಪಿ ಯಾರನ್ನೂ ಪಕ್ಷದಿಂದ ದೂರ ಮಾಡಿಲ್ಲ, ಪಕ್ಷನಿಷ್ಠೆಯಿಂದ ಇರುವ ಎಲ್ಲರನ್ನೂ ಪಕ್ಷತನಲ್ಲೇಇರಿಸಿಕೊಳ್ಳುತ್ತದೆಎಂದು ಸತೀಶ್ ಕುಂಪಲ ಹೇಳಿದರು.

ಅಗ್ನಿಶಾಮಕ ಸಿಬ್ಬಂದಿ ಸಾಹಸಕ್ಕೆ ಉಘೇ ಎಂದ ಜನತೆ

ನೆತ್ತಿ ಸುಡುವ ಬಿಸಲನ್ನೂ ಲೆಕ್ಕಿಸದೆ ಮಾರ್ಜಾಲ ರಕ್ಷಣೆಗೆ ಬಾವಿಗಿಳಿದ್ರು!

ಮಂಗಳೂರು: ಆಕಸ್ಮಿಕವಾಗಿ ಆಳದ ಬಾವಿಗೆ ಬಿದ್ದಿದ್ದ ಬೆಕ್ಕೊಂದನ್ನು ಮಂಗಳೂರಿನ ಅಗ್ನಿಶಾಮಕ ದಳದ ಸಿಬ್ಬಂದಿ ಬಿಸಿಲಿನ ತಾಪವನ್ನೂ ಲೆಕ್ಕಿದೆ ಭಾರೀ ಸಾಹಸಪಟ್ಟು ರಕ್ಷಣೆ ಮಾಡಿದ್ದಾರೆ.

ಮಂಗಳೂರು ನಗರದ ಸರಸ್ವತಿ ನಿಲಯ ಮಣ್ಣಗುಡ್ಡದಲ್ಲಿ ಆಕಸ್ಮಿಕವಾಗಿ ಬೆಕ್ಕು ಬಾವಿಗೆ ಬಿದ್ದಿದ್ದು, ಮೇಲಕ್ಕೆ ಬರಲಾಗದೆ ಬಾವಿಯೊಳಗೆ ಒದ್ದಾಡುತ್ತಿತ್ತು. ಇದನ್ನು ಕಂಡ ಸ್ಥಳೀಯರು ತಕ್ಷಣವೇ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿ ರಕ್ಷಣೆಗೆ ಮನವಿ ಮಾಡಿದ್ದರು. ತಕ್ಷಣ ಕಾರ್ಯ ಪ್ರವೃತ್ತರಾದ ಪಾಂಡೇಶ್ವರ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ತಮ್ಮ ಜೀವದ ಹಂಗು ತೊರೆದು ಕೆಲವು ತಾಸುಗಳ ಕಾಲ ಶ್ರಮಪಟ್ಟು ಕೊನೆಗೂ ಪುಟ್ಟ ಜೀವವನ್ನು ರಕ್ಷಿಸಿದ್ದಾರೆ.

ಸತತ ಒಂದು ಗಂಟೆಯ ಪರಿಶ್ರಮ

ಸತತ ಒಂದು ಗಂಟೆಯ ಪರಿಶ್ರಮ ದಿಂದ ಅಗ್ನಿಶಾಮಕದ ದಳದ ಸಿಬ್ಬಂದಿ ಬೆಕ್ಕನ್ನು ಉಳಿಸಿದ್ದಾರೆ. ಹಗ್ಗದ ಸಹಾಯದಿಂದ ಸಿಬ್ಬಂದಿ ಬಾವಿಯ ಆಳಕ್ಕೆ ಇಳಿದು ನಂತರ ಬೆಕ್ಕನ್ನು ಮೇಲೆ ಎತ್ತಿಕೊಂಡು ಬಂದಿದ್ದಾರೆ.



'ಜೀವ' ಎಲ್ಲ ಒಂದೇ ಅಲ್ಲವೇ?

ಮನುಷ್ಯರು, ಪ್ರಾಣಿಗಳು ಎನ್ನದೇ ಎಲ್ಲರನ್ನೂ, ಎಲ್ಲವನ್ನೂ 'ಜೀವ' ಎಂದು ಪರಿಗಣಿಸುವ ಅಗ್ನಿಶಾಮಕ ಸಿಬ್ಬಂದಿ ಕೆಲಸಕ್ಕೆ ಜನತೆಯ ಮೆಚ್ಚುಗೆ ಸಿಕ್ಕಿದೆ.

- ಸತತ ಒಂದು ಗಂಟೆಗಳ ಕಾಲ ಬೆಕ್ಕಿನ ರಕ್ಷಣೆಗೆ ಸಿಬ್ಬಂದಿ ಶ್ರಮ
- ಕೊನೆಗೂ ಸುರಕ್ಷಿತವಾಗಿ ಬಾವಿಯಿಂದ ಮೇಲೆ ಬಂದು ಮರುಜೀವ ಪಡೆದ ಬೆಕ್ಕು


ಅನಧಿಕೃತವಾಗಿ ಕಾರ್ಯನಿರ್ವಹಣೆ ಮಾಡಿದರೆ ಕಾನೂನು ಕ್ರಮ | ತಕ್ಷಣವೇ ಪರವಾನಿಗೆಗಳ ನವೀಕರಣಕ್ಕೆ ಸೂಚನೆ

ಕೊಡಗು ಜಿಲ್ಲೆಯಲ್ಲಿ ಹೋಂಸ್ಟೇಗಳ ನೋಂದಣಿ ಕಡ್ಡಾಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಂ-ಸ್ಟೇಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರು ಸೂಚಿಸಿದ್ದಾರೆ. ಅಲ್ಲದೆ ಅನಧಿಕೃತವಾಗಿ ಕಾರ್ಯನಿರ್ವಹಿಸುವ ಹೋಂಸ್ಟೇಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ-2015ರ ಅಧಿನಿಯಮ 8 ಉಪ ಕಂಡಿಕೆ(3)ರ ಅಡಿಯಲ್ಲಿ ನಿಯಮಗಳನ್ನು ರಚಿಸಲಾಗಿದೆ. ಅದರ ಅನ್ವಯ ಯಾವ ವ್ಯಕ್ತಿ ಪ್ರವಾಸೋದ್ಯಮ ಚಟುವಟಿಕೆ ನಡೆಸುವ ಸಲುವಾಗಿ ಹೋಂ-ಸ್ಟೇ ಹಾಗೂ ಇತರೆ ಹೆಸರುಗಳಿಂದ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತಾರೋ ಅಂತಹ ವ್ಯಕ್ತಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಾತಿನಿಧಿಕ ಚಿತ್ರ



ಸರಕಾರದ ಆದೇಶದನ್ವಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂ-ಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿದೆ. ಈ ಸಂಬಂಧ ಹೋಂ-ಸ್ಟೇ ಮಾಲಕರಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಬಹಳಷ್ಟು ಹೋಂ-ಸ್ಟೇಗಳು ನೋಂದಣಿ ಯಾಗಿರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ಇದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದ್ದು, ನೋಂದಣಿಯಾಗದ ಹೋಂ-ಸ್ಟೇಗಳು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ ಹಾಗೂ ನೋಂದಣಿಯಾಗದೇ ಕಾರ್ಯನಿರ್ವಹಿಸುತ್ತಿರುವ ಹೋಂ-ಸ್ಟೇಗಳು ಅನಧಿಕೃತ ಚಟುವಟಿಕೆಗಳನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಅನಧಿಕೃತ ಹೋಂಸ್ಟೇಗಳ ವಿರುದ್ಧ ಕ್ರಮ: ಎಚ್ಚರಿಕೆ

ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೋಂ-ಸ್ಟೇಗಳ ಪರವಾನಗಿಯನು ಈಗಾಗಲೇ ರದ್ದುಗೊಳಿಸಲಾಗಿದೆ. ಆದಾಗ್ಯೂ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ನೋಂದಣಿಗೊಳ್ಳದೆ ನಿಯಮ ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಹೋಂ-ಸ್ಟೇಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಪರವಾನಗಿ ನವೀಕರಣ

ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ ಪರವಾನಗಿ ಪಡೆದು ಕಾರ್ಯನಿರ್ವಹಿಸುತ್ತಿರುವ ಮತ್ತು ಪರವಾನಗಿ ಅವಧಿಯು 5 ವರ್ಷಗಳಿಗೆ ಮುಕ್ತಾಯಗೊಳ್ಳುತ್ತಿರುವ ಹೋಂ-ಸ್ಟೇಗಳು ಪರವಾನಗಿಯನ್ನೂ ನವೀಕರಿಸುವಂತೆಯೂ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರೂ ಆಗಿರುವ ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ಅವರು ತಿಳಿಸಿದ್ದಾರೆ. ಇವುಗಳಲ್ಲದೇ ಮಾಹಿತಿ ಇಲ್ಲದೆ ಅನಧಿಕೃತವಾಗಿ ನಡೆಸುತ್ತಿರುವಂತಹ ಹೋಂ-ಸ್ಟೇಗಳ ಬಗ್ಗೆ ಹಾಗೂ ಹೋಂ-ಸ್ಟೇ ನೋಂದಣಿ ಮಾಡಿಕೊಳ್ಳುವ ಬಗ್ಗೆ ಸಾರ್ವಜನಿಕರು ದೂರು/ಮಾಹಿತಿ ಇದ್ದಲ್ಲಿ ಅವುಗಳ ವಿವರಗಳನ್ನು ಪತ್ರ ಮುಖೇನ ಉಪನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಸ್ಟುವರ್ಟ್ ಹಿಲ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ 571201 ದೂರವಾಣಿ ಸಂಖ್ಯೆ: 08272-200519 ಈ-ಮೇಲ್:ddkodagutourism@gmail.com **ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ:112ಗೆ ತಿಳಿಸಬಹುದಾಗಿದೆ.**



ಭಾರತದ ಸಾಗರ ಭವಿಷ್ಯ, ಚೀನಾದ ಸವಾಲಿಗೆ ಉತ್ತರ

ಗ್ರೇಟ್ ನಿಕೋಬಾರ್ ಯೋಜನೆ

ರಾಷ್ಟ್ರೀಯ ಭದ್ರತೆಯ ಜೀವನಾಡಿ

ಬಂಗಾಳ ಕೊಲ್ಲಿಯ ಆಗ್ನೇಯ ಭಾಗದಲ್ಲಿ, ಇಂಡೋನೇಷ್ಯಾದ ಸುಮಾತ್ರಾ ದ್ವೀಪಕ್ಕಿಂತ ಕೇವಲ 150 ಕಿಲೋಮೀಟರ್ ದೂರದಲ್ಲಿರುವ ಗ್ರೇಟ್ ನಿಕೋಬಾರ್ ದ್ವೀಪವು, ಇಂದು ಭಾರತದ ಭೂಪಟದಲ್ಲಿ ಅತ್ಯಂತ ಮಹತ್ವದ ಭೌಗೋಳಿಕ ಬಿಂದುವಾಗಿ ಗುರುತಿಸಿಕೊಂಡಿದೆ. ಹೊಸದಿಲ್ಲಿಯಿಂದ ಸುಮಾರು 3,000 ಕಿಲೋಮೀಟರ್ ದೂರದಲ್ಲಿ, ವಿಶ್ವದ ಅತ್ಯಂತ ಜನನಿಬಿಡ ಸಮುದ್ರ ಮಾರ್ಗವಾದ ಮಲಕ್ಕಾ ಜಲಸಂಧಿಯ ಪಶ್ಚಿಮ ದ್ವಾರದ ಬಳಿ ಸ್ಥಿತವಾಗಿರುವ ಈ ದ್ವೀಪವನ್ನು ಒಂದು ಸಂಪೂರ್ಣ ಸಾಮುದ್ರಿಕ ಮತ್ತು ಸಾಮರಿಕ ಕೇಂದ್ರವಾಗಿ ರೂಪಿಸುವ ಮಹತ್ವಾಕಾಂಕ್ಷಿ ಯೋಜನೆಯೇ ಗ್ರೇಟ್ ನಿಕೋಬಾರ್ ಸಮಗ್ರ ಅಭಿವೃದ್ಧಿ ಯೋಜನೆ. ಈ 81,000 ಕೋಟಿ ರೂ.ಯ ಬೃಹತ್ ಯೋಜನೆಯ ಸುತ್ತ ಇಂದು ರಾಷ್ಟ್ರಮಟ್ಟದ ಚರ್ಚೆ ಮತ್ತು ರಾಜಕೀಯ ಬಿರುಗಾಳಿ ಎದ್ದಿದೆ. ಒಂದೆಡೆ ಕೇಂದ್ರ ಸರ್ಕಾರವು ಇದನ್ನು ಭಾರತದ ಸಾಮರಿಕ ಜೀವನಾಡಿ ಎಂದು ಬಣ್ಣಿಸುತ್ತಿದ್ದರೆ, ಮತ್ತೊಂದೆಡೆ ಕಾಂಗ್ರೆಸ್ಸಿನ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಇದನ್ನು ಪರಿಸರ ವಿನಾಶಕ ಯೋಜನೆ ಎಂದು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಆದರೆ ಭಾರತದ ಭೌಗೋಳಿಕ-ರಾಜಕೀಯ ವಾಸ್ತವತೆ, ಚೀನಾದ ಆಕ್ರಮಣಕಾರಿ ಸಮುದ್ರ ಪ್ರವೇಶ, ಮತ್ತು ಇಂಡೋ-ಪೆಸಿಫಿಕ್ ಪ್ರದೇಶದಲ್ಲಿನ ಬದಲಾಗುತ್ತಿರುವ ಶಕ್ತಿ ಸಮತೋಲನವನ್ನು ಗಮನಿಸಿದರೆ, ಗ್ರೇಟ್ ನಿಕೋಬಾರ್ ಯೋಜನೆಯು ಒಂದು ಆಯ್ಕೆಯಲ್ಲ ಅದು ಭಾರತದ ಸಾರ್ವಭೌಮತೆಯ ಅನಿವಾರ್ಯ ಅಗತ್ಯ.

ಯೋಜನೆಯ ಸಂಕ್ಷಿಪ್ತ ಪರಿಚಯ

ನೀತಿ ಆಯೋಗ ಪರಿಕಲ್ಪಿಸಿದ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಂಯೋಜಿತ ಅಭಿವೃದ್ಧಿ ನಿಗಮ(ಎಎನ್ಐಐಡಿಸಿ) ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯು 166.10 ಚದರ ಕಿಲೋಮೀಟರ್ ವಿಸ್ತಾರವನ್ನು ಒಳಗೊಂಡಿದೆ. ಒಟ್ಟು ನಾಲ್ಕು ಪ್ರಮುಖ ಘಟಕಗಳನ್ನು ಇದು ಒಳಗೊಂಡಿದೆ 5 ಗಾಲಥಿಯಾ ಕೊಲ್ಲಿಯಲ್ಲಿ ಅಂತಾರಾಷ್ಟ್ರೀಯ ಕಂಟೈನರ್ ಟ್ರಾನ್ಸ್‌ಶಿಪ್‌ಮೆಂಟ್ ಟರ್ಮಿನಲ್ (ಐಸಿಟಿಟಿ), ದ್ವಿಬಳಕೆಯ (ನಾಗರಿಕ ಮತ್ತು ಸೇನಾ) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, 450 ಮೆಗಾವಾಟ್ ಸಾಮರ್ಥ್ಯದ ಹಸಿರು ಇಂಧನ ವಿದ್ಯುತ್ ಸ್ಥಾವರ ಮತ್ತು ಸುಮಾರು 1.25 ಲಕ್ಷ ಜನರಿಗೆ ಆಶ್ರಯ ಒದಗಿಸಬಲ್ಲ ಒಂದು ಆಧುನಿಕ ಗ್ರೀನ್‌ಫೀಲ್ಡ್ ಪಟ್ಟಣ. ಈ ಯೋಜನೆಯನ್ನು ಮುಂದಿನ 30 ವರ್ಷಗಳಲ್ಲಿ ನಾಲ್ಕು ಹಂತಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮೊದಲ ಹಂತವು 2028ರ ವೇಳೆಗೆ ಮುಗಿಯಬೇಕಿದ್ದು, ಆ ವೇಳೆಗೆ ಬಂದರು 40 ಲಕ್ಷ ಟಿಇಯು (ಇಪ್ಪತ್ತು ಅಡಿ ಸಮಾನ ಘಟಕ) ಸಾಮರ್ಥ್ಯ ಪಡೆಯಲಿದೆ. 2058ರ ವೇಳೆಗೆ ಒಟ್ಟಾರೆ ಸಾಮರ್ಥ್ಯ 1.6 ಕೋಟಿ ಟಿಇಯು ತಲುಪುವ ನಿರೀಕ್ಷೆಯಿದೆ.

ಯೋಜನೆಯ ನಾಲ್ಕು ಹಂತಗಳು ಮತ್ತು ಕಾಲಮಿತಿ

ಗ್ರೇಟ್ ನಿಕೋಬಾರ್ ಯೋಜನೆಯನ್ನು ಎಚ್ಚರಿಕೆಯಿಂದ, ಹಂತ ಹಂತವಾಗಿ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಮೊದಲ ಹಂತ (2024-2028) ಗಾಲಥಿಯಾ ಬಂದರಿನ ಮೊದಲ ಭಾಗ ಮತ್ತು ವಿಮಾನ ನಿಲ್ದಾಣದ ಮೊದಲ ಹಂತದ ನಿರ್ಮಾಣವನ್ನು ಒಳಗೊಂಡಿದೆ. ಈ ಹಂತದಲ್ಲಿಯೇ ಬಂದರು 40 ಲಕ್ಷ ಟಿಇಯು ಸಾಮರ್ಥ್ಯ ಪಡೆಯಲಿದೆ. ಎರಡನೇ ಹಂತದಲ್ಲಿ (2028-2035) ವಿದ್ಯುತ್ ಸ್ಥಾವರ, ಪಟ್ಟಣ ನಿರ್ಮಾಣ ಮತ್ತು ರಸ್ತೆ ಜಾಲದ ವಿಸ್ತರಣೆ ನಡೆಯಲಿದೆ. ಮೂರನೇ ಹಂತದಲ್ಲಿ (2035-2045) ಬಂದರಿನ ಸಾಮರ್ಥ್ಯ ದ್ವಿಗುಣಗೊಳ್ಳಲಿದ್ದು, ಪ್ರವಾಸೋದ್ಯಮ ಮತ್ತು ಪರಿಸರ-ಪ್ರವಾಸೋದ್ಯಮ ಸೌಲಭ್ಯಗಳು ಆರಂಭವಾಗಲಿವೆ. ನಾಲ್ಕನೇ ಮತ್ತು ಅಂತಿಮ ಹಂತದಲ್ಲಿ (2045-2058) ಗ್ರೇಟ್ ನಿಕೋಬಾರ್ ಪೂರ್ಣ ಪ್ರಮಾಣದ ಅಂತಾರಾಷ್ಟ್ರೀಯ ಸಾಮುದ್ರಿಕ ಮತ್ತು ಸಾಮರಿಕ ಕೇಂದ್ರವಾಗಿ ಬೆಳೆಯಲಿದೆ. ಪ್ರತಿ ಹಂತವನ್ನು ಪರಿಸರ ಪರಿಣಾಮ ಮೌಲ್ಯಮಾಪನ ಮತ್ತು ಶಮನ ಕ್ರಮಗಳ ಜೊತೆ ಜಾರಿಗೊಳಿಸಲಾಗುತ್ತದೆ.

ಸಾಮರಿಕ ಆಯಾಮ: ಚೀನಾದ ಮುತ್ತಿನ ಸರಕ್ಕೆ ಭಾರತದ ಉತ್ತರ

ಕಳೆದ ಎರಡು ದಶಕಗಳಲ್ಲಿ ಚೀನಾ ತನ್ನ ಬೆಲ್ಟ್ ಆ್ಯಂಡ್ ರೋಡ್ ಇನಿಶಿಯೇಟಿವ್ (ಬಿಆರ್‌ಐ)ಮೂಲಕ ಭಾರತದ ಸುತ್ತ ಒಂದು ಸಾಮರಿಕ ಜಾಲವನ್ನು ಹೆಣೆದಿದೆ. ಇದನ್ನು ಪಾಶ್ಚಿಮಾತ್ಯ ಸಾಮರಿಕ ತಜ್ಞರು ಸ್ಟ್ರಿಂಗ್ ಆಫ್ ಪರ್ಲ್ಸ್ ಅಂದರೆ ಮುತ್ತಿನ ಸರ ಎಂದು ಕರೆಯುತ್ತಾರೆ. ಪಾಕಿಸ್ತಾನದ ಗ್ವಾದರ್, ಶ್ರೀಲಂಕಾದ ಹಂಬಂಟೋಟ, ಬಾಂಗ್ಲಾದೇಶದ ಚಿತ್ತಗಾಂಗ್, ಮ್ಯಾನ್ಮಾರ್‌ನ ಕ್ಯಾಕ್‌ಪ್ಯೂ ಮತ್ತು ಆಫ್ರಿಕಾದ ಜಿಬೂತಿಯಲ್ಲಿ ಚೀನಾ ಬಂದರು ಮತ್ತು ನೌಕಾ ನೆಲೆಗಳನ್ನು ಸ್ಥಾಪಿಸಿದೆ. ಜಿಬೂತಿಯಲ್ಲಂತೂ ಚೀನಾದ ಮೊದಲ ಸಾಗರೋತ್ತರ ಸೇನಾ ನೆಲೆಯಿದೆ. ಇಷ್ಟೇ ಅಲ್ಲ, ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ ನೌಕಾಪಡೆ(ಪಿಎಲ್‌ಎಎನ್) ಹಿಂದೂ ಮಹಾಸಾಗರದಲ್ಲಿ ತನ್ನ ಸಬ್‌ಮರೀನ್‌ಗಳ ಗಸ್ತು ಹೆಚ್ಚಿಸಿದೆ. ಈ ಸಂದರ್ಭದಲ್ಲಿ ಭಾರತ ಮೌನವಾಗಿ ಕುಳಿತುಕೊಳ್ಳುವಂತಿಲ್ಲ. ಗ್ರೇಟ್ ನಿಕೋಬಾರ್ ಯೋಜನೆಯು ಈ ಮುತ್ತಿನ ಸರಕ್ಕೆ ಭಾರತ ಕಟ್ಟುತ್ತಿರುವ ಸಾಮರಿಕ ಪ್ರತಿಕ್ರಿಯೆಯಾಗಿದೆ. ಒಂದು ಆಳವಾದ ಬಂದರು, ದ್ವಿಬಳಕೆಯ ವಿಮಾನ ನಿಲ್ದಾಣ, ಮತ್ತು ಸಾಮುದ್ರಿಕ ಗಸ್ತು ಸೌಲಭ್ಯಗಳು ಒಂದೇ ಕಡೆ ಇದ್ದಾಗ, ಭಾರತೀಯ ನೌಕಾಪಡೆ ಮತ್ತು ವಾಯುಪಡೆ ತನ್ನ ಯುದ್ಧನೌಕೆಗಳು, ಯುದ್ಧವಿಮಾನಗಳು, ಸಾಗರೋಪಯೋಗಿ ಗಸ್ತು ವಿಮಾನಗಳು ಮತ್ತು ಡ್ರೋನ್‌ಗಳನ್ನು ಮಲಕ್ಕಾ ಜಲಸಂಧಿಗೆ ಬಹಳ ಹತ್ತಿರ ತಲುಪಿಸಬಹುದು. ಬಿಕ್ಕಟ್ಟಿನ ಸಮಯದಲ್ಲಿ, ಚೀನಾದ ತೈಲ ಪೂರೈಕೆಯ ಮೇಲೆ ಭಾರತ ಒತ್ತಡ ಹೇರಬಲ್ಲದು ಎಂಬ ಸಂದೇಶ ಸ್ವಯಂ ಒಂದು ಬಲಿಷ್ಠ ತಡೆ ತಂತ್ರ.

ಭೌಗೋಳಿಕ ಮಹತ್ವ: ಪ್ರಕೃತಿಯೇ ನೀಡಿದ ಸಾಮರಿಕ ವರ

ಗ್ರೇಟ್ ನಿಕೋಬಾರ್ ದ್ವೀಪವು ಮಲಕ್ಕಾ ಜಲಸಂಧಿಯ ಉತ್ತರ ದ್ವಾರದಿಂದ ಕೇವಲ 40-90 ನಾಟಿಕಲ್ ಮೈಲಿ (74-167 ಕಿ.ಮೀ.) ದೂರದಲ್ಲಿದೆ. ಮಲಕ್ಕಾ ಜಲಸಂಧಿಯು ಹಿಂದೂ ಮಹಾಸಾಗರವನ್ನು ಪ್ರಶಾಂತ ಮಹಾಸಾಗರಕ್ಕೆ ಜೋಡಿಸುವ ಪ್ರಮುಖ ಸಮುದ್ರ ಮಾರ್ಗ. ವಿಶ್ವದ ಒಟ್ಟು ಸಮುದ್ರ ವ್ಯಾಪಾರದ ಸುಮಾರು ಶೇ.30 ಈ ಮಾರ್ಗದ ಮೂಲಕವೇ ಸಾಗುತ್ತದೆ. ಚೀನಾಕ್ಕೆ ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾದಿಂದ ಹೋಗುವ ಶೇ.80ರಷ್ಟು ತೈಲ ಆಮದು ಇದೇ ಜಲಸಂಧಿಯ ಮೂಲಕ ಸಾಗುತ್ತದೆ. ಚೀನಾದ ಸಾಮರಿಕ ತಜ್ಞರೇ ಇದನ್ನು ಮಲಕ್ಕಾ ಸಂದಿಗ್ಧತೆ ಎಂದು ಕರೆಯುತ್ತಾರೆ -ಏಕೆಂದರೆ ಈ ಮಾರ್ಗ ತಡೆದರೆ ಚೀನಾದ ಆರ್ಥಿಕತೆ ಕುಸಿಯಬಹುದು.


ಗ್ರೇಟ್ ನಿಕೋಬಾರ್ ಸುಂಡಾ ಮತ್ತು ಲೊಂಬೋಕ್ ಜಲಸಂಧಿಗಳಿಂದಲೂ ಹೆಚ್ಚು ದೂರವಿಲ್ಲ. ಇವು ಚೀನಾದ ಹಡಗುಗಳು ದಕ್ಷಿಣ ಚೀನಾ ಸಮುದ್ರ ಮತ್ತು ಹಿಂದೂ ಮಹಾಸಾಗರದ ನಡುವೆ ಚಲಿಸಲು ಬಳಸುವ ಪರ್ಯಾಯ ಮಾರ್ಗಗಳು. ಒಂದೇ ಮಾತಿನಲ್ಲಿ ಹೇಳುವುದಾದರೆ, ಯಾವ ರಾಷ್ಟ್ರ ಗ್ರೇಟ್ ನಿಕೋಬಾರ್ ಮೇಲೆ ಸದೃಢ ಹಿಡಿತ ಹೊಂದಿರುತ್ತದೋ, ಆ ರಾಷ್ಟ್ರ ಪೂರ್ವ ಹಿಂದೂ ಮಹಾಸಾಗರದ ಶಕ್ತಿ ಮತ್ತು ವ್ಯಾಪಾರ ಮಾರ್ಗಗಳನ್ನು ನಿಯಂತ್ರಿಸಬಲ್ಲದು. ಪ್ರಕೃತಿಯೇ ಭಾರತಕ್ಕೆ ಕೊಟ್ಟಿರುವ ಈ ಸಾಮರಿಕ ವರವನ್ನು ಬಳಸಿಕೊಳ್ಳದೆ ಬಿಡುವುದು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗುತ್ತದೆ.

ತ್ರಿ-ಸೇನಾ ಕಮಾಂಡ್ ಮತ್ತು ಐಎನ್‌ಎಸ್ ಬಾಜ್

ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್(ಎಎನ್‌ಸಿ) ಭಾರತದ ಮೊದಲ ಮತ್ತು ಏಕೈಕ ತ್ರಿ-ಸೇನಾ ಸಂಯೋಜಿತ ಕಮಾಂಡ್. ಆದರೆ ಗ್ರೇಟ್ ನಿಕೋಬಾರ್‌ನ ಕ್ಯಾಂಪ್ಬೆಲ್ ಬೇಯಲ್ಲಿರುವ ಐಎನ್‌ಎಸ್ ಬಾಜ್ ನೌಕಾ ವಾಯುನೆಲೆ ಇಂದಿಗೂ ಸೀಮಿತ ಸಾಮರ್ಥ್ಯವನ್ನೇ ಹೊಂದಿದೆ. ರನ್ವೇ ಚಿಕ್ಕದಿದೆ, ದೊಡ್ಡ ಯುದ್ಧ ವಿಮಾನಗಳು ಮತ್ತು ಸಾಗರೋಪಯೋಗಿ ಪಿ81 ಗಸ್ತು ವಿಮಾನಗಳು ಸುಲಭವಾಗಿ ಬಂದು ಇಳಿಯಲು ಸಾಧ್ಯವಿಲ್ಲ. ಗ್ರೇಟ್ ನಿಕೋಬಾರ್ ಯೋಜನೆಯ ಭಾಗವಾಗಿ ನಿರ್ಮಾಣವಾಗಲಿರುವ 3,300 ಮೀಟರ್ ಉದ್ದದ ರನ್ವೇ ಸಹಿತ ದ್ವಿಬಳಕೆಯ ವಿಮಾನ ನಿಲ್ದಾಣವು ಈ ಸಮಸ್ಯೆಯನ್ನು ಪರಿಹರಿಸಲಿದೆ. ಸುಖೋಯ್-30, ರಫೇಲ್ ಯುದ್ಧವಿಮಾನಗಳು, ಭಾರೀ ಸಾರಿಗೆ ವಿಮಾನಗಳಾದ ಸಿ17 ಗ್ಲೋಬ್ ಮಾಸ್ಟರ್, ಮತ್ತು ಸಾಗರೋಪಯೋಗಿ ಗಸ್ತು ವಿಮಾನಗಳು ಇಲ್ಲಿಂದಲೇ ಕಾರ್ಯಾಚರಣೆ ನಡೆಸಬಹುದು. ಇದಲ್ಲದೆ, ಭಾರತದ ಎಕ್ಸ್‌ಕ್ಲೂಸಿವ್ ಎಕನಾಮಿಕ್ ಜೋನ್(ಇಇಝಡ್) ಆಗ್ನೇಯ ಭಾಗವು ಗ್ರೇಟ್ ನಿಕೋಬಾರ್‌ನ ಸುತ್ತ ಚಾಚಿಕೊಂಡಿದೆ. ಒಂದು ರಾಷ್ಟ್ರದ (ಇಇಝಡ್) ಕೇವಲ ಕಾನೂನಿನ ಪರಿಕಲ್ಪನೆಯಲ್ಲ - ಅದನ್ನು ಭೌತಿಕವಾಗಿ ಗಸ್ತು ತಿರುಗಿ, ಮೇಲ್ವಿಚಾರಣೆ ಮಾಡಿ, ಬೇಕಾದರೆ ಬಲವಂತದಿಂದ ರಕ್ಷಿಸಬೇಕು. ಸಮರ್ಪಕ ಬಂದರು ಮತ್ತು ವಿಮಾನ ನಿಲ್ದಾಣವಿಲ್ಲದೆ ಭಾರತ ತನ್ನ ಸ್ವಂತ ಸಮುದ್ರ ಪ್ರದೇಶದ ಮೇಲೆ ಸಾರ್ವಭೌಮತೆಯನ್ನು ಪರಿಣಾಮಕಾರಿಯಾಗಿ ಚಲಾಯಿಸಲಾರದು.

ಆರ್ಥಿಕ ಆಯಾಮ: ಭಾರತದ ವಿದೇಶಿ ವಿನಿಮಯ ಉಳಿತಾಯ

ಇಂದು ಭಾರತದ ರಫ್ತು-ಆಮದು ಸರಕುಗಳ ಸುಮಾರು ಶೇ.25 ವಿದೇಶಿ ಬಂದರುಗಳಾದ ಕೊಲಂಬೊ, ಸಿಂಗಾಪುರ ಮತ್ತು ಪೋರ್ಟ್ ಕ್ಲಾಂಗ್‌ನಲ್ಲಿ ಟ್ರಾನ್ಸ್‌ಶಿಪ್‌ಮೆಂಟ್‌ಗೆ ಒಳಗಾಗುತ್ತದೆ. ಒಂದೇ ಕೊಲಂಬೊ ಬಂದರು ಭಾರತದ ಶೇ.40ರಷ್ಟು ಟ್ರಾನ್ಸ್‌ಶಿಪ್‌ಮೆಂಟ್ ನಿರ್ವಹಿಸುತ್ತಿದೆ. ಇದರಿಂದ ಪ್ರತಿವರ್ಷ ಭಾರತ ಸಾವಿರಾರು ಕೋಟಿ ರೂಪಾಯಿ ವಿದೇಶಿ ವಿನಿಮಯ ಕಳೆದುಕೊಳ್ಳುತ್ತಿದೆ. ಗಾಲಥಿಯಾ ಕೊಲ್ಲಿಯ 18-20 ಮೀಟರ್ ನೈಸರ್ಗಿಕ ಆಳ ಮತ್ತು ಪ್ರಮುಖ ಸಮುದ್ರ ಮಾರ್ಗಗಳಿಗೆ ಸಮೀಪವಿರುವ ಕಾರಣ, ಗ್ರೇಟ್ ನಿಕೋಬಾರ್ ಬಂದರು ವಿಶ್ವದ ಅತಿದೊಡ್ಡ ಕಂಟೈನರ್ ಹಡಗುಗಳನ್ನೂ ನಿಭಾಯಿಸಬಲ್ಲದು. ಸರ್ಕಾರದ ಅಂದಾಜಿನ ಪ್ರಕಾರ, ಈ ಬಂದರು 2040ರ ವೇಳೆಗೆ ವಾರ್ಷಿಕ 30,000 ಕೋಟಿ ರೂ. ಆದಾಯ ತರಬಹುದು ಮತ್ತು ಸುಮಾರು 50,000 ನೇರ ಉದ್ಯೋಗ ಸೃಷ್ಟಿಸಬಹುದು. 2052ರ ವೇಳೆಗೆ 51,000 ನೇರ ಉದ್ಯೋಗ ಮತ್ತು 1,28,000 ಪರೋಕ್ಷ ಉದ್ಯೋಗಗಳ ನಿರೀಕ್ಷೆಯಿದೆ. ಸಾಗರಮಾಲಾ ಯೋಜನೆ ಮತ್ತು ಮಾರಿಟೈಮ್ ಇಂಡಿಯಾ ವಿಷನ್ 2030ರ ಆದರ್ಶಗಳಿಗೆ ಈ ಯೋಜನೆ ಪೂರಕವಾಗಿದೆ. ಇದು ಭಾರತವನ್ನು ಜಾಗತಿಕ ವ್ಯಾಪಾರ ಮಾರ್ಗದ ಒಂದು ಪ್ರಮುಖ ಕೇಂದ್ರವಾಗಿ ರೂಪಿಸುವ ದಿಕ್ಕಿನಲ್ಲಿ ಮಹತ್ತರ ಹೆಜ್ಜೆ. ಸಿಂಗಾಪುರ ಬಂದರು ಇಂದು ಜಗತ್ತಿನ ಅತಿದೊಡ್ಡ ಟ್ರಾನ್ಸ್‌ಶಿಪ್‌ಮೆಂಟ್ ಕೇಂದ್ರ. ಪ್ರತಿವರ್ಷ 3.7 ಕೋಟಿ ಟಿಇಯು ನಿಭಾಯಿಸುತ್ತದೆ. ಕೊಲಂಬೊ ಬಂದರು 70 ಲಕ್ಷ ಟಿಇಯು ನಿಭಾಯಿಸುತ್ತದೆ. ಭಾರತದ ಎಲ್ಲ ಬಂದರುಗಳು ಒಟ್ಟು ಸೇರಿ ಇಂದಿಗೂ ಸಿಂಗಪುರಕ್ಕೆ ಸಮನಾಗಿಲ್ಲ, ಗಾಲಥಿಯಾ ಬಂದರು ಪೂರ್ಣ ಸಾಮರ್ಥ್ಯ ತಲುಪಿದರೆ 1.6 ಕೋಟಿ ಟಿಇಯು ನಿಭಾಯಿಸಲಿದೆ - ಇದು ಕೊಲಂಬೊಗಿಂತ ಎರಡು ಪಟ್ಟು ಹೆಚ್ಚು, ಭಾರತೀಯ ಬಂದರು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ಅವರ ಮಾತಿನಲ್ಲೇ ಹೇಳುವುದಾದರೆ, ಗ್ರೇಟ್ ನಿಕೋಬಾರ್ ಐಸಿಟಿಟಿ ಭಾರತವನ್ನು ಪ್ರಮುಖ ಸಾಮುದ್ರಿಕ ಶಕ್ತಿಯಾಗಿ ಮಾಡಲಿದೆ ಮತ್ತು ಜಾಗತಿಕ ಶಿಪ್ಪಿಂಗ್ ಲೈನ್‌ಗಳನ್ನು ಭಾರತೀಯ ಬಂದರು ಮೂಲಸೌಕರ್ಯಕ್ಕೆ ಆಕರ್ಷಿಸಲಿದೆ. ಪ್ರತಿ ಕಂಟೈನರ್ ವಿದೇಶಿ ಬಂದರಿಗೆ ಬದಲಾಗಿ ಗ್ರೇಟ್ ನಿಕೋಬಾರ್‌ಗೆ ಬಂದರೆ - ಪ್ರತಿ ಡಾಲರ್ ಭಾರತದ ಆರ್ಥಿಕತೆಯಲ್ಲೇ ಉಳಿಯಲಿದೆ.





ವಿರೋಧದ ಧ್ವನಿಗಳು: ಆತಂಕಗಳ ಸ್ವರೂಪ

ಸೆಪ್ಟೆಂಬರ್ 2025ರಲ್ಲಿ ಸೋನಿಯಾ ಗಾಂಧಿ ದ ಹಿಂದು ದಿನಪತ್ರಿಕೆಯಲ್ಲಿ 'The making of an ecological disaster in the Nicobar' ಎಂಬ ಲೇಖನ ಬರೆದು, ಯೋಜನೆಯನ್ನು 'ಯೋಜಿತ ವಿನಾಶ' ಎಂದು ಬಣ್ಣಿಸಿದರು. ಶೋಂಪೆನ್ ಮತ್ತು ನಿಕೋಬಾರಿ ಬುಡಕಟ್ಟುಗಳ ಅಸ್ತಿತ್ವಕ್ಕೆ ಬೆದರಿಕೆ, ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಜೊತೆ ಸಮಾಲೋಚನೆ ನಡೆಸದಿರುವುದು, ಮತ್ತು ಭೂಕಂಪ ವಲಯದಲ್ಲಿ ಇಂತಹ ಬೃಹತ್ ಯೋಜನೆ ಸ್ಥಾಪಿಸುವ ಅಪಾಯ - ಇವು ಅವರ ಮುಖ್ಯ ಆಕ್ಷೇಪಗಳು. ಏಪ್ರಿಲ್ 2026ರಲ್ಲಿ ಲೋಕಸಭೆಯ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಸ್ವತಃ ಗ್ರೇಟ್ ನಿಕೋಬಾರ್‌ಗೆ ಭೇಟಿ ನೀಡಿ, ಯೋಜನೆಯನ್ನು 'ಅಭಿವೃದ್ಧಿಯ ಭಾಷೆಯಲ್ಲಿ ಕಟ್ಟಿಕೊಂಡ ವಿನಾಶ' ಎಂದು ಟೀಕಿಸಿದರು. ಸುಮಾರು 9.64 ಲಕ್ಷ ಮರಗಳ ಕಡಿಯುವಿಕೆ, 130 ಚದರ ಕಿಲೋಮೀಟರ್ ಅರಣ್ಯ ಭೂಮಿಯ ಪರಿವರ್ತನೆ, ಗಾಲಥಿಯಾ ಕೊಲ್ಲಿಯಲ್ಲಿ ಲೆದರ್‌ಬ್ಯಾಕ್ ಆಮೆಗಳ ಮೊಟ್ಟೆ ಇಡುವ ಪ್ರದೇಶಕ್ಕೆ ಧಕ್ಕೆ -ಇವು ಪ್ರಮುಖ ಪರಿಸರ ಆತಂಕಗಳು.

ಕೈ ರಾಜಕೀಯ ವೈರುಧ್ಯ

ಕುತೂಹಲದ ಸಂಗತಿ ಎಂದರೆ, ಯುಪಿಎ ಸರ್ಕಾರದ ಹತ್ತು ವರ್ಷಗಳ ಆಡಳಿತದ ಅವಧಿಯಲ್ಲಿ ಗ್ರೇಟ್ ನಿಕೋಬಾರ್‌ನ ಸಾಮರಿಕ ಮಹತ್ವದ ಬಗ್ಗೆ ಯಾವುದೇ ಗಂಭೀರ ಚರ್ಚೆ ನಡೆಯಲಿಲ್ಲ. 2004ರ ಸುನಾಮಿಯ ನಂತರ ಪುನರ್ನಿರ್ಮಾಣ ಕಾರ್ಯಗಳು ಕೂಡ ಮಂದಗತಿಯಲ್ಲಿ ಸಾಗಿದವು. ಆದರೆ ಇಂದು ಮೋದಿ ಸರ್ಕಾರ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ದಿಟ್ಟ ನಿರ್ಧಾರ ತೆಗೆದುಕೊಂಡಾಗ ಕಾಂಗ್ರೆಸ್ ಪಕ್ಷ ಹಠಾತ್ತಾಗಿ 'ಪರಿಸರ ಕಾಳಜಿ' ಮತ್ತು 'ಬುಡಕಟ್ಟು ಹಕ್ಕು'ಗಳನ್ನು ನೆನಪಿಸಿಕೊಂಡಿದೆ. ಸಾಮಾನ್ಯ ಭಾರತೀಯರು ಇದನ್ನು ಪ್ರಗತಿ ಎಂದು ಗುರುತಿಸುತ್ತಿರುವಾಗ, ಕಾಂಗ್ರೆಸ್ ಇದನ್ನು 'ಪರಿಸರ ವಿನಾಶ' ಎಂದು ಬಣ್ಣಿಸುತ್ತಿರುವುದು ರಾಜಕೀಯ ಅವಕಾಶವಾದದ ಸಂಕೇತ. ಇದಲ್ಲದೆ, ಪ್ರಧಾನಿ ನರೇಂದ್ರ ಮೋದಿ ಸ್ವತಃ 'ಗ್ರೇಟ್ ನಿಕೋಬಾರ್ ಯೋಜನೆ ಸಾಮರಿಕ, ರಕ್ಷಣಾತ್ಮಕ ಮತ್ತು ರಾಷ್ಟ್ರೀಯ ಮಹತ್ವದ್ದು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪರಿಸರ ಸಚಿವ ಭೂಪೇಂದರ್ ಯಾದವ್ ಅವರು, 'ಯೋಜನೆ ಬುಡಕಟ್ಟು ಸಮುದಾಯಗಳಿಗೆ ಯಾವುದೇ ಬೆದರಿಕೆ ಒಡ್ಡುವುದಿಲ್ಲ ಮತ್ತು ಪ್ರದೇಶದ ಪರಿಸರ ಸೂಕ್ಷ್ಮತೆಗೆ ಧಕ್ಕೆ ತರುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸರ್ಕಾರದ ಸಮಜಾಯಿಷಿ ಮತ್ತು ರಕ್ಷಣಾ ಕ್ರಮಗಳು

ಕೇಂದ್ರ ಸರ್ಕಾರ ಮತ್ತು ಪರಿಸರ ಸಚಿವಾಲಯ ಈ ಆಕ್ಷೇಪಗಳನ್ನು ಮುಖಬೆಲೆಗೆ ತೆಗೆದುಕೊಂಡು ಹಲವಾರು ಶಮನ ಕ್ರಮಗಳನ್ನು ಜಾರಿಗೊಳಿಸಿದೆ. ಲಿಟಲ್ ನಿಕೋಬಾರ್ ದ್ವೀಪದಲ್ಲಿ ಲೆದರ್‌ಬ್ಯಾಕ್ ಆಮೆ ಅಭಯಾರಣ್ಯ, ಮೆನ್ಚಲ್ ದ್ವೀಪದಲ್ಲಿ ಮೆಗಾಪೋಡ್ ಅಭಯಾರಣ್ಯ ಮತ್ತು ಮೆರೋ ದ್ವೀಪದಲ್ಲಿ ಹವಳ ಅಭಯಾರಣ್ಯ - ಮೂರು ಹೊಸ ವನ್ಯಜೀವಿ ಅಭಯಾರಣ್ಯಗಳ ಸ್ಥಾಪನೆ. ಗಾಲಥಿಯಾ ನದಿಯಿಂದ ನೀರು ತೆಗೆಯುವುದಕ್ಕೆ ಸಂಪೂರ್ಣ ನಿಷೇಧ. ಪೂರ್ವ ಕರಾವಳಿಯಲ್ಲಿ ಎಂಟು ವನ್ಯಜೀವಿ ಮಾರ್ಗಗಳ(ಕಾರಿಡಾರ್) ಸ್ಥಾಪನೆ. ಬುಡಕಟ್ಟು ಸಮುದಾಯಗಳನ್ನು ಹೊರಗಿನ ರೋಗಗಳಿಂದ ರಕ್ಷಿಸಲು 100 ಕೋಟಿ ರೂ. ವೆಚ್ಚದಲ್ಲಿ ವಿಶೇಷ ವೈದ್ಯಕೀಯ ಘಟಕ. ಇದಲ್ಲದೆ, ದ್ವೀಪದ ಶೇ.92 ಭಾಗ ಬುಡಕಟ್ಟು ಮೀಸಲು ಪ್ರದೇಶವಾಗಿ ಮುಂದುವರಿಯಲಿದೆ; ಯೋಜನಾ ಪ್ರದೇಶ ಬುಡಕಟ್ಟು ಮೀಸಲಿನ ಹೊರಗಿದೆ ಎಂಬುದು ಸರ್ಕಾರದ ಸ್ಪಷ್ಟ ನಿಲುವು.

ಫೆಬ್ರವರಿ 2026ರಲ್ಲಿ ನ್ಯಾ. ಪ್ರಕಾಶ್ ಶ್ರೀವಾಸ್ತವ ನೇತೃತ್ವದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ(ಎನ್‌ಜಿಟಿ) ಆರು-ಸದಸ್ಯರ ಪೀಠ ಯೋಜನೆಗೆ ವಿರುದ್ಧವಾಗಿ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ತಿರಸ್ಕರಿಸಿ, 'ಮಧ್ಯಪ್ರವೇಶಿಸಲು ಯಾವುದೇ ಸಮಂಜಸ ಕಾರಣವಿಲ್ಲ' ಎಂದು ತೀರ್ಪು ನೀಡಿತು. ಎನ್‌ಜಿಟಿ ಒಂದು ರಬ್ಬರ್ ಸ್ಟ್ಯಾಂಪ್ ಸಂಸ್ಥೆಯಲ್ಲ - ಸರ್ಕಾರಗಳು ಪರಿಸರ ಕಾನೂನಿಗೆ ಧಕ್ಕೆ ತಂದಾಗ ತಡೆ ಒಡ್ಡುವುದು ಅದರ ಕರ್ತವ್ಯ. ಆದರೆ ಇಲ್ಲಿ ಯಾವುದೇ ಶಾರ್ಟ್‌ಕಟ್ ಕಂಡುಬಂದಿಲ್ಲ. ಭಾರತೀಯ ಪರಿಸರ ಕಾನೂನಿಗೆ ಸಂಪೂರ್ಣ ಅನುಸರಣೆಯಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿತು. ಇದಕ್ಕೂ ಮೊದಲು ನವೆಂಬರ್ 2022ರಲ್ಲಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ತಜ್ಞ ಮೌಲ್ಯಮಾಪನ ಸಮಿತಿ ಪರಿಸರ ಮಂಜೂರಾತಿ ನೀಡಿತ್ತು.

ರಾಷ್ಟ್ರ ಮೊದಲು

2004ರ ಭೀಕರ ಸುನಾಮಿಯ ನಂತರ ಗ್ರೇಟ್ ನಿಕೋಬಾರ್ ಸೇರಿದಂತೆ ಅಂಡಮಾನ್ -ನಿಕೋಬಾರ್ ದ್ವೀಪಗಳ ಪುನರ್ನಿರ್ಮಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಅಗತ್ಯ ಎಷ್ಟು ಮುಖ್ಯ ಎಂದು ಜಗತ್ತಿಗೆ ಮನವರಿಕೆಯಾಯಿತು. ಆದರೆ ಎರಡು ದಶಕಗಳ ಕಾಲ ಈ ದ್ವೀಪಗಳು ರಾಷ್ಟ್ರೀಯ ಗಮನದಿಂದ ದೂರವೇ ಉಳಿದವು. ಮೋದಿ ಸರ್ಕಾರ ಮೊದಲ ಬಾರಿಗೆ ಈ ದ್ವೀಪಗಳ ಸಾಮರಿಕ ಮಹತ್ವವನ್ನು ಗುರುತಿಸಿ ದಿಟ್ಟ ಯೋಜನೆಯನ್ನು ಮುಂದಿಟ್ಟಿದೆ. ಜನವರಿ 2026ರಲ್ಲಿ ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಕಾರ್ ನಿಕೋಬಾರ್ ವಾಯುನೆಲೆಯ ಉನ್ನತೀಕರಿಸಿದ ರನ್ವೇಯನ್ನು ಉದ್ಘಾಟಿಸಿದರು - ಇದು ಗ್ರೇಟ್ ನಿಕೋಬಾರ್ ಯೋಜನೆಯ ಪೂರ್ವಭಾವಿ ಸಿದ್ಧತೆಯ ಭಾಗ.

ಯಾವುದೇ ಬೃಹತ್ ಮೂಲಸೌಕರ್ಯ ಯೋಜನೆ ಸ್ವಲ್ಪ ಮಟ್ಟಿಗೆ ಪರಿಸರಕ್ಕೆ ಪರಿಣಾಮ ಬೀರುವುದು ಸತ್ಯ. ಆದರೆ ಇದಕ್ಕೆ ಪರಿಹಾರ 'ಯೋಜನೆಯನ್ನೇ ರದ್ದುಗೊಳಿಸುವುದು' ಅಲ್ಲ - ಬದಲಿಗೆ ವೈಜ್ಞಾನಿಕ ಶಮನ ಕ್ರಮಗಳ ಮೂಲಕ ಪರಿಣಾಮವನ್ನು ಕಡಿಮೆಗೊಳಿಸುವುದು. ಸರ್ಕಾರ ಈ ದಿಕ್ಕಿನಲ್ಲಿ ಹಲವಾರು ಶಮನ ಕ್ರಮಗಳನ್ನು ಜಾರಿಗೊಳಿಸಿದೆ. ಕಾನೂನಿನ ಎಲ್ಲ ಪ್ರಕ್ರಿಯೆಗಳನ್ನೂ ಪಾಲಿಸಲಾಗಿದೆ -ಎನ್‌ಜಿಟಿ ಸ್ವತಃ ಇದನ್ನು ದೃಢಪಡಿಸಿದೆ.

ಚೀನಾ ಭಾರತದ ಸುತ್ತ ಸಾಮರಿಕ ಜಾಲ ಹೆಣೆಯುತ್ತಿರುವಾಗ, ಪಾಕಿಸ್ತಾನ ಗ್ವಾದರ್‌ನಲ್ಲಿ ಚೀನಾಕ್ಕೆ ಆಶ್ರಯ ನೀಡುತ್ತಿರುವಾಗ, ಶ್ರೀಲಂಕಾ ಮತ್ತು ಬಾಂಗ್ಲಾದೇಶಗಳಲ್ಲಿಯೂ ಚೀನಾದ ಪ್ರಭಾವ ಹೆಚ್ಚುತ್ತಿರುವಾಗ -ಭಾರತ ತನ್ನ ಸ್ವಂತ ದ್ವೀಪದಲ್ಲಿ, ತನ್ನ ಸ್ವಂತ ಸಾರ್ವಭೌಮಿಕ ಅಧಿಕಾರದಡಿಯಲ್ಲಿ ಒಂದು ಸಾಮರಿಕ ನೆಲೆಯನ್ನು ಸ್ಥಾಪಿಸುವುದು ಆಕ್ರಮಣಶೀಲತೆ ಅಲ್ಲ - ಅದು ಆತ್ಮರಕ್ಷಣೆ. 1.4 ಶತಕೋಟಿ ಜನಸಂಖ್ಯೆಯ ರಾಷ್ಟ್ರಕ್ಕೆ ಸಾರ್ವಭೌಮ ಅಭಿವೃದ್ಧಿ ಮತ್ತು ಪ್ರಾದೇಶಿಕ ಭದ್ರತೆಯ ನಿರ್ಣಯಗಳನ್ನು ಭಾವನಾತ್ಮಕ ಅರಣ್ಯ ವಿಷಾದದ ಆಧಾರದಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಗ್ರೇಟ್ ನಿಕೋಬಾರ್ ಯೋಜನೆ ಭಾರತದ ಭವಿಷ್ಯದ ಸಾಮರಿಕ, ಆರ್ಥಿಕ ಮತ್ತು ರಾಜತಾಂತ್ರಿಕ ಶಕ್ತಿಯ ಆಧಾರಸ್ತಂಭ. ಇಂದು ಈ ಯೋಜನೆಗೆ ಧಕ್ಕೆ ತಂದರೆ, ನಾಳೆ ನಮ್ಮ ಪೂರ್ವ ಗಡಿ - ಮಲಕ್ಕಾ ಜಲಸಂಧಿಯ ಬಾಗಿಲಲ್ಲಿಯೇ - ಅಸುರಕ್ಷಿತವಾಗಲಿದೆ. ಇದು ಭಾರತಕ್ಕೆ ಒಂದು ಪರೀಕ್ಷೆ; ಇಲ್ಲಿ ತಪ್ಪಿದರೆ ಇತಿಹಾಸ ಕ್ಷಮಿಸದು.

ಕ್ವಾಡ್ ಮತ್ತು ಇಂಡೋ-ಪೆಸಿಫಿಕ್ ತಂತ್ರ

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ ಕ್ವಾಡ್ ಸಮಿತಿಯ ಸಾಮರಿಕ ಆಯಾಮವು ಇಂದು ಮುನ್ನೆಲೆಗೆ ಬಂದಿದೆ. ಗ್ರೇಟ್ ನಿಕೋಬಾರ್‌ನಲ್ಲಿ ಆಧುನಿಕ ಲಾಜಿಸ್ಟಿಕಲ್ ನೆಲೆ ಸ್ಥಾಪನೆಯಾದರೆ -ಜಂಟಿ ನೌಕಾ ಕಾರ್ಯಾಚರಣೆಗಳಿಗೆ ಬೆಂಬಲ, ಮಿಲಿಟರಿ ಯುದ್ಧಾಭ್ಯಾಸಗಳಿಗೆ ಲಾಜಿಸ್ಟಿಕ್ ಹಬ್, ಮುಂದುವರಿದ ಸಾಮುದ್ರಿಕ ಮೇಲ್ವಿಚಾರಣಾ ಸಾಮರ್ಥ್ಯ ಮತ್ತು ಸಾಮುದ್ರಿಕ ಗಸ್ತು ನೆಲೆ- ಇವೆಲ್ಲವೂ ಒಂದೇ ಸ್ಥಳದಲ್ಲಿ ಲಭ್ಯವಾಗುತ್ತವೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಭಾರತದ ನೆಟ್ ಸೆಕ್ಯೂರಿಟಿ ಪ್ರೊವೈಡರ್ ಎಂಬ ಪಾತ್ರವನ್ನು ಬಲಪಡಿಸಲು ಗ್ರೇಟ್ ನಿಕೋಬಾರ್ ಯೋಜನೆ ಅತ್ಯಗತ್ಯ. ಆಸಿಯಾನ್ ರಾಷ್ಟ್ರಗಳ ಜೊತೆ ಭಾರತದ 'ಆಕ್ಟ್ ಈಸ್ಟ್' ನೀತಿಯ ಯಶಸ್ಸಿಗೂ ಇದು ಆಧಾರಸ್ತಂಭವಾಗಲಿದೆ.

ಸ್ಥಳೀಯರ ಕಲ್ಯಾಣ: ಮರೆಯಲಾಗದ ಒಂದು ಸತ್ಯ

ವಿರೋಧಿಗಳು ಬುಡಕಟ್ಟು ಸಮುದಾಯಗಳ ಬಗ್ಗೆ ಮಾತನಾಡುವಾಗ, ಗ್ರೇಟ್ ನಿಕೋಬಾರ್‌ನಲ್ಲಿ ವಾಸಿಸುವ ಸುಮಾರು 8,000 ಜನರಲ್ಲಿ 7,000 ಜನರು ಮುಖ್ಯಭೂಮಿಯಿಂದ ಬಂದು ನೆಲೆಸಿರುವ ಸಾಮಾನ್ಯ ಭಾರತೀಯ ನಾಗರಿಕರೆಂಬ ಸತ್ಯವನ್ನು ಮರೆಮಾಚಲಾಗುತ್ತದೆ. ಇಂದು ಈ ಜನರಿಗೆ ಸಮರ್ಪಕ ರಸ್ತೆ ಸಂಪರ್ಕವಿಲ್ಲ, ವೈದ್ಯಕೀಯ ಸೌಲಭ್ಯ ತೀರಾ ಕಡಿಮೆ, ಆರ್ಥಿಕ ಅವಕಾಶಗಳಂತೂ ಶೂನ್ಯ. ಯೋಜನೆಯಡಿ ನಿರ್ಮಾಣವಾಗುತ್ತಿರುವ 160 ಎಂಎಲ್‌ಡಿ ಸಾಮರ್ಥ್ಯದ ನೀರು ಸರಬರಾಜು ವ್ಯವಸ್ಥೆ, ಪಟ್ಟಣ ಯೋಜನೆ, ಆಧುನಿಕ ಆಸ್ಪತ್ರೆ ಮತ್ತು ಮೂಲಸೌಕರ್ಯಗಳು ಈ ಜನರಿಗೆ ಭಾರತದ ಮುಖ್ಯವಾಹಿನಿಯೊಂದಿಗೆ ಸಂಪರ್ಕ ಕಲ್ಪಿಸಲಿವೆ. ಸಂರಕ್ಷಣಾ ಸಾಹಿತ್ಯದಲ್ಲಿ ಜನವಸತಿ ಇರುವ ದ್ವೀಪಗಳನ್ನು ಪರಿಹರಿಸಬೇಕಾದ ಸಮಸ್ಯೆಗಳು ಎಂಬಂತೆ ನೋಡುವ ಪ್ರವೃತ್ತಿ ಇದೆ. ಆದರೆ ಈ 8,000 ಭಾರತೀಯರಿಗೂ ಅಭಿವೃದ್ಧಿಯ ಹಕ್ಕಿದೆ.

ಕಿರುಸುದ್ದಿ

ಅನ್ವೇಷಣೆ ಸಪ್ತಾಹ ಇಂದು

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ 6 ಸ್ಥಳಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಶಿಲಾನ್ಯಾಸ ದಶ ದೇವಾಲಯ ಮತ್ತು ದಶ ಬಾವಿಗಳ ಅನಾವರಣ ಪ್ರಾಚ್ಯಾವಶೇಷಗಳ ಅನ್ವೇಷಣೆಯ ಸಪ್ತಾಹ ಕಾರ್ಯಕ್ರಮವು ಹಾಲುಗುಂಡಿ ಬಸವೇಶ್ವರ ದೇವಾಲಯ ಆವರಣದಲ್ಲಿ ಮೇ 2ರಂದು ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು.

ಆಕ್ಷೇಪಣೆಗೆ ಅವಕಾಶ

ಗದಗ: ಪ್ರಸಕ್ತ ಸಾಲಿನ ರೋಣ, ಗಜೇಂದ್ರಗಡ ತಾಲೂಕಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ತಿರಸ್ಕೃತಗೊಂಡ ಬೆಳೆ ವಿಮೆ ಪ್ರಸ್ತಾವನೆಗಳಿಗೆ ರೈತರಿಂದ ಆಕ್ಷೇಪಣೆ ಸಲ್ಲಿಸುವ ಬಗ್ಗೆ ರೋಣದ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ನರಗುಂದ: 2024–25ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದೆ ಇರುವ ಕಾರಣ ತಾಲೂಕಿನ ಮುಂಗಾರು ಹಂಗಾಮಿನ 233 ಹಾಗೂ ಹಿಂಗಾರು ಹಂಗಾಮಿನ 188 ಒಟ್ಟು 421 ಬೆಳೆವಿಮ ಪ್ರಸ್ತಾವನೆಗಳು ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡಿವೆ. ಇಂತಹ ಪ್ರಸ್ತಾವನೆಗಳ ಗ್ರಾಮವಾರು ಮಾಹಿತಿಯನ್ನು ನರಗುಂದ ರೈತ ಸಂಪರ್ಕ ಕೇಂದ್ರ, ಹಾಗೂ ಕೊಣ್ಣೂರ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿ ಇವರುಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದ್ದು, ರೈತರು ತಮ್ಮ ಆಕ್ಷೇಪಣೆಗಳಿದ್ದಲ್ಲಿ ಉತಾರ ಅಥವಾ ಪಹಣಿ ಬೆಳೆ ವಿಮೆ ಯೋಜನೆಯಡಿ ಬೆಳೆ ಮಾರಾಟ ಮಾಡಿದ್ದರೆ ಅದರ ರಶೀದಿ ಅಥವಾ ಎಪಿಎಮ್.ಸಿ.ಯಲ್ಲಿ ಬೆಳೆ ಮಾರಾಟ ಮಾಡಿದ್ದರೆ ರಶೀದಿ ಈ ದಾಖಲೆಗಳೊಂದಿಗೆ ಕೊನೆಯ ದಿನ ಮೇ 12 ರೊಳಗಾಗಿ ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿದೆ. ಕೃಷಿ ಬೆಳೆಯಾಗಿದ್ದರೆ (ರೈತ ಸಂಪರ್ಕ ಕೇಂದ್ರ, ನರಗುಂದ/ಕೊಣ್ಣೂರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ನರಗುಂದ ಹಾಗೂ ತೋಟಗಾರಿಕಾ ಬೆಳೆಯಾಗಿದ್ದಲ್ಲಿ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿ, ನರಗುಂದ ಇಲ್ಲಿ ಆಕ್ಷೇಪಣಾ ಅರ್ಜಿ ಸಲ್ಲಿಸಲು ಸಹಾಯಕ ಕೃಷಿ ನಿರ್ದೇಶಕ ಎಂ.ಎಸ್. ಕುಲಕರ್ಣಿ ತಿಳಿಸಿದ್ದಾರೆ.

ಗದಗ: ಮುಂಗಾರು ಮತ್ತು ಹಿಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ (ವಿಮಾ) ಯೋಜನೆಯಡಿ ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆಯಾಗದೆ ಇರುವ ಕಾರಣಕ್ಕೆ ಗದಗ ತಾಲೂಕಿನ ಮುಂಗಾರು ಹಂಗಾಮಿನ 1255 ಹಾಗೂ ಹಿಂಗಾರು ಹಂಗಾಮಿನ 46 ಒಟ್ಟು 1301 ಬೆಳೆ ವಿಮೆ ಪ್ರಸ್ತಾವನೆಗಳು ವಿಮಾ ಸಂಸ್ಥೆಯವರಿಂದ ತಿರಸ್ಕೃತಗೊಂಡಿವೆ. ಇಂತಹ ಪ್ರಸ್ತಾವನೆಗಳ ಗ್ರಾಮವಾರು ಮಾಹಿತಿ ರೈತ ಸಂಪರ್ಕ ಕೇಂದ್ರಗಳು ಹುಲಕೋಟಿ / ಬೆಟಗೇರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗದಗ ಹಾಗೂ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿ, ಗದಗ ಇವರುಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದ್ದು, ರೈತರು ತಮ್ಮ ಆಕ್ಷೇಪಣೆಗಳಿದ್ದಲ್ಲಿ ಇದ್ದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಕೆಗೆ ಮೇ 12 ಕೊನೆಯ ದಿನವಾಗಿದೆ. ಕೃಷಿ ಬೆಳೆಯಾಗಿದ್ದರೆ ರೈತ ಸಂಪರ್ಕ ಕೇಂದ್ರ, ಹುಲಕೋಟಿ/ ಬೆಟಗೇರಿ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಗದಗ ಹಾಗೂ ತೋಟಗಾರಿಕಾ ಬೆಳೆಯಾಗಿದ್ದಲ್ಲಿ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿ, ಗದಗ ಇಲ್ಲಿ ಮೇಲ್ಕಂಡ ದಾಖಲಾತಿಯೊಂದಿಗೆ ಆಕ್ಷೇಪಣಾ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಮಲ್ಲಯ್ಯ ಕೊರವನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ.93.18 ರಷ್ಟು ಫಲಿತಾಂಶ

ಗಜೇಂದ್ರಗಡ: ಲಕ್ಕಲಕಟ್ಟಿ ಗ್ರಾಮ ಶ್ರೀ ವಾಲ್ಮೀಕಿ ಮಹರ್ಷಿ ವಿದ್ಯಾವರ್ಧಕ ಸಂಘ ಶ್ರೀ ಮಾರುತೇಶ್ವರ ಪ್ರೌಢಶಾಲೆ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ.93.18 ರಷ್ಟು ಆಗಿದೆ.



ನೇತ್ರಾ ಯಮನಪ್ಪ ಲಮಾಣಿ ಶೇ.89.60 ಅಂಕ ಪಡೆದು ಶಾಲೆಗೆ ಪ್ರಥಮ, ನೀಲಮ್ಮಾ ಚೆನ್ನಬಸಪ್ಪ ಭಗವತಿ ಶೇ.89.12 ದ್ವಿತೀಯ, ಸಹನಾ ಬಸವರಾಜ ರೊಟ್ಟಿ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಶರಣಪ್ಪ ನಾಯಕ ,ಅಶೋಕ ಶಿಗ್ಲಿ, ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಹಾಗೂ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಗಿರೀಶ ವಡ್ಡಿಗೇರಿ ನಿಧನ



ನರಗುಂದ: ಪಟ್ಟಣದ ಕಸಬಾ ನಿವಾಸಿ ಗಿರೀಶ ಕರವೀರಪ್ಪ(ಬಾಬಣ್ಣ) ವಡ್ಡಿಗೇರಿ (36) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಗದಗ: ನಗರದ ಚಿಕ್ಕಲಗೇರಿ ಸಂಭಾಪುರ ರಸ್ತೆ ವಾರ್ಡ್ ನಂ.27ರಲ್ಲಿ ಅಂಗನವಾಡಿ ಕೇಂದ್ರ ಉದ್ಘಾಟನೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಕ್ಬರಸಾಬ್ ಬಬರ್ಜಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ ಉಪಸ್ಥಿತರಿದ್ದರು.

ಸಹಸ್ರನಾಮ ಪಠಣದಿಂದ ಆರೋಗ್ಯ ಸ್ಥಿರ

ಗದಗ: ಸೀತೆಯ ಹೊಂದುವ ಉದ್ದೇಶದಿಂದ ಶ್ರೀರಾಮಚಂದ್ರ, ಜನಕರಾಜನ ಮನೆಗೆ ಹೋದದ್ದಲ್ಲ, ಆದರೆ ಅಲ್ಲಿ ಸೀತಾಕಲ್ಯಾಣವಾಗಬೇಕಾದ ಸಂದರ್ಭವಿದ್ದ ಕಾರಣ ರಾಮಚಂದ್ರನ ಆಗಮನ ಜನಕರಾಜನ ಅನ್ವಾಗ್ರಹವಾಗಿತ್ತು ಎಂದು ಅದಮಾರು ಮಠದ ಹಿರಿಯ ಶ್ರೀಗಳಾದ ವಿಶ್ವಪ್ರಿಯತೀರ್ಥ ಶ್ರೀಪಾದಂಗಳವರು ಹೇಳಿದರು.

ನಗರದ ಐತಿಹಾಸಿಕ ವೀರನಾರಾಯಣ ದೇವಸ್ಥಾನದಲ್ಲಿ ವೀರನಾರಾಯಣ, ತ್ರಿಕೂಟೇಶ್ವರದೇವಸ್ಥಾನಟ್ರಸ್ಟ್‌ಕಮಿಟಿವಮಾನಸೇವಾಸಮಿತಿ, ಶ್ರೀಗುರುರಾಘವೇಂದ್ರ ಉತ್ಸವ ಮಂಡಳಿ, ಮಹಾಲಕ್ಷ್ಮೀ ಯುವತಿ ಮಂಡಳ ಸಹಯೋಗದಲ್ಲಿ ಮೂರು ದಿನಗಳ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. 72 ಸಾವಿರ ಅಕ್ಷರ ಹೊಂದಿದ ಸಹಸ್ರನಾಮ ಪಠಣದಿಂದ ಮನಸ್ಸಿನ ಆರೋಗ್ಯ ಸ್ಥಿರವಾಗಲಿದೆ ಎಂದರು. ಕಾರ್ಯಕ್ರಮದ ನಂತರ ಇಂದು ಮೂರು ದಿನಗಳ ಕಾರ್ಯಕ್ರಮ ಸಮಾರೋಪದ ಹಿನ್ನೆಲೆಯಲ್ಲಿ ಫಲಮಂತ್ರಾಕ್ಷತೆ ನೀಡುವ ಮೂಲಕ ಗುರುಗಳು ಸರ್ವರನ್ನು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಪಂ. ವರದಾಚಾರ್ಯ ಜಾಲಿಹಾಳ, ರಾಘಣ್ಣ ಜೋಶಿ, ಶ್ರೀಧರಾಚಾರ್ಯ ಶಿರಹಟ್ಟಿ, ಶ್ರೀಕಾಂತಾಚಾರ್ಯ ನಿಲೂಗಲ್ಲ, ಪ್ರಲ್ಹಾದಾಚಾರ್ಯ ನಿಲೂಗಲ್ಲ, ವೆಂಕಟೇಶ ಕುಲಕರ್ಣಿ, ನಾರಾಯಣಾಚಾರ್ಯ ಗುಡಿ, ಪ್ರದ್ಯುಮ್ನ ಗುಡಿ ಸೇರಿದಂತೆ ಭಕ್ತರು ಪಾಲ್ಗೊಂಡಿದ್ದರು.



ಗದಗ: ನಗರದ ಒಕ್ಕಲಗೇರಿ ಕಮತರ್ ಪ್ಲಾಟ್ ವಾರ್ಡ್ ನಂ.21ರಲ್ಲಿ ಅಂಗನವಾಡಿ ಕೇಂದ್ರ ಉದ್ಘಾಟನೆಗೆ ಜಿಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಕ್ಬರಸಾಬ್ ಬಬರ್ಜಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ ಉಪಸ್ಥಿತರಿದ್ದರು.

ಸರ್ಕಾರದ ಯೋಜನೆಗಳು ಕಟ್ಟಡ ಕಾರ್ಮಿಕರಿಗೆ ಶ್ರೀರಕ್ಷೆ: ಎಚ್.ಕೆ. ಪಾಟೀಲ

ಶಿಕ್ಷಣಕ್ಕೆ ಮೊದಲ ಆದ್ಯತೆ

ಗದಗ: ದೇಶದ ಭವ್ಯ ಭವಿಷ್ಯವನ್ನು ನಿರ್ಮಿಸುವಲ್ಲಿ ಕಟ್ಟಡ ಕಾರ್ಮಿಕರ ಪಾತ್ರ ಅನನ್ಯ. ಅಹರ್ನಿಶಿ ಬೆವರು ಸುರಿಸಿ ದುಡಿಯುವ ಕಾರ್ಮಿಕರ ಹಿತರಕ್ಷಣೆಗಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಯೋಜನೆಗಳು ಅವರಿಗೆ ಶ್ರೀರಕ್ಷೆಯಾಗಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಹೇಳಿದರು.

ನಗರದ ಡಿ. ಸಿ. ಮಿಲ್ ಕಂಪೌಂಡ್ ಒಳಗಡೆ ಕೆ.ಎಚ್. ಪಾಟೀಲ ನಗರದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಕಟ್ಟಡ ನಿರ್ಮಾಣ ಕಾರ್ಮಿಕರ ಮಹಾ ಸಂಘ ಗದಗ ಬೆಟಗೇರಿ ಇವರಿಂದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣಕ್ಕೆ ಮೊದಲ ಆದ್ಯತೆಯಾಗಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ. 85ಕ್ಕೂ ಹೆಚ್ಚು ಅಂಕ ಪಡೆದ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಮಿಕರ ಮಕ್ಕಳು ಶೈಕ್ಷಣಿಕವಾಗಿ ಮುಂಚೂಣಿಗೆ ಬರಬೇಕೆನ್ನುವುದು ಆಶಯವಾಗಿದೆ ಎಂದರು.

ನಮ್ಮ ಕಣ್ಣಿಗೆ ಕಾಣುವ ರಸ್ತೆ, ಫ್ಲೈ ಓವರ್, ಕಾಲೇಜುಗಳು, ಮ್ಯೂಸಿಯಂ ಹಾಗೂ ಗುಡಿಗಳನ್ನು ನಿರ್ಮಿಸುವವರು ಕಾರ್ಮಿಕರು ಸಾವಿರಾರು ವರ್ಷಗಳ ಕಾಲ ಉಳಿಯುವ ಇಂತಹ ಸ್ಮಾರಕಗಳ ಹಿಂದೆ ಕಾರ್ಮಿಕರ ರಕ್ತ ಮತ್ತು ಬೆವರಿದೆ ಎಂದು ಅವರು ಭಾವುಕರಾಗಿ ನುಡಿದರು.

ಅಭಿನವ ಕೊಟ್ಟೂರು ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಶಾಸಕ ಎಸ್ .ವಿ.ಸಂಕನೂರು, ನಾಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಅಕ್ಬರಸಾಬ್ ಬಬರ್ಜಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ. ಅಸೂಟಿ, ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಮಹಬೂಬ್ ಖಾನ್ ಪಠಾಣ್, ನಗರಸಭೆ ಅಧ್ಯಕ್ಷರಾದ ಉಷಾ ದಾಸರ, ಡಾ.ಗಣೇಶ್ ರಾವ್ ಇದ್ದರು.

ಜಾಗ ಗುರುತು
ವಸತಿ ಶಾಲೆಗಾಗಿ ಗದಗ ನಗರದ ಸಮೀಪವಿರುವ ಗುಡ್ಡದ ಸಾಲಿನಲ್ಲಿ, ನವೋದಯ ಶಾಲೆ ಹಾಗೂ ಮೈನಾರಿಟಿ ವಸತಿ ಶಾಲೆಗಳ ಪಕ್ಕದಲ್ಲೇ 10 ಎಕರೆ ವಿಶಾಲವಾದ ಭೂಮಿಯನ್ನು ಗುರುತಿಸಲಾಗಿದೆ. ಇದೇ ವರ್ಷದಲ್ಲಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗುವುದು. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಶಾಲೆಯಲ್ಲಿ ಚಟುವಟಿಕೆಗಳು ಆರಂಭವಾಗುವಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದರು.



ಶೀಘ್ರ ಕಾರ್ಮಿಕ ಕಾರ್ಡ್ ವಿತರಣೆ
ಇನ್ನು ಯಾರಾದರೂ ಅರ್ಹ ಫಲಾನುಭವಿಗಳು ಕಾರ್ಮಿಕ ಕಾರ್ಡ್‌ನಿಂದ ವಂಚಿತರಾಗಿದ್ದರೆ ಅಂಥವರು ಎಂಎಲ್‌ಎ ಕಚೇರಿ ಅಥವಾ ಕಾರ್ಮಿಕ ಸಂಘಟನೆಗೆ ಅರ್ಜಿ ಸಲ್ಲಿಸಿದರೆ ಒಂದು ವಾರದೊಳಗೆ ಕಾರ್ಡ್ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ್ ಭರವಸೆ ನೀಡಿದರು.

- ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ 625 ಕ್ಕೆ 624 ಅಂಕ ಗಳಿಸಿ ಮರು ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸಿದ್ದ ವಿದ್ಯಾರ್ಥಿನಿಯ ಧೈರ್ಯವನ್ನು ಶ್ಲಾಘಿಸಿದ ಸಚಿವರು
- ಕಾರ್ಮಿಕರ ಮಕ್ಕಳು ಕೂಡ ಇಂತಹ ಉನ್ನತ ಗುರಿಗಳನ್ನು ಹೊಂದಿರಬೇಕು ಎಂದು ಹೇಳಿದ ಸಚಿವ ಎಚ್.ಕೆ. ಪಾಟೀಲ

ಶೈಕ್ಷಣಿಕ ಕಿಟ್‌ಗಳ ವಿತರಣೆ ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸರಿಸುಮಾರು 1111 ಕೋಟಿ ರೂಪಾಯಿ ವೆಚ್ಚದಲ್ಲಿ ಶೈಕ್ಷಣಿಕ ಕಿಟ್‌ಗಳನ್ನು ವಿತರಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.
■ ಎಚ್.ಕೆ. ಪಾಟೀಲ್, ಸಚಿವ

ಬದುಕಿನ ಬೆಲೆ ಅರಿಯಿರಿ: ಗವಿಸಿದ್ದೇಶ್ವರ ಶ್ರೀ

ಲಕ್ಷ್ಮೇಶ್ವರ: ಪಟ್ಟಣದ ಅಂಭಾಭವಾನಿ ದೇವಸ್ಥಾನದ ಕಳಸಾರೋಹಣ, ಶ್ರೀ ಸಹಸ್ರಾರ್ಜುನ ಸಮುಧಾಯಭವನ ಉದ್ಘಾಟನೆ ಕಾರ್ಯಕ್ರಮ ಶುಕ್ರವಾರ ಅದ್ದೂರಿಯಾಗಿ ನೆರವೇರಿತು. ಮುಂಜಾನೆ ದೇವಸ್ಥಾನಕ್ಕೆ ಆಗಮಿಸಿದ ಕೊಪ್ಪಳ ಗವಿಮಠದ ಅಭಿನವ ಗವಿಶಿದ್ದೇಶ್ವರ ಸ್ವಾಮೀಜಿ ಕಳಸಾರೋಹಣ ನೆರವೇರಿಸಿದರು. ನಂತರ ದೇವಸ್ಥಾನ ಮತ್ತು ಸಮುದಾಯ ಭವನವನ್ನು ವೀಕ್ಷಿಸಿದರು.

ನಂತರ ನಡೆದ ಧರ್ಮಸಭೆಯಲ್ಲಿ ಮಾತನಾಡಿದ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು, ಪ್ರತಿಯೊಬ್ಬ ಮನುಷ್ಯನಿಗೆಬದುಕಿನ ಬೆಲೆಗೊತ್ತಿರಬೇಕು. ಅಂದಾಗಮಾತ್ರ ಉತ್ತಮ ಬದುಕು ನಡೆಸಲು ಸಾಧ್ಯ. ಸಮಾಜದಲ್ಲಿ ಬದುಕಿನ ಬೆಲೆ ತಿಳಿಯದ ವ್ಯಕ್ತಿ ಎಂದಿಗೂ ಒಳ್ಳೆಯ ಬದುಕು ಸಾಗಿಸಲು ಸಾಧ್ಯವಿಲ್ಲ, ಲೋಕಕ್ಕೆ ಸಮಾಜಕ್ಕಾಗಿ ಉಪಯೋಗಿಗಳಾಗಿ ಯಾರು ಇರುತ್ತಾರೆ ಅವರೇ ನಿಜವಾದ ಯೋಗಿಗಳು ಮನುಷ್ಯ ಜೀವಂತವಿದ್ದಾಗ ಸ್ವಾರ್ಥಕ್ಕಾಗಿ ಬದುಕಬಾರದು ಸಮಾಜಕ್ಕಾಗಿ ಬದುಕಬೇಕು. ಹಸಿವಾದವನಿಗೆ ಮಾತ್ರ ಅನ್ನದ ಬೆಲೆ ಗೊತ್ತಿರಲು ಸಾಧ್ಯ ಎಂದರು.

ಶಾಸಕಡಾ. ಚಂದ್ರುಲಮಾಣಿಮಾತನಾಡಿ, ಎಸ್‌ಎಸ್‌ಕೆ ಸಮಾಜ ಧೈರ್ಯ, ಸ್ಥೈರ್ಯಕ್ಕೆ ಹೆಸರು ಮಾಡಿದೆ. ಧಾರ್ಮಿಕವಾಗಿ, ಸಾಮಾಜಿಕವಾಗಿ ಸಂಘಟನೆಯಲ್ಲಿ ಹೆಚ್ಚು ಕ್ರೀಯಾಶೀಲವಾಗಿರುವ ಈ ಸಮಾಜ ಒಗ್ಗಟ್ಟಿನಿಂದ ಎಲ್ಲವನ್ನೂ ಸಾಧಿಸಬಹುದು ಎನ್ನುವುದಕ್ಕೆ ಈ ಬೃಹತ್ ಸಮುದಾಯ ಭವನ ಸಾಕ್ಷಿಯಾಗಿದೆ ಎಂದರು. ಮಾಜಿ ಶಾಸಕರುಗಳಾದ ಜಿ.ಎಂ.ಮಹಾಂತಶೆಟ್ಟರ, ಜಿ.ಎಸ್.ಗಡ್ಡದೇವರಮಠ, ಅಶೋಕ ಕಾಟವಾ, ರಾಜ್ಯಸಭಾಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿದರು. ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಡಾ. ಶಶಿಕುಮಾರ ಮೆಹರವಾಡೆ, ವಿಶ್ವನಾಥ ಮಹಾಂತಶೆಟ್ಟರ ಮಾತನಾಡಿದರು. ಎಸ್‌ಎಸ್‌ಕೆ ಸಮಾಜ ಸೇವಾ ಸಮಿತಿ ಅಧ್ಯಕ್ಷ ಪರಶುರಾಮ ಬದಿ, ಪುಲಿಕೇಶಿ ಉಪನಾಳ, ಶ್ರೀನಿವಾಸ ಖೋಡೆ, ರಾಮಚಂದ್ರಸಾಕಬಾರಿ, ಸತ್ಯನಾರಾಯಣಸಾ ಡಮಾಮ್, ಟಿ.ಎಂ.ಮೆಹರವಾಡೆ, ಸತೀಶ ಮೆಹರವಾಡೆ ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು. ಎಸ್ ಎಸ್‌ಕೆ ಸಮಾಜದ ಲಕ್ಷ್ಮಣಸಾ ರಾಜೋಳಿ, ತುಕಾರಾಮಸಾ ಬದಿ, ವಿಠ್ಠಲಸಾ ಸಿದ್ಲಿಂಗ್, ಯಲ್ಲಪ್ಪ ಬದಿ, ಪರಶುರಾಮಸಾ ಬದಿ, ತಿಪ್ಪಣಸಾ ಬಾಕಳೆ, ಪಾಂಡುಸಾ ಬದಿ, ಗಣಪತಸಾ ಪೂಜಾರ, ಮಹಿಳಾ ಮಂಡಳದ ಗೌರವಾಧ್ಯಕ್ಷೆ ಇಂದುಬಾಯಿ ಬದಿ, ಅಧ್ಯಕ್ಷೆ ಸರೋಜಾಬಾಯಿ ಬದಿ, ತರುಣ ಸಂಘದ ಅಧ್ಯಕ್ಷ ಭರತ ಬಾಕಳೆ ಹಾಗೂ ಎಲ್ಲ ಕಮಿಟಿಗಳ ಪದಾಧಿಕಾರಿಗಳು ಇದ್ದರು. ಈಶ್ವರ ಮೆಡ್ಲೇರಿ ನಿರೂಪಿಸಿದರು. ದೇವಸ್ಥಾನ ಹಾಗೂ ಸಮುದಾಯಭವನ ನಿರ್ಮಾಣಕ್ಕೆ ಸಹಕರಿಸಿದ, ದಾನಿಗಳಿಗೆ ಸನ್ಮಾನಿಸಲಾಯಿತು.



ದುಶ್ಚಟಮುಕ್ತ ಸುಂದರ ಸಮಾಜ ನಿರ್ಮಾಣ ಗುರಿ

ನರಗುಂದ: ದುಶ್ಚಟಮುಕ್ತ ಸುಂದರ ಸಮಾಜ ನಿರ್ಮಾಣವೇ ನಮ್ಮ ಗುರಿ. ಇಲ್ಲಿಯವರೆಗೆ ರಾಜ್ಯದಲ್ಲಿ 2042 ಮದ್ಯವ್ಯಸನಿಗಳ ಶಿಬಿರಗಳನ್ನು ಮಾಡಲಾಗಿದೆ. ಲಕ್ಷಕ್ಕೂ ಹೆಚ್ಚು ಜನರು ಶಿಬಿರದ ಲಾಭ ಪಡೆದುಕೊಂಡಿದ್ದಾರೆ ಎಂದು ಕೊಪ್ಪಳ ಪ್ರಾದೇಶಿಕ ವಲಯದ ಜನಜಾಗೃತಿ ವೇದಿಕೆ ಅಧಿಕಾರಿ ನಾಗೇಶ ವೈ.ಎ. ಹೇಳಿದರು.

ಪಟ್ಟಣದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಚೇರಿಯಲ್ಲಿ ಶುಕ್ರವಾರ ಮದ್ಯವೆಸನಿಗಳ ಶಿಬಿರದ ವ್ಯವಸ್ಥಾಪನಾ ಸಮಿತಿ ರಚನೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ತಾಲೂಕಿನ ಯೋಜನಾಧಿಕಾರಿ ಮಾಲತಿ ದಿನೇಶ ಮಾತನಾಡಿ, ಪಟ್ಟಣದ ಕಣಕಿಕೊಪ್ಪ ರಸ್ತೆಯಲ್ಲಿನ ರೋಟ್ರ್ಯಾಕ್ಟ್ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಕಟ್ಟಡದಲ್ಲಿ ಶೀಘ್ರ ಮೇ ತಿಂಗಳ ಮಧ್ಯಭಾಗದಲ್ಲಿ 70 ಮದ್ಯ ವ್ಯಸನಿಗಳ 8 ದಿನದ ಶಿಬಿರ ಜರುಗಲಿದೆ ಎಂದರು.

ಪೂರ್ವಭಾವಿ ಸಭೆಯಲ್ಲಿ ಮದ್ಯವ್ಯಸನಿಗಳ ಶಿಬಿರದ ವ್ಯವಸ್ಥಾಪನ ಸಮಿತಿಯ ಗೌರವಾಧ್ಯಕ್ಷರಾಗಿ ರಾಜು ಕಲಾಲ, ಅಧ್ಯಕ್ಷರಾಗಿ ಮಂಜುನಾಥ ಮೇಣಸಗಿ, ಗೌರವ ಸಲಹೆಗಾರರಾಗಿ ಚನ್ನಪ್ಪ ಕಂಠಿ, ಶಂಕರಗೌಡ ಪಾಟೀಲ, ವಿ.ಎನ್. ಕೊಳ್ಳಿಯವರ, ಬಸವರಾಜ ಸಾಬಳೆ ಮತ್ತು ಉಪಾಧ್ಯಕ್ಷರಾಗಿ ಪ್ರಶಾಂತ ಜೋಶಿ, ವಿಜಯ ಕುಲಕರ್ಣಿ, ವಿಜಯ ಚಲವಾದಿ, ಉಮಾ ದ್ಯಾಮನೂರ ಹಾಗೂ ಕೋಶಾಧಿಕಾರಿ ಜ್ಯೋತಿ ಕಾಳೆ ಆಯ್ಕೆಯಾದರು. ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಎಚ್.ಬಿ. ಅಸೂಟಿ, ಚಂದ್ರಗೌಡ ಪಾಟೀಲ, ನೀಲಪ್ಪ ಗುಡದನ್ನವರ, ರಾಜೇಶಸಾಬ ತಹಶೀಲ್ದಾರ, ಫಕೀರಪ್ಪ ಅಣ್ಣಿಗೇರಿ, ಅಶೋಕ ದಾಸರ, ಜಗದೀಶ ಭಜಂತ್ರಿ ಅನೇಕರಿದ್ದರು.

13 ವರ್ಷದ ಹಿಂದೆ ಶಿಬಿರವೊಂದರಲ್ಲಿ ಭಾಗವಹಿಸಿದ ನಂತರ ಕುಡಿಯುವುದನ್ನು ಬಿಟ್ಟಿದ್ದೇನೆ. ಮದ್ಯಸೇವನೆ ಬಿಟ್ಟ ಮೇಲೆ ಸಾರಿಗೆ ಇಲಾಖೆಯಲ್ಲಿ ಬಸ್ ಚಾಲಕ ನೌಕರಿ ಸಿಕ್ಕಿದೆ. ಮನೆ ಕಟ್ಟಿಸಿದ್ದೇನೆ. ತಂಗಿ ಮದುವೆ ಮಾಡಿದ್ದೇನೆ. ಬಂಗಾರ ಖರೀದಿ ಸೇರಿದಂತೆ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುತ್ತಿದ್ದೇನೆ. ಈಗ ನೆಮ್ಮದಿ ಜೀವನ ನಡೆಸುತ್ತಿದ್ದೇನೆ.
■ ಚಂದುಸಾಬ ತಹಶೀಲ್ದಾರ, ಕರಮುಡಿ ಗ್ರಾಮ, (ಮದ್ಯ ಸೇವನೆ ಬಿಟ್ಟ ವ್ಯಕ್ತಿ)



ಏಳು ಶಿಕ್ಷಕರು ನಿರ್ದೇಶಕರಾಗಿ ಆಯ್ಕೆ

ಲಕ್ಷ್ಮೇಶ್ವರ: ತಾಲೂಕು ಪ್ರಾಥಮಿಕ ಶಾಲಾ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ 7 ಜನ ಶಿಕ್ಷಕರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎ.ಎಂ.ಮಠದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಕ್ಷ್ಮೇಶ್ವರ ತಾಲೂಕು ಶಿಕ್ಷಕರ ಸಂಘದ ನಿರ್ದೇಶಕರಾಗಿ ಹುಸೇನಸಾಬ ಬಾಬುಸಾಬ ಪಟ್ಟಣದ, ಮಹಾದೇವಪ್ಪ ನಿಂಗನಗೌಡ ಭರಮಗೌಡರ, ಮುತ್ತಣ್ಣ ನಿಂಗಪ್ಪ ಹುಬ್ಬಳ್ಳಿ, ಶರಣಪ್ಪ ವಿರೂಪಾಕ್ಷಪ್ಪ ಸೋಗಿ, ಶ್ರೀಕಾಂತ ದೇವೇಂದ್ರಪ್ಪ ನಂದೆಣ್ಣವರ ಹಾಗೂ ಗೀತಾ ನೀಲಪ್ಪ ಹಳ್ಯಾಳ, ಸುನಂದಾ ಚರಂತಯ್ಯ ಹಿರೇಮಠ ಅವರು ಚುನಾವಣೆ ಆಯ್ಕೆಯಾಗಿದ್ದಾರೆ ಎಂದರು.

ಈ ಮೊದಲು 5 ಜನ ನಿರ್ದೇಶಕರ ಚುನಾವಣೆ ಗೆ ಒಂಬತ್ತು ಜನರು ಸ್ಪರ್ಧಿಸಿದ್ದರು. ಕೊನೆಗಳಿಗೆಯಲ್ಲಿ ಎಲ್ಲರೂ ಒಮ್ಮತದಿಂದ 5 ಜನರಿಗೆ ಬೆಂಬಲ ಸೂಚಿಸಿ ಕಣದಿಂದ ಹಿಂದೆ ಸರಿದರು. ಆದರೂ ಸಹ ಚುನಾವಣೆಯ ನಿಯಮದಂತೆ ಶುಕ್ರವಾರ ಸಂಜೆ ಈ ಆಯ್ಕೆಯನ್ನು ಘೋಷಿಸಲಾಯಿತು. ಶಿಕ್ಷಕರ ಸಂಘದ ಹಾಗೂ ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳು ಆಯ್ಕೆಯಾದ ಶಿಕ್ಷಕರ ಸಂಘದ ನಿರ್ದೇಶಕರಿಗೆ ಸನ್ಮಾನಿಸಿ ಸಿಹಿ ಹಂಚಿ ಸಂಭ್ರಮಿಸಲಾಯಿತು.



ಈ ವೇಳೆ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಶಿಕ್ಷಕರ ಸಂಘದ ನಿರ್ಗಮಿತ ಅಧ್ಯಕ್ಷ ಬಿ.ಎಸ್.ಹರ್ಲಾಪೂರ, ಮುಖ್ಯೋಪಾಧ್ಯಾಯ ಬಿ.ಎಂ. ಕುಂಬಾರ ಹಾಗೂ ಚಂದ್ರು ನೇಕಾರ ಅವರು ಮಾತನಾಡಿ, ಶಿಕ್ಷಕರ ಸಂಘಕ್ಕೆ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರಿಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡಲಾಗುವುದು ಎಂದರು. ಈ ವೇಳೆ ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಗುರುರಾಜ ಹವಳದ, ಎಂ.ಡಿ.ವಾರದ, ಬಸವರಾಜ ಯತ್ತಿನಹಳ್ಳಿ, ಪಿ.ಪಿ.ಹಿರೇಮಠ, ಎಂ.ಐ.ಕಣಕೆ, ಎಸ್.ಬಿ.ಅಣ್ಣಿಗೇರಿ, ಎಲ್.ಎನ್.ನಂದೆಣ್ಣವರ, ಎಸ್.ಎಚ್.ಉಮಚಗಿ, ಡಿ.ಎನ್.ಸೊರಟೂರ, ಬಿ.ಎಂ.ಯರಗುಪ್ಪಿ, ಎಸ್.ವಿ.ಕನೋಜ, ಮಂಜುನಾಥ ಕೊಕ್ಕರಗುಂದಿ ಹಾಗೂ ಉಪ ಚುನಾವಣಾಧಿಕಾರಿ ಬಣಕಾರ ಸೇರಿದಂತೆ ಅನೇಕರು ಇದ್ದರು.

ಶ್ರದ್ಧಾಭಕ್ತಿಯ ಕೆಳಗಲ ಪೇಟೆ ದುರ್ಗಾದೇವಿ ಜಾತ್ರಾಮಹೋತ್ಸವ

ಗಜೇಂದ್ರಗಡ: ನಗರದ ಕೆಳಗಲಪೇಟೆಯ ಶಕ್ತಿ ದೇವತೆಯಾದ ದುರ್ಗಾದೇವಿ ಜಾತ್ರಾ ಮಹೋತ್ಸವವು ಅತ್ಯಂತ ವೈಭವ ಹಾಗೂ ಧಾರ್ಮಿಕ ಶ್ರದ್ಧಾಭಕ್ತಿಗಳೊಂದಿಗೆ ನೆರವೇರಿತು. ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು. ಜಾತ್ರೆಯ ಅಂಗವಾಗಿ ಮುಂಜಾನೆ ದೇವಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ ಹಾಗೂ ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ಮಂಗಳಾರತಿಯ ನಂತರ ಭಕ್ತರಿಗೆ ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ಹೀಗೆ ಅನೇಕ ಧಾರ್ಮಿಕ ವಿಧಿವಿಧಾನಗಳ ಕಾರ್ಯಕ್ರಮ ನಡೆಯಿತು.

ಮುಂಜಾನೆಯಿಂದ ದೇವಿಯ ಭವ್ಯ ಪಲ್ಲಕ್ಕಿ ಉತ್ಸವವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಪಲ್ಲಕ್ಕಿಯ ಮೆರವಣಿಗೆಗೆ ಡೊಳ್ಳು ಕುಣಿತ, ಭಜನಾ ಮಂಡಳಿಗಳು ಸಾಂಸ್ಕೃತಿಕ ಮೆರುಗು ನೀಡಿದವು. ಭಕ್ತರು ತಮ್ಮ ಮನೆಗಳ ಮುಂದೆ ದೇವಿಗೆ ಪೂಜೆ ಸಲ್ಲಿಸಿ, ಹಣ್ಣು-ಕಾಯಿ ಅರ್ಪಿಸಿದರು. ಜಾತ್ರೆಯ ಪ್ರಯುಕ್ತ ಹನುಮಸಾಗರದ ಜೈ ಭವಾನಿ ಮೆಲೋಡಿಸ್ ತಂಡದಿಂದ ಸಂಗೀತ ಸುಧೆ ಹಾಗೂ ಹೂವಾಗಿ ಬಂದಳು, ಹಾವಾಗಿ ನಿಂತಳು ನಾಟಕದ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ನಗರದಲ್ಲಿನ ಟೆಕ್ಕೆದ ದರ್ಗಾದ ಬಾವನವರಾದ ಹಜರತ ಸೈಯ್ಯದ ನಿಜಾಮುದ್ದಿನ ಷಾ ಮಕಾನದಾರರು ಪ್ರತಿ ವರ್ಷವೂ ದುರ್ಗಾದೇವಿಯ ಜಾತ್ರೆಯ ತೇರಿಗೆ ಹೂವಗಳನ್ನು ಅರ್ಪಿಸಿವ ಮೂಲಕ ಭಾವೈಕ್ಯತೆಯ ಸಂದೇಶವನ್ನು ಸಾರಿದರು. ಟೆಕ್ಕೆದಬಾವಾನವರಿಗೆ ದುರ್ಗಾದೇವಿ ಕಮಿಟಿಯಿಂದ ಗೌರವ ಸಮರ್ಪಿಸಲಾಯಿತು. ಓಣಿಯ ಹಿರಿಯರು, ದೇವಸ್ಥಾನದ ಕಮಿಟಿಯವರು ಹಾಗೂ ಯುವಕ ಮಂಡಳಿ ಸದಸ್ಯರು ಜಾತ್ರೆಯ ಯಶಸ್ಸಿಗೆ ಶ್ರಮಿಸಿದರು.



79 ವಿದ್ಯಾರ್ಥಿಗಳ ಬದುಕಿನ ಬುತ್ತಿ ಕಟ್ಟಿ ಕೊಟ್ಟ ಕಾಲೇಜು

▸ ಯಲ್ಲಪ್ಪ(ಉಮೇಶ) ನವಲಗುಂದ

ನರೇಗಲ್ಲ: ಪಟ್ಟಣದಮರಿಯಪ್ಪಬಾಳಪ್ಪಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವು ಪ್ರಸಕ್ತ ಸಾಲಿನಲ್ಲಿ ಅಂತಿಮ ವರ್ಷದ ಬಿಎ, ಬಿಕಾಂ, ಬಿಎಸ್‌ಸಿ ಹಾಗೂ ಬಿಸಿಎ ಪದವಿ ಕೋರ್ಸ್‌ಗಳನ್ನು ಕಲಿಯುತ್ತಿರುವ 79 ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್‌ಲ್ಲಿ ನೌಕರಿ ಭಾಗ್ಯ ದೊರೆಯುವ ಮೂಲಕ ಅವರ ಬಾಳಲ್ಲಿ ಬೆಳಕು ಮೂಡಿದೆ.

ಕೇವಲ ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೀಮಿತವಾಗಿದ್ದ ಕ್ಯಾಂಪಸ್ ಸೆಲೆಕ್ಷನ್ ನರೇಗಲ್ಲ ಪಟ್ಟಣದ ಮರಿಯಪ್ಪ ಬಾಳಪ್ಪ ಕಳಕುನ್ನವರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದಿರುವುದು ಹೆಮ್ಮೆಯ ವಿಷಯ. ಬೆಂಗಳೂರಿನ ಟಾಟಾ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಕ್ರಿಯೇಟಿವ್ ಇಂಜಿನಿಯರ್ಸ್ ಎನ್ನುವ ಕಂಪನಿಯವರು ಕ್ಯಾಂಪಸ್ ಸೆಲೆಕ್ಷನ್ ನಡೆಸಿದ್ದರು ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ಪಾಲ್ಗೊಂಡಿದ್ದ ಈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅನೇಕ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದರು. ಅವರಿಂದ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ 79 ವಿದ್ಯಾರ್ಥಿಗಳು ಆಯ್ಕೆ ಆಗುವ ಮೂಲಕ ವಿದ್ಯಾರ್ಥಿಗಳು ತಮ್ಮ ಬಾಳಿಗೆ ಬೆಳಕನ್ನು ಕಂಡುಕೊಂಡು ಸರ್ಕಾರಿ ಕಾಲೇಜಿನ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದ್ದಾರೆ. ಉದ್ಯೋಗದ ಆಫರ್ ಲೆಟರ್ ಪಡೆದ ಗ್ರಾಮೀಣ ಭಾಗದ ಅತಿ ಹೆಚ್ಚು ವಿದ್ಯಾರ್ಥಿಗಳಾಗಿ ಹೊರಹೊಮ್ಮಿದ್ದಾರೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಇನ್ನಷ್ಟು ಪ್ರೇರೇಪಿತರಾಗಿ ಸರ್ಕಾರಿ ಪದವಿ ಕಾಲೇಜಿಗೆ ಪ್ರವೇಶಾತಿ ಪಡೆಯಲು ಮುಂದಾಗಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿನ ಗ್ರಾಮೀಣ ಭಾಗದ ಸರ್ಕಾರಿ ಕಾಲೇಜುಗಳು ಬಡ ಮತ್ತು ಮಧ್ಯಮ ವರ್ಗದ ನೂರಾರು ವಿದ್ಯಾರ್ಥಿಗಳ ಪಾಲಿಗೆ ಜ್ಞಾನದ ದೇಗುಲಗಳಾಗಿ, ಅವರ ಭವಿಷ್ಯಕ್ಕೆ ಬೆಳಕಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕಾಲೇಜುಗಳು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಕಡಿಮೆ ಶುಲ್ಕದಲ್ಲಿ ನೀಡುತ್ತಿದ್ದು, ಖಾಸಗಿ ಸಂಸ್ಥೆಗಳಿಗೆ ಸಮಾನವಾಗಿ ಉತ್ತಮ ಫಲಿತಾಂಶಗಳನ್ನು ಪಡೆಯುವಲ್ಲಿಯೂ ಯಶಸ್ವಿಯಾಗಿವೆ ಎನ್ನುತ್ತಿದ್ದಾರೆ ಪಾಲಕರು.



ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 79 ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್ನಲ್ಲಿ ಆಯ್ಕೆಯಾಗಿದ್ದು ಸಂತೋಷದ ವಿಷಯ. ಇದೇ ತರ ಎಲ್ಲಾ ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳ ಜೀವನಕ್ಕೆ ಬೆಳಕಾಗುವ ಕಾರ್ಯವನ್ನು ಮುಂದುವರಿಸಿಕೊಂಡು ಬರಲಿ. ಈ ಕಾರ್ಯಕ್ಕೆ ಕಾಲೇಜಿನ ಪ್ರಾಂಶುಪಾಲರು ಉಪನ್ಯಾಸಕರ ಸತತ ಪರಿಶ್ರಮ ಬಹಳ ಮುಖ್ಯವಾಗಿರುತ್ತದೆ. ಕಾಲೇಜಿನ ಅಭಿವೃದ್ಧಿಗೆ ಯಾವುದೇ ಸವಲತ್ತು ಬೇಕಿದ್ದರೆ ಒದಗಿಸಯುವೆ.
■ ಜಿ. ಎಸ್. ಪಾಟೀಲ, ಶಾಸಕ

ಪ್ರತಿಯೊಬ್ಬ ಉಪನ್ಯಾಸಕರ ಎಲ್ಲಾ ವಿಭಾಗದ ಮುಖ್ಯಸ್ಥರ ಸಿಬ್ಬಂದಿ ಸಹಕಾರ ನಿರಂತರ ಪ್ರಯತ್ನ ಹಾಗೂ ಶ್ರಮದ ಫಲವಾಗಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿ ದೀಪವಾಗಿದೆ. ಇದಕ್ಕೆ ಕ್ರೀಯಾತ್ಮಕವಾಗಿ ಕಾರ್ಯ ನಿರ್ವಹಿಸಿದ ಕಾಲೇಜಿನ ಉದ್ಯೋಗ ಘಟಕದ ಶಿವಕುಮಾರ ಕುರುಬರ ಹಾಗೂ ಅವರ ತಂಡ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ನೀಡಿ ಪ್ರೇರಣೆ ತುಂಬಿದ ಕಾರಣ ಯಶಸ್ಸು ದೊರಕಿದೆ.
■ ಎಸ್. ಎಲ್. ಗಳೇದಗುಡ್ಡ, ಪ್ರಾಂಶುಪಾಲ

ದಿಗಂತ ವಿಶೇಷ

ಜನಗಣತಿ ಶಿಕ್ಷಕರಿಗೆ ಬಿಸಿಲ ಬಾಧೆ

▸ ಸೀತಲ ಓಲೇಕಾರ

ಗಜೇಂದ್ರಗಡ: ಇತ್ತೀಚಿನ ದಿನಗಳಲ್ಲಿ ಬಿಸಿಲಿನ ತೀವ್ರತೆ 10 ಗಂಟೆಯ ಹೊತ್ತಿಗೆ ಸೂರ್ಯನ ಪ್ರಕರತೆಯು ತನ್ನ ಬಿಸಿಲಿನ ಶಾಖದ ಶಕ್ತಿಯನ್ನು ತೋರಲು ಆರಂಭಿಸುತ್ತಿದೆ. ಇದೇ ಹೊತ್ತಿನಲ್ಲಿ ಶಿಕ್ಷಕರು ಕೈಯಲ್ಲಿ ದಾಖಲೆ ಪುಸ್ತಕಗಳು, ಮೊಬೈಲ್ ಸಾಧನಗಳನ್ನು ಹಿಡಿದು ಮನೆ ಮನೆಗೆ ತೆರಳಿ ಜನಗಣತಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆವರು ಸುರಿಯುತ್ತಾ, ದೇಹ ಸುಡುತ್ತಾ, ಆರೋಗ್ಯದ ಅಪಾಯದ ಅಂಚಿನಲ್ಲೇ ನಿಂತು ಕರ್ತವ್ಯ ನಿರ್ವಹಿಸುವ ದೃಶ್ಯಗಳು ಸಾಮಾನ್ಯವಾಗಿವೆ. ಬೆಳಗ್ಗೆಯಿಂದಲೇ ಉರಿಯುತ್ತಿರುವ ಬಿಸಿಲಿನ ನಡುವೆ ಶಿಕ್ಷಕರು ಗ್ರಾಮಗಳಿಗೆ, ಗಲ್ಲಿಗಳಲ್ಲಿ ಪಟ್ಟಣಗಳ ಬೀದಿಗಳಲ್ಲಿ ಸಂಚರಿಸುತ್ತಿದ್ದಾರೆ. ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವುದು ಸುಲಭದ ಕೆಲಸವಲ್ಲ, ಅನೇಕ ಬಾರಿ ಮನೆಯವರು ಲಭ್ಯವಿಲ್ಲದ ಕಾರಣ ಒಂದೇ ಮನೆಗೆ ಪುನಃ ಪುನಃ ಭೇಟಿ ನೀಡಬೇಕಾಗುತ್ತದೆ. ಕೆಲವೆಡೆ ದೂರದ ಪ್ರದೇಶಗಳಿಗೆ ನಡೆದು ಹೋಗಬೇಕಾದ ಪರಿಸ್ಥಿತಿಯೂ ಇದೆ.

ಸುಡು ಬಿಸಿಲನ್ನು ಲೆಕ್ಕಿಸದೆ ತಮಗೆ ನೀಡದ ಜನ ಗಣತಿಯ ಕಾರ್ಯ ಮಾಡುತ್ತಾ ಬಂದಿದ್ದಾರೆ. ಬಿಸಿಲಿನ ತೀವ್ರತೆ ಗಮನಿಸಿ ಕಾರ್ಯದ ವೇಳೆಯನ್ನು ಮರುನಿರ್ಧರಿಸಬೇಕು. ಬೆಳಗ್ಗೆ ಬೇಗ ಮತ್ತು ಸಂಜೆ ಕೆಲಸ ಮಾಡಲು ಅವಕಾಶ ನೀಡಿ. ಮಧ್ಯಾಹ್ನ ವಿಶ್ರಾಂತಿ ಒದಗಿಸಬೇಕು. ಕುಡಿಯುವ ನೀರು, ತಾತ್ಕಾಲಿಕ ವಿಶ್ರಾಂತಿ ಕೇಂದ್ರಗಳು, ಪ್ರಥಮ ಚಿಕಿತ್ಸೆ ಸೌಲಭ್ಯ ಖಚಿತಪಡಿಸಬೇಕು. ಆರೋಗ್ಯ ತಪಾಸಣೆ ಮತ್ತು ತುರ್ತು ವೈದ್ಯಕೀಯ ನೆರವು ಒದಗಿಸಿ.
■ ಮಂಜುನಾಥ ರಾಠೋಡ, ರಾಜ್ಯಾಧ್ಯಕ್ಷ, ಕ್ರಾಂತಿಸೂರ್ಯ ಜೈ ಭೀಮ ಸೇನೆ



ಅನಾರೋಗ್ಯದ ಭಯ
ತೀವ್ರಬಿಸಿಲಿನ ನಡುವೆ ನಿರಂತರವಾಗಿ ಸಂಚರಿಸುವುದರಿಂದ ಶಿಕ್ಷಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹೀಟ್ ಸ್ಟ್ರೋಕ್, ದೇಹದ ನೀರಿನ ಕೊರತೆ, ತಲೆಸುತ್ತು, ದಣಿವು ಇವು ದಿನನಿತ್ಯದ ಸಮಸ್ಯೆಗಳಾಗಿವೆ. ಕೆಲವೆಡೆ ಶಿಕ್ಷಕರು ಅಸ್ವಸ್ಥರಾಗಿರುವ ಘಟನೆಗಳೂ ಕೇಳಿಬರುತ್ತಿವೆ. ತುರ್ತು ವೈದ್ಯಕೀಯ ನೆರವು ಅಗತ್ಯವಿರುವ ಸಂದರ್ಭಗಳೂ ಎದುರಾಗುತ್ತಿವೆ. ಆದರೆ ಈ ಅಪಾಯಗಳ ನಡುವೆಯೂ ಕೆಲಸ ಮಾಡುವ ಶಿಕ್ಷಕರಿಗೆ ಯಾವುದೇ ಸಮರ್ಪಕ ಆರೋಗ್ಯ ಭದ್ರತೆ ಇಲ್ಲದಿರುವುದು ಆತಂಕಕಾರಿ.

ಡಿಜಿಟಲ್ ಹೊರೆ ಹೆಚ್ಚಳ
ಇತ್ತೀಚಿನ ಜನಗಣತಿ ಪ್ರಕ್ರಿಯೆಯಲ್ಲಿ ಡಿಜಿಟಲ್ ಸಾಧನಗಳ ಬಳಕೆ ಹೆಚ್ಚಾಗಿದೆ. ಮೊಬೈಲ್ ಅಪ್ಲಿಕೇಶನ್‌ಗಳು, ಆನ್‌ಲೈನ್ ಡೇಟಾ ಎಂಟ್ರಿ, ಸರ್ವರ್ ಸಮಸ್ಯೆಗಳು ಇವು ಶಿಕ್ಷಕರಿಗೆ ಹೆಚ್ಚುವರಿ ಒತ್ತಡ ತಂದಿದೆ. ತಾಂತ್ರಿಕ ದೋಷಗಳು, ನೆಟ್‌ವರ್ಕ್ ಸಮಸ್ಯೆಗಳು ಕೆಲಸದ ವೇಗವನ್ನು ಕುಂಠಿತಗೊಳಿಸುತ್ತವೆ. ಸಮರ್ಪಕ ತರಬೇತಿ ಹಾಗೂ ತಕ್ಷಣ ಸ್ಪಂದಿಸುವ ತಾಂತ್ರಿಕ ಸಹಾಯದ ಕೊರತೆ, ಶಿಕ್ಷಕರನ್ನು ಸಂಕಷ್ಟಕ್ಕೆ ತಳ್ಳುತ್ತಿದೆ. ಕರ್ತವ್ಯದ ಜೊತೆಗೆ ತಾಂತ್ರಿಕ ಹೋರಾಟವೂ ನಡೆಯುತ್ತಿದೆ.

ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಸಭೆ | ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ

ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ವಿರೋಧ

ಹುಬ್ಬಳ್ಳಿ: ಮಹಿಳಾ ಮೀಸಲಾತಿ, ಕ್ಷೇತ್ರ ಮರುವಿಂಗಡಣೆ, ಒಂದು ದೇಶ ಒಂದು ಚುನಾವಣೆ ಸೇರಿದಂತೆ ದೇಶದ ಅಭಿವೃದ್ಧಿಗೂ ಕಾಂಗ್ರೆಸ್ ವಿರೋಧ ಮಾಡುತ್ತಿದೆ. ಮಹಿಳೆಯರ ಮೇಲೆ ವಿಶ್ವಾಸವಿಟ್ಟ ಪ್ರಧಾನಿ ಮೋದಿ ಅವರು ಮುಂದಿನ ದಿನಗಳಲ್ಲಿ ಮಹಿಳಾ ಮೀಸಲಾತಿ ಯಶಸ್ವಿಯಾಗಿ ಜಾರಿಗೆ ತರಲಿದ್ದು, ಅದನ್ನು ತಡೆಯಲು ಕಾಂಗ್ರೆಸ್ ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ನಗರದಲ್ಲಿ ರಾಜ್ಯ ಬಿಜೆಪಿ ಮಹಿಳಾ ಘಟಕ ಶುಕ್ರವಾರ ನಗರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ವಿರುದ್ಧದ ಜನಾಕ್ರೋಶ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ದೇಶದ ಅಭಿವೃದ್ಧಿಯಾಗಲು ನಾರೀಶಕ್ತಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಮೋದಿ ಅವರು ನಂಬಿದ್ದಾರೆ. ಕೇಂದ್ರ ಸರ್ಕಾರ ನೀಡಿ ಜವಾಬ್ದಾರಿಯನ್ನು ಮಹಿಳೆಯರು ಸೂಕ್ತವಾಗಿ ನಿಭಾಯಿಸಿದ್ದಾರೆ. ಮಹಿಳೆಯರ ಮೇಲೆ ವಿಶ್ವಾಸವಿಟ್ಟಿದ್ದು ಮೀಸಲಾತಿಗೆ ಕಾಂಗ್ರೆಸ್ ಬೆಂಬಲ ನೀಡಲಿಲ್ಲ, ಕಾಂಗ್ರೆಸ್‌ನಿಂದ ಮಹಿಳೆಯರು ಏನನ್ನು ಸಹ ಅಪೇಕ್ಷೆ ಮಾಡಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಮಹಿಳೆಯ ಮೇಲೆ ನಿರಂತರ ದೌರ್ಜನ್ಯ, ಕೊಲೆ ನಡೆಯುತ್ತಿವೆ. ಕಾಂಗ್ರೆಸ್ ಸರ್ಕಾರ ಏನು ಮಾಡುತ್ತಿಲ್ಲ. ಉತ್ತರ ಕನ್ನಡ, ಹುಬ್ಬಳ್ಳಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿವೆ. ಮಹಿಳೆಯರಿಗೆ ರಕ್ಷಣೆ ಇಲ್ಲವಾಗಿದೆ. ಆದ್ದರಿಂದ ಮಹಿಳೆಯರು ಇನ್ನಾದರೂ ಜಾಗೃತಿಯಾಗಬೇಕು ಎಂದು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮಹಿಳಾ ಮೀಸಲಾತಿಯಿಂದ ಯಾರಿಗೂ ಅನ್ಯಾಯ ಆಗುತ್ತಿರಲಿಲ್ಲ. ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಆಗಲಿದೆ ಎಂದು ವಿರೋಧಿಸುವ ಕಾಂಗ್ರೆಸ್ ದೇಶವನ್ನು ಒಡೆಯುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಹಳೇ ಸಂಖ್ಯೆ ಆಧಾರದ ಮೇಲೆ ಕೇಂದ್ರ ಸರ್ಕಾರ ಕ್ಷೇತ್ರ ಮರುವಿಂಗಡಣೆ ಮಾಡಲು ಮುಂದಾಗಿತ್ತು. ಇದರಿಂದ ದಕ್ಷಿಣ ಭಾರತ ರಾಜ್ಯಗಳಿಗೆ ಯಾವುದೇ ಅನ್ಯಾಯ ಆಗುತ್ತಿರಲಿಲ್ಲ. ಇದೇ ವಿಚಾರದಲ್ಲಿ ಇಂಡಿಯಾ ಒಕ್ಕೂಟ ನಾಟಕವಾಡುತ್ತಿದ್ದು, ದೇಶ, ಧರ್ಮ, ಪುರುಷರು ಹಾಗೂ ಮಹಿಳೆಯರ ಒಡೆಯುವ ಕೆಲಸ ಮಾಡುತ್ತಿದೆ. ದಕ್ಷಿಣ ಭಾರತದ ರಾಜ್ಯಗಳಿಗೆ ಇದರಿಂದ ಸೋಲಾಗಿದ್ದು, ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

> ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಪ್ರಧಾನಿ ಮೋದಿ ಅವರ ವಿರೋಧ ಮಾಡುವ ಬರದಲ್ಲಿ ದೇಶಕ್ಕೆ ವಿರೋಧ ಮಾಡುತ್ತಿದ್ದಾರೆ. ಕಾಂಗ್ರೆಸ್ ಸುಳ್ಳುಗಾರರು, ಒಬಿಸಿ ವಿರೋಧಿಗಳಾಗಿದ್ದು ಯಾವಾಗಲೂ ಮಹಿಳೆಯರ ಪರವಾಗಿ ಅವರಿಲ್ಲ.
> ■ **ಪ್ರಹ್ಲಾದ ಜೋಶಿ, ಕೇಂದ್ರ ಸಚಿವ**

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ದೇಶದಲ್ಲಿ ಮಹಿಳೆಯರಿಗೆ ವಿಶೇಷವಾದ ಸ್ಥಾನ ಮಾನವಿದೆ. ಪ್ರತಿಯೊಬ್ಬರ ಪುರಷನಿಗೆ ಮಹಿಳೆ ಶಕ್ತಿ ನೀಡುವ ಕೆಲಸ ಮಾಡಿದ್ದು, ಅಂತಹ ಮಹಿಳೆಯರಿಗೆ ಕೇಂದ್ರ ಸರ್ಕಾರ ಮೀಸಲಾತಿ ನೀಡಿದರೆ ಕಾಂಗ್ರೆಸ್ ಸರ್ಕಾರ ಅದನ್ನು ವಿರೋಧಿಸುವ ಮೂಲಕ ಕೊಲೆ ಮಾಡಿದೆ ಎಂದು ಹರಿಹಾಯ್ದರು.

ಬಿಜೆಪಿ ಮಹಿಳಾ ಮೀಸಲಾತಿ ಜಾರಿಗೆ ತರದೆ ಬಿಡಲು ಸಾಧ್ಯವಿಲ್ಲ, ಅದಕ್ಕೆ ಶಕ್ತಿ ನೀಡುವ ಕೆಲಸ ದೇಶ ಮಹಿಳೆಯರಿಂದ ಆಗಬೇಕು. ಕಾಂಗ್ರೆಸ್ ಮಹಿಳೆಯರಿಗೆ ದ್ರೋಹ ಮಾಡುತ್ತಿದೆ. ಹಿಂದೆ ರಾಜೀವ ಗಾಂಧಿ ಪ್ರಧಾನಿಯಾಗಿದ್ದಾಗ ಬಹುಮತವಿದ್ದರೂ ಮೀಸಲಾತಿ ಜಾರಿಗೆ ತರಲಿಲ್ಲ, ಈ ಬಗ್ಗೆ ಪ್ರಿಯಾಂಕ್ ಗಾಂಧಿ ಉತ್ತರಿಸಬೇಕು ಎಂದು ಆಗ್ರಹಿಸಿದರು.

ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಸಿ. ಮಂಜುಳಾ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯಕ, ಶಾಸಕ ಸಿ.ಸಿ. ಪಾಟೀಲ, ಮಾಜಿ ಸಚಿವ ಶಂಕರ ಪಾಟೀಲ, ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ,ಎಂ.ಆರ್ .ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕ ಅಮೃತ ದೇಸಾಯಿ, ಮಾಜಿ ಶಾಸಕಿ ಸೀಮಾ ಮಸೂತಿ, ಧಾರವಾಡ ವಿಭಾಗೀಯ ಸಂಚಾಲಕ ಜಯತೀರ್ಥ ಕಟ್ಟಿ, ಮೇಯರ್ ಜ್ಯೋತಿ ಪಾಟೀಲ ಇದ್ದರು.

ಪುರ ಪ್ರವೇಶಿಸಿದ ಫಕೀರಸಿದ್ದರಾಮ ಶ್ರೀಗಳು

ಶಿರಹಟ್ಟಿ: ಶ್ರೀ ಜ.ಫಕೀರೇಶ್ವರ ಸಂಸ್ಥಾನ ಮಠದ ಪರಂಪರೆಯಂತೆ 13ನೇ ಪೀಠಾಧ್ಯಕ್ಷ ಫಕೀರಸಿದ್ದರಾಮ ಮಹಾಸ್ವಾಮಿಗಳು ಕಳಸಾರೋಹಣ ಮುಂಜಾನೆ ಪುರ ಬಿಟ್ಟು ಒಂಬತ್ತು ದಿನ ಮಲೆನಾಡು, ಬಯಲು ಸೀಮೆಗಳಲ್ಲಿ ಇರುವ ಶ್ರೀಮಠದ ಭಕ್ತರ ಮನೆಗಳಿಗೆ ತೆರಳಿ ಭಿಕ್ಷಾಟನೆ ಮಾಡಿಕೊಂಡು ಬುದ್ಧ ಪೌರ್ಣಿಮಿಯ ದಿನವಾದ ಶುಕ್ರವಾರ ಮಹಾರಥೋತ್ಸವ ದಿನದಂದು ಶ್ರೀಗಳು ಅದ್ಧೂರಿ ಪುರಪ್ರವೇಶ ಮಾಡುವ ಸಂಪ್ರದಾಯವಿದೆ.

ಪಟ್ಟಣದ ಮ್ಯಾಗೇರಿ ಓಣಿಯ ಮೂಲಕ ಶ್ರೀಗಳು ಪುರಪ್ರವೇಶ ಮಾಡುತ್ತಿದ್ದಂತೆ ಶ್ರೀಮಠದ ಪರಂಪರೆಯಂತೆ ಕರ್ತೃ ಗದ್ದುಗೆಗೆ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ನಂತರ ಊರಿನ ಸಹಸ್ರಾರು ಭಕ್ತರು ಶ್ರೀಗಳನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ಮೇಳ, ಚಾಮರ, ಕಹಳೆ, ನಗಾರಿಯ ನಿನಾದ, ರಸ್ತೆ ಬದಿಗಳಲ್ಲಿ ತಳಿರು ತೋರಣಗಳಿಂದ ಸಿಂಗರಿಸಿ



ಅದ್ದೂರಿ ಮೆರವಣಿಗೆ ಮೂಲಕ ಶ್ರೀಗಳನ್ನು ಮಠಕ್ಕೆ ಕರೆತರಲಾಯಿತು.

ರಸ್ತೆಯುದ್ದಕ್ಕೂ ಮನೆಯ ಯಜಮಾನರು, ಮಹಿಳೆಯರು, ಮುತ್ತೈದೆಯರು ಶ್ರೀಗಳಿಗೆ ಹಣ್ಣು ಕಾಯಿ, ಪುಷ್ಪ ಅರ್ಪಿಸಿ ಆಶೀರ್ವಾದ ಪಡೆದರು. ಜಾತಿ ಭೇದಭಾವ ಮರೆತು ಎಲ್ಲಾ ಸಮಾಜದವರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಕರ್ತೃ ಶ್ರೀ ಜ.ಫಕೀರೇಶ್ವರರ ಭಾವೈಕ್ಯ ಸಂದೇಶಕ್ಕೆ ಹಿಡಿದ ಕನ್ನಡಿಯಾಗಿತ್ತು.

ಶ್ರೀ ಜಗದ್ಗುರು ಫಕೀರೇಶ್ವರ ಮಹಾರಥೋತ್ಸವ



ಶಿರಹಟ್ಟಿ: ಪ್ರತಿ ವರ್ಷ ಆಗಿ ಹುಣ್ಣಿಮೆಯಂದು ನಡೆಯುವ ಉತ್ತರ ಕರ್ನಾಟಕದ ಐತಿಹಾಸಿಕ ಪ್ರಸಿದ್ಧ ಜಾತ್ರೆಗಳಲ್ಲೊಂದಾದ ಶಿರಹಟ್ಟಿಯ ಕರ್ತೃ ಶ್ರೀ ಜಗದ್ಗುರು ಫಕೀರೇಶ್ವರ ಮಹಾರಥೋತ್ಸವ ಶುಕ್ರವಾರ ಸಾಯಂಕಾಲ 5:30 ಗಂಟೆಗೆ ಸಹಸ್ರಾರು ಭಕ್ತರ ಜಯ ಘೋಷಣೆಗಳೊಂದಿಗೆ ಅತ್ಯಂತ ವಿಜೃಂಭಣೆಯಿಂದ ಮಹಾರಥೋತ್ಸವ ನೆರವೇರಿತು.

ಅಸಂಖ್ಯಾತ ಭಕ್ತಾಧಿಗಳು ಹರಹರ ಮಹಾದೇವ ಎಂಬ ಘೋಷಣೆಯೊಂದಿಗೆ ಮಹಾರಥವನ್ನು ಶ್ರೀ ಮಠದಿಂದ ಬನ್ನಿಗಿಡದ ಪಾದಗಟ್ಟಿಯವರೆಗೆ ಎಳೆದು, ಅಲ್ಲಿ ಶ್ರೀಗಳು ಪೂಜೆ ಸಲ್ಲಿಸಿ, ಭಕ್ತರಿಗೆ ಹಸಿ ಕಡ್ಲಿ ಹಂಚುವುದರ ಮೂಲಕ ರಥವನ್ನು ಮರಳಿ ಎಳೆದು ತರುವುದರ ಮೂಲಕ ಶ್ರೀ ಜ.ಫಕೀರೇಶ್ವರನ ಕೃಪೆಗೆ ಪಾತ್ರರಾದರು.

ಶ್ರೀ ಮಠದ ಪರಂಪರೆಯಂತೆ 13ನೇ ಪೀಠಾಧ್ಯಕ್ಷ ಶ್ರೀ ಜ.ಫಕೀರಸಿದ್ದರಾಮ ಮಹಾಸ್ವಾಮಿಗಳು ಪುರ ಪ್ರವೇಶಿಸಿ ಅದ್ದೂರಿ ಮೆರವಣಿಗೆ ಮೂಲಕ ಶ್ರೀಮಠಕ್ಕೆ ಆಗಮಿಸಿ ಕರ್ತೃ ಶ್ರೀ ಫಕೀರೇಶ್ವರರ ಗದ್ದುಗೆಗೆ ಪೂಜೆ ಹಾಗೂ ಇನ್ನಿತರ ನಿಯಮಗಳನ್ನು ಕೈಗೊಂಡರು.

ಇಳಿ ಸಂಜೆವರೆಗೂ ಶ್ರೀಮಠದ ಧಾರ್ಮಿಕ ವಿಧಿ ವಿಧಾನಗಳನ್ನು ಕೈಗೊಂಡು 5:30 ಗಂಟೆಗೆ ರಥದ ಕಡೆಗೆ ಸಾಗಿ ಬಂದು ಮಹಾರಥಕ್ಕೆ ಪೂಜೆ ಸಲ್ಲಿಸಿ ಮಹಾರಥೋತ್ಸವಕ್ಕೆ ಚಾಲನೆ ನೀಡಿದರು. ಜಾತ್ರೆಗೆ ಆಗಮಿಸಿದ ಸಹಸ್ರಾರು ಭಕ್ತಾಧಿಗಳು ಹರಹರ ಮಹಾದೇವ, ಶ್ರೀ ಜ.ಫಕೀರೇಶ್ವರ ಮಹಾರಾಜಕೀ ಜೈ ಎಂಬ ಘೋಷಣೆಯೊಂದಿಗೆ ಮಹಾರಥವನ್ನು ಎಳೆದು ತಂದರು. ಭಕ್ತರು ರಥಕ್ಕೆ ಉತ್ತತ್ತಿ, ಲಿಂಬೆಹಣ್ಣು ಮಾವಿನ ಹಣ್ಣು, ಬಾಳೆಹಣ್ಣುಗಳನ್ನು ಎಸೆಯುವುದರ ಮೂಲಕ ಶ್ರೀ ಜ.ಫಕೀರೇಶ್ವರನ ಕೃಪೆಗೆ ಪಾತ್ರರಾದರು.

ಹಿಪ್ಪರಗಿ ಬ್ಯಾರೇಜ್‌ನಿಂದ 0.10 ಟಿಎಂಸಿ ನೀರು ಬಿಡುಗಡೆ

ರಬಕವಿ-ಬನಹಟ್ಟಿ: ರಬಕವಿ ಬನಹಟ್ಟಿ ಸಮೀಪದ ಹಿಪ್ಪರಗಿ ಬ್ಯಾರೇಜ್‌ನಿಂದ ಬ್ಯಾರೇಜನ ಮುಂಭಾಗಕ್ಕೆ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಆದೇಶದಂತೆ 0.10 ಟಿಎಂಸಿಯಷ್ಟು ನೀರನ್ನು ಒಂದು ಗೇಟ್ ಮೂಲಕ ಬಿಡಲಾಗುತ್ತಿದೆ. ಬ್ಯಾರೇಜ್ ಮುಂಭಾಗದ ಜನ ಮತ್ತು ಜಾನುವಾರುಗಳ ಕುಡಿಯುವ ನೀರಿಗಾಗಿ ನೀರನ್ನು ಬಿಡಲಾಗುತ್ತಿದೆ ಎಂದು ಜಲಾಶಯದ ಮೂಲಗಳು ತಿಳಿಸಿವೆ.

ಇಳಿಮುಖಗೊಂಡ ಕೃಷ್ಣಾ ನದಿ ನೀರು: ಸಮೀಪದಲ್ಲಿ ಹರಿಯುತ್ತಿರುವ ಕೃಷ್ಣಾ ನದಿಯಲ್ಲಿ ಕಳೆದು ಎರಡು ದಿನಗಳಲ್ಲಿ ನೀರು ಇಳಿಕೆಯನ್ನು ಕಂಡಿತ್ತು. ಈಚೇಗೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ರಾಜಾಪುರ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ ನೀರು ಹರಿಸುತ್ತಿರುವುದರಿಂದ ಶುಕ್ರವಾರ ಸ್ವಲ್ಪ ಪ್ರಮಾಣದಲ್ಲಿ ಏರಿಕೆಯನ್ನು ಕಂಡಿದೆ.

ನದಿಯಲ್ಲಿನ ನೀರಿನ ಪ್ರಮಾಣದ ಕಡಿಮೆಯಾಗಿರುವುದರಿಂದ ನೀರಿನಲ್ಲಿ ಮುಳಗಿದ್ದ ಸೇತುವೆ ತೆರೆದುಕೊಂಡಿದೆ. ಇದರಿಂದ ರಬಕವಿ



ಬನಹಟ್ಟಿ ಹಾಗೂ ಅಥಣಿ ತಾಲೂಕಿನ ವಿವಿಧ ಗ್ರಾಮಗಳ ಗ್ರಾಮಸ್ಥರು ಸೇತುವೆಯ ಮೂಲಕ ತೆರಳುವಂತಾಗಿದೆ.

ಹಿಪ್ಪರಗಿ ಬ್ಯಾರೇಜ್‌ನಲ್ಲಿ ಸದ್ಯ 1.50 ಟಿಎಂಸಿ ನೀರಿನ ಸಂಗ್ರಹವಿದ್ದು, ಈ ನೀರು ಮೇ 20ರವರೆಗೆ ಲಭ್ಯವಾಗಲಿದೆ ಎಂದು ಜಲಾಶಯದ ಅಧಿಕಾರಿ ವಿ.ಎನ್.ನಾಯಕ ತಿಳಿಸಿದರು.

ಕಿರುಸುದ್ದಿ

ಕಿತ್ತೂರು ಸಂಸ್ಥಾನದ ವಂಶಸ್ಥರ ಕುರಿತು ಕಾರ್ಯಾಗಾರ ನಾಳೆ

ಧಾರವಾಡ: ಕಿತ್ತೂರು ಸಂಸ್ಥಾನದ (1824ರ ನಂತರ) ಹೊಸ ಸಂಶೋಧನೆಗಳು ಹಾಗೂ ವಂಶಜರು ವಿಷಯದ ಕುರಿತು ವಿಶೇಷ ಕಾರ್ಯಗಾರ ಮೇ 3ರಂದು ಇಲ್ಲಿನ ರಾ.ಹ.ದೇಶಪಾಂಡೆ ಭವನದಲ್ಲಿ ಹಮ್ಮಿಕೊಂಡಿದೆ ಎಂದು ಸಾಹಿತಿ ಬಾಳಣ್ಣ ಶೀಗಿಹಳ್ಳಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿತ್ತೂರು ಸಂಸ್ಥಾನ ಕುರಿತು ಸಾಕಷ್ಟು ಕೃತಿಗಳು, ಸಂಶೋಧನೆಗಳು ನಡೆದಿವೆ. ಆದರೂ ಈ ಸಂಸ್ಥಾನದ ವಂಶಜರ ಬಗ್ಗೆ ಕನ್ನಡಿಗರಿಗೆ ಅಷ್ಟು ಮಾಹಿತಿಯೇ ಇಲ್ಲ. ಈ ಹಿನ್ನೆಲೆ ಕಾರ್ಯಾಗಾರ ಏರ್ಪಡಿಸಿದೆ ಎಂದು ತಿಳಿಸಿದರು.

ಮೇ 3ರಂದು ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಾಗಾರಕ್ಕೆ ಪಾಲಿಕೆ ಮಾಜಿ ಸದಸ್ಯ ಸಿ.ಎಸ್ .ಪಾಟೀಲ ಉದ್ಘಾಟಿಸಲಿದ್ದು, ಮಾಜಿ ಶಾಸಕ ಎ.ಬಿ.ದೇಸಾಯಿ ಅಧ್ಯಕ್ಷತೆ, ಡಾ.ಅರವಿಂದ ಯಾಳಗಿ ಆಶಯ ನುಡಿ ಹೇಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಿತ್ತೂರು ಸಂಸ್ಥಾನದ ಕುರಿತು ಪಿಎಚ್‌ಡಿ ಮಾಡಿದ ಡಾ.ಮಲ್ಲಿಕಾರ್ಜುನ ಮಿಂಚ, ಡಾ.ಕೆ. ಎನ್.ನರಹರಿ, ಡಾ.ನೀಲಪ್ಪ ವಾಲಿಕಾರ ಅವರನ್ನು ಗೌರವಿಸಲಾಗುವುದು.

ಮಾಧ್ಯಾಹ್ನ 12ಕ್ಕೆ ಕಿತ್ತೂರ ಸಂಸ್ಥಾನದ ವಂಶಜರ ಮೊದಲ ಚಿಂತನೆ ಗೋಷ್ಠಿ ನಡೆಯಲಿದೆ ಎಂದರು. 2ನೇ ಗೋಷ್ಠಿಯಲ್ಲಿ 1824ರ ನಂತರ ಕಿತ್ತೂರು ಸಂಸ್ಥಾನದ ಹೊಸ ಸಂಶೋಧನೆಗಳು ಹಾಗೂ ವಂಶಜರು ಎಂಬ ಗೋಷ್ಠಿಗಳು ಜರುಗಲಿವೆ. ಈ ಗೋಷ್ಠಿಗಳಲ್ಲಿ ವಂಶಜರು ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಸಂಜೆ 4ಕ್ಕೆ ಇತಿಹಾಸ ತಜ್ಞ ಡಾ.ಎಸ್.ಷಡಾಕ್ಷರಯ್ಯ ಸಮಾರೋಪ ಭಾಷಣ ಮಾಡಲಿದ್ದು, ಡಾ.ವೀರಣ್ಣ ರಾಜೂರ ಅಧ್ಯಕ್ಷತೆ ವಹಿಸುತ್ತಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಿತ್ತೂರು ಸಂಸ್ಥಾನದ ವಂಶಜರಾದ ಸೋಮಶೇಖರ ದೇಸಾಯಿ, ಯುವರಾಜ ದೇಸಾಯಿ ಇದ್ದರು.

ಧಾರವಾಡ ಹೈಕೋರ್ಟ್ ತೀರ್ಪು

ಅಪರಾಧಿಗೆ ಮರಣದಂಡನೆ ಬದಲು ಜೀವಾವಧಿ ಶಿಕ್ಷೆ

ಧಾರವಾಡ: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಅಡಿ ದಾಖಲಾಗಿದ್ದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಗೆ ವಿಧಿಸಲಾಗಿದ್ದ ಮರಣದಂಡನೆ ಶಿಕ್ಷೆಯನ್ನು ಧಾರವಾಡ ಹೈಕೋರ್ಟ್ ಪೀಠವು ಕಡಿತಗೊಳಿಸಿದೆ.

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಹಾರೋಗೇರಿ ಗ್ರಾಮದ ಉದ್ದಪ್ಪ ಗಾಣಿಗೇರ (39) ಎಂಬಾತನಿಗೆ ನೀಡಲಾಗಿದ್ದ ಗಲ್ಲು ಶಿಕ್ಷೆಯನ್ನು ರದ್ದುಗೊಳಿಸಿ, ಜೀವಾವಧಿ ಶಿಕ್ಷೆಯನ್ನು ವಿಧಿಸಿ ಆದೇಶ ಹೊರಡಿಸಲಾಗಿದೆ.

ಪ್ರಕರಣದ ಹಿನ್ನೆಲೆ: ಕಳೆದ ಕೆಲವು ವರ್ಷಗಳ ಹಿಂದೆ ಬೆಳಗಾವಿ ಜಿಲ್ಲೆಯಲ್ಲಿ ನಡೆದಿದ್ದ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಮತ್ತು ಭೀಕರ ಕೊಲೆ ಪ್ರಕರಣವು ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ್ದ ಬೆಳಗಾವಿಯ ವಿಶೇಷ ನ್ಯಾಯಾಲಯವು, ಆರೋಪಿ ಉದ್ದಪ್ಪ ಗಾಣಿಗೇರ ಎಸಗಿದ ಕೃತ್ಯವು ಅಪರೂಪದಲ್ಲಿ ಅಪರೂಪದ ಪ್ರಕರಣ ಎಂದು ಪರಿಗಣಿಸಿ ಆತನಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿತ್ತು.

ಹೈಕೋರ್ಟ್ ಮೆಟ್ಟಿಲೇರಿದ್ದ ಅಪರಾಧಿ: ಕೆಳಹಂತದ ನ್ಯಾಯಾಲಯ ನೀಡಿದ್ದ ಗಲ್ಲು ಶಿಕ್ಷೆಯನ್ನು ಪ್ರಶ್ನಿಸಿ ಮತ್ತು ಶಿಕ್ಷೆಯ ಪ್ರಮಾಣ ಕಡಿಮೆ ಮಾಡುವಂತೆ ಕೋರಿ ಅಪರಾಧಿ ಉದ್ದಪ್ಪ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದನು.

ಕೋರ್ಟ್ ವಾದ-ಪ್ರತಿವಾದಗಳು:

ಸರ್ಕಾರಿ ಅಭಿಯೋಜಕರು ಅಪರಾಧಿಯ ಕೃತ್ಯದ ಭೀಕರತೆಯನ್ನು ಉಲ್ಲೇಖಿಸಿ ಗಲ್ಲು ಶಿಕ್ಷೆಯನ್ನು ಕಾಯ್ದಿರಿಸುವಂತೆ ವಾದ ಮಂಡಿಸಿದ್ದರು. ನ್ಯಾಯಪೀಠವು ಪ್ರಕರಣದ ಸಂದರ್ಭಗಳು, ಅಪರಾಧಿಯ ಹಿನ್ನೆಲೆ ಮತ್ತು ಸುಧಾರಣೆಯ ಸಾಧ್ಯತೆಗಳನ್ನು ಗಮನಿಸಿ, ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಪರಿವರ್ತಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬಂದಿದೆ.

ಶಿಕ್ಷೆ ಮಾರ್ಪಾಡು: ಮರಣದಂಡನೆ ರದ್ದುಗೊಳಿಸಿ, ಸಾಯುವವರೆಗೂ ಜೈಲಿನಲ್ಲೇ ಇರುವಂತಹ ಕಠಿಣ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ.

ದಂಡ: ಶಿಕ್ಷೆಯ ಜೊತೆಗೆ ನ್ಯಾಯಾಲಯವು ವಿಧಿಸಿರುವ ದಂಡದ ಮೊತ್ತವನ್ನೂ ಅಪರಾಧಿ ಪಾವತಿಸಬೇಕು. ಈ ತೀರ್ಪಿನ ಮೂಲಕ ನ್ಯಾಯಾಲಯ ಅಪರಾಧವು ಗಂಭೀರವಾಗಿದ್ದರೂ, ಶಿಕ್ಷೆ ವಿಧಿಸುವಾಗ ಕಾನೂನಿನ ವಿವಿಧ ಆಯಾಮ ಮತ್ತು ಉನ್ನತ ನ್ಯಾಯಾಲಯಗಳ ಮಾರ್ಗಸೂಚಿಗಳನ್ನು ಪರಿಗಣಿಸಿದೆ.

ಪಂಚ್ ರಾಜ್ಯ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು: ಎನ್.ರವಿಕುಮಾರ್

ಕಲಬುರಗಿ: ದೇಶದ ಪಂಚ್ ರಾಜ್ಯಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಪರ ಮತದಾರರು ಅತ್ಯಂತ ಒಲವಿನಿಂದ ಮತ ಹಾಕಿದ್ದು, ಈ ಬಾರಿ ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಈಶಾನ್ಯ ಶಿಕ್ಷರ ಮತಕ್ಷೇತ್ರದ ಚುನಾವಣೆ ಹಾಗೂ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ನಿಮಿತ್ತ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪಂಚ್ ರಾಜ್ಯಗಳ ಚುನಾವಣಾ ಸಮೀಕ್ಷೆಗಳಲ್ಲಿ ಬಿಜೆಪಿಗೆ ನಿರೀಕ್ಷೆ ಮೀರಿ ಫಲಿತಾಂಶ ವ್ಯಕ್ತವಾಗುತ್ತಿದೆ. ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಗೆಲುವು ಸಾಧಿಸುವುದು ಪಕ್ಕಾ ಎಂದ ಅವರು, ಪುದುಚೇರಿಯ ಎನ್‌ಡಿಎ ಅಧಿಕಾರಕ್ಕೆ ಬರಲಿದೆ. ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಸಹ ಉತ್ತಮ ವಾತಾವರಣ ವ್ಯಕ್ತವಾಗಿದ್ದು,ರಾಜ್ಯದಲ್ಲೂ ಸಹ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಹೇಳಿದರು.



ಮಾಜಿ ಸಂಸದ ಡಾ.ಉಮೇಶ್ ಜಾಧವ್ ಮಾತನಾಡಿ, ಇನ್ನೂ ಐದು ದಿನಗಳಲ್ಲಿ ಭಾರತದ ಚಿತ್ರಣವೇ ಬದಲಾಗಲಿದೆ. ಮೊಟ್ಟ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದು, ಪಶ್ಚಿಮ ಬಂಗಾಳ ಗೆದ್ದರೆ ಇಡೀ ದೇಶವೇ ಗೆದ್ದಂತೆ. ಪಂಚ್ ರಾಜ್ಯಗಳ ಚುನಾವಣಾ ಫಲಿತಾಂಶ ಮುಂದಿನ ರಾಜ್ಯ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದ್ದು, ಮೇ 9ರ ಬಿಎಸ್‌ವೈ ಅವರ ಅಭಿಮಾನೋತ್ಸವ ಕಾರ್ಯಕ್ರಮದಿಂದ ರಾಜ್ಯದಲ್ಲಿ ಚುನಾವಣಾ ಯುದ್ಧ ಪ್ರಾರಂಭವಾಗಲಿದೆ ಎಂದರು.

ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯೂ ಮುಂಬರುವ ಸೆಪ್ಟೆಂಬರ್ ಕೊನೆ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ನಡೆಯಬಹುದಾಗಿದ್ದು, ಈಗಿನಿಂದಲೇ ನಾವು ಅಖಾಡಕ್ಕೆ ಧುಮುಕಬೇಕಿದೆ. ಪಕ್ಷದ ಅಭ್ಯರ್ಥಿ ಎಂಎಲ್ಸಿ ಶಶೀಲ್ ನಮೋಶಿ ಗೆಲುವಿಗಾಗಿ ನಾವೆಲ್ಲರೂ ಶಕ್ತಿ ಮೀರಿ ಕೆಲಸ ಮಾಡಬೇಕಿದೆ ಎಂದರು.

ಟ್ರ್ಯಾಕ್ಟರ್‌ನ ಟ್ರ್ಯಾಲಿ ಏಕಾಏಕಿ ಲಿಫ್ಟ್: 6 ಜನರು ಗಂಭೀರ ಗಾಯ

ಬಳ್ಳಾರಿ: ಟ್ರ್ಯಾಕ್ಟರ್‌ನ ಟ್ರ್ಯಾಲಿ ಏಕಾಏಕಿ ಲಿಫ್ಟ್ ಮೇಲಕ್ಕೇರಿದ ಹಿನ್ನೆಲೆಯಲ್ಲಿ ಹಿಂಭಾಗ ಕುಳಿತ ಕೂಲಿಕಾರರ ಮೇಲೆ ಕಲ್ಲುಗಳು ಬಿದ್ದು 6 ಜನರು ಗಂಭೀರ ಗಾಯಗೊಂಡ ಘಟನೆ ಜಿಲ್ಲೆಯ ಶ್ಯಾನವಾಸಪುರ ಹಾಗೂ ಸಿಂಧಿಗೇರಿ ಗ್ರಾಮದ ಮಧ್ಯೆ ಶುಕ್ರವಾರ ನಡೆದಿದೆ.

ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಅವರು ಗಾಯಾಳುಗಳನ್ನು ಬಳ್ಳಾರಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದಿದ್ದಾರೆ. ಸಿಂಧಿಗೇರಿ ಗ್ರಾಮದಿಂದ ಶ್ಯಾನವಾಸಪುರ ಗ್ರಾಮಕ್ಕೆ ತೆರಳುವ ಮಾರ್ಗ ಮಧ್ಯೆ ಘಟನೆ ನಡೆದಿದ್ದು, ಮನೆ ನಿರ್ಮಾಣಕ್ಕೆ ಬುನಾದಿ ಹಾಕಲು ಕಲ್ಲುಗಳನ್ನು ಸಾಗಣೆ ಮಾಡಲಾಗುತ್ತಿತ್ತು. ಟ್ರ್ಯಾಕ್ಟರ್‌ನ ಟ್ರ್ಯಾಲಿ ಏಕಾಏಕಿ



ಮೇಲಕ್ಕೆತ್ತಿದೆ.

ಈ ಘಟನೆಯಲ್ಲಿ ಸುರೇಂದ್ರ, ಅಂಬರೀಶ್ ಅವರಿಗೆ ಗಂಭೀರ ಗಾಯಗಳಾಗಿದ್ದು, ಶ್ರೀಕಾಂತ್,ಬಸವರಾಜ್, ಮಣಿಕಂಠ, ಶೇಖರ್ ಎನ್ನುವವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೂಡಲೇ ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ನಂತರ ಎಂ.ಎಸ್.ಸಿದ್ದಪ್ಪ ಮಾತನಾಡಿ, ಘಟನೆಯಲ್ಲಿ ಗಾಯಗೊಂಡವರಿಗೆ ಗುಣಮಟ್ಟದ ಚಿಕಿತ್ಸೆ ಕಲ್ಪಿಸಬೇಕು ಎಂದು ವೈದ್ಯರಲ್ಲಿ ಮನವಿ ಮಾಡಿರುವೆ. ಎಲ್ಲರೂ ಆರೋಗ್ಯವಾಗಿದ್ದಾರೆ. 6 ಜನರಲ್ಲಿ ಸುರೇಂದ್ರ, ಅಂಬರೀಶ್ ಅವರಿಗೆ ಮೂಳೆಗಳು ಮುರಿದಿದ್ದು, ಚಿಕಿತ್ಸೆ ಮುಂದುವರಿದಿದೆ. ಎಲ್ಲರೂ ಸುರಕ್ಷಿತರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ ಎಂದರು. ಪ್ರಕರಣ ತೆಕ್ಕಲಕೋಟೆ ಠಾಣೆಯಲ್ಲಿ ದಾಖಲಾಗಿದೆ.

ಪ್ರತ್ಯೇಕ ಪಾಲಿಕೆಗೆ ಧಾರವಾಡ ಬಂದ್: ಶಿವಳ್ಳಿ

ಧಾರವಾಡ: ಹುಬ್ಬಳ್ಳಿ-ಧಾರವಾಡ ಬೃಹತ್ ಮಹಾನಗರ ಪಾಲಿಕೆ ರಚನೆ ನಿರ್ಣಯ ಖಂಡಿಸಿ ಹಾಗೂ ಧಾರವಾಡ ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಧಾರವಾಡ ಬಂದ್ ಕರೆ ನೀಡುವುದಾಗಿ ಧ್ವನಿ ಅಧ್ಯಕ್ಷ ಈಶ್ವರ ಶಿವಳ್ಳಿ ಎಚ್ಚರಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ದಶಕಗಳ ಕನಸು. ಹೀಗಾಗಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿ ಪಕ್ಷಾತೀತವಾಗಿ ಸಭೆ ಕರೆದು, ಸುದೀರ್ಘ ಚರ್ಚಿಸಿ, ಹೋರಾಟದ ರೂಪರೇಷಿ ಸಿದ್ಧಪಡಿಸುವುದಾಗಿ ಮಾಹಿತಿ ನೀಡಿದರು.

ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ತಾವೇ ಮಾಡಿದ್ದಾಗಿ ಬ್ಯಾನರ್ ಹಾಕಿದ ಅರವಿಂದ ಬೆಲ್ಲದ ಮತ್ತು ಪ್ರಹ್ಲಾದ್ ಜೋಶಿ ಅವರು, ಇದೀಗ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ತಾವೇ ಅಡ್ಡಿಪಡಿಸಿದ್ದಾಗಿಯೂ ಬ್ಯಾನರ್ ಹಾಕಿಕೊಳ್ಳುತ್ತಾರೆಯೇ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಮುಖಂಡ ದೀಪಕ ಚಿಂಚೋರೆ ಮಾತನಾಡಿ, ಧಾರವಾಡ ಮಹಾನಗರ ಪ್ರತ್ಯೇಕ ಪಾಲಿಕೆ ಜನರ ಕೂಗು. ಇದಕ್ಕೆ ಪಡ್ಡಿಪಡಿಸಿ, ಪ್ರಜಾಪ್ರಭುತ್ವದ ಕಗ್ಗೊಲೆಗೆ ಪ್ರಯತ್ನಿಸಿದ ಪ್ರಹ್ಲಾದ



ಜೋಶಿ, ಅರವಿಂದ ಬೆಲ್ಲದ ವಿರುದ್ಧ ಎಫ್‌ಐಆರ್ ದಾಖಲಿಸುವುದಾಗಿ ಹೇಳಿದರು.

ಧಾರವಾಡ ಪ್ರತ್ಯೇಕ ಪಾಲಿಕೆ ವಿಚಾರದಲ್ಲಿ ಜಿಲ್ಲೆಯ ನಾಯಕರ ಇಚ್ಛಾಶಕ್ತಿ ಕೊರತೆ ಉಂಟು. ಅಲ್ಲದೇ, ರಾಜ್ಯಪಾಲರು ಕೂಡ ಕಾನೂನು ಬಿಟ್ಟು, ಪ್ರಹ್ಲಾದ ಜೋಶಿ ಹಾಗೂ ಅರವಿಂದ ಬೆಲ್ಲದ ಅವರ ಏಜೆಂಟರ್ ತರಹ ವರ್ತಿಸುವುದು ಅಕ್ಷಮ್ಯ ಎಂದು ಬೇಸರಿಸಿದರು.

ಧಾರವಾಡ ಬೆಲ್ಲದ ಕುಟುಂಬಕ್ಕೆ ಹಾಗೂ ಜೋಶಿ ಅವರಿಗೆ ರಾಜಕೀಯ ಜೀವನ ನೀಡಿದ ಕ್ಷೇತ್ರ. ಹೀಗಾಗಿ ಧಾರವಾಡ ಪ್ರತ್ಯೇಕ ಪಾಲಿಕೆ ಆಸ್ಥೆ ವಹಿಸಬೇಕು. ಇಲ್ಲದೆ ಹೋದರೆ, ಮುಂದಿನ ಚುನಾವಣೆಯಲ್ಲಿ ಧಾರವಾಡಿಗರು ತಕ್ಕಪಾಠ ಕಲಿಸುತ್ತಾರೆ ಎಂದು ಎಚ್ಚರಿಸಿದರು.

> ### ಶ್ವೇತಪತ್ರ ಹೊರಡಿಸಲಿ
> ಪ್ರಹ್ಲಾದ ಜೋಶಿ ಹಾಗೂ ಅರವಿಂದ ಬೆಲ್ಲದ ಅವರ ಕಪಿಮುಷ್ಠಿಯಲ್ಲಿ ಸಿಲುಕಿರುವ ಧಾರವಾಡ ಸರ್ವನಾಶ ಆಗಿದೆ. ಒಣ ರಾಜಕೀಯ ಹಾಗೂ ಪ್ರತಿಷ್ಠೆ ಬದಿಗಿಟ್ಟು, ಈ ಉಭಯ ನಾಯಕರು ಪ್ರತ್ಯೇಕ ಪಾಲಿಕೆಗೆ ಬೆಂಬಲಿಸಬೇಕು ಎಂದು ಗುರುರಾಜ ಹುಣಸಿಮರದ ಆಗ್ರಹಿಸಿದರು. ಧಾರವಾಡ ಪಾಲಿಕೆ ರಚನೆಗೆ 16ನೇ ಹಣಕಾಸು ಕಡೆಗೆ ಬೆರಳು ತೋರುವ ಅರವಿಂದ ಬೆಲ್ಲದ ಹಾಗೂ ಪ್ರಹ್ಲಾದ ಜೋಶಿ, 1968ರಿಂದ 2026ರವರೆಗೂ ಹು-ಧಾ ಮಹಾನಗರ ಪಾಲಿಕೆಗೆ ಬಂದ ಅನುದಾನ ಮತ್ತು ಖರ್ಚಿನ ಕುರಿತು ಶ್ವೇತ್ರಪತ್ರ ಹೊರಡಿಸಲು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ರಾಜು ಕಮತಿ, ಕವಿತಾ ಕಬ್ಬೇರ, ರವಿ ಮಾಳಗೇರ, ವೀರಣ್ಣ ಶೆಟ್ಟರ್, ಬಸವರಾಜ ಜಾದವ, ಗೌರಮ್ಮ ಬಲೋಗಿ, ವಸಂತ ಅರ್ಕಚಾರ, ಸತೀಶ ಬೆಂಗೇರಿ, ಪರಮೇಶ ಕಾಳೆ, ತುಳಜಪ್ಪ ಪೂಜಾರ ಸೇರಿ ಅನೇಕರು ಇದ್ದರು.

ವೈಭವದ ಲಕ್ಷ್ಮೀನರಸಿಂಹ ದೇವರ ರಥೋತ್ಸವ

ಶಿರಸಿ: ಶ್ರೀಸೋಂದಾಸ್ವರ್ಣವಲ್ಲೀ ಮಹಾಸಂಸ್ಥಾನದ ಆರಾಧ್ಯ ದೇವರಾದ ಶ್ರೀ ಲಕ್ಷ್ಮೀನರಸಿಂಹ ದೇವರ ವಾರ್ಷಿಕ ರಥೋತ್ಸವವು ಭಕ್ತಿ, ಸಂಪ್ರದಾಯ ಮತ್ತು ಭಾವೈಕ್ಯದ ವಾತಾವರಣದಲ್ಲಿ ಅತ್ಯಂತವೈಭವದಿಂದ ಗುರುವಾರವ ರಾತ್ರಿ ನೆರವೇರಿತು.

ಸಾವಿರಾರು ಭಕ್ತರು ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾದರು.

ರಥೋತ್ಸವದ ಅಂಗವಾಗಿ ಕಳೆದ ಮೂರು ದಿನಗಳಿಂದ ಹಾಗೂ ಜಯಂತಿಯ ಮುಂಜಾನೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ದೇವರಿಗೆ ಮಹಾಪೂಜೆ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಧ್ವಜಸ್ಥಾಪನೆ, ಅನ್ನಪೂರ್ಣೇಶ್ವರಿ ಪೂಜೆ, ವೇದಘೋಷ, ಮಂಗಳಾರತಿ ಹಾಗೂ ಭಜನಾ ಕಾರ್ಯಕ್ರಮಗಳು ಭಕ್ತಿಭಾವವನ್ನು ಹೆಚ್ಚಿಸಿತು. ಮಠದ



ಆವರಣವುವಿದ್ಯುತ್‌ದೀಪಾಲಂಕಾರ ಮತ್ತು ಹೂವಿನ ಅಲಂಕಾರಗಳಿಂದ ಕಂಗೊಳಿಸುತ್ತಿತ್ತು.

ಮಠಾಧೀಶರಾದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಹಾಗೂ ಶ್ರೀ ಆನಂದಬೋಧೇಂದ್ರ ಸರಸ್ವತೀ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ರಥೋತ್ಸವ ನಡೆಯಿತು.

ರಾತ್ರಿ ವಿಶೇಷ ಆಕರ್ಷಣೆಯಾಗಿದ್ದ ಶ್ರೀ ದೇವರ ರಥೋತ್ಸವ ಭಕ್ತರ ಜಯಘೋಷಗಳನಡುವೆನಡೆಯಿತು. ರಥಾರೂಢನಾದ ಶ್ರೀ ಲಕ್ಷ್ಮೀನರಸಿಂಹ ದೇವರ ದರ್ಶನ ಪಡೆಯಲು ಭಕ್ತರು ಮುಗಿಬಿದ್ದರು. ರಾತ್ರಿ 11 ಗಂಟೆಗೆ ರಥಾ ರೂಢನಾದ ದೇವರ ರಥೋತ್ಸವ 11.30ಕೆ ಆರಂಭವಾಯಿತು. ರಾತ್ರಿ 1 ಗಂಟೆ ವೇಳೆಗೆ ರಥ ವಾಪಸ್ಸಾಯಿತು.

ರಥೋತ್ಸವದಲ್ಲಿ ಸಂಭ್ರಮದ ಬಾಣಬಿರುಸುಗಳು ಆಕಾಶವನ್ನು ಬೆಳಗಿಸಿದವು. ತಾಳ, ವಾದ್ಯಗಳ ನಿನಾದ, ಭಕ್ತರ ಜಯಘೋಷದ ನಡುವೆ ರಥೋತ್ಸವವು ಮನಸೆಳೆಯಿತು.

ಈ ರಥೋತ್ಸವದ ಮತ್ತೊಂದು ವಿಶೇಷತೆ ಎಂದರೆ ಸರ್ವಧರ್ಮೀಯರ ಸಹಕಾರ. ಹಿಂದು ಸಮುದಾಯದೊಂದಿಗೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದ ಜನರೂ ಉತ್ಸವದ ವಿವಿಧ ವ್ಯವಸ್ಥೆಗಳಲ್ಲಿ ಕೈಜೋಡಿಸಿದ್ದು, ನಿಜಾರ್ಥದಲ್ಲಿ ಇದು ಭಾವೈಕ್ಯತೆಯ ರಥೋತ್ಸವವಾಗಿ ಮೂಡಿಬಂತು. ಧರ್ಮಗಳ ನಡುವೆ ಸೌಹಾರ್ದ ಮತ್ತುಪರಸ್ಪರಗೌರವವನ್ನುಸಾರುವ ಅಪೂರ್ವ ಉದಾಹರಣೆಯಾಗಿ ಈ ಉತ್ಸವ ಗಮನ ಸೆಳೆಯಿತು.

ರಥೋತ್ಸವದ ಬಳಿಕ ನಡೆದ ಯಕ್ಷಗಾನ ಕಾರ್ಯಕ್ರಮವೂ ಭಕ್ತರನ್ನು ರಂಜಿಸಿತು. ಯಕ್ಷಶಾಲಾ ಸಂಸ್ಥೆ ನೇತೃತ್ವದಲ್ಲಿ ಖ್ಯಾತ ಕಲಾವಿದರಿಂದ ಪ್ರದರ್ಶಿತವಾದ ''ಸುಭದ್ರಾ ಕಲ್ಯಾಣ'' ಯಕ್ಷಗಾನ ಪ್ರದರ್ಶನ ಮೆಚ್ಚುಗೆಗೆ ಕಾರಣವಾಯಿತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಮಾರುತಿ ದೇವರ ಕಳಸ ಪ್ರತಿಷ್ಠಾನ ಮಹೋತ್ಸವ

ಬನವಾಸಿ: ಸಮೀಪದ ಹಾಡಲಗಿ ಗ್ರಾಮದ ಮಾರುತಿ ದೇವರ ಕಳಸ ಪ್ರತಿಷ್ಠಾನ ಮಹೋತ್ಸವ ಮೇ 2 ಮತ್ತು 3ರಂದು ಜರುಗಲಿದೆ. ಮೇ.2ರಂದು ಮಾರುತಿ ದೇವಸ್ಥಾನದ ಆಲಯ ಶುದ್ಧಿ, ಶಿಖರಾದಿವಾಸ, ದೇವರ ಅಧಿವಾಸ ಹೋಮ ನಡೆಯಲಿದೆ. ಮೇ 3ರಂದು ಬೆಳಗ್ಗೆ ಕಲಾಭಿವೃದ್ಧಿ ಹೋಮ, ಕಳಸಾಧಿವಾಸ ಹೋಮ,



ಶಿಖರ ಕಳಸ ಪ್ರತಿಷ್ಠಾನೆ ಮತ್ತು ಮಧ್ಯಾಹ್ನ 12.10ಕ್ಕೆ ಕಳಸಾಭಿಷೇಕ ಪೂರ್ಣಾಹುತಿ, ಅಲಂಕಾರ ಪೂಜೆ, ಮಹಾ ಮಂಗಳಾರತಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯುವುದು. ಮಧ್ಯಾಹ್ನ 12.30ಕ್ಕೆ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿಗಳಾದ ಡಾ. ಜಿ.ಭೀಮೇಶ್ವರ ಜೋಷಿ ಹಾಗೂ ಜಡೆ ಸಂಸ್ಥಾನಮಠದ ಡಾ. ಮಹಾಂತ ಮಹಾಸ್ವಾಮಿ ಅವರ ಸಾನಿಧ್ಯದಲ್ಲಿ ಧರ್ಮಸಭೆ ನಡೆಯುವುದು. ಮಧ್ಯಾಹ್ನ 2 ಗಂಟೆಗೆ ಬನವಾಸಿಯ ಹಿಂದೂಸ್ತಾನಿ ಕಲಾವಿದರಾದ ದುರ್ಗೇಶ ಅವರಿಂದ ಭಕ್ತಿ ಸುಧೆ ಕಾರ್ಯಕ್ರಮ ನೆರವೇರುವುದು. ರಾತ್ರಿ 9.30ಕ್ಕೆ ಸಿದ್ಧಾಪುರ ತಾಲೂಕಿನ ಹೆಮ್ಮನಬೈಲ್ ಶ್ರೀಲಕ್ಷ್ಮೀ ನಾರಾಯಣ ಯಕ್ಷಗಾನ ಮಂಡಳಿಯವರಿಂದ ಮಾರುತಿ ಪ್ರತಾಪ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಯಕ್ಷಗಾನ ಕಾರ್ಯಕ್ರಮವನ್ನು ಶಾಸಕ ಶಿವರಾಮ ಹೆಬ್ಬಾರ ಉದ್ಘಾಟಿಸುವರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಹಾಡಲಗಿ ಮಾರುತಿ ದೇವಸ್ಥಾನ ಕಮಿಟಿ ಹಾಗೂ ಮಾರುತಿ ಯುವಕ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯುಸಿ ಪ್ರಥಮ ವರ್ಷಕ್ಕೆ ಪ್ರವೇಶ ಪ್ರಾರಂಭ

ಮುಂಡಗೋಡ: ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 2026-27ನೇ ಸಾಲಿನ ಪಿಯುಸಿ ಪ್ರಥಮ ವರ್ಷಕ್ಕೆ ಪ್ರವೇಶಗಳು ಆರಂಭವಾಗಿವೆ ಎಂದು ಪ್ರಾಂಶುಪಾಲ ಜಿ.ಟಿ.ಕಡೇಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಲೇಜಿನಲ್ಲಿ ಅನುಭವಿ ಉಪನ್ಯಾಸಕರಿಂದ ಬೋಧನೆ, ವಿಜ್ಞಾನ ವಿಭಾಗದಲ್ಲಿ ಉಚಿತವಾಗಿ ಇಉಖ/ಫೆಉಉಖ ತರಬೇತಿ ನೀಡಲಾಗುವುದು. ಸುಸಜ್ಜಿತ ಗ್ರಂಥಾಲಯ ಸೌಲಭ್ಯ ಇದೆ. ಕ್ರೀಡೆ, ಸಹಪಠ್ಯೇತರ ಚಟುವಟಿಕೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡಲಾಗುವುದು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿಗಳ ಮೂಲಕ ತರಬೇತಿ ಹಾಗೂ ಸರಣಿ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಐಡಿಯಾಸ್ಪ್ರಿಂಟ್ ಸ್ಪರ್ಧೆ: ಪ್ರವರ್ ಹೆಗಡೆ ಆಯ್ಕೆ

ಶಿರಸಿ: ಗ್ರಾಮೀಣ ಪ್ರದೇಶದ ಯುವಕರು ಹೊಸ ತಂತ್ರಜ್ಞಾನದಲ್ಲಿ ಸಾಧನೆ ಮಾಡಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಗಮನಾರ್ಹವಾಗಿದ್ದು, ಉದ್ಯಮ ಕ್ಷೇತ್ರದಲ್ಲಿ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತವಾಗಿದೆ. ತಾಲೂಕಿನ ಹುಳಗೋಳ ಗ್ರಾಮದ ಯುವ ಉದ್ಯಮಿ ಪ್ರವರ್ ಹೆಗಡೆ ಅವರು 3ಡಿ ತಂತ್ರಜ್ಞಾನದ ಮೂಲಕ ಗಮನ ಸೆಳೆದಿದ್ದಾರೆ. ತಮ್ಮದೇ ಸಂಸ್ಥೆ ಪ್ರೋಭಾರತ್ ಟೆಕ್ನಾಲಜೀಸ್ ಮೂಲಕ ಅಭಿವೃದ್ಧಿಪಡಿಸಿರುವ ಸ್ವದೇಶಿ 3ಡಿ ಪ್ರಿಂಟಿಂಗ್ ಹಾಗೂ ಸ್ಮಾರ್ಟ್ ಮ್ಯಾನ್ಯುಫ್ಯಾಕ್ಚರಿಂಗ್ ವ್ಯವಸ್ಥೆಯನ್ನು ಅವರು ಧಾರವಾಡದಲ್ಲಿ ನಡೆದ ಇನ್ನೋಮೆಕ್ಸ 2026 ಉದ್ಯಮ ಪ್ರದರ್ಶನದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿ ವ್ಯಾಪಕ ಮೆಚ್ಚುಗೆ ಗಳಿಸಿದ್ದಾರೆ.ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆದ ಐಡಿಯಾಸ್ಪ್ರಿಂಟ್ ಸ್ಪರ್ಧೆಯಲ್ಲಿಯೂ ಅವರು ಅಂತಿಮ ಹಂತಕ್ಕೆ ಆಯ್ಕೆಯಾಗಿದ್ದಾರೆ. ಪ್ರವರ್ ಹೆಗಡೆ ಅವರ ಸಾಧನೆ ಗ್ರಾಮೀಣ ಯುವಕರಿಗೆ ಪ್ರೇರಣೆಯಾಗಿದ್ದು, ಉಕ ಜಿಲ್ಲೆಯ ಹೆಮ್ಮೆಗೂ ಕಾರಣವಾಗಿದೆ. ಅವರು ಹುಳಗೋಳದ ರಾಮಚಂದ್ರ ಹೆಗಡೆ ಮತ್ತು ರಾಜೇಶ್ವರಿ ಹೆಗಡೆ ಅವರ ಪುತ್ರರಾಗಿದ್ದಾರೆ.

ಆತ್ಮಹತ್ಯೆ: ದೂರು ದಾಖಲು

ಅಂಕೋಲಾ: ವಿವಾಹಿತ ಮಹಿಳೆಯೋರ್ವಳು ನೇಣು ಬಿಗಿದು ಆತ್ಮಹತ್ಯೆಯ ಮಾಡಿಕೊಂಡ ಘಟನೆ ತಾಲೂಕಿನ ಮಳಲಗಾವ್‌ನಲ್ಲಿ ನಡೆದಿದ್ದು, ಮೃತಳ ಜೊತೆ ಅನೈತಿಕ ಸಂಬಂಧ ಹೊಂದಿದ್ದ ವ್ಯಕ್ತಿ ಮತ್ತು ಮೃತಳ ಗಂಡನ ಮಾನಸಿಕ ಕಿರುಕುಳವೇ ಆತ್ಮಹತ್ಯೆಗೆ ಕಾರಣ ಎಂದು ಮೃತಳ ಸಹೋದರ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.ಮಳಲಗಾವ್ ನಿವಾಸಿ ಪಲ್ಲವಿ ಗಣೇಶ ಸಿದ್ಧಿ(23) ಮೃತ ಮಹಿಳೆಯಾಗಿದ್ದು ಮಳಲಗಾವಿನ ಬಾಲಚಂದ್ರ ಪುಟ್ಟಾ ಸಿದ್ಧಿ ಎಂಬಾತ ಹಲವು ಬಾರಿ ಹೇಳಿದರೂ ವಿವಾಹಿತ ಮಹಿಳೆಯ ಜೊತೆ ಸಂಬಂಧ ಮುಂದುವರಿಸಿದ್ದು ಇದರಿಂದಾಗಿ ಮೃತಳ ಗಂಡ ಗಣೇಶ ಸಿದ್ಧಿ ವಿಷಯವನ್ನು ಸರಿಯಾಗಿ ಪಂಚಾಯತಿ ಮಾಡದೇ ಹೆಂಡತಿಗೆ ಹೊಡೆದು ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುವುದು ಮಾನಸಿಕವಾಗಿ ನೊಂದು ಆತ್ಮಹತ್ಯೆಗೆ ಪ್ರಚೋದನೆಯಾಗಿದೆ ಎಂದು ಮೃತ ಮಹಿಳೆಯ ಸಹೋದರ ದೂರು ದಾಖಲಿಸಿದ್ದಾನೆ.



ಹಳಿಯಾಳ : ಮಾಜಿ ಶಾಸಕ ಸುನೀಲ್ ಹೆಗಡೆ ತಮ್ಮ ಧರ್ಮಪತ್ನಿ ಸುವರ್ಣಾ ಹೆಗಡೆ, ಸುಪುತ್ರ ನಯನ ಹೆಗಡೆ ಹಾಗೂ ಸಹೋದರ ವಿಷ್ಣು ಹೆಗಡೆ ಸಮೇತ ಶುಕ್ರವಾರ ಹಳಿಯಾಳ ನಗರದ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಗೋಮಾತೆಗೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ತಮ್ಮ ಜನ್ಮದಿನವನ್ನು ಆಚರಿಸಿಕೊಂಡರು. ಬಿಜೆಪಿ ಪಕ್ಷದ ಪದಾಧಿಕಾರಿಗಳು, ಗಣಪತಿ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರು, ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಸಿಬ್ಬಂದಿ, ವ್ಹಿ ಡಿ ಹೆಗಡೆ ಪದವಿ ಪೂರ್ವ ಕಾಲೇಜಿನ ಸಿಬ್ಬಂದಿ, ಪಿಎಲ್‌ಡಿ ಬ್ಯಾಂಕ್ ಸಿಬ್ಬಂದಿ ಹಾಗೂ ನಿರ್ದೇಶಕರು, ಮಾಜಿ ಶಾಸಕರಿಗೆ ಶುಭಾಶಯ ಕೋರಿದರು.

ಗೋಪಾಲಕೃಷ್ಣ ಮೂರ್ತಿ ಪ್ರತಿಷ್ಠಾನ ಮಹೋತ್ಸವ

ಕುಮಟಾ: ಹೆಗಡೆಯ ಮೂಡ್ಕೇರಿಯಲ್ಲಿರುವ ಗೋಪಾಲಕೃಷ್ಣ ದೇವಸ್ಥಾನದಲ್ಲಿ ನೂತನ ಮೂರ್ತಿಯ ಪ್ರತಿಷ್ಠಾಪನಾ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿದ್ದ ವಿವಿಧ ಧಾರ್ಮಿಕ ವಿಧಿ ವಿಧಾನಗಳು ಅಂತಿಮವಾಗಿ ಗೋಪಾಲಕೃಷ್ಣನ ಪಲ್ಲಕ್ಕಿ ಉತ್ಸವದೊಂದಿಗೆ ಸಂಪನ್ನಗೊಂಡಿತು.



ಪಲ್ಲಕ್ಕಿ ಉತ್ಸವ ಹೆಗಡೆ ಗ್ರಾಮದ ವಿವಿಧ ಕೇರಿಗಳನ್ನು ಸಂಚರಿಸಿತು. ಭಕ್ತರು ದೇವರಿಗೆ ಆರತಿ ನೀಡಿ ಸಂಭ್ರಮಿಸಿದರು. ಶಾಂತಿಕಾಂಬಾ ದೇವಸ್ಥಾನದಲ್ಲಿ ಗೋಪಾಲಕೃಷ್ಣನನ್ನು ಶಾಂತಿಕಾಂಬಾದೇವಿಯ ಗರ್ಭಗುಡಿಯಲ್ಲಿಟ್ಟುಪೂಜಿಸಿದ ಕ್ಷಣ ಭಕ್ತರಲ್ಲಿ ರೋಮಾಂಚನವನ್ನುಂಟು ಮಾಡಿತು.

ಜಗಜ್ಜನನಿ ಶಾಂತಿಕಾಂಬೆಯ ಜೊತೆ ಜಗದ್ಗುರು ಕೃಷ್ಣನ ಸಾನ್ನಿಧ್ಯವನ್ನು ಭಕ್ತರು ಭಕ್ತಿ ಪರವಶತೆಯಿಂದ ಕಣ್ತುಂಬಿಕೊಂಡರು. ನಾಲ್ಕು ದಿನಗಳ ಕಾಲ ನಡೆದ ಈ ಉತ್ಸವಕ್ಕೆ ನಾಡಿನ ಹಲವು ಗಣ್ಯರು ಹಾಗೂ ದೇವಾಲಯದ ಭಕ್ತರು ಅಪಾರ ಸಂಖ್ಯೆಯಲ್ಲಿ ಭೇಟಿ ನೀಡಿದ್ದು ಗಮನ ಸೆಳೆಯಿತು. ಭಕ್ತವೃಂದದವರು ಸೇರಿ ಗೋಪಾಲಕೃಷ್ಣನಿಗೆ ಚಿನ್ನದ ಸರವನ್ನು ಸಮರ್ಪಿಸಿದ್ದು ವಿಶೇಷವಾಗಿತ್ತು.



ಭಟ್ಕಳ : ಅಖಿಲ ಭಾರತ ಹವ್ಯಕ ಮಹಾಸಭಾದ ಕ್ಷೇತ್ರ ಬೆಳಕೆ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಶುಕ್ರವಾರ ಸಂಜೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭೇಟಿ ನೀಡಿ ದೇವಿಯ ದರ್ಶನ ಪಡೆದರು. ಹವ್ಯಕ ಮಹಾಸಭಾದಿಂದ ಸಂಸದರಿಗೆ ದೇವಿಯ ಪ್ರಸಾದ ನೀಡಿ ಗೌರವಿಸಲಾಯಿತು. ಹವ್ಯಕ ಮಹಾಸಭಾದ ಕಾರ್ಯದರ್ಶಿ ಪ್ರಸನ್ನ ಭಟ್ಟ, ಹವ್ಯಕ ಮಹಾಸಭಾದ ಸದಸ್ಯರು, ದೇವಸ್ಥಾನದ ಅರ್ಚಕ ಸ್ಥಳೀಯ ಬಿಜೆಪಿ ಪ್ರಮುಖರು ಉಪಸ್ಥಿತರಿದ್ದರು.

ಕಾರ್ಮಿಕರ ದಿನಾಚರಣೆ | ಸಚಿವ ಮಂಕಾಳ ಎಸ್.ವೈದ್ಯ ಭರವಸೆ

ರಾಜ್ಯ ಸರ್ಕಾರದಿಂದ ಕಾರ್ಮಿಕರಿಗೆ ಹಲವು ಸೌಲಭ್ಯ

ಭಟ್ಕಳ: ಇಲ್ಲಿನ ಹೆಬಳೆಯ ಸಿದ್ಧಿವಿನಾಯಕ ಸಭಾಭವನದಲ್ಲಿ ಭಟ್ಕಳ ಕಟ್ಟಡ ನಿರ್ಮಾಣ ಕೂಲಿ ಕಾರ್ಮಿಕರ ಸಂಘದ ದಶಮಾನೋತ್ಸವ ಮತ್ತು ವಿಶ್ವ ಕಾರ್ಮಿಕ ದಿನಾಚರಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್.ವೈದ್ಯ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ರಾಜ್ಯ ಸರ್ಕಾರ ಕಾರ್ಮಿಕರ ಕಲ್ಯಾಣಕ್ಕೆ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಸರ್ಕಾರ ರೈತರಿಗೆ ನೀಡುವ ಪ್ರಾಮುಖ್ಯತೆಯನ್ನು ಕಾರ್ಮಿಕರಿಗೂ ನೀಡುತ್ತಿದೆ. ಕಾರ್ಮಿಕರಿಗಾಗಿ ಹಲವು ಶಿಷ್ಯವೇತನ, ಮದುವೆ ಪ್ರೋತ್ಸಾಹ ಧನ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ಅಪಘಾತದಲ್ಲಿ ಮೃತಪಟ್ಟ ಕಾರ್ಮಿಕರಿಗೆ ಪರಿಹಾರ ಧನವನ್ನು 5 ಲಕ್ಷದಿಂದ 8 ಲಕ್ಷಕ್ಕೆ ಏರಿಸಲಾಗಿದೆ. ಕಾರ್ಮಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು. ಭಟ್ಕಳದಲ್ಲಿ ಕಾರ್ಮಿಕ ಮಕ್ಕಳ ವಸತಿ ಶಿಕ್ಷಣಕ್ಕಾಗಿ 50 ಕೋಟಿ ರೂ ವೆಚ್ಚದ ಕಟ್ಟಡ ಕಾಮಗಾರಿ ನಿರ್ಮಾಣ ಹಂತದಲ್ಲಿದೆ ಎಂದರು.

ಭಟ್ಕಳದಲ್ಲಿ ಕೆಲಸಕ್ಕೆ ಹೋಗುವ ಕಾರ್ಮಿಕರು ಬೆಳಗ್ಗೆ ಒಂದೆಡೆ ಸೇರಲು ಅನುಕೂಲವಾಗುವಂತಹ ತಂಗುದಾಣ ನಿರ್ಮಿಸುವಂತೆ ಸಂಘದವರು ಬೇಡಿಕೆ ಇರಿಸಿದ್ದು, ಎಲ್ಲಿ ಆಗಬೇಕು ಎಂದು ಜಾಗ ತೋರಿಸಿಕೊಟ್ಟಲ್ಲಿ ತಂಗುದಾಣ ನಿರ್ಮಿಸಿಕೊಡುವ ಭರವಸೆ ನೀಡಿದರು.

ಭಟ್ಕಳ ಕಾರ್ಮಿಕ ಇಲಾಖೆ ನಿರೀಕ್ಷಕ ಗುರುಪ್ರಸಾದ ನಾಯ್ಕ ಮಾತನಾಡಿ, ಕಾರ್ಮಿಕ ಇಲಾಖೆಯ ಸವಲತ್ತು ಪಡೆದುಕೊಳ್ಳಲು ಎಲ್ಲಾ ಕಾರ್ಮಿಕರು ತಮ್ಮ ಕಾರ್ಮಿಕ ಕಾರ್ಡನ್ನು ಪ್ರತಿ ವರ್ಷ ಪರಿಶೀಲಿಸಿ ನವೀರಕಣ ಮಾಡಿಕೊಳ್ಳುವಂತೆ ತಿಳಿಸಿದರು.



> ಮೂಲಭೂತ ಸೌಕರ್ಯ ಹೊಂದಿರದ ಕಾರ್ಮಿಕರ ಮಕ್ಕಳು ಇಂದು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವುದು ಪತ್ರಿಕೆಗಳಲ್ಲಿ ಓದಿ ಹರ್ಷವೆನಿಸುತ್ತಿದೆ. ಕಾರ್ಮಿಕರು ವಾಹನವನ್ನು ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ತಮ್ಮ ಜೀವದ ಭದ್ರತೆಗೆ ಅಗತ್ಯ ಜೀವವಿಮೆ ಮಾಡಿಸಿಕೊಳ್ಳಿ.
> ■ ಬಿ ಗಿರೀಶ, ಡಿವೈಎಸ್ಪಿ

ಸರ್ಕಾರಿ ಆಸ್ಪತ್ರೆಯ ಆರೋಗ್ಯಾಧಿಕಾರಿ ಡಾ. ಅರುಣಕುಮಾರ, ನ್ಯಾಯವಾದಿ ಮಂಜು ಗೊಂಡ, ಭಟ್ಕಳ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮೋಹನ ನಾಯ್ಕ, ಬಾಲಕಾರ್ಮಿಕ ಇಲಾಖೆ ನಿರೀಕ್ಷಕ ಸಂದೇಶ ಗಾಂವಕರ, ಭಟ್ಕಳ ಕಟ್ಟಡ ನಿರ್ಮಾಣ ಕೂಲಿ ಕಾರ್ಮಿಕ ಸಂಘದ ಗೌರವ ಅಧ್ಯಕ್ಷ ಶ್ರೀಧರ ಎಂ ನಾಯ್ಕ, ಅಧ್ಯಕ್ಷ ಶ್ರೀಧರ ನಾರಾಯಣ ನಾಯ್ಕ ಮಾತನಾಡಿದರು. ಭಟ್ಕಳ ಪೇಂಟಿಂಗ್ ಕಾರ್ಮಿಕ ಸಂಘದ ಅಧ್ಯಕ್ಷ ರಾಮ ನಾಯ್ಕ, ಭಟ್ಕಳ ಕಾರ್ಪೆಂಟರ್ ಕೂಲಿ ಕಾರ್ಮಿಕ ಸಂಘದ ಅಧ್ಯಕ್ಷ ಭಾಸ್ಕರ ಆಚಾರ್ಯ ಉಪಸ್ಥಿತರಿದ್ದರು.

ಸಂಘದ ದಶಮಾನೋತ್ಸವ ಸಂದರ್ಭದಲ್ಲಿ ಸಂಘದ ವಿವಿಧ ಸ್ಥರಗಳಲ್ಲಿ ಸೇವೆ ಸಲ್ಲಿಸಿದ ಸಂಘಟಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರೋತ್ಸಾಹ ಧನಕ್ಕೆ ಚರ್ಚೆ

ಮಳೆಗಾಲದಲ್ಲಿ ಕೆಲಸವಿಲ್ಲದೆ ಮನೆಯಲ್ಲಿರುವ ಮೀನುಗಾರರಿಗೆ ರಾಜ್ಯ ಸರ್ಕಾರ ಪ್ರೋತ್ಸಾಹ ಧನ ನೀಡುವ ಹಾಗೆ ಕಾರ್ಮಿಕರಿಗೂ ಪ್ರೋತ್ಸಾಹ ಧನ ನೀಡುವ ಬಗ್ಗೆ ಕಾರ್ಮಿಕ ಸಚಿವರು ಹಾಗೂ ಮುಖ್ಯಮಂತ್ರಿಗಳ ಜೊತೆ ಚರ್ಚಿಸುವುದಾಗಿ ಹೇಳಿದರು.

ವಾಹನ ದಟ್ಟಣೆ ನಿವಾರಣೆಗೆ ಜನರ ಆಗ್ರಹ



- ಮಹಾಗಣಪತಿ, ಮಹಾಬಲೇಶ್ವರ ಮಂದಿರದಲ್ಲಿ ದೇವರ ದರ್ಶನಕ್ಕೆ ಸರತಿ ಸಾಲು
- ಪೊಲೀಸ್ ಹಾಗೂ ಗೃಹರಕ್ಷಕ ಸಿಬ್ಬಂದಿ ಹರಸಾಹಸ

ಗೋಕರ್ಣ: ಬಿರು ಬಿಸಿಲನ್ನು ಲೆಕ್ಕಿಸದೆ ಸರಣಿ ರಜೆಯ ಪ್ರಯುಕ್ತ ಶುಕ್ರವಾರದಿಂದಲೇ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದಾರೆ.

ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾಗಿರುವುದರಿಂದ ಕುಟುಂಬ ಸಮೇತರಾಗಿ ಇಲ್ಲಿನ ಪ್ರಮುಖ ದೇವಾಲಯಗಳಿಗೆ ಭೇಟಿ ನೀಡಿದ್ದು, ಮಹಾಗಣಪತಿ, ಮಹಾಬಲೇಶ್ವರ ಮಂದಿರದಲ್ಲಿ ದೇವರ ದರ್ಶನಕ್ಕೆ ಸರತಿ ಸಾಲು ನೆರೆದಿದೆ. ಭಕ್ತರಿಗೆ ಅಚ್ಚುಕಟ್ಟಿನ ವ್ಯವಸ್ಥೆಗೆ ದೇವಾಲಯದ ಸಿಬ್ಬಂದಿಗಳು ಶ್ರಮಿಸುತ್ತಿದ್ದಾರೆ.

ವಾರಾಂತ್ಯದ ರಜೆಗೆ ಬರುವ ಯುವ ಉದ್ಯೋಗಿಗಳು, ವಿದ್ಯಾರ್ಥಿಗಳು ಇಲ್ಲಿನ ಓಂ. ಕುಡ್ಲೆ, ಮುಖ್ಯಕಡಲತೀರ, ದುಬ್ಬನಸಶಿ ಭಾಗದ ಕಡಲತೀರದ ಹೊಟೇಲ್, ರೆಸಾರ್ಟಗಳಲ್ಲಿ ಉಳಿದ್ದು, ಸಮುದ್ರಕ್ಕಿಳಿದು ಆಟವಾಡುತ್ತಾ ಮೋಜು ಮಸ್ತಿ ಜೋರಾಗಿದೆ. ಇದರಂತೆ ಮುಖ್ಯಕಡಲತೀರದಲ್ಲಿ ಸಹ ಮಕ್ಕಳೊಂದಿಗೆ ಪಾಲಕರು ಸಂಜೆ ವೇಳೆ ವಿಹರಿಸುತ್ತಾ ನೀರಿನಲ್ಲಿ ಆಟವಾಡುತ್ತಾ ರಜೆಯ ಮೋಜು ಜೋರಾಗಿ ನಡೆಸಿದ್ದಾರೆ. ಇವರನ್ನೆಲ್ಲಾ ನಿಗಾವಹಿಸಿ ನಿಯಂತ್ರಿಸಲು ಜೀವರಕ್ಷಕ ಸಿಬ್ಬಂದಿ ಶ್ರಮಿಸುತ್ತಿದ್ದಾರೆ.

ಸಂಚಾರ ವ್ಯವಸ್ಥೆ ಅಸ್ತವ್ಯಸ್ಥ: ಅಧಿಕ ಸಂಖ್ಯೆಯಲ್ಲಿ ಜನರು ಬರುವಾಗ ಉಂಟಾಗುವ ವಾಹನ ದಟ್ಟಣೆ ಸಮಸ್ಯೆ ಮುಂದುವರಿದಿದೆ. ಅಂಗಡಿಗಳ ಮುಂದೆ ವಾಹನ ನಿಲ್ಲಿಸಿ ವ್ಯಾಪಾರ ನಡೆಸುವುದು, ವಾಹನ ಎಲ್ಲೆಂದರಲ್ಲಿ ನಿಲ್ಲಿಸುವುದು ಮಾಡುತ್ತಿದ್ದು, ಇದರಿಂದ ಪಾದಚಾರಿಗಳು ಓಡಾಡಲು ಪರದಾಡುವಂತಾಗಿದೆ. ವಾರಂತ್ಯದ ರಜೆ ಹಾಗೂ ಸರಣಿ ರಜೆ ಬಂದಾಗ ಮಹಾಬಲೇಶ್ವರ ಮಂದಿರದ ಮೂಲಕ ಮುಖ್ಯಕಡಲತೀರಕ್ಕೆ ಸಾಗುವ ಇಕ್ಕಟ್ಟಾದ ಮಾರ್ಗದಲ್ಲಿ ವಾಹನ ಸಂಚಾರ ನಿಷೇಧಿಸಬೇಕು ಎಂದು ಜನರು ಈ ಹಿಂದಿನಿಂದಲೂ ಅಗ್ರಹಿಸುತ್ತಿದ್ದು, ಆದರೆ ಇದುವರೆಗೂ ಈ ನಿಯಮ ಜಾರಿಗೊಳಿಸದ ಪರಿಣಾಮ ದೇವಾಲಯದ ಮುಂದೆಯೇ ವಾಹನ ನಿಲ್ಲಿಸುತ್ತಾ ಸಂಚಾರಕ್ಕೆ ತೊಡಕು ಮಾಡುವುದು ಮುಂದುವರಿದಿದೆ. ವಾಹನ ನಿಲ್ಲಿಸದಂತೆ ಪೊಲೀಸರು ಪ್ರವಾಸಿಗರಿಗೆ ತಿಳುವಳಿಕೆ ನೀಡಿದರೆ ಅಲ್ಲೆ ವಾದಕ್ಕಿಳಿದು ರಂಪಾಟ ನಡೆಸುತ್ತಾರೆ. ವಾಹನ ದಟ್ಟಣೆ ನಿಯಂತ್ರಿಸಲು ಪೊಲೀಸ್ ಹಾಗೂ ಗೃಹರಕ್ಷಕ ಸಿಬ್ಬಂದಿ ಹೈರಾಣಾಗುತ್ತಿದ್ದಾರೆ.

ವಾಡಬೊಗ್ರಿಯ ಸುಕ್ರು, ಸಣಕೂಸ ಗೌಡರಿಗೆ ಸನ್ಮಾನ



ಅಂಕೋಲಾ: ಸಾವಿರಾರು ಗಿಡಗಳಿಗೆ ಕಸಿಕಟ್ಟುವ ಕಾಯಕದಿಂದ ಗಿಡ ಮರಗಳು ಹೆಚ್ಚಲು ಕೊಡುಗೆ ನೀಡುತ್ತಿರುವ ಕಾಯಕಯೋಗಿ ವಾಡಿಬೊಗ್ರಿಯ ಸುಕ್ರು ಸಣಕೂಸ ಗೌಡ ಅವರಿಗೆ ಕಾರ್ಮಿಕರ ದಿನಾಚರಣೆಯ ಪ್ರಯುಕ್ತ ದಿನಕರ ವೇದಿಕೆಯ ವತಿಯಿಂದ ಕೇಣಿಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿದ ಸುಕ್ರು ಗೌಡ ಮಾತನಾಡಿ, ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಸನ್ಮಾನ ನೀಡಿರುವುದು ಸಂತಸ ತಂದಿದೆ ಎಂದರು.ಅಧ್ಯಕ್ಷತೆ ವಹಿಸಿದ್ದ ದಿನಕರ ವೇದಿಕೆಯ ಅಧ್ಯಕ್ಷ ರವೀಂದ್ರ ಕೇಣಿ ಮಾತನಾಡಿ, ಕಸಿ ಕಟ್ಟುವ ಕಲೆ ಸುಕ್ರು ಗೌಡ ಅವರಿಗೆ ಕರಗತವಾಗಿದ್ದು, ಇದರಿಂದ ಪರಿಸರ ಸಂರಕ್ಷಣೆಗೂ ಕೊಡುಗೆ ನೀಡಿದಂತಾಗುತ್ತದೆ ಸದಾ ಕಾಯಕದಲ್ಲೇ ತೊಡಗಿಕೊಂಡಿರುವ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ಸುಕ್ರು ಗೌಡ ಎಲ್ಲರಿಗೂ ಮಾದರಿಯಾಗಿದ್ದು, ಕಾರ್ಮಿಕರ ದಿನಾಚರಣೆಯ ಸಂದರ್ಭದಲ್ಲಿ ಗೌರವಿಸಲು ಹೆಮ್ಮೆಯಾಗುತ್ತಿದೆ ಎಂದರು. ದಿನಕರ ವೇದಿಕೆಯ ಪದಾಧಿಕಾರಿಗಳಾದ ಎಂ.ಎಂ.ಕರ್ಕಿಕರ, ವಸಂತ ನಾಯ್ಕ, ಶೀಲಾ ಬಂಟ,ಸಾತು ಗೌಡ, ಅರ್ಚನಾ ನಾಯ್ಕ,ಸುಜನ ಕೇಣಿ ಉಪಸ್ಥಿತರಿದ್ದರು. ವೇದಿಕೆಯ ಕಾರ್ಯದರ್ಶಿ ಸಂದೇಶ ಉಳ್ಳಿಕಾತಿ ಸ್ವಾಗತಿಸಿದರು, ಮಹಾಂತೇಶ ರೇವಡಿ ಸನ್ಮಾನ ಪತ್ರ ವಾಚಿಸಿದರು, ಸಂತೋಷ ನಾಯಕ ವಂದಿಸಿದರು.



ಶಿರಸಿ: ಗ್ರಾಮೀಣ ಪ್ರದೇಶದ ಯುವಕರು ಹೊಸ ತಂತ್ರಜ್ಞಾನದಲ್ಲಿ ಸಾಧನೆ ಮಾಡಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಗಮನಾರ್ಹವಾಗಿದ್ದು, ಉದ್ಯಮ ಕ್ಷೇತ್ರದಲ್ಲಿ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತವಾಗಿದೆ.

'ಭಾವಗಳ ಬ್ರಹ್ಮಾಂಡ' ಕೃತಿ ಲೋಕಾರ್ಪಣೆ

ಯಲ್ಲಾಪುರ: ಅನೇಕ ಸಾಹಿತಿಗಳಿಗೆ ಜನ್ಮಕೊಟ್ಟ ನಮ್ಮ ತಾಲೂಕಿನಲ್ಲಿ ಸಾಹಿತಿಗಳಿಗೆ ಕೊರತೆಯಿಲ್ಲಾ ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ಅವರು ಶುಕ್ರವಾರ ಸಂಜೆ ಪಟ್ಟಣದ ಅಡಿಕೆ ಭವನದಲ್ಲಿ ಪ್ರಣವ ಪ್ರತಿಷ್ಠಾನ ಹಂಡ್ರಮನೆ, ಸಹ್ಯಾದ್ರಿ ಸಂಚಯ ಟ್ರಸ್ಟ ಮಂಗಳೂರು ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಭಾವಗಳ ಬ್ರಹ್ಮಾಂಡ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಹಿತಿ ದಿ.ನಾಸುಭರತನಹಳ್ಳಿ ಮೊಟ್ಟ ಮೊದಲು ಯಲ್ಲಾಪುರಕ್ಕೆ ಸಾಹಿತಿಗಳನ್ನು ಪರಿಚಯಿಸಿದವರಾಗಿದ್ದಾರೆ. ಅದೇ ಪ್ರದೇಶದ ಯುವಕ ಶ್ರೀಕಾಂತ ನಾಯ್ಕ್ ಅವರ ಕವನ ಸಂಕಲನ ಬಿಡುಗಡೆಯಾಗುತ್ತಿರುವದು ಸಂತೋಷದ ವಿಷಯ ಎಂದರಲ್ಲದೆ ನಮ್ಮ ದೇಶ ಇಷ್ಟೊಂದು ಕೈಗಾರಿಕಾಯಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎಂದರೆ ಅದಕ್ಕೆ ಕಾರ್ಮಿಕರ ಶ್ರಮವೂ ಕಾರಣ ಎಂದು ಕಾರ್ಮಿಕರ ದಿನದ ಶುಭಾಶಯಗಳನ್ನು ತಿಳಿಸಿದರು. ಸಹ್ಯಾದ್ರಿ ಸಂಚಯದ ಸಂಚಾಲಕ ದಿನೇಶಹೊಳ್ಳ ಕೃತಿ ಲೋಕಾರ್ಪಣೆಗೊಳಿಸಿದರು. ಪ್ರಣವ ಪ್ರತಿಷ್ಠಾನದ ಅಧ್ಯಕ್ಷ ಗೋಪಾಲ ಕೃಷ್ಣಭಟ್ಟ ಹಂಡ್ರಮನೆ ಅಧ್ಯಕ್ಷತೆವಹಿಸಿದ್ದರು.



ಸಂಕಲ್ಪ ಅಧ್ಯಕ್ಷ ಪ್ರಮೋದ ಹೆಗಡೆ ಕೃತಿ ಪರಿಚಯಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಆರ್ಡಿಜನಾರ್ಧನ, ಕೃತಿಕಾರ ಶ್ರೀಕಾಂತಾ ನಾಯ್ಕ್, ನಾಮಧಾರಿ ಸಂಘದ ಅಧ್ಯಕ್ಷ ನರಸಿಂಹ ನಾಯ್ಕ್, ಕಸಾಪ ನಿಕಟ ಪೂರ್ವ ಅಧ್ಯಕ್ಷ ವೇಣುಗೋಪಾಲ ಮದ್ಗುಣಿ, ತಾಲೂಕಾ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ಟ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಿನಾಯಕ ನಾಯ್ಕ ಅವರ ಶಿಷ್ಯರಿಂದ ಯಕ್ಷಗಾನ, ನಾಟ್ಯ ನಿಕೇತನ ಉಮ್ಮಚಗಿ ಅವರಿಂದ ಭರತನಾಟ್ಯ ಹಾಗೂ ಕವಿಗೊಷ್ಠಿ ನಡೆಯಿತು. ನಿವೃತ್ತ ಶಿಕ್ಷಕಿ, ಸಾಹಿತಿ ಯಮುನಾ ನಾಯ್ಕ ಪ್ರಸ್ತಾವಿಕಗೈದರು.ಅನುಷಾ ಪ್ರಾರ್ಥಿಸಿದರು. ರಾಘವೇಂದ್ರ ನಾಯ್ಕ ಸ್ವಾಗತಿಸಿದರು. ನಟರಾಜಗೌಡ ನಿರ್ವಹಿಸಿದರು.

ಕ್ರಷರ್ ನಿಲ್ಲಿಸುವಂತೆ ಒತ್ತಾಯ

ಅಂಕೋಲಾ: ತಾಲೂಕಿನ ಅಲಗೇರಿ ಗ್ರಾಪಂ ವ್ಯಾಪ್ತಿಯ ಬಾಳೆಗುಳಿಯ ಜನವಸತಿ ಪ್ರದೇಶದ ಸಮೀಪದಲ್ಲೇ ಕಾರ್ಯನಿರ್ವಹಿಸುತ್ತಿರುವ ಬೃಹತ್ ಕ್ರಷರ್‌ನಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದ್ದು, ಅದನ್ನು ಕೂಡಲೇ ನಿಲ್ಲಿಸುವಂತೆ ಸುತ್ತ ಮುತ್ತಲಿನ ಗ್ರಾಮಸ್ಥರು ಅಲಗೇರಿ ಗ್ರಾಪಂಗೆ ಮನವಿ ಮಾಡಿದ್ದಾರೆ.

ಹಿಂದುಳಿದ ವರ್ಗಗಳ ಕೂಲಿ ಕಾರ್ಮಿಕರ ಸಂಘ ಹಿಚ್ಕಡ ಗ್ರೂಫ್ ಸಂಘದ ಜಾಗದಲ್ಲಿ ಕೃಷರ್ ಕಾರ್ಯನಿರ್ವಹಿಸುತ್ತಿದ್ದು, ಗುಡ್ಡದ ಕಲ್ಲುಗಳನ್ನು ತಂದು ಕ್ರಷರ್ ಯಂತ್ರಕ್ಕೆ ಹಾಕಿ ಜಲ್ಲಿ ಮತ್ತು ಪುಡಿ ಮಾಡಿ ಮಾರಾಟ ಮಾಡಲಾಗುತ್ತಿದೆ

ಕ್ರಷರ್‌ನಿಂದ ಏಳುವ ದೂಳು ಗಾಳಿಯಲ್ಲಿ ವ್ಯಾಪಿಸಿ ಜನವಸತಿ ಪ್ರದೇಶದ ಮನೆಗಳಿಗೆ ಬಾವಿಯ ನೀರಿಗೆ ಸೇರಿ ಮಾಲಿನ್ಯಕ್ಕೆ ಕಾರಣವಾಗಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ.

ಹಿರಿಯ ನಾಗರಿಕರು, ಮಕ್ಕಳು, ಶಾಲಾ ವಿದ್ಯಾರ್ಥಿಗಳು ಕೃಷರ್ ದೂಳಿನಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ.



ಕೃಷರ್ ಜನವಸತಿ ಪ್ರದೇಶಕ್ಕೆ ಸಮೀಪದಲ್ಲಿದ್ದು, ಸಾರ್ವಜನಿಕ ರಸ್ತೆ, ರೈಲ್ವೆ ಮಾರ್ಗಗಳ ಅಂಚಿನಲ್ಲಿದೆ ಇದು ಕಾನೂನು ಬಾಹಿರವಾಗಿದ್ದು, ನಿಯಮಗಳನ್ನು ಗಾಳಿಗೆ ತೂರಿ ಕ್ರಷರ್ ನಡೆಸಲು ಅನುಮತಿ ನೀಡಿದಂತಿದೆ ಅಥವಾ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವಂತಿದೆ ಎಂದು ಮನವಿಯಲ್ಲಿ ಹೇಳಲಾಗಿದ್ದು, ಗ್ರಾಮಸ್ಥರ ಆರೋಗ್ಯದ ದೃಷ್ಟಿಯಿಂದ ಈ ಕುರಿತಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಕ್ರಷರ್ ನಡೆಸಲು ಯಾವುದಾದರೂ ಅನುಮತಿ ನೀಡಿದಿದ್ದರೆ ಅದನ್ನು ಕೂಡಲೇ ರದ್ದುಪಡಿಸಬೇಕು ಇಲ್ಲದಿದ್ದರೆ ಬಾಳೇಗುಳಿ, ಶಿರಕುಳಿ, ಬೊಗ್ರಿಬೈಲ ಭಾಗದ ಜನತೆ ಹೋರಾಟಕ್ಕಿಳಿದು

ರಸ್ತೆತಡೆ, ಗ್ರಾಪಂ ಮುತ್ತಿಗೆ ಅನಿವಾರ್ಯವಾದರೆ ಕೃಷರ್ ಎದುರು ಧರಣಿ ಸತ್ಯಾಗ್ರಹ ನಡೆಸುವುದಾಗಿ ಮನವಿ ಮೂಲಕ ಎಚ್ಚರಿಸಲಾಗಿದೆ.

ಸಣ್ಣಮ್ಮ ಬೊಮ್ಮಯ್ಯ, ಪರಿವಾರ ದೇವರ ಬಂಡಿಹಬ್ಬ

ಇಂದು ಬಂಡಿಹಬ್ಬ, ನಾಳೆ ಕಿರು ಬಂಡಿಹಬ್ಬ

ಅಂಕೋಲಾ: ಗ್ರಾಮ ದೇವ ಅಲಗೇರಿಯ ಶಂಕ ಚಕ್ರ ಪದ್ಮಾ ಗದ್ದಾರೂಢಿಯಾಗಿ ಭಕ್ತರ ಆರಾಧ್ಯ ದೈವವಾಗಿರುವ ಶ್ರೀ ಸಣ್ಣಮ್ಮ ಬೊಮ್ಮಯ್ಯ ಹಾಗೂಪರಿವಾರದೇವರ ಬಂಡಿಹಬ್ಬದ ವಿಧಿ ವಿಧಾನಗಳು ಸಾಂಗವಾಗಿ ನೆರವೇರುತ್ತಿದ್ದು, ಆವಾರಿ, ಶಾಶೆ ಹಾಕುವುದು ಮತ್ತು ಶ್ರೀ ದೇವರು ಕರೆತರುವ ಕಾರ್ಯಕ್ರಮ ಅತಿ ವಿಜೃಂಭಣೆಯಿಂದ ನೆರವೇರಿತು.

ಅಂಕೋಲಾ ತಾಲೂಕಿನ ಶಾಂತಾದುರ್ಗಾ ದೇವಿಯ ತಂಗಿ ಎಂದೇ ಕರೆಯುವ ಶ್ರೀ ಸಣ್ಣಮ್ಮ ದೇವರು ಶ್ರೀ ಶಾಂತಾದುರ್ಗಾ ದೇವಿಯ ಮೂಲ ಸ್ಥಾನವಾದ ಶಿರಕುಳಿಯ ಕಾನದೇವಸ್ಥಾನದ ಹಳ್ಳದ ಸಮೀಪ ಬಂದು ಕುರುಮಂಡಿ ಊರಿ ಅಕ್ಕನಾದ ಶ್ರೀ ಶಾಂತಾದುರ್ಗಾ ದೇವಿಯನ್ನು ಕರೆಯುವ ಕಾರ್ಯಕ್ರಮ ಅನಾದಿಕಾಲದಿಂದ



ನಡೆದು ಬಂದಿರುತ್ತದೆ. ಶ್ರೀ ದೇವರು ಕರೆಯುವಕಾರ್ಯಕ್ರಮಕ್ಕೆಸಹಸ್ರಾರು ಜನರು ಕಾರಣೀಭೂತರಾಗಿದ್ದು, ನೆರೆದ ಸಹಸ್ರಾರು ಜನರಲ್ಲಿ ಮೈರೋಮಾಂಚನವಾಗಿದ್ದು, ಜನರ ಹರ್ಷೋದ್ಗಾರ ನೆರವೇರಿತು.

ತದನಂತರ ಅಲಗೇರಿಯ ಮುಖ್ಯ ರಸ್ತೆಯಾದ ಶ್ರೀ ಈಶ್ವರ ದೇವಸ್ಥಾನದವರೆಗೂ ತಲುಪಿ ರಸ್ತೆ ಉದ್ದಕ್ಕೂ ಜನರು ಆರತಿ ಕೊಟ್ಟು ಶ್ರೀ ದೇವರನ್ನು ಸ್ಮರಿಸಿದರು. ತದನಂತರ ಶ್ರೀ ಸಣ್ಣಮ್ಮ ಬೊಮ್ಮಯ್ಯ ದೇವಸ್ಥಾನದವರೆಗೂ ತಲುಪಿ ಆಡುಕಟ್ಟೆಯ ಹಗರಣ ಕಾರ್ಯಕ್ರಮ ನಡೆಸುವುದರೊಂದಿಗೆ ಶ್ರೀ ದೇವರು ಕರೆ ತರುವ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿತು. ಅದರಂತೆ ಮೇ 2 ಶನಿವಾರ ಬಂಡಿಹಬ್ಬ, ಮೇ 3 ಭಾನುವಾರ ಕಿರು ಬಂಡಿಹಬ್ಬವಿದ್ದು ಭಕ್ತಾಧಿಗಳು, ಕುಳಾವಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾಗಬೇಕಾಗಿ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಮಿರಾಶಿದಾರರು, ಅರ್ಚಕ ಕುಟುಂಬದವರು ತಿಳಿಸಿದ್ದಾರೆ.

ಮಹಾಕಾಳಿ ದೇವಿ ಬಂಡಿಹಬ್ಬ ಸಂಪನ್ನ



ಹೊನ್ನಾವರ: ಪಟ್ಟಣದ ಸ್ವರ್ಣಪೂರಾಧಿಶ್ವರಿ ಮಹಾಕಾಳಿ (ಮಂಕಾಳಮ್ಮ) ದೇವಿಯ ವಾರ್ಷಿಕ ಬಂಡಿ ಹಬ್ಬವು ವಿಜೃಂಭಣೆಯಿಂದ ಸಂಪನ್ನ ಗೊಂಡಿತು. 9 ದಿನಗಳವರೆಗೆ ದೇವಸ್ಥಾನದ ಧರ್ಮದರ್ಶಿ ರಾಜು ಭಂಡಾರಿ ಯವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳಿಂದ ಕಾರ್ಯಕ್ರಮ ನಡೆಯಿತು.

ಪಂಚಮಿಗೆ ಕಳಶವು ಕಳಶ ಕಟ್ಟೆಗೆ ಬಂದು ನಂತರದಲ್ಲಿ ಕಳಶವು ನಗರ ಸಂಚಾರ ಮಾಡುವುದು ಮತ್ತು ಮಾರಿಯಮ್ಮ ಮೂರ್ತಿಯು ಕಟ್ಟೆಗೆ ಬಂದ ನಂತರ ಅಲ್ಲಿಯೇ ತಾಯಿಗೆ ಉಡಿ ಸಮರ್ಪಿಸುವುದು ನಡೆಯಿತು. ಕೊನೆಯ ಎರಡು ದಿನ 9 ದಿನಗಳಿಂದ ವ್ರತಾನುಷ್ಟ ಕಟ್ಟಿಗೆದಾರರಿಂದ ಕೆಂಡ ಸೇವೆ ನಡೆಯಿತು. ನೂರಾರು ಜನ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ಈ ಧಾರ್ಮಿಕ ಕಾರ್ಯದಲ್ಲಿ ಮೋಹನ, ಸುರೇಶ, ಅಕ್ಷಯ, ದಯಾನಂದ, ಮೋಹನ ಭಟ್, ನಂದು ಭಟ್, ಸಾಯಿನಾಥ್, ಸಚಿನ್, ಪ್ರಶಾಂತ್ ಮಡಿವಾಳ್, ಗಣಪತಿ ಅಂಬಿಗ ಇತರರು ಪಾಲ್ಗೊಂಡಿದ್ದರು.

ಭಗವಾನ್ ಬುದ್ಧರ ತತ್ವಾದರ್ಶ ಅಳವಡಿಸಿಕೊಳ್ಳಿ

ಮುಂಡಗೋಡ: ಜಗತ್ತಿಗೆ ಬೌದ್ಧ ಧರ್ಮವನ್ನು ಪ್ರಚಾರ ಪಡಿಸಿದ ಭಗವಾನ ಬುದ್ಧ ಅವರನ್ನು ಏಷಿಯಾದ ಬೆಳಕು ಎಂದು ಕರೆಯಲಾಗುತ್ತದೆ ಎಂದು ಮುಂಡಗೋಡ ತಹಶೀಲ್ದಾರ್ ಶಂಕರ ಗೌಡಿ ಹೇಳಿದರು.

ಅವರು ಶುಕ್ರವಾರ ಇಲ್ಲಿಯ ಮಿನಿ ವಿಧಾನಸೌದ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಭಗವಾನ್ ಬುದ್ಧ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಸಾಕಷ್ಟು ಧರ್ಮಗಳ ಬಗ್ಗೆ ತಪ್ಪು ಕಲ್ಪನೆ ಹಾಗೂ ಸಮಾಜದಲ್ಲಿ ಹಲವು ದೋಷಗಳು ನಿರ್ಮಾಣವಾಗಿದ್ದ 6ನೇ ಶತಮಾನದಲ್ಲಿ ಭಗವಾನ ಬುದ್ಧ ಹಾಗೂ ಮಹಾವೀರರು ಪ್ರಭಾವ ಬೀರಿದವರು. ಚೀನಾ, ಜಪಾನ್ ಸೇರಿದಂತೆ ಜಗತ್ತಿನ ಹಲವು ರಾಷ್ಟಗಳಲ್ಲಿ ಬೌದ್ಧ ಧರ್ಮದ ಪ್ರಭಾವವಿದೆ. ಕೋಟ್ಯಂತರ ಜನ ಬೌದ್ಧ ಧರ್ಮದ ಅನುಯಾಯಿಗಳಿದ್ದಾರೆ. ಮುಂಡಗೋಡದಲ್ಲಿ ಬೌದ್ಧ ಧರ್ಮ ಅನುಯಾಯಿಗಳಾದ ಟಿಬೇಟಿಯನ್ನರು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಇಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸುಮಾ ಮಾತನಾಡಿ, ಭಗವಾನ ಬುದ್ಧ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಲ್ಲದೇ ನಮ್ಮ



ಮಕ್ಕಳಿಗೂ ಈ ಬಗ್ಗೆ ತಿಳಿಸಬೇಕಿದೆ. ಜೀವನವೇ ನಶ್ವರ ಎಂಬುವಯದನ್ನು ಅರಿತು ಆಸೆ ಬಿಡಲಾಗದಿದ್ದರೂ ಕನಿಷ್ಠ ದುರಾಸೆಯನ್ನಾದರೂ ಬಿಟ್ಟು ಬದುಕಿದರೆ ಮನ ಶಾಂತಿ ನೆಮ್ಮದಿಯಿಂದ ಬದುಕಬಹುದು ಎಂದರು.

ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ವಾಯ್ ದಾಸನಕೊಪ್ಪ, ಪಪಂ ಮುಖ್ಯಾಧಿಕಾರಿ ಸಂತೋಷಕುಮಾರ ಹಾಲಕಲ್ಲಾಪುರ, ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ಕರಿಯಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಸ್.ಫಕ್ಕೀರಪ್ಪ, ಸಮತಾ ಸೈನಿಕ ದಳ ಮುಖ್ಯಸ್ಥ ಅಶೋಕ ಚವಾದಿ, ಲೋಕೋಪಯೋಗಿ ಇಲಾಖೆ ಅಧಿಕಾರಿ ಮಹಾದೇವಪ್ಪ ಹ್ಯಾಟಿ, ರಾಘವೇಂದ್ರ ಟಪಾದವರ, ಅರುಣ ಗೊಂದಳೆ, ಎಮ್.ಪಿ ಕುಸೂರ, ಸಲೀಂ ಭಗವಾನ್ ಬುದ್ಧರ ಬಗ್ಗೆ ಉಪನ್ಯಾಸ ನೀಡಿದರು. ಟಿಬೇಟಿಯನ್ ಧರ್ಮ ಗುರುಗಳು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಅಶೋಕ ಶಂಕ್ರಿಕೊಪ್ಪ ಸ್ವಾಗತಿಸಿದರು. ರುದ್ರಮುನಿ ಬಿ.ಎ ನಿರೂಪಿಸಿದರು.

ಕಿರುಸುದ್ದಿ

ನಿವೃತ್ತಿ: ಶಿಕ್ಷಕ ಗೌಡರಗೆ ಸನ್ಮಾನ



ರಾಣೇಬೆನ್ನೂರ: ತಾಲೂಕಿನ ಹಿರೇಮಾಗನೂರ ಗ್ರಾಮದ ಸರ್ವಮಂಗಳಮ್ಮ ಮಾಗನೂರ ಬಸಪ್ಪ ಸರ್ಕಾರಿ ಪ್ರೌಢಶಾಲೆಯ ಇಂಗ್ಲಿಷ್ ಶಿಕ್ಷಕರಾದ ಕೆಎಸ್ ಗೌಡರ ಇವರು ವಯೋ ನಿವೃತ್ತಿ ಹೊಂದಿದ ಪ್ರಯುಕ್ತ ಎಸ್‌ಡಿಎಂಸಿ ಪರವಾಗಿ ಸನ್ಮಾನಿಸಲಾಯಿತು. ಕೆಸಿಸಿ ಬ್ಯಾಂಕ್ ಲಿ ಧಾರವಾಡ ಇದರ ನಿರ್ದೇಶಕರಾದ ಮಳ್ಳಪ್ಪ ನಿಂಗಜ್ಜನವರ ಎಸ್‌ಡಿಎಂಸಿ ಅಧ್ಯಕ್ಷ ಮಹೇಶಪ್ಪ ಶಿರಗೇರಿ, ಮುಖ್ಯೋಪಾಧ್ಯಾಯ ವಿಜಯಮ್ಮ ಪಾಟೀಲ, ಸೂರ್ಯಕಾಂತ ಆಡಿನವರ, ಜಗದೀಶಗೌಡ ಪಾಟೀಲ್, ಶಿಕ್ಷಕರಾದ ಯಾಸ್ಮೀನ್, ಕೆ.ಎಸ್.ಗೌಡರ, ವೀಣಾ ಗೌಡರ, ಉಮಾ ಅಂದಾನಪ್ಪನವರ, ನೀಲಮ್ಮ, ಪ್ರಶಾಂತ ಉಕ್ಕುಂದ, ಮನೋಜ್ ನಿತೀಶ್ ಸೇರಿದಂತೆ ಮತ್ತಿತರರು ಇದ್ದರು.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ತರಬೇತಿ ಸಂಸ್ಥೆಯಲ್ಲಿ ಗ್ರಾಮೀಣ ಭಾಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮೇ ಮಾಹೆಯಲ್ಲಿ ಮೊಬೈಲ್ ರಿಪೇರಿ ಮತ್ತು ಸರ್ವಿಸ್ ಉಚಿತ ತರಬೇತಿ ಆಯೋಜಿಸಿದೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18 ರಿಂದ 45 ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ನಿರುದ್ಯೋಗಿಗಳಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದಾರೆ.

ಚುನಾವಣಾ ಪ್ರಕ್ರಿಯೆ ಆರಂಭ



ಹಾನಗಲ್ಲ: ಹಾನಗಲ್ಲ ಪ್ರತಿಷ್ಠಿತ ಜನತಾ ಶಿಕ್ಷಣ ಸೌಹಾರ್ದ ಸಂಸ್ಥೆಯ ಆಡಳಿತ ಮಂಡಳಿಗೆ ಚುನಾವಣೆ ಪ್ರಕ್ರಿಯೆ ಶುರುವಾಗಿದ್ದು ಈ ಸಂಸ್ಥೆಯ ಹಿಂದಿನ ಆಡಳಿತ ಮಂಡಳಿಯ ದುರುದ್ದೇಶದಿಂದ ರದ್ದುಗೊಂಡಿದ್ದ 1019 ಸದಸ್ಯರು ಮರು ಸ್ಥಾಪನೆಗೊಳ್ಳುವ ಭರವಸೆ ಇದೆ ಎಂದು ಈ ಸಂಸ್ಥೆಯ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ನಿವೃತ್ತ ಪ್ರಾಚಾರ್ಯರು ಸಿ. ಮಂಜುನಾಥ ಹೇಳಿದ್ದಾರೆ ಶುಕ್ರವಾರ ಮಧ್ಯಾಹ್ನ ಹಾನಗಲ್ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಏ.28ರಿಂದ ಚುನಾವಣೆ ಪ್ರಕ್ರಿಯೆ ಆರಂಭಗೊಂಡಿದ್ದು 45 ದಿನ ಒಳಗಾಗಿ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿವೆ . ಈ ಹಿಂದೆ ರದ್ದುಗೊಂಡಿದ್ದ 1019 ಸದಸ್ಯರನ್ನು ಮರು ನೇಮಕ ಸೇರಿ ಹಳೆ ಸದಸ್ಯರನ್ನು ಒಳಗೊಂಡು ಸದ್ಯ 1178 ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ.ಏ.28ರಂದು ಈ ಬಗ್ಗೆ ಆದೇಶವಾಗಿದೆ ಸದಸ್ಯರೆಯಾದಿನ್ನು ಶಿಕ್ಷಣ ಸಂಸ್ಥೆಯ ಕಚೇರಿ ನಾಮಫಲಕದಲ್ಲಿ ಪ್ರದರ್ಶಿಸಲಾಗಿದೆ ಎಂದು ಹೇಳಿದರು. ಹೈಕೋರ್ಟ್ ಆದೇಶ ಅನ್ವಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ಆದೇಶ ನೀಡಿದ್ದರಿಂದ ಹೊಸ ಸದಸ್ಯರೊಂದಿಗೆ ಈಗ ರದ್ದುಗೊಂಡಿದ್ದ ಸದಸ್ಯರು ಕೂಡ ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಪಡೆದಿದ್ದಾರೆ ಎಂದು ಸಿ.ಮಂಜುನಾಥ್ ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಣ ಪ್ರೇಮಿಗಳಾದ ಎನ್.ಬಿ.ಬಣಕಾರ್ .ಎನ್ ಬಿ. ಪೂಜಾರ್. ಬಿ ಐ ಹುನಗುಂದ, ವಿನಯ್ ಬಂಕನಾಳ, ಎಚ್‌ಎನ್ ಪಾಟೀಲ್ ಇತರರು ಇದ್ದರು.

ಗಿರೀಶ ವಡ್ಡಿಗೇರಿ ನಿಧನ



ನರಗುಂದ: ಪಟ್ಟಣದ ಕಸಬಾ ನಿವಾಸಿ ಗಿರೀಶ ಕರವೀರಪ್ಪ(ಬಾಬಣ್ಣ) ವಡ್ಡಿಗೇರಿ (36) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಹಾವೇರಿ : ಇಲ್ಲಿನ ಜಿಲ್ಲಾ ಬಿಜೆಪಿಯ ನೂತನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ನೀಲಪ್ಪ ಚಾವಡಿ ಅವರನ್ನು ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ-ಗದಗ ಲೋಕಸಭಾ ಸದಸ್ಯರಾದ ಬಸವರಾಜ ಬೊಮ್ಮಾಯಿ ಅವರು ತಮ್ಮ ಹುಬ್ಬಳ್ಳಿಯ ನಿವಾಸದಲ್ಲಿ ಸನ್ಮಾನಿಸಿ ಶುಭ ಕೋರಿದರು. ಲಿಡ್ಕರ್ ನಿಗಮದ ಮಾಜಿ ಉಪಾಧ್ಯಕ್ಷ ಡಿ.ಎಸ್. ಮಾಳಗಿ, ಓಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಮಂಜುನಾಥ ಮಡಿವಾಳರ, ಜಿಪಂ ಮಾಜಿ ಸದಸ್ಯರಾದ ಶಶಿ ಹೊನ್ನಣ್ಣನವರ ಉಪಸ್ಥಿತರಿದ್ದರು.

ಮಾಲತೇಶ ದೇವರ ಮಹಾರಥೋತ್ಸವ

ಹಾನಗಲ್ಲ: ತಾಲೂಕಿನ ಆಡೂರು ಗ್ರಾಮದಲ್ಲಿ ಮಾಲತೇಶ ದೇವರ ಮಹಾರಥೋತ್ಸವ ಸಾವಿರಾರು ಸದ್ಭಕ್ತರ ಹರ್ಷೋದ್ಗಾರದ ಮಧ್ಯೆ ಸಂಭ್ರಮ, ಸಡಗರದಿಂದ ನೆರವೇರಿತು. ಬೆಳಗ್ಗೆ ಮಾಲತೇಶ ದೇವರಿಗೆ ರುದ್ರಾಭಿಷೇಕ, ರುದ್ರಹೋಮ, ಕಂಕಣಧಾರಣ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳು, ಪೂಜಾ ವಿಧಿವಿಧಾನಗಳು ನೆರವೇರಿದವು. ಬಳಿಕ ಪುಷ್ಪ ರಥೋತ್ಸವ ಹಾಗೂ ಮಹಾರಥೋತ್ಸವ ನಡೆಯಿತು. ಈ ಸಂದರ್ಭದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ 6 ಜೋಡಿ ವಧು, ವರರು ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ಹಾವೇರಿ ಮಾತ್ರವಲ್ಲದೇ ಸುತ್ತಲಿನ ಜಿಲ್ಲೆಗಳ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ರಥದ ಕಳಸ ವೀಕ್ಷಿಸಿದರು. ಶಾಸಕ ಶ್ರೀನಿವಾಸ ಮಾನೆ, ಹಾವೇರಿಯ ಮಾಜಿ ಶಾಸಕ ಶಿವರಾಜ ಸಜ್ಜನರ, ಎನ್.ಬಿ.ಪೂಜಾರ, ಚಂದ್ರಣ್ಣ ನಿಕ್ಕಂ, ಶಿವಬಸಪ್ಪ ಪೂಜಾರ, ಬಸಪ್ಪ ಗುಂಡಿ, ನಾಗಪ್ಪ ಮನ್ನಂಗಿ, ಮಾರ್ತಾಂಡ ಖಂಡೂನವರ, ಮಾರ್ತಾಂಡ ಬಾರ್ಕಿ, ಬಾಬು ನಿಕ್ಕಂ, ಶಿದ್ದಲಿಂಗಪ್ಪ ಶಂಕರಿಕೊಪ್ಪ, ಶಿವಾನಂದ ಸಂಗೂರಮಠ, ಸಿ.ಎನ್.ಕೊಪ್ಪದ, ಮಾರ್ತಾಂಡಪ್ಪ ಬಾರ್ಕಿ, ಹೊನ್ನಪ್ಪ ಕಡೇರ, ಕೇದಾರಪ್ಪ ಬೈಲಸೀಮೆ, ಸಿದ್ದರಾಮಗೌಡ ಪಾಟೀಲ, ಮಾಲತೇಶ ನಿಕ್ಕಂ, ಎಂ.ಬಿ.ಹೋತನಹಳ್ಳಿ, ಮಹದೇವಪ್ಪ ಪೂಜಾರ, ಬಸವರಾಜ ಡುಮ್ಮನವರ, ನಾಗಪ್ಪ ಅಂಬಿಗೇರ, ಗುಡ್ಡಪ್ಪ ಪೋಲೇಶಿ, ಕೋಟೆಪ್ಪ ಬಾರ್ಕಿ, ಮಾಲತೇಶ ಪೂಜಾರ, ಬಸಪ್ಪ ಸಾಲಿ, ಹೊನ್ನಪ್ಪ ಕಡೇರ, ಎಸ್.ಆರ್. ಹಂಚಿನಮನಿ, ಮಹದೇವಪ್ಪ ಪೂಜಾರ, ಚನ್ನಬಸಪ್ಪ ಪೂಜಾರ, ಮೌನೇಶಪ್ಪ ಹಸನಾಬಾದಿ, ಸಂತೋಷ ಹೋತನಹಳ್ಳಿ, ಪ್ರಕಾಶ ಹುಲಗೂರ ಇದ್ದರು.



ಹಾನಗಲ್ಲ: ತಾಲೂಕಿನ ಆಡೂರು ಗ್ರಾಮದಲ್ಲಿ ಮಾಲತೇಶ ದೇವರ ಮಹಾರಥೋತ್ಸವ ಸಾವಿರಾರು ಸದ್ಭಕ್ತರ ಹರ್ಷೋದ್ಗಾರದ ಮಧ್ಯೆ ಸಂಭ್ರಮ, ಸಡಗರದಿಂದ ನೆರವೇರಿತು.

ವಿಶ್ವ ಕಾರ್ಮಿಕ ದಿನಾಚರಣೆ | ನೌಕರರಿಗೆ ಮುದಕಣ್ಣನವರ ಸಲಹೆ

ಸುರಕ್ಷತೆಗೆ ಆದ್ಯತೆ ನೀಡಿ

ಹಾವೇರಿ: ಕರ್ನಾಟಕ ವಿದ್ಯುತ್ ಪ್ರಸರಣ ನಿಯಮಿತದ ಸ್ಥಳೀಯ ಸಮಿತಿ ಆಶ್ರಯದಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಶುಕ್ರವಾರ ಇಲ್ಲಿಯ ಹೆಸ್ಕಾಂ ಆವರಣದಲ್ಲಿರುವ ಸಮುದಾಯ ಭವನದಲ್ಲಿ ಆಚರಿಸಲಾಯಿತು. ಈ ವೇಳೆ ಏಳು ನೌಕರರಿಗೆ ಅತ್ಯುತ್ತಮ ಕಾರ್ಮಿಕ ಪ್ರಶಸ್ತಿ ನೀಡುವ ಗೌರವಿಸಲಾಯಿತು.

ಬೆಳಗ್ಗೆ ಕಾರ್ಮಿಕ ಸ್ಮಾರಕಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ಕ.ವಿ.ಪ್ರ.ನಿ ನೌಕರರ ಸಂಘದ ಮಾಜಿ ಕಾರ್ಯಾಧ್ಯಕ್ಷ ವಿಜಯಕುಮಾರ ಮುದಕಣ್ಣನವರ ಕಾರ್ಮಿಕ ದಿನಾಚರಣೆಗೆ ಚಾಲನೆ ನೀಡಿದರು. ನಂತರ ನಡೆದ ಪ್ರಧಾನ ಸಮಾರಂಭದಲ್ಲಿ ಮಾತನಾಡಿ, ಸುರಕ್ಷತೆಗೆ ನಮ್ಮ ನೌಕರರು ಹೆಚ್ಚಿನ ಆದ್ಯತೆ ನೀಡಬೇಕು. ಕಾರ್ಮಿಕ ಸಂಘಟನೆಗಳ ಹೊರತಾಗಿ ಆಡಳಿತ ಮಂಡಳಿಯವರೇ ಅತ್ಯುತ್ತಮ ಸೇವೆ ಸಲ್ಲಿಸಿದ ಕಾರ್ಮಿಕರನ್ನು ಗುರುತಿಸಿ ಸನ್ಮಾನಿಸುವ ಕೆಲಸವನ್ನು ಮಾಡಬೇಕು ಎಂದರು.

ಹಿರಿಯ ಸಾಹಿತಿ ಹನುಮಂತಗೌಡ ಗೊಲ್ಲರ ಮಾತನಾಡಿ, ರೈತ, ಕಾರ್ಮಿಕ, ಸೈನಿಕ, ಶಿಕ್ಷಕರೇ ದೇಶದ ನಾಲ್ಕು ಸ್ಥಂಭಗಳು. ಯಾವುದೇ ಒಂದು ಕುಸಿದರೂ ವ್ಯವಸ್ಥೆ ಅವ್ಯಸ್ಥೆಯಾಗುತ್ತದೆ. ಹಾವೇರಿ ವೃತ್ತದ ವಿದ್ಯುತ್ ಇಲಾಖೆಯ ನೌಕರರು ಸೇವೆ ಅತ್ಯುತ್ತಮವಾಗಿದ್ದು, ಸಂಘಟನೆಯನ್ನೂ ಕಾಪಾಡಿಕೊಂಡದ್ದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿಯಾಗಿದ್ದ ಪ್ರಭಾರಿ ಕಾರ್ಯನಿರ್ವಾಹಕ ಇಂಜನೀಯರ ಸಿ.ಬಿ.ಹೊಸಮನಿ ಅವರು ಸದಾಕಾಲ ಅಗೋಚರ ಶಕ್ತಿಯೊಂದಿಗೆ ಕೆಲಸ ಮಾಡುವ ನಮ್ಮ ಲೈನ್ ಮನ್‌ರು ತಮಗೆ ಕೊಟ್ಟಿರುವ ಸುರಕ್ಷಿತಾ ಸಲಕರಣೆಗಳನ್ನು ಬಳಸಿ ಕೆಲಸ ಮಾಡಬೇಕು, ದಕ್ಷತೆಯಲ್ಲಿ ಪ್ರತಿ ಕುಟುಂಬದ ಸುರಕ್ಷತೆ ಅಡಗಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಲಿಂಗಯ್ಯ ಹಿರೇಮಠ ಸಮಾರಂಭವನ್ನು ಉದ್ದೇಶಿಸಿ ಸಂಘಟನೆಯಲ್ಲಿಯೇ ಶಕ್ತಿ ಇದೆ. ಕೂಡಿ ನಡೆದರೆ ಯಶಸ್ಸು ಖಂಡಿತ. ಕಾರ್ಮಿಕರ ಒಗ್ಗಟ್ಟನ್ನು ಮುರಿಯುವ ಶಕ್ತಿಗಳಿಗಿಂತ ಕಾಯುವ ಸಂಕಲ್ಪವೇ ಮುಖ್ಯ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಹಾವೇರಿ ವೃತ್ತದ ಸಂಘಟನಾ ಕಾರ್ಯದರ್ಶಿ ಶಿವಾನಂದ ಹಾದಿಮನಿ ಮಾತನಾಡಿ, ನಮ್ಮಲ್ಲಿ ಒಗ್ಗಟ್ಟಿರುವುದರಿಂದಲೇ ಎಲ್ಲ ಬೇಡಿಕೆಗಳನ್ನು ಈಡೇರಿಸಿಕೊಂಡಿರುವೆವು. ನಾವು ಸಹ ಇಲಾಖೆಯ ಉನ್ನತಿಗಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಸಂಘ ಮತ್ತು ಆಡಳಿತ ಮಂಡಳಿ ವ್ಯವಸ್ಥೆಯ ಎರಡು ಕಣ್ಣುಗಳು ಇದ್ದಂತೆ.

ಸಮಾರಂಭದಲ್ಲಿ ಸಾಹಿತಿ ಸತೀಶ ಕುಲಕರ್ಣಿ, ಮೊಹ್ಮದ ಅಮಾನುಲ್ಲಾ, ಎ.ಕೆ. ಯಮನೂರ, ಎನ್.ಪಿ. ಹಾವೇರಿ, ಕೆ.ಎನ್. ಅಗಡಿ. ಓ. ಸತೀಶ, ಎಂ.ಕೆ. ತರಿಕೇರಿ ಸೇರಿದಂತೆ ಹಲವರು ಇದ್ದರು. ನಾಗರಾಜ ಮಡ್ಲೂರ ಕಾರ್ಮಿಕ ಗೀತೆ ಹಾಡಿದರು. ಸ್ಥಳೀಯ ಸಮಿತಿಯ ಅಧ್ಯಕ್ಷರಾದ ಶಂಕರ ಕಾಳಶೆಟ್ಟಿ ಸ್ವಾಗತಿಸಿದರು. ಕಾರ್ಯಕ್ರಮವನ್ನು ಕಾರ್ಯದರ್ಶಿ ಎಚ್.ಸಿ. ಮರಿದ್ಯಾಮಣ್ಣನವರ ನಡೆಸಿಕೊಟ್ಟರು. ಸಹ ಕಾರ್ಯದರ್ಶಿ ಎಂ.ಬಿ. ಮಿಶ್ರಿಕೋಟಿ ವಂದಿಸಿದರು.



ಸನ್ಮಾನಿತರು

ನಗರಸಭೆಯ ವಾಲ್‌ಮನ್ ಬಿಷ್ಟಣ್ಣ ಹನುಮಂತ ಕೊರವರ, ಮಹಿಳಾ ಪ್ರತಿನಿಧಿ ನೀಲಮ್ಮ ಹಡಪದ, ಎಸ್.ಎಂ. ಹಾವೇರಿ, ದಾದಾಪೀರ ಹಾವೇರಿ, ಅನಿಲಕುಮಾರ ಪತ್ತಾರ, ಮಹೇಶ ಹುಣಸಿಕಟ್ಟಿ ಹಾಗೂ ಎಸ್.ಕೆ. ಕಬ್ಬೂರ ಅವರುಗಳನ್ನು ಸನ್ಮಾನಿಸಲಾಯಿತು.

ಅಧ್ಯಕ್ಷ ಮಹಮ್ಮದ್‌ಸಾಬ್ ಅಸಮಾಧಾನ

ಜಿಲ್ಲೆಗೆ ಸಚಿವ ಸಂತೋಷ ಲಾಡ್ ಕೊಡುಗೆ ಶೂನ್ಯ

ಹಾವೇರಿ: ಹಾವೇರಿ ಜಿಲ್ಲೆಗೆ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರ ಕೊಡುಗೆ ಶೂನ್ಯ. ಸಚಿವರಾಗಿ ಮೂರು ವರ್ಷ ಕಳೆದರೂ ಹಾವೇರಿ ಜಿಲ್ಲೆಯ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಮುಂದಾಗಿಲ್ಲ ಎಂದು ಸಂತ ಶಿಶುನಾಳ ಶರೀಫ ರಸ್ತೆ ಮತ್ತು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಮಹಮ್ಮದ್‌ಸಾಬ್ ಕಾಲೆಭಾಗ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರಸುದ್ದಿಗೋಷ್ಠಿಯಲ್ಲಿಮಾತನಾಡಿ, ಮೇ 1ರ ಕಾರ್ಮಿಕರ ದಿನಾಚರಣೆಯನ್ನು ಹಾವೇರಿ ಜಿಲ್ಲೆಯ ರಸ್ತೆ ಮತ್ತು ಕಟ್ಟಡ ನಿರ್ಮಾಣ ಹಾಗೂ ಇತರೆ ಸಂಘಟನೆಗಳ ಕಾರ್ಮಿಕರು ಕರಾಳ ದಿನವನ್ನಾಗಿ ಆಚರಣೆ ಮಾಡುವಂತಾಗಿದೆ. ದಿನನಿತ್ಯ ಹೊಟ್ಟೆ ಪಾಡಿಗಾಗಿ ಕೆಲಸ ನಿರ್ವಹಿಸುವ ಶ್ರಮಿಕ ವರ್ಗದ ಕಾರ್ಮಿಕರು ನಿತ್ಯವೂ ತಮ್ಮ ಜೀವನ ನಿರ್ವಹಣೆಗೆ ಹೋರಾಟ ಮಾಡುವ ಅನಿವಾರ್ಯತೆ ಎದುರಾಗಿದೆ ಎಂದರು.

ಜಿಲ್ಲೆಯಲ್ಲಿ 1,561 ಕಾರ್ಮಿಕರ ಮದುವೆ ಪ್ರೋತ್ಸಾಹಧನವನ್ನು ಡಿಬಿಟಿ ಮೂಲಕ ಜಮೆ ಮಾಡುವುದನ್ನು ಸ್ಥಗಿತಗೊಳಿಸಿ ಆದೇಶ ಹೊರಡಿಸಿದ್ದಾರೆ. ಈ ಹಿಂದೆ ಹಿರೇಕೆರೂರು ಶಾಸಕ ಯು.ಬಿ. ಬಣಕಾರ ಬೆಳಗಾವಿ ಅಧಿವೇಶನದಲ್ಲಿ ಧ್ವನಿ ಎತ್ತಿದಾಗ ಆ ಕ್ಷೇತ್ರದ ಕೆಲ ಕಾರ್ಮಿಕರಿಗೆ ಸಹಾಯಧನ ಬಿಡುಗಡೆಯಾಗಿದ್ದು, ಉಳಿದ ತಾಲೂಕಿಗೆ ಯಾಕೆ ಬಿಡುಗಡೆ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿರುವ ಕಾರ್ಮಿಕ ಇಲಾಖೆ ಅಧಿಕಾರಿಗಳು ಕಾರ್ಮಿಕ ಸಂಘಟನೆಗಳಿಗೂ ಸ್ಪಂದಿಸುತ್ತಿಲ್ಲ. ಸಚಿವರು ಕೂಡ ಜಿಲ್ಲೆಗೆ ಭೇಟಿ ನೀಡಿಲ್ಲ, ಕಾರ್ಮಿಕರ ಬೇಡಿಕೆ ಆಲಿಸುತ್ತಿಲ್ಲ. ಈ ಕೂಡಲೇ ಸಚಿವರು ಜಿಲ್ಲೆಗೆ ಭೇಟಿ ನೀಡಿ ಸಂಘಟನೆಗಳು ಹಾಗೂ ಕಾರ್ಮಿಕರ ಬೇಡಿಕೆಗಳನ್ನು ಆಲಿಸಬೇಕು. ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ಇದೇ ಪರಿಸ್ಥಿತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಸಚಿವರ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಐಟಿಯುಸಿ ಅಧ್ಯಕ್ಷ ಕೆ.ಎನ್. ಮಕಾನದಾರ ಇದ್ದರು.



- ಜಿಲ್ಲೆಯ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಮುಂದಾಗದ ಸಚಿವರು
- ಕಾರ್ಮಿಕ ಇಲಾಖೆ ಅಧಿಕಾರಿಗಳಿಂದಲೂ ಸ್ಪಂದನೆಯಿಲ್ಲ

ಆಡಳಿತ ಮಂಡಳಿ ಚುನಾವಣೆ

ಹಾನಗಲ್ಲ: ಕರಾಸಪ್ರಾಶಾಶಿಕ್ಷಕರ ಸಂಘದ ತಾಲೂಕು ಘಟಕದ ಆಡಳಿತ ಮಂಡಳಿ ಚುನಾವಣೆ ಶುಕ್ರವಾರ ಇಲ್ಲಿನ ಶಾಸಕರ ಮಾದರಿ ಶಾಲೆಯಲ್ಲಿ ನಡೆಯಿತು. ಐದು ವರ್ಷದ ಅವಧಿಗಾಗಿ 14 ಆಡಳಿತ ಮಂಡಳಿ ಸದಸ್ಯತ್ವಕ್ಕೆಆಯ್ಕೆಗಾಗಿಮತದಾನನಡೆಯಿತು. ಬೆ.8 ಗಂಟೆಯಿಂದ ಸಂಜೆ 4.30ರವರೆಗೆ ಮತದಾನ ನಡೆಯಿತು. ತಾಲೂಕಿನಲ್ಲಿ ಒಟ್ಟು 663 ಮತದಾರ ಶಿಕ್ಷರರಿದ್ದಾರೆ. 9 ಪುರುಷ ಮತ್ತು 5 ಮಹಿಳೆಯರಿಗಾಗಿ ಮೀಸಲಿದೆ. 14 ಸ್ಥಾನಕ್ಕೆ 25 ಅಭ್ಯರ್ಥಿಗಳು ಸ್ಪರ್ಧೆಯ ಕಣದಲ್ಲಿದ್ದಾರೆ. ಇವರಿಗೆ ಸವಾಲು ಒಡ್ಡಿರುವ ಸ್ವಾಭಿಮಾನಿ ಬಳಗದ ಶಿಕ್ಷಕರು ಎಷ್ಟರ ಮಟ್ಟಿಗೆ ಯಶಸ್ಸು ಸಾಧಿಸಲಿದ್ದಾರೆ ಎಂಬುದು ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ತಿಳಿಯಲಿದೆ.





ಹಾವೇರಿ: ತಾಲೂಕಿನ ದೇವಿಹೊಸೂರು ಬಳಿ ನೂತನವಾಗಿ ನಿರ್ಮಿಸಿದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಕಟ್ಟಡದ ಗುರುಕುಲ ಪ್ರವೇಶ ಹಾಗೂ ವಾಸ್ತುಶಾಂತಿ ವಿಶೇಷ ಪೂಜಾ ಕಾರ್ಯಕ್ರಮ ಜರುಗಿದವು. ಬೆಳಗ್ಗೆ ವೃಷಭ ಲಗ್ನದಲ್ಲಿ ಗೋಪೂಜೆಯೊಂದಿಗೆ ಪಂಚಮುಖಿ ಶಿಕ್ಷಣ ನೀಡುವ ಉದ್ದೇಶದೊಂದಿಗೆ ಪೂಜೆ, ಹೋಮ ಜರುಗಿದವು. ಶ್ರೀನಿವಾಸ ಶಿವಪೂಜಿ ತಂಡದಿಂದ ಪೂಜಾ ಕೈಂಕರ್ಯ ನೆರವೇರಿದವು. ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಧಾನ ಕಾರ್ಯದರ್ಶಿ ದಿನೇಶ ಹೆಗಡೆ, ಆಡಳಿತ ಮಂಡಳಿ ಸದಸ್ಯರಾದ ರವಿಕುಮಾರ, ಜಯಣ್ಣ ಎಚ್., ಪವನಬಹದ್ದೂರ ದೇಸಾಯಿ, ಹಾವೇರಿ ಶಾಲೆಯ ಪ್ರಾಂಶುಪಾಲೆ ಶ್ಯಾಮಲಾ, ಹಿರಿಯ ಪ್ರಾಂಶುಪಾಲರಾದ ರಂಗನಾಥ ಕುಲಕರ್ಣಿ, ಶ್ರೀದೇವಿ, ರಾಘವೇಂದ್ರ ಅಂಬೇಕರ್ ಇದ್ದರು.

ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ: ಮಂಡಲ ಪೂಜೆ

ಹಾನಗಲ್ಲ: ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ಮಾನವ ಜೀವನದ ಸಾರ್ಥಕತೆಯನ್ನು ತಿಳಿಸುವ ಮಹಾನ್ ಸಂದೇಶವಾಗಿದೆ. ತೀರ್ಥಂಕರರ ಜೀವನದ ಐದು ಕಲ್ಯಾಣಕಗಳು ಮಾನವನ ಆತ್ಮೋನ್ನತಿಗೆ ದಾರಿ ತೋರಿಸುವ ದೀಪಸ್ತಂಭಗಳಾಗಿವೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಶುಕ್ರವಾರ ತಾಲೂಕಿನ ನೀರಲಗಿ ಗ್ರಾಮದ ಜಿನ ಮಂದಿರದಲ್ಲಿ ಆಯೋಜಿಸಲಾಗಿದ್ದ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದ 48ನೇ ದಿನದ ಮಂಡಲ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಶುದ್ಧ ಚಿಂತನೆ ಹಾಗೂ ಸಂಸ್ಕಾರಗಳನ್ನು ಅಳವಡಿಸಿಕೊಳ್ಳಬೇಕಿದೆ. ಜೀವನವನ್ನು ಧರ್ಮ, ಸತ್ಯ ಹಾಗೂ ಅಹಿಂಸೆಯ ಮಾರ್ಗದಲ್ಲಿ ಸಾಗಿಸುವುದು ಪ್ರತಿಯೊಬ್ಬರ ಕರ್ತವ್ಯವೆಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಸೋಂದಾ ಜೈನಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಇಂದಿನ ಯುಗದಲ್ಲಿ ಮಾನವ ಮೌಲ್ಯಗಳು ಕುಗ್ಗುತ್ತಿರುವ ಸಂದರ್ಭದಲ್ಲಿ ಇಂತಹ ಮಹೋತ್ಸವಗಳು ಸಮಾಜಕ್ಕೆ ದಿಕ್ಕು ತೋರಿಸುವ ಕಾರ್ಯ ಮಾಡುತ್ತವೆ. ಯುವಪೀಳಿಗೆ ಧರ್ಮ, ಸಂಸ್ಕೃತಿ ಹಾಗೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ದೇಶದ ಭವಿಷ್ಯ ಉಜ್ವಲವಾಗಲಿದೆ ಎಂದರು.

ಜೈನ ಸಮಾಜದ ಅಧ್ಯಕ್ಷ ಮಂಜಪ್ಪ ಜೈನರ, ಉಪಾಧ್ಯಕ್ಷ ಬಸವಂತಪ್ಪ ಜೈನರ, ಕಾರ್ಯದರ್ಶಿ ಲಕ್ಷ್ಮಣ ಜೈನರ, ಖಜಾಂಚಿ ವರ್ಧಮಾನ್ ಜೈನರ, ಸದಸ್ಯರಾದ ಚಂದ್ರ ಜೈನರ, ಮಹಾವೀರ ಜೈನರ, ಧರಣೇಂದ್ರ ಜೈನರ, ಶಾರವ್ವಾ ಜೈನರ, ಭರತೇಶ ಜೈನರ, ಪಾರ್ಶ್ವನಾಥ ಜೈನರ, ದಿಗಂಬರ ಜೈನ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ತಡಸದ, ಸದಸ್ಯ ಶಶಿಧರ ಗೌಡರ ಇದ್ದರು.



ಗೌತಮ ಬುದ್ಧರ ವಿಚಾರಧಾರೆ ಜೀವನದಲ್ಲಿ ಅಳವಡಿಸಿಕೊಳ್ಳಿ

ರಾಣೇಬೆನ್ನೂರ: ಇಲ್ಲಿನ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ತಾಲೂಕಾ ಆಡಳಿತ ಮತ್ತು ವಿವಿದ ಸಂಘಟನೆಗಳ ವತಿಯಿಂದ ಶುಕ್ರವಾರ ಭಗವಾನ ಗೌತಮ ಬುದ್ಧರ ಜಯಂತಿಯನ್ನು ಆಚರಿಸಲಾಯಿತು.

ಪತ್ರಕರ್ತ ಗೋಣೆಪ್ಪ ದೀಪಾವಳಿ ಈ ವೇಳೆ ಭಗವಾನ ಗೌತಮ ಬುದ್ಧರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಅಹಿಂಸಾ ಮಾರ್ಗವನ್ನು ಪ್ರತಿಪಾದಿಸಿದ ಭಗವಾನ ಗೌತಮ ಬುದ್ಧರು ಪ್ರಾಣಿಗಳ ಹಿಂಸೆ ಮಾಡಬಾರದು ಮಹಾಪಾಪ, ಸಕಲ ಜೀವಿಗಳ ಮೇಲೆ ದಯವಿರಬೇಕು ಎಂದು ಬೋಧಿಸಿದವರು ಅವರ ವಿಚಾರ ಧಾರೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆಗಾಗ ಮಾತ್ರ ಜಯಂತಿಗೆ ಅರ್ಥ ಬರಲಿದೆ ಎಂದರು.

ಇಂದಿನ ಯುವ ಪೀಳಿಗೆಯಿಂದ ಹಿಡಿದು ಸರ್ವರೂ ಗೌತಮ ಬುದ್ಧರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆದಾಗ ಮಾತ್ರ ಅಂತವರ ಜೀವನ ನೆಮ್ಮದಿಯಿಂದ ಇರಲು ಸಾಧ್ಯ ಎಂದು ಬುದ್ಧರ ಹಲವಾರು ವಿಚಾರಧಾರೆಗಳನ್ನು ಮನಮುಟ್ಟುವಂತೆ ಹೇಳಿದರು.

ಸ್ವಾಭಿಮಾನಿ ಕರವೇ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ, ಕೊಟ್ರೇಶಪ್ಪ ಎಮ್ಮಿ, ನಾಗರಾಜ ಕುಂಚರ್ಕರ, ಚಂದ್ರಶೇಖರ ಕುಂಬಳೂರ, ದೇವರಾಜ ಕಾಂಬಳೆ, ಪ್ರವೀಣ ಕುಂಬಾರ, ನಾಗರಾಜ ಸೋಮಕ್ಕಳವರ ಸೇರಿದಂತೆ ಮತ್ತಿತರರು ಇದ್ದರು.



ಇಂದಿನಿಂದ ಹರಸೂರು ಬಣ್ಣದಮಠದ ಜಾತ್ರಾ ಮಹೋತ್ಸವ

ಹಾವೇರಿ: ನಗರದ ಯಾಲಕ್ಕಿ ಓಣಿಯಲ್ಲಿರುವ ಹರಸೂರು ಬಣ್ಣದ ಮಠದಲ್ಲಿ ಮೇ 2ರಿಂದ ಮೇ.4ರವರೆಗೆಹರಸೂರು ಬಣ್ಣದಮಠದ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಲಿದೆ ಎಂದು ಮಠದ ಪೀಠಾಧ್ಯಕ್ಷ ಅಭಿನವರುದ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಸೂರುಬಣ್ಣದಮಠದಲಿಂ.ಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳ ಪುಣ್ಯ ಸ್ಮರಣೋತ್ಸವ ಹಾಗೂ ಪ್ರಸ್ತುತ ಶ್ರೀಗಳ 16ನೇ ವರ್ಷದ ಪಟ್ಟಾಕಾರ ವರ್ಧಂತಿ ಮಹೋತ್ಸವದ ಜತೆಗೆ ಜನ ಜಾಗೃತಿ ಭಾವೈಕ್ಯ ಧರ್ಮ ಸಮ್ಮೇಳನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಠದ ಭಕ್ತ ವೃಂದವು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸ ಬೇಕೆಂದು ತಿಳಿಸಿದರು.

ಮೇ.2ರಂದು ಬೆಳಗ್ಗೆ 7.30ಕ್ಕೆ ಜಾತ್ರಾ ಮಹೋತ್ಸವ ನಿಮಿತ್ತ ಗೌರಿಮಠದ ಶಿವಯೋಗಿ ಶಿವಾಚಾರ್ಯರ ಸಮ್ಮುಖದಲ್ಲಿ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣ ಜರುಗಲಿದೆ. ಮೇ.3ರ ಬೆಳಗ್ಗೆ 6.30ಕ್ಕೆ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷೆ (ಅಯ್ಯಾಚಾರ) ಕಾರ್ಯಕ್ರಮ ಜರುಗಲಿದ್ದು, ಸಂಜೆ6.30ಕ್ಕೆ ಜನ ಜಾಗೃತಿ ಭಾವೈಕ್ಯ ಧರ್ಮಸಮಾರಂಭನಡೆಯಲಿದೆ. ಹುಕ್ಕೇರಿಮಠದ ಸದಾಶಿವ ಶ್ರೀಗಳು ಸಾನಿಧ್ಯ ವಹಿಸಲಿದ್ದು, ಗೌರಿಮಠದ ಶಿವಯೋಗಿ ಶಿವಾಚಾರ್ಯರು ಸಮ್ಮುಖ ವಹಿಸಲಿದ್ದಾರೆ. ಶಾಸಕ ರುದ್ರಪ್ಪ ಲಮಾಣಿ ವೇದಿಕೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಶಾಸಕ ನೆಹರು ಓಲೇಕಾರ, ಎಂ.ಎಂ. ಹಿರೇಮಠ, ಸಂಜೀವಕುಮಾರ ನೀರಲಗಿ, ಎಸ್.ಎಫ್.ಎನ್. ಗಾಜೀಗೌಡ್ರ, ಕೊಟ್ರೇಶಪ್ಪ ಬಸೇಗಣ್ಣಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಮೇ.4ರಂದು ಬೆಳಗ್ಗೆ 7ಕ್ಕೆ ಸಂತಾನ ಪ್ರಾಪ್ತಿ, ವಿವಾಹ ಭಾಗ್ಯ, ಸರ್ಪದೋಷ, ಕಾಳಸರ್ಪ ದೋಷ ನಿವಾರಣೆಗಾಗಿ ಸರ್ಪಶಾಂತಿ-ಆಶ್ಲೇಷ ಬಲಿ ಪೂಜೆ ಹೋಮ ನಡೆಯಲಿದೆ. ಈ ಪೂಜೆ ಮಾಡಿಸಲು ಇಚ್ಛಿಸುವ ಭಕ್ತರು ರೂ.2000 ಶುಲ್ಕ ಪಾವತಿಸಿ ರಶೀದಿ ಪಡೆದುಕೊಳ್ಳಬೇಕು. ನಂತರ ಅಭಿನವರುದ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಡೆಯಲಿದೆ. ಅದೇ ದಿನ ಸಂಜೆ ನಡೆಯುವ ಜನಜಾಗೃತಿ ಭಾವೈಕ್ಯ ಧರ್ಮ ಸಮಾರಂಭದಲ್ಲಿ ನೆಗಳೂರಿನ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ. ಮಾಜಿ ಶಾಸಕ, ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಉದ್ಘಾಟಿಸಲಿದ್ದು, ಗವಿಸಿದ್ದಪ್ಪ ದ್ಯಾಮಣ್ಣನವರ, ಮಲ್ಲಿಕಾರ್ಜುನ ಕಟ್ಟಿಮನಿ, ವೆಂಕಟೇಶ ನಾರಾಯಣಿ, ಶಶಿಕಲಾ ಮಾಳಗಿ, ರೋಹಿಣಿ ಪಾಟೀಲ, ಪವನಬಹದ್ದೂರ ದೇಸಾಯಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಾತ್ರಾ ಕಮಿಟಿ ಅಧ್ಯಕ್ಷ ಬಸವರಾಜ ಜಾಬೀನ, ಉಪಾಧ್ಯಕ್ಷ ಮಲ್ಲಿಕಾರ್ಜುನ ಕೆ.ಬಿ., ಜಗದೀಶ ಕನವಳ್ಳಿ, ಮಂಜುನಾಥ ತಾಂಡೂರ, ಶಿವಬಸಪ್ಪ ಚೌಶೆಟ್ಟಿ, ಬಸವರಾಜ ಹಲಗಣ್ಣವರ, ಗುರುಶಾಂತಯ್ಯ ನಡುವಿನಮಠ, ವಿಜಯಕುಮಾರ ಕೂಡ್ಲಪ್ಪನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಮಾಜಮುಖಿ ಕಾರ್ಯದ ಮೂಲಕ ಹಸೆಮಣೆ ಏರಿದ ನವ ಜೋಡಿ



ಹಾವೇರಿ: ತಮಗೆ ಕಲಿಸಿದ ಗುರುಗಳಿಗೆ ಗುರುವಂದನೆ ಹಾಗೂ ಬೀದಿ ಬದಿ ವ್ಯಾಪಾರ ಮಾಡುವ ಬಡ ವ್ಯಾಪಾರಿಗಳಿಗೆ ಉಚಿತ ಸ್ಟಾಲ್ ಛತ್ರಿ ವಿತರಿಸುವ ಮೂಲಕ ಇಲ್ಲೊಂದು ಜೋಡಿ ಹಸೆಮಣೆ ಏರಿದ್ದಾರೆ. ಇಂತಹ ವಿನೂತನ ಹಾಗೂ ಅಪರೂಪದ ಕ್ಷಣಕ್ಕೆ ನಗರದ ಭಗತ್‌ಸಿಂಗ್ ಕಾಲೇಜು ಆವರಣದಲ್ಲಿ ಸೇರಿದ್ದ ಸಾವಿರಾರು ಜನರು ಸಾಕ್ಷಿಯಾದರು.

ಸ್ಥಳೀಯ ಭಗತ್‌ಸಿಂಗ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರೂ ಆಗಿರುವ ಸತೀಶ ಎಂ.ಬಿ. ಅವರ ವಿವಾಹದ ನಿಮಿತ್ತ ಶುಕ್ರವಾರ ಈ ಸಮಾಜಮುಖಿ ಕಾರ್ಯ ಹಮ್ಮಿಕೊಳ್ಳಲಾಗಿತ್ತು. ಕಾರ್ಮಿಕದ ದಿನದಂದೇ ಹಸೆ ಮಣೆ ಏರಿದ ಅವರು, ಬಡ ವ್ಯಾಪಾರಿಗಳಿಗೆ ನೆರವಾಗಿದ್ದಾರೆ. ಸತೀಶ ಅವರು ತಮ್ಮ ಮದುವೆ ಪ್ರಯುಕ್ತ ಸುಮಾರು 200 ಬೀದಿಬದಿಯ ವ್ಯಾಪರಸ್ಥರಿಗೆ ಉಚಿತ ಸ್ಟಾಲ್ ಛತ್ರಿಗಳನ್ನು ವಿತರಿಸಿದ್ದಾರೆ. ಇದರ ಜೊತೆಗೆ ತಮಗೆ ಅಕ್ಷರ ಕಲಿಸಿದ ಗುರುಗಳನ್ನೆಲ್ಲಾ ಮದುವೆಗೆ ಆಹ್ವಾನಿಸಿ ವೇದಿಕೆ ಮೇಲೆ ಕರೆತಂದು ಗೌರವ ಸಲ್ಲಿಸಿದರು. ಅವರೆಲ್ಲರೂ ನವಜೋಡಿಗೆ ಅಕ್ಷತೆ ಹಾಕಿ ಹಾರೈಸಿದರು.

ಭಕ್ತಿಯೇ ಸರ್ವ ಶ್ರೇಷ್ಠ: ಶ್ರೀಗಳು

ಹಾವೇರಿ: ಭಕ್ತಿ ಎನ್ನುವುದು ಬಹಳ ಶ್ರೇಷ್ಠವಾದುದು. ಶ್ರೇಷ್ಠ ಭಕ್ತಿಯನ್ನು ರಾಮನ ಮೇಲೆ ಹನುಮ ಇಟ್ಟಿದ್ದರಿಂದ ಲೋಕಕ್ಕೆ ಶ್ರೇಷ್ಠನಾಗಿ ಬೆಳಗಿದ ಎಂದು ಹತ್ತಿಮತ್ತೂರು ವಿರಕ್ತಮಠದ ನಿಜಗುಣ ಸ್ವಾಮೀಜಿ ಹೇಳಿದರು.

ಸವಣೂರು ತಾಲೂಕಿನ ಇಚ್ಚಂಗಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 'ಗುರುವಿನೊಡನೆ ದೇವರೆಡೆಗೆ' ಪ್ರವಚನ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ದೇವರ ಸಾಕ್ಷಾತ್ಕಾರ ಮಾಡಿಕೊಳ್ಳಲು ಜೀವಂತ ದೇವರುಗಳಾದ ತಂದೆ-ತಾಯಿಗಳನ್ನು ಗೌರವದಿಂದ ಕಾಣಬೇಕು ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಬಂಕಾಪುರದ ಕೆಂಡದಸ್ವಾಮಿಮಠದ ಸಿದ್ದಯ್ಯ ಸ್ವಾಮಿಗಳು ಆಶೀರ್ವಚನ ನೀಡಿದರು. ನಂತರ 5 ದಿನಗಳ ಕಾಲ ಪ್ರವಚನ ನೀಡಿದ ಗುಡ್ಡದ ಆನ್ವೇರಿ ಶಿವಯೋಗೀಶ್ವರ ವಿರಕ್ತಮಠದ ಶಿವಯೋಗೀಶ್ವರ ಸ್ವಾಮಿಗಳನ್ನು ಗ್ರಾಮಸ್ಥರು ಗೌರವಿಸಿದರು. ಸಂಗೀತ ಸೇವೆ ಮಾಡಿದ ಕಲಾವಿದರಾದ ಸಂಗಮೇಶ ಉತ್ತಂಗಿ, ಚಂದ್ರಯ್ಯ ಹಿರೇಮಠ, ವೇ। ಗದಿಗಯ್ಯ ರುದ್ರಯ್ಯ ಚರಂತಿಮಠ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.ಇಚ್ಚಂಗಿ, ಯಲ್ಲಾಪುರ, ಸಿದ್ದಾಪುರ, ಭೈರಾಪುರ, ಕಲಿವಾಳ, ಹಂದಿಗನೂರು, ಹೊಸರಿತ್ತಿ ಸೇರಿದಂತೆ ವಿವಿಧ ಗ್ರಾಮಗಳ ಸದ್ಭಕ್ತರು ಆಗಮಿಸಿದ್ದರು. ಮಹಾಮಂಗಳಾರತಿ ನಂತರ ಮಹಾಪ್ರಸಾದ ನೆರವೇರಿತು.

ಪ್ರತಿಭಾವಂತರಿಗೆ ಸನ್ಮಾನ: ಈ ಸಂದರ್ಭದಲ್ಲಿ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ಮಕ್ಕಳನ್ನು ಹಾಗೂ ದಾನಿಗಳನ್ನು ಪ್ರವಚನ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.



ಕಿರುಸುದ್ದಿ



ಚನ್ನಮ್ಮನ ಕಿತ್ತೂರ : ಸಮೀಪದ ಗಂದಿಗವಾಡ ಗ್ರಾಮದ ಗಜಾನನ ದೇವಸ್ಥಾನದ ಲೋಕಾರ್ಪಣೆಯ ವಾರ್ಷಿಕೋತ್ಸವದ ಅಂಗವಾಗಿ ಈಚೆಗೆ ನಡೆದ ಶ್ರೀಕೃಷ್ಣ ಪಾರಿಜಾತವನ್ನು ಮಾಜಿ ಶಾಸಕ ಅರವಿಂದ ಪಾಟೀಲ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ರಮೇಶ ಪಾತ್ರೋಟ ಗುರುಸ್ವಾಮಿಗಳು, ಗಂದಿಗವಾಡ ಬಸವೇಶ್ವರ ಸೊಸೈಟಿಯ ಕಾರ್ಯದರ್ಶಿ ಮಹಾಂತೇಶ ಕಮತಗಿ, ತೊಲಗಿ ಪಿಕೆಪಿಎಸ್ ಅಧ್ಯಕ್ಷ ಮಾರುತಿ ಠಕ್ಕೇಕರ, ಮಂಜುನಾಥ ಶೆಟ್ಟೆಣ್ಣವರ, ಮಾರುತಿ ಕಮತಗಿ, ಬಸವರಾಜ ಯಡಾಲ, ಮಹಾಂತೇಶ ಚಿಕ್ಕಮಠ, ಸಂಜೀವ ದೇಸುರಕರ, ವಿಶ್ವನಾಥ ಚಿಕ್ಕಮಠ, ಕಲ್ಲಪ್ಪ ಕಮತಗಿ, ಅಣ್ಣಪ್ಪ ಮಿರಜಕರ ಹಾಗೂ ಇತರರು ಇದ್ದರು.

ಬಸವ ಜಯಂತಿ ಆಚರಣೆ

ಬೆಳಗಾವಿ: ಮಹಾನ್ ಮಾನವತಾವಾದಿ, ಜಗಜ್ಯೋತಿ, ಕ್ರಾಂತಿಯೋಗಿ ಶ್ರೀ ಬಸವೇಶ್ವರ ಜಯಂತಿಯ ಪ್ರಯುಕ್ತವಾಗಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಹಿರೇಬಾಗೇವಾಡಿಯ ಬಸವಣ್ಣನವರ ಮೂರ್ತಿಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಈ ವೇಳೆ ಹಿರೇ ಬಾಗೇವಾಡಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷರು ಗ್ರಾಮದ ಹಿರಿಯರು ಕಾಂಗ್ರೆಸ್ ಮುಕಂಡರು ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ಮಧ್ಯಾಹ್ನ ಮನೆ ಬಿಟ್ಟು ಹೊರಬರಬೇಡಿ

ರಾಯಬಾಗ: ತಾಪಮಾನ ದಿನದಿಂದ ದಿನಕ್ಕೆ ಏರುತ್ತಿದ್ದು, ಬಿಸಿಲಿನ ಕಾಟ ಜನರನ್ನು ಬೆಚ್ಚಿಬೀಳಿಸುತ್ತಿದೆ.



ಈ ಹಿನ್ನೆಲೆ ತಹಶೀಲ್ದಾರ್ ಮಹಾದೇವ ಸನಮೂರಿ ಅವರು ತೀವ್ರ ಎಚ್ಚರಿಕೆ ನೀಡಿದ್ದು, ಮಧ್ಯಾಹ್ನ ಸಮಯದಲ್ಲಿ ಅನಗತ್ಯವಾಗಿ ಹೊರಗಡೆ ಸಂಚಾರ ಮಾಡಬಾರದು ಎಂದು ಸೂಚಿಸಿದ್ದಾರೆ. ಬಿಸಿಲಿನ ಪರಿಣಾಮವಾಗಿ ಉಷ್ಣಾಘಾತದ ಅಪಾಯ ಹೆಚ್ಚಾಗಿರುವುದರಿಂದ, ವಿಶೇಷವಾಗಿ ಹಿರಿಯ ನಾಗರಿಕರು ಮತ್ತು ಮಕ್ಕಳು ಮನೆಯೊಳಗೇ ಉಳಿಯುವುದು ಉತ್ತಮ ಎಂದು ಸಲಹೆ ನೀಡಿದ್ದಾರೆ. ಹೆಚ್ಚಾಗಿ ನೀರು ಕುಡಿಯಿರಿ, ನೆರಳಿನಲ್ಲಿ ಇರಿ, ತಲೆಮೇಲೆ ಬಟ್ಟೆ ಅಥವಾ ಟೋಪಿ ಬಳಸಿ ಎಂದು ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಲಾಗಿದೆ. ಸರ್ಕಾರದ ಸೂಚನೆಗಳನ್ನು ಪಾಲಿಸಿ ಆರೋಗ್ಯ ಕಾಪಾಡಿಕೊಳ್ಳುವಂತೆ ಅವರು ಮನವಿ ಮಾಡಿದ್ದಾರೆ.

ಮನೆ ಕಳ್ಳತನ ಮಾಡುತ್ತಿದ್ದ ಆರೋಪಿಗಳಿಬ್ಬರ ಬಂಧನೆ



ಬೆಳಗಾವಿ: ನಗರ ಸೇರಿದಂತೆ ವಿವಿಧ ಕಡೆ ಮನೆ ಕಳ್ಳತನ ಮಾಡುತ್ತಿದ್ದ ಇಬ್ಬರು ಕಳ್ಳರನ್ನು ಅನಗೋಳದ ಮನೆಯೊಂದರಲ್ಲಿ ಕಳ್ಳತನ ಮಾಡುತ್ತಿದ್ದ ವೇಳೆ ತಿಲಕವಾಡಿ ಪೊಲೀಸರು ವಶಕ್ಕೆ ವಶಕ್ಕೆ ಪಡೆದುಕೊಂಡಿದ್ದಾರೆ. ಉಜ್ವಲಾ ರವಿ ಕಮ್ಮಾರ (40) ಹಾಗೂ ಶಿವಾ ಶಂಕರ ಅಪ್ಪಯನವರ, (30) ಬಂಧಿತ ಆರೋಪಿಗಳು. ಒಟ್ಟು 16,57,350 ರೂ ಮೌಲ್ಯದ 110.49 ಗ್ರಾಂ ಬಂಗಾರದ ಆಭರಣಗಳು ಕಳ್ಳರಿಂದ ಜಪ್ತ ಮಾಡಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಇಬ್ಬರು ಕಳ್ಳರನ್ನು ಬಂಧಿಸಿ ಆರೋಪಿಗಳನ್ನು ತನಿಖಾ ತಂಡದಲ್ಲಿ ತಿಲಕವಾಡಿ ಪೊಲೀಸ್ ಇನ್ಸಪೆಕ್ಟರ್ ಪರಶುರಾಮ ಪೂಜೇರಿ, ಪಿಎಸ್ಐ ವಿಶ್ವನಾಥ ಘಂಟಾಮಠ ಪ್ರಭಾಕರ ಡೊಳ್ಳಿ ಪಿಎಸ್ಐ ಸಿಬ್ಬಂದಿಗಳಾದ ಮಹೇಶ ಪಾಟೀಲ, ಎಸ್ ಎಮ್ ಕರಲಿಂಗಣ್ಣವರ, ಲಾಡಜಿಸಾಬ ಮುಲ್ತಾನಿ, ಸತೀಶ ಗಿರಿ, ಲಕ್ಷ್ಮೀ ಡೇಳಿಜ್, ಮಮತಾ ಬಿ ಜೆ ಹಾಗೂ ಟೆಕ್ನಿಕಲ್ ಸೆಲ್ ವಿಭಾಗದ ಸಿಬ್ಬಂದಿ ಜನರಾದ ರಮೇಶ ಅಕ್ಕಿ, ಮಹಾದೇವ ಖಾಸೀದ ರವರನ್ನೊಳಗೊಂಡ ತಂಡ ಕಾರ್ಯನಿರ್ವಹಿಸಿದ್ದು, ಇವರ ಕಾರ್ಯ ವೈಖರಿಯನ್ನು ಪೊಲೀಸ್ ಆಯುಕ್ತರು ಶ್ಲಾಘನೀಯ ವ್ಯಕ್ತ ಪಡಿಸಿ ಬಹುಮಾನ ಘೋಷಿಸಿದ್ದಾರೆ.



ಸುರೇಬಾನ: ಮನಿಹಾಳ ಆತ್ಮನಂದ ನಗರದ ಸುಡುಗಾಡ ಸಿದ್ದರ ಸಮುದಾಯದ ಯುವ ಪ್ರತಿಭೆ ಇತ್ತೀಚೆಗೆ ನಡೆದ 2026ರಲ್ಲಿ ಜರುಗಿದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು 97.17% ಅಂಕ ಪಡೆದು ಪಾಸಾದ ವಿದ್ಯಾರ್ಥಿ ರಜನಿಕಾಂತ ಯಲ್ಲಪ್ಪ ವಿಭೂತಿಯನ್ನು ಗುರುದೇವ ಆತ್ಮಾನಂದ ಪುಣ್ಯಾಶ್ರಮದ ಸಮರ್ತ ಶಿವಾನಂದ ಸ್ವಾಮಿಜಿ, ಸುರೇಬಾನ ಪಿಎಸ್ಐ ಗುರುರಾಜ ಕಲಬುರ್ಗಿ ಹಾಗೂ ಗ್ರಾಮದ ಮುಖಂಡರು ಸನ್ಮಾನಿಸಿದರು.

ಗೌತಮ ಬುದ್ಧರ ಜಯಂತಿ ಆಚರಣೆ

ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾ ಭವನದಲ್ಲಿ ಗೌತಮ ಬುದ್ದರ ಜಯಂತಿ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗಣ್ಯರು ಬುದ್ದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ತಹಶೀಲ್ದಾರ ಎಂ.ವ್ಹಿ. ಗುಂಡಪ್ಪಗೋಳ ಬುದ್ದರ ಶಾಂತಿ, ಕರುಣೆ ಮತ್ತು ಸಮಾನತೆಯ ಸಂದೇಶಗಳು ಇಂದಿಗೂ ಜಗತ್ತಿನಾದ್ಯಂತ ಮಹತ್ವ ಪಡೆದಿವೆ ಎಂದು ಹೇಳಿದರು.

ಬುದ್ದರ ತತ್ವಗಳು ಕೇವಲ ಆಚರಣೆಗೆ ಸೀಮಿತವಾಗದೇ, ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಒತ್ತಿ ಹೇಳಿದರು.

ವೀರಶೈವ ಲಿಂಗಾಯತ ಯುವ ವೇದಿಕೆ ಜಿಲ್ಲಾ ಕಾರ್ಯಾಧ್ಯಕ್ಷ ಈರಣ್ಣಾ ಹೂಲ್ಲೂರ ಮಾತನಾಡಿ, ಬುದ್ದರು ಮಾನವೀಯ ಮೌಲ್ಯಗಳ ಪ್ರತೀಕವಾಗಿದ್ದು, ಅವರ ಸಂದೇಶಗಳು ಜಗತ್ತಿನಲ್ಲಿ ಶಾಂತಿ ನೆಲೆಸಲು ಕಾರಣವಾಗಿವೆ ಹಾಗೂ ಸಮಾಜದಲ್ಲಿ ಶಾಂತಿ ಮತ್ತು ಸಮಾನತೆ ಸ್ಥಾಪನೆಗೆ ಬುದ್ದರ ಚಿಂತನೆಗಳನ್ನು ಅನುಸರಿಸುವುದು ಅವಶ್ಯಕ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಎಪಿಎಂಸಿ ಸದಸ್ಯ ರಫೀಕ ಡಿಕೆ, ಫಿರೋಜ ಖಾದ್ರಿ, ಸ್ವರೂಪ ಚಪಳಿ, ಮಂಜುನಾಥ ಬಡಿಗೇರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾ ಭವನದಲ್ಲಿ ಗೌತಮ ಬುದ್ಧರ ಜಯಂತಿ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಣೆ ಮಾಡಲಾಯಿತು.

ಬೆಳಗಾವಿ ನಗರದ ಜ್ವಲಂತ ಸಮಸ್ಯೆಗಳಿಗೆ

ಧ್ವನಿ ಎತ್ತಲು ಎಫ್‌ಒಎಬಿ ನಿರ್ಧಾರ

ಬೆಳಗಾವಿ: ಕೈತಪ್ಪುತ್ತಿರುವ ಯೋಜನೆಗಳು ಸೇರಿದಂತೆ ಬೆಳಗಾವಿ ನಗರದ ಜ್ವಲಂತ ಸಮಸ್ಯೆಗಳ ಕುರಿತು ಧ್ವನಿ ಎತ್ತಲು ಫೆಡರೇಶನ್ ಆಫ್ ಅಸೋಸಿಯೇಶನ್ ಆಫ್ ಬೆಳಗಾವಿ (ಎಫ್‌ಒಎಬಿ) ನಿರ್ಧರಿಸಿದೆ.

ಇಲ್ಲಿಯ ಫೌಂಡ್ರಿ ಕ್ಲಸ್ಟರ್ ಸಭಾಭವನದಲ್ಲಿ ಅಸೋಸಿಯೇಶನ್ ಪದಾಧಿಕಾರಿಗಳ ಸಭೆ ಈ ಕುರಿತು ಸುದೀರ್ಘವಾಗಿ ಚರ್ಚಿಸಿತು. ಎಫ್‌ಒಎಬಿ ಸಂಚಾಲಕ ಚೈತನ್ಯ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಸ್ತುತ ಬೆಳಗಾವಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸಂಕ್ಷಿಪ್ತ ಮಾಹಿತಿ ನೀಡಿದರು.

ಚೆಂಬರ್ ಆಫ್ ಕಾಮರ್ಸ್, ಕ್ರೆಡೈ, ಫೌಂಡ್ರಿ ಕ್ಲಸ್ಟರ್, ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯಸರ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಶನ್, ಡ್ರಗ್ಗಿಸ್ಟ್ಸ ಆಂಡ್ ಕೆಮಿಸ್ಟ್ಸ ಅಸೋಸಿಯೇಶನ್, ಪ್ರೊಫೇಶನಲ್ ಫೋರಮ್, ಕ್ಲಾಥ್ ಮರ್ಚಂಟ್ಸ್ ಅಸೋಸಿಯೇಶನ್, ಆಟೋಮೊಬೈಲ್ ಇಂಡಸ್ಟ್ರೀಸ್ ಮೊದಲಾದ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಿಟೀಸ್ 2 ಯೋಜನೆ ಮಂಜೂರಾಗಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ

ಕೈ ತಪ್ಪುವ ಹಂತದಲ್ಲಿರುವ ಕುರಿತು, ರಿಂಗ್ ರಸ್ತೆ



10 ವರ್ಷಗಳಾದರೂ ಪ್ರಗತಿ ಕಾಣದಿರುವ ಕುರಿತು, ಗೋಬರ್ ಧನ್ ಪ್ರೊಜೆಕ್ಟ್ ಜಾರಿಯಾಗದಿರುವ ಕುರಿತು, ಮೂರನೇ ರೈಲ್ವೆ ಗೇಟ್ ವಿಸ್ತರಣೆ ವಿಳಂಬ, ಧಾರವಾಡ – ಬೆಳಗಾವಿ ರೈಲ್ವೆ ಯೋಜನೆ ವಿಳಂಬ, ಕಡಿಮೆಯಾಗುತ್ತಿರುವ ವಿಮಾನಗಳ ಸಂಖ್ಯೆ, ಕಾರ್ಯಾರಂಭವಾಗದಿರುವ ಎಸ್ ಟಿಪಿ ಘಟಕ, ತ್ಯಾಜ್ಯ ವಿಲೇವಾರಿಯಲ್ಲಿನ ಅಸಮರ್ಪಕತೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಎಫ್‌ಒಎಬಿಯ ಮತ್ತೋರ್ವ ಸಂಚಾಲಕ ಎಂ.ಕೆ.ಹೆಗಡೆ ಸಭೆಯಲ್ಲಿ ನಡೆದ ಚರ್ಚೆಗಳನ್ನು ಕ್ರೋಢೀಕರಿಸಿ, ಎಲ್ಲ ವಿಷಯಗಳ ಕುರಿತು ಸಮಗ್ರ ಅಧ್ಯಯನದೊಂದಿಗೆ ಮೇ 14ರಂದು ವಿಸ್ತೃತ ಚರ್ಚೆ ನಡೆಸಿ, ನಂತರ ಸಂಬಂಧಿಸಿದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸೋಣ ಎಂದು ಪ್ರಕಟಿಸಿದರು.

ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಚೈತನ್ಯ ಕುಲಕರ್ಣಿ, ಪ್ರಭಾಕರ ನಾಗರಮುನೋಳಿ, ಪರಾಗ ಭಂಡಾರೆ, ಡಾ. ಎಚ್.ಬಿ. ರಾಜಶೇಖರ, ಎಸ್.ವೈ.ಕುಂದರಗಿ, ಎಂ.ಕೆ.ಹೆಗಡೆ, ಹೇಮೇಂದ್ರ ಪೋರವಾಲ, ರೋಹನ್ ಜುವಳಿ, ಸದಾನಂದ ಹುಂಬರವಾಡಿ, ಸ್ವಪ್ನಿಲ್ ಶಹಾ, ಸಂದೀಪ ಬಾಗೇವಾಡಿ, ಯುವರಾಜ ಹುಲಜಿ, ಸಿ.ಬಿ.ಹಿರೇಮಠ, ಜಿತೇಶ ಕಬ್ಬೂರ, ಎನ್ .ಜಿ.ಕುಲಕರ್ಣಿ, ಶರದ ಪಾಟೀಲ, ಎ.ಜಿ.ಕುಂದಪ, ಬಿ.ಜಿ.ಧರೆಣ್ಣಿ, ಎಸ್.ಎಸ್.ಗಡಿಯಣ್ಣವರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೇ 5ಕ್ಕೆ ಕಸಾಪ ಸಂಸ್ಥಾಪನಾ ದಿನಾಚರಣೆ

ಚನ್ನಮ್ಮನ ಕಿತ್ತೂರು: ರಾಜಗುರು ಸಂಸ್ಥಾನ ಕಲ್ಮಠದ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 112 ನೇಯ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಕನ್ನಡ ಭಾಷೆಯ ಮಾಧ್ಯಮದ ಉಳಿವು ಬೆಳವಣಿಗೆಯಲ್ಲಿ ಪರಿಷತ್ತಿನ ಪಾತ್ರ ಎಂಬ ವಿಷಯದ ಕುರಿತು ಮೇ 5ರಂದು ಬೆಳಿಗ್ಗೆ 10.30 ಗಂಟೆಗೆ ಕಲ್ಮಠದ ಚಂದರಗಿ ಸಭಾ ಭವನದಲ್ಲಿ ನಡೆಯಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಸ್ ಬಿ ದಳವಾಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಾನ್ನಿಧ್ಯ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ಅಧ್ಯಕ್ಷತೆ ಕಸಾಪ ಅಧ್ಯಕ್ಷ

ಡಾ. ಎಸ್.ಬಿ. ದಳವಾಯಿ, ಉದ್ಘಾಟಕರಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ವೈ. ತುಬಾಕಿ, ಅಥಿತಿಗಳಾಗಿ ಕ್ಷೇತ್ರ ಸಮನ್ವಯ ಅಧಿಕಾರಿ ಗಾಯತ್ರಿ ಅಜ್ಜವನ್ನವರ, ಉಪನ್ಯಾಸಕರಾಗಿ ಮಹಿಳಾ ರಕ್ಷಣಾ ವೇದಿಕೆಯ ಅಧ್ಯಕ್ಷೆ ಮಂಜುಳಾ ಕಡಕೋಳ ಮುಂತಾದವರು ಆಗಮಿಸುವರು.

ರಾಜಗುರು ಶಾಲಾ ಮಕ್ಕಳಿಂದ ಕನ್ನಡ ಪರ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕಿತ್ತೂರು ತಾಲೂಕಿನ ಪ್ರತಿಭಾವಂತ ಮಕ್ಕಳಿಗೆ ಸನ್ಮಾನ, ಇತ್ತೀಚಿಗೆ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರು ಮತ್ತು ನಾಲ್ಕನೆಯ, ಆರನೆಯ ಸ್ಥಾನ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನಗಳಿಸಿದ ಸಂಜನಾ ಉಮೇಶ ಅವರಾದಿ, ರೋಷಿಣಿ ವಿರುಪಾಕ್ಷಿ ಎಮ್ಮಿ, ಅನನ್ಯಾ ವೀರಭದ್ರಪ್ಪ ನೇಸರಿಗೆ, ಲಕ್ಷ್ಮೀ ಈರಣ್ಣಾ ಕೋಟಗಿ, ಅನು ಮಹೇಶ ಮೂಲಿಮನಿ ಮುಂತಾದವರು ಸೇರಿದಂತೆ ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ಹಾಗೂ ರಾಜಗುರು ಶಿಕ್ಷಣ ಸಂಸ್ಥೆಯ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸುವ ಕಾರ್ಯಕ್ರಮವಿರುವದು ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ತಿಳಿಸಿದ್ದಾರೆ.



ಹಾರೂಗೇರಿ: ಇಲ್ಲಿನ ಶಿಕ್ಷಣ ಪ್ರಸಾರಕ ಮಂಡಳದ ಹಾ. ವಿ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದ (ಚಿತ್ರಗುಪ್ತ) ಕರಣಿಕರಾಗಿ ಕಾರ್ಯ ನಿರ್ವಹಿಸಿ ವಯೋ ನಿವೃತ್ತಿ ಹೊಂದಿದ ರಂಗಪ್ಪ ಧರ್ಮಟ್ಟಿ ಅವರನ್ನು ಶಾಲಾ ಆಡಳಿತ ಮಂಡಳಿ ವತಿಯಿಂದ ಶಿಕ್ಷಕ ವೃಂದದವರು, ಸಿಬ್ಬಂದಿಯವರು ಸನ್ಮಾನಿಸಿ, ಗೌರವಿಸಿದರು.

ಮೇ 4ರಂದು ಕಾರಂಜಿಮಠದಲ್ಲಿ 299ನೇ ಶಿವಾನುಭವ

ಬೆಳಗಾವಿ: ಶಿವಬಸವನಗರ ಕಾರಂಜಿಮಠದ ಶಿವಾನುಭವ ಮಂಟಪದಲ್ಲಿ 299ನೇ ಶಿವಾನುಭವ ಹಾಗೂ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮವು ಮೇ 4ರಂದು ಸಂಜೆ 6 ಗಂಟೆಗೆ ಜರುಗುವುದು. ಗುರುಸಿದ್ದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಹಿರಿಯ ವೈದ್ಯರೂ ವಿಶ್ರಾಂತ ಪ್ರಾಚಾರ್ಯರೂ ಆದ ಡಾ. ಎಚ್. ಬಿ. ರಾಜಶೇಖರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜೆ.ಎನ್.ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಅವಿನಾಶ್ ಕವಿ ಅವರು ಆಗಮಿಸಿ ವಿಶ್ವಗುರು ಬಸವಣ್ಣನವರ ಬಹುಮುಖ ವ್ಯಕ್ತಿತ್ವ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುವರು. ಕಾರಂಜಿಮಠದ ಕುಮಾರೇಶ್ವರ ಸಂಗೀತ ಪಾಠಶಾಲೆಯ ಮಕ್ಕಳಿಂದ ಪ್ರಾರ್ಥನೆ ಜರುಗುವುದು ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ಪಂಚಪ್ಪ ಮುಗಳಿಗೆ ಸನ್ಮಾನ



ಚನ್ನಮ್ಮನ ಕಿತ್ತೂರು: ಪ್ರಸಕ್ತ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆಯಲ್ಲಿ ಕತ್ರಿದಡ್ಡಿ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ ಕುಮಾರ ಪಂಚಪ್ಪ ಮಾರುತಿ ಮುಗಳಿ 625 ಕ್ಕೆ 615 (98.40) ಅಂಕಗಳಿಸಿ ಉತ್ತಮ ಸಾಧನೆ ಮಾಡಿದ ಹಿನ್ನಲೆಯಲ್ಲಿ ಸನ್ಮಾನಿಸಲಾಯಿತು.

ತಾಲೂಕಿನ ಕತ್ರದಡ್ಡಿ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕ ವೃಂದವು ಅವರ ಮನೆಗೆ ಹೋಗಿ ವಿದ್ಯಾರ್ಥಿಗೆ ಸನ್ಮಾನಿಸಿ ಸಂತಸ ವ್ಯಕ್ತಪಡಿಸಿ ಮುಂದಿನ ವಿದ್ಯಾಭ್ಯಾಸವನ್ನು ಇದೇ ಮಾದರಿಯಲ್ಲಿ ಉತ್ತಮ ಸಾಧನೆ ಮಾಡಿ ಗ್ರಾಮದ ಹೆಸರನ್ನು ತರುವಂತವನಾಗಬೇಕೆಂದು ಆಶೀರ್ವದಿಸಿದರು.

ಮುಖ್ಯೋಪಾಧ್ಯಾಯ ಅಪ್ಪಯ್ಯ ತಿಗಡಿ, ಸಹ ಶಿಕ್ಷಕರಾದ ಎಂ ಪಿ ಕದಂ, ಜಿ ಸಿ ಇತಾಪೆ, ಮಹೇಶ್ವರ ಹೊಂಗಲ, ಎನ್ ಎನ್ ನಂದಿಹಳ್ಳಿ, ಬಸವರಾಜ ಚಲವಾದಿ, ಮಹಾಬಳೇಶ್ವರ ಕುಕಡೊಳ್ಳಿ, ನಾಯಕ್, ಶಾರದಾ ನಾಯಕ್, ಸುಮನ್ ಭಟ್, ಜ್ಯೋತಿ ಕಟಕಾಂಬಳೆ, ಉಜ್ವಲಾ ಪಾಟೀಲ ಸೇರಿದಂತೆ ವಿದ್ಯಾರ್ಥಿಯ ಕುಟುಂಬಸ್ಥರು ಉಪಸ್ಥಿತರಿದ್ದರು.

ಮಿಲಿಟರಿ ಬಾಲಕರ ವಸತಿ ನಿಲಯ ಪ್ರವೇಶಕ್ಕೆ ಅರ್ಜಿ

ಬೆಳಗಾವಿ: 2026–2027ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯ ಪ್ರವೇಶಕ್ಕಾಗಿ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಅಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಅಥಣಿ ನಗರದ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆದಿರಬೇಕು. ನಿಲಯದಲ್ಲಿ ಊಟ, ಉಪಹಾರ ಹಾಗೂ ವಸತಿ ಉಚಿತವಾಗಿರುತ್ತದೆ. ಆಸಕ್ತ ಮಾಜಿ ಸೈನಿಕರು ಹಾಗೂ ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳ ವಸತಿ ನಿಲಯದ ಪ್ರವೇಶಕ್ಕೆ ಅರ್ಜಿ ನಮೂನೆಯನ್ನು ಅಥಣಿ ಮಿಲಿಟರಿ ಬಾಲಕರ ವಸತಿ ನಿಲಯ ಅಧೀಕ್ಷಕರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಮೇ 10 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರ ಕಾರ್ಯಾಲಯಕ್ಕೆ ವೈಯಕ್ತಿಕವಾಗಿ ಭೇಟಿಯಾಗಿ ಅಥವಾ ನಿಲಯದ ಅಧೀಕ್ಷಕರನ್ನುಸಂಪರ್ಕಿಸಬಹುದಾಗಿದೆ ಎಂದು ಬೆಳಗಾವಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಚಡಿ ಏತ ನೀರಾವರಿ ಕಾಮಗಾರಿ ಮುಕ್ತಾಯಗೊಳಿಸಲು ಆಗ್ರಹ

ನೇಸರಗಿ: ಬೈಲಹೊಂಗಲ ತಾಲೂಕಿನ ಬಹುದಿನಗಳ ನೀರಾವರಿ ಯೋಜನೆಯ ಕನಸು 2005ರಲ್ಲಿ ಪ್ರಾರಂಭವಾದರೂ ಇನ್ನೂ ಆ ಏತ್ ನೀರಾವರಿ ಯೋಜನೆ ಕನಸು ನನಸಲ್ಲ ಇನ್ನೂವರೆಗೂ ಕನಸಾಗಿ ಉಳಿದಿದ್ದು, ಶಿರೂರ ಡ್ಯಾಮನಿಂದ ನೀರು ಹರಿಸುವ ಯೋಜನೆ ಕೇವಲ ಯೋಜನೆಯಾಗಿಯೇ ಉಳಿದಿದೆ. ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಆದಷ್ಟು ಬೇಗ



ಪೂರ್ಣಗೊಳಿಸಬೇಕು ಎಂದು ಹಸಿರು ಸ್ರೇನೆ ಮತ್ತು ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಗೋಕಾಕ ನಗರದ ಕಾರ್ಯನಿರ್ವಾಹಕಅಭಿಯಂತರರು, ಕರ್ನಾಟಕ ನೀರಾವರಿ ನಿಗಮದ ಕಾರ್ಯಾಲಯಕ್ಕೆ ಭೇಟಿ ನೀಡಿ ಮನವಿ ಸಲ್ಲಿಸಿದರು.

ಈ ಯೋಜನೆಯಿಂದ ಸುಮಾರು 40 ಹಳ್ಳಿಗಳಿಗೆ ನೀರಿನ ಬವಣೆ ತಪ್ಪಿಸುವ ಉದ್ದೇಶದಿಂದ ಪ್ರಾರಂಭವಾದ ಕಾಮಗಾರಿ ಕುಂಟುತ್ತ ಸಾಗುತ್ತಿದೆ. ಕೂಡಲೇ ಕಾಮಗಾರಿಗೆ ಚುರುಕು ನೀಡಿ ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಸವರಾಜ ಹೊಸಮನಿ, ಸತ್ಯನಾಯಿಕ ನಾಯಿಕ, ಹುಸೇನಸಾಬ್ ಕಿಲ್ಲದಾರ, ಸಿದ್ದಪ್ಪ ಹಣ್ಣಿಕೇರಿ, ಅಪ್ಪಣ್ಣ ಬಶೆಟ್ಟಿ, ಶಿವಾನಂದ್ ಹೊಸಮನಿ, ಮಲ್ಲೇಶ ಚಿಕ್ಕೋಡಿ, ಯಲ್ಲಪ್ಪ ಚಿಕ್ಕೋಪ್ಪ, ಈರಪ್ಪ ಪರಿಟ್ ಹಾಗೂ ರೈತರು ಉಪಸ್ಥಿತರಿದ್ದರು.

ಗುರುವಿನ ಋಣ ಬಲು ದೊಡ್ಡದು: ನಿವೃತ್ತ ಶಿಕ್ಷಕ ಬಾಳಪ್ಪ

ನೇಸರಗಿ: ವಿದ್ಯೆ ಕಲಿಸಿದ ಗುರುಗಳನ್ನು ಸ್ಮರಿಸುವುದರಿಂದ ಸದ್ಗತಿ ದೊರೆಯುತ್ತದೆ ಮತ್ತು ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ನಿವೃತ್ತ ಮುಖ್ಯ ಶಿಕ್ಷಕ ಬಾಳಪ್ಪ ರೊಟ್ಟಿ ಹೇಳಿದರು.

ಅವರು ಬುಧವಾರದಂದು ಗ್ರಾಮದ ವೀರಭದ್ರೇಶ್ವರ ಜಾತ್ರೆ ಅಂಗವಾಗಿ ಕಳೆದ 3 ದಶಕಗಳಿಂದ ಸಿಆರ್‌ಪಿಎಫ್ ಯಲ್ಲಿ ಸೇವೆ ಸಲ್ಲಿಸುತ್ತಿರುವ ಬಸವರಾಜ ಕುರಗುಂದ ಕುಟುಂಬ ಹಾಗೂ ಅವರೊಂದಿಗೆ ಕಲಿತ ವಿದ್ಯಾರ್ಥಿಗಳ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ್ದ ಗುರು ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಾವು ಗಳಿಸಿದ ಆಸ್ತಿ, ಅಂತಸ್ತು, ಸಂಪತ್ತು



ಯಾವುದೂ ಕೊನೆಯವರೆಗೂ ಉಳಿಯುವುದಿಲ್ಲ. ಆದರೆ ಕಲಿತ ವಿದ್ಯೆ ಮಾತ್ರ ಕೊನೆಯವರೆಗೂ ಇರುತ್ತದೆ. ಹಾಗಾಗಿ, ಪ್ರತಿಯೊಬ್ಬರ ಬದುಕಿನಲ್ಲಿ ಗುರುವಿನ ಶ್ರಮ ದೊಡ್ಡದು. ಗುರುವಿನ ಶ್ರಮಕ್ಕೆ ಪ್ರತಿಲವಾಗಿ ಶಿಷ್ಯರು ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಂಡಿರುವುದು ಸಂತಸದ ಸಂಗತಿ ಎಂದು ಹೇಳಿದರು.

ನಿವೃತ್ತ ಮುಖ್ಯ ಶಿಕ್ಷಕರಾದ ಗಂಗಪ್ಪ ಸತ್ತೀಗೇರಿ, ಮಲ್ಲಿಕಾರ್ಜುನ ಮದನಬಾವಿ ಮಾತನಾಡಿ, 35 ವರ್ಷಗಳ ನಂತರ ತಮಗೆ ಕಲಿಸಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಆತ್ಮೀಯವಾಗಿ ಸನ್ಮಾನಿಸಿ ಗುರುವಂದನೆ ಸಲ್ಲಿಸಿದ್ದು ಶಿಷ್ಯವೃಂದದ ಗುರುಋಣಕ್ಕೆ ಸಾಕ್ಷಿಯಾಗಿದೆ ಇದು ಗುರುಗಳಿಗೆ ತಾವು ನೀಡಿದ ಪ್ರೀತಿ, ಅಭಿಮಾನಕ್ಕೆ ಸಾಕ್ಷಿ ಎಂದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ರಾಜಶೇಖರ ಗೆಜ್ಜಿ, ಬಸನಗೌಡ ಪಾಟೀಲ, ಯಲ್ಲಪ್ಪ ರೊಟ್ಟಿ, ವಕೀಲ ಈಶ್ವರ ಚೋಬಾರಿ, ವರ್ತಕರಾದ ಗುರುರಾಜ ತುಬಚಿ, ಸುರೇಶ ಇಂಚಲ, ಉಮೇಶ ಕರವೀರನವರ, ಮಾಜಿ ಯೋಧ ಈರಪ್ಪ ಹೊಂಡಪ್ಪನವರ, ಬಸವ ರಾಜ ಕಾಡಣ್ಣವರ, ಶಿವಾನಂದ ಮಾಸ್ತ ಮರಡಿ, ಗ್ರಾಮದಹಿರಿಯರು, ಪುರವಂತರು, ಗ್ರಾಮಸ್ಥರು ಇದ್ದರು.

ಮನುಷ್ಯನ ಬದುಕು ಸಾರ್ಥಕತೆಯ ಕಡೆ ಸಾಗಲಿ



ಸವದತ್ತಿ: ಬದುಕನ್ನು ಸಾರ್ಥಕತೆಯ ಕಡೆಗೆ ಕೊಂಡೊಯ್ಯುವುದು ಮನುಷ್ಯನ ಗುರಿಯಾಗಬೇಕು. ಇಂತಹ ಮೌಲ್ಯವನ್ನು ಸಾಹಿತ್ಯದಲ್ಲಿ ಕಾಣಬಹುದು ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಸಹಾಯಕ ಪ್ರಾಧ್ಯಾಪಕರಾದ ಡಾ.ಮಲ್ಲಪ್ಪ ಎನ್.ಬಂಡಿ ಹೇಳಿದರು.

ಇಲ್ಲಿನ ಕೆ. ಎಲ್. ಇ. ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದ ಐಕ್ಯೂಎಸಿ ಮತ್ತು ಕನ್ನಡ ವಿಭಾಗದ ಸಹಯೋಗದಲ್ಲಿ ಏರ್ಪಡಿಸಿದ್ದ ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬದುಕಿನ ಅನುಭವಗಳು ಕಲಾತ್ಮಕ ಅಭಿವ್ಯಕ್ತಿ ರೂಪದಲ್ಲಿದ್ದರೆ ಸಾಹಿತ್ಯವಾಗುತ್ತದೆ, ಚಿತ್ರದಲ್ಲಿದ್ದರೆ ಚಿತ್ರಕಲೆಯಾಗುತ್ತದೆ. ಮನುಷ್ಯ ತಾನು ಲೋಕದಲ್ಲಿ ಕಂಡ ಅನುಭವಗಳನ್ನು ಅಕ್ಷರವಾಗಿಸಿಕೊಳ್ಳುವಲ್ಲಿ ಅವನ ಪ್ರತಿಭೆ ಅಡಗಿರುತ್ತದೆ. ಎಲ್ಲರಲ್ಲಿ ಇಲ್ಲದ ಅಂತರ್‌ದೃಷ್ಟಿ ಕವಿ ಮತ್ತು ಕಲಾವಿದನಲ್ಲಿರುತ್ತದೆ. ಆದಕ್ಕಾಗಿಯೇ ಇತರರಿಗಿಂತ ಕವಿ, ಕಲಾವಿದರು ವಿಶಿಷ್ಟವಾಗಿ, ವಿಭಿನ್ನವಾಗಿ ಕಾಣಿಸುತ್ತಾರೆ ಎಂದರು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಎನ್. ಆರ್.ಸವತಿಕರ ವಹಿಸಿದ್ದರು. ಐಶ್ವರ್ಯ ಗುಡೆನವರ ಪ್ರಾರ್ಥಿಸಿದರು, ಪ್ರತಿಭಾ ಕರನಾಯ್ಕರ ಸ್ವಾಗತಿಸಿದರು, ಪ್ರೊ. ಕೆ.ರಾಮರೆಡ್ಡಿ ಪರಿಚಯಿಸಿದರು, ವೇದಿಕೆ ಮೇಲೆ ಐಕ್ಯೂಎಸಿ ಸಂಯೋಜಕರಾದ ಪ್ರೊ. ವಿ.ಎಸ್.ಮೀಶಿ, ಕನ್ನಡ ವಿಭಾಗದ ಅಧ್ಯಾಪಕರಾದ ಮೋಹನ್ ಬೆಣಚಮರ್ಡಿ ಉಪಸ್ಥಿತರಿದ್ದರು, ಸರಸ್ವತಿ ಪಾಣಗಟ್ಟಿ ನಿರೂಪಿಸಿದರು, ಸೌಂದರ್ಯ ಸೂರ್ಯವಂಶಿ ವಂದಿಸಿದರು. ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಗ್ರಾಪಂನಲ್ಲಿ ಬುದ್ಧ ಜಯಂತಿ ಆಚರಣೆ

ತೆಲಸಂಗ: ಯುದ್ಧ ಬೇಡ, ಬುದ್ಧ ಬೇಕು ಎಂಬ ಘೋಷವಾಕ್ಯದಂತೆ, ಪ್ರಸ್ತುತ ಸಮಾಜಕ್ಕೆ ಶಸ್ತ್ರಗಳಿಗಿಂತ ಬುದ್ಧನ ಶಾಂತಿ ಮಂತ್ರದ ಅವಶ್ಯಕತೆ ಹೆಚ್ಚಿದೆ ಎಂದು ಗ್ರಾಪಂ ಕಾರ್ಯದರ್ಶಿ ಭೀಮಾಶಂಕರ ದಂದರಗಿ ಹೇಳಿದರು.

ಗ್ರಾಮದ ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ನಡೆದ ಬುದ್ಧ ಪೂರ್ಣಿಮೆಯ ನಿಮಿತ್ತ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಂದಿನ ಅಶಾಂತಿಯ ಜಗತ್ತಿನಲ್ಲಿ ಬುದ್ಧನ ತತ್ವಗಳು ದಾರಿದೀಪವಾಗಿವೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವ ಮೂಲಕ ಯುವಪೀಳಿಗೆ ಸಮಾಜದಮುಖ್ಯವಾಹಿನಿಗೆ ಬರಬೇಕು. ಯಾವುದನ್ನೂ ಕುರುಡಾಗಿ ನಂಬದೆ ವಿವೇಚನೆಯಿಂದ ಬದುಕುವುದನ್ನು ಕಲಿಯಬೇಕು. ಬುದ್ಧ ಪ್ರತಿಪಾದಿಸಿದ ಅಹಿಂಸೆ ಮತ್ತು ಸಹಬಾಳ್ವೆ ಇಂದಿನ ಭಾರತಕ್ಕೆ ಅತ್ಯಂತ ಅಗತ್ಯವಾಗಿದೆ. ದ್ವೇಷವನ್ನು ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯ ಎಂಬ ಸತ್ಯವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದರು.

ಲೆಕ್ಕ ಸಹಾಯಕ ಶರಣಪ್ಪಾ ಜನಾಯಿ, ಕಾಶಲಿಂಗಲೋಖಂಡೆ, ಸದಸ್ಯರುಗಲಾದ ಪರಶು ಕಂದಾರೆ, ಸಂಗಮೇಶ ಕಂದಾರೆ, ಸಿದ್ದಲಿಂಗ ಮಾದರ, ಸಂಗಮೇಶ ಕುಮಠಳ್ಳಿ, ಶಿವಾನಂದ ಬನಗೊಂಡ ಸೇರಿದಂತೆ ಇತರರು ಉಪಸ್ಥಿತರಿದ್ದರು.



ರಾಯಬಾಗ: ಕಾರ್ಮಿಕ ದಿನಾಚರಣೆ



ರಾಯಬಾಗ: ತನ್ನ ಹಾಗೂ ತನ್ನ ಕುಟುಂಬದ ಹೊಟ್ಟೆ ತುಂಬಿಸುವಷ್ಟು ಆಹಾರ ಸಂಪಾದಿಸಲು ಇನ್ನೊಬ್ಬರ ಅಡಿಯಾಳಾಗಿ ಹಗಲಿರುಳು ಬೆವರು ಬಸಿಯುತ್ತಿರುವ ಶ್ರಮ ಜೀವಿಗಳ ಕಷ್ಟವನ್ನು ಸ್ಮರಿಸುವ ದಿನವೇ ಕಾರ್ಮಿಕ ದಿನಾಚರಣೆ ಎಂದು ಸಿಐಟಿಯು ತಾಲೂಕಾ ಅಧ್ಯಕ್ಷೆ ಚನ್ನಮ್ಮ ಗಡಕರಿ ಹೇಳಿದರು.

ಪಟ್ಟಣದ ಅಭಾಜಿ ವೃತ್ತದ ಬಳಿ ಕಾರ್ಮಿಕ ದಿನಾಚರಣೆ ಹಾಗೂ ಕಾರ್ಮಿಕ ಮುಖಂಡ ದಿ.ವಿ.ಪಿ.ಕುಲಕರ್ಣಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಇಂದು ಸರ್ಕಾರಗಳು ಬಂಡವಾಳ ಶಾಹಿಗಳ ಜೇಬು ತುಂಬಿಸಿ ದುಡಿಯುವ ವರ್ಗದವರಿಗೆ ಕನಿಷ್ಟ ಕೂಲಿಯನ್ನೂ ಕೊಡುತ್ತಿಲ್ಲ. ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಲೇ ಇದೆ. ಮದುವೆಗಳಲ್ಲಿ ಕನಿಷ್ಠ ತಾಳಿಯನ್ನು ಕೊಳ್ಳಲಾಗುತ್ತಿಲ್ಲ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ನೌಕರರ ಸಂಘದ ಕೃಷ್ಣಾ ಸಲಗರೆ, ಲಕ್ಷ್ಮಣ ತೋಳೆ, ಯುಸೂಫ ಮಕಾನದಾರ, ಗೋಪಾಲ ಜಲಾಲಪೂರ, ಭಾರತಿ ಜೋಗಣ್ಣವರ, ಮಾಲಾ ಪತ್ತಾರ, ಆಯೇಷಾ ದೇಸಾಯಿ, ಜಯಶ್ರೀ ಕಾನಟ್ಟಿ, ಪಲ್ಲವಿ ಕಾಂಬಳೆ, ಉಮಾಶ್ರೀ ಗಡಕರಿ, ಮಾಲು ಮಠಪತಿ, ಭಾರತಿ

ಗಚ್ಚಿ, ಕಾವೇರಿ ನಿಲಜಗಿಮಠ, ಶೋಭಾ ನಿಂಗಣ್ಣವರ, ಮಹಾನಂದಾ ಕಾಂಬಳೆ, ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯತಿ, ಬೀದಿ

ಬದಿಯ ವ್ಯಾಪಾರಸ್ಥರು ಹಾಗೂ ಅನೇಕ ದುಡಿಯುವ ವರ್ಗದವರು ಉಪಸ್ಥಿತರಿದ್ದರು.

ಮರು ಮೌಲ್ಯಮಾಪನ ರಾಜ್ಯಕ್ಕೆ 7ನೇ ರ್‍ಯಾಂಕ್

ಬೆಳಗಾವಿ: ಇಲ್ಲಿನ ಕೆಎಲ್‌ಇ ಸಂಸ್ಥೆಯ ರಾಜಾ ಲಖಮಗೌಡ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿನಿಯು



2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಆರುಷಿ ಪಾಟೀಲ ಅದ್ವಿತೀಯ ಸಾಧನೆಗೈದಿದ್ದಾಳೆ. 600 ಕ್ಕೆ 590 ಅಂಕ ಪಡೆದು ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದಿದ್ದಳು. ಮರು ಮೌಲ್ಯಮಾಪನದ ನಂತರ 600 ಕ್ಕೆ 593 ಅಂಕ ಪಡೆದು ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದಿದ್ದರಿಂದ ಕುಟುಂಬಸ್ಥರು ಹಾಗೂ ಕಾಲೇಜು ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ವಿದ್ಯಾರ್ಥಿನಿಯ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ ಗೌರವಾಧ್ಯಕ್ಷ ಪ್ರಭಾಕರ ಕೋರೆ, ಕಾರ್ಯಾಧ್ಯಕ್ಷ ಅಮಿತ ಕೋರೆ ಹಾಗೂ ಸರ್ವಸದಸ್ಯರು, ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರು ಮತ್ತು ಸದಸ್ಯರು, ಕೆ.ಎಲ್.ಇ. ಸಂಸ್ಥೆಯ ಆಜೀವ ಸದಸ್ಯರು, ಪ್ರಾಚಾರ್ಯರು, ಉಪಪ್ರಾಚಾರ್ಯರು ಹಾಗೂ ಮಹಾವಿದ್ಯಾಲಯದ ಸಿಬ್ಬಂದಿ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಕಿರುಸುದ್ದಿ

ಬುದ್ಧ ಪೂರ್ಣಿಮಾ ಆಚರಣೆ

ಬೆಳಗಾವಿ : ಬುದ್ಧವಿಹಾರದಲ್ಲಿ ಬುದ್ಧ ಪೂರ್ಣಿಮಾ ಹಬ್ಬವನ್ನು ಅತ್ಯಂತ ಭಕ್ತಿ, ಸಂಭ್ರಮ ಮತ್ತು ಶಾಂತಿಯ ವಾತಾವರಣದಲ್ಲಿ ಆಚರಿಸಲಾಯಿತು. ಗೌತಮ ಬುದ್ಧರ ಜೀವನ ಸಂದೇಶಗಳನ್ನು ಸ್ಮರಿಸುವ ಈ ವಿಶೇಷ ದಿನದ ಅಂಗವಾಗಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.ಜಿಲ್ಲಾ ಆಡಳಿತದ ವತಿಯಿಂದ ಬುದ್ಧ ಜಯಂತಿ ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ಹಾಗೂ ಗೌರವಪೂರ್ವಕವಾಗಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಬುದ್ಧನ ತತ್ವಗಳು –ಅಹಿಂಸೆ, ಸಮಾನತೆ, ಶಾಂತಿ ಮತ್ತು ಮಾನವೀಯ ಮೌಲ್ಯಗಳ ಬಗ್ಗೆ ಉಪನ್ಯಾಸಗಳು ನಡೆಯಿತು. ಸಮಾಜದಲ್ಲಿ ಸೌಹಾರ್ದತೆ ಬೆಳೆಸಲು ಬುದ್ಧನ ಮಾರ್ಗದರ್ಶನ ಅತ್ಯಂತ ಪ್ರಸ್ತುತವೆಂದು ವಕ್ತಾರರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಭಕ್ತರು ಭಾಗವಹಿಸಿದ್ದರು. ಬುದ್ಧ ಪೂರ್ಣಿಮಾ ಹಬ್ಬವು ಬೆಳಗಾವಿಯಲ್ಲಿ ಶಾಂತಿ ಮತ್ತು ಸಹಬಾಳ್ವೆಯ ಸಂದೇಶವನ್ನು ಹರಡುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಈ ಕಾರ್ಯಕ್ರಮದಲ್ಲಿ ಬೆಳಗಾವಿ ಉತ್ತರ ಶಾಸಕ ಆಸಿಫ್ ಸೇಠ್, ಉಪ ಮಹಾಪೌರ ಹಣಮಂತ ಕೊಂಗಾಲಿ, ದಲಿತ್ ಮುಖಂಡ, ಮಲ್ಲೇಶ್ ಚೌಗೂಲ್, ನಗರಸೇವಕ ಸಂದೀಪ್ ಜೇರಿಗೆಳ್ ಮಾರ್ಕೆಟ್ ಸಿಪಿಐ ಖಾಲಿ ಮಿರ್ಚಿ ಭಾರತೀಯ ಬೌದ್ಧ ಮಹಾಸಭಾ ಸದಸ್ಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶಂಕರ ಸಾಹಿತ್ಯ ರತ್ನ ಪ್ರಶಸ್ತಿಗೆ ವೈದ್ಯ ಸಾಹಿತಿ ಡಾ. ದಯಾನಂದ ನೂಲಿ ಕೃತಿ ಆಯ್ಕೆ



ಚಿಕ್ಕೋಡಿ: ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಸಚಿನ ಮಗದುಮ್ಮ ಅವರ ತಂದೆ ಶಂಕರ ಮಗದುಮ್ಮ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಶಂಕರ ಸಾಹಿತ್ಯ ರತ್ನ ಪ್ರಶಸ್ತಿಗೆ ಚಿಕ್ಕೋಡಿಯ ವೈದ್ಯ ಸಾಹಿತಿ ಡಾ. ದಯಾನಂದ ನೂಲಿ ಅವರ ಶರಣರ ಶಿವಯೋಗ ಕೃತಿ ಆಯ್ಕೆಯಾಗಿದೆ. ಶಂಕರಣ್ಣ ಬಾಬುರಾವ ಮಗದುಮ್ಮ ಸಾಂಸ್ಕೃತಿಕ ಪ್ರತಿಷ್ಠಾನದಿಂದ ನೀಡಲಾಗುತ್ತಿರುವ ಚೊಚ್ಚಲ ಪ್ರಶಸ್ತಿಯು 15 ಸಾವಿರ ನಗದು, ಫಲಕ, ಸ್ಮರಣಿಕೆಯನ್ನು ಒಳಗೊಂಡಿದೆ. ಮೇ. 3 ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದಲ್ಲಿ ನಡೆಯುವ ಶಂಕರಣ್ಣ ಮಗದುಮ್ಮ ಅವರ 83ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ವೈದ್ಯ ಸಾಹಿತಿ ದಯಾನಂದ ನೂಲಿ ಅವರು ಬೃಹತ್ ಕಾದಂಬರಿ ಮರುಳಶಂಕರ ದೇವರು ಅನುಭವ ಯಾತ್ರೆ ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಹಲವು ಕಥೆ, ಕಾದಂಬರಿ, ಕವನ ಸಂಕಲನಗಳು ಇವರಿಂದ ಹೊರಬಂದಿವೆ.

ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ

ನೇಸರಗಿ: ಸಮೀಪದ ಮದನಬಾವಿ ಗ್ರಾಮದಲ್ಲಿ ಈರಕಂಠಿ ಹೊಲದ ರಸ್ತೆ ಹಾಗೂ ನೀಲಗಂಗಮ್ಮ ದೇವಸ್ಥಾನದಿಂದ ಮತ್ತಿಕೊಪ್ಪ ಗ್ರಾಮಕ್ಕೆ ಹೋಗುವ ರಸ್ತೆ ಕಾಮಗಾರಿಗಳಿಗೆ, 30 ಲಕ್ಷ ರೂಪಾಯಿಗಳ ಕಾಮಗಾರಿಗೆ ಶುಕ್ರವಾರದಂದು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ಭೂಮಿ ಪೂಜೆ ನೆರವೇರಿಸುವದರ ಮೂಲಕ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.ಚಾಲನೆ ನೀಡಿ ಮಾತನಾಡಿದ ಶಾಸಕ ಬಾಬಾಸಾಹೇಬ ಪಾಟೀಲ ಅವರು, ಈ ಎರಡು ಹೊಲಕ್ಕೆ ಹೋಗುವ ರಸ್ತೆಗಳ ಅಭಿವೃದ್ಧಿಯಿಂದ ರೈತರ ಬೆಳೆ ಸಾಗಾಣಿಕೆ, ಹೋಗಿ – ಬರಲು ರೈತರಿಗೆ ಅನುಕೂಲ ಆಗುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದು ಇದರ ಪ್ರಯೋಜನ ರೈತರು ಪಡೆಯಿರಿ ಎಂದರು.ಈ ಸಂದರ್ಭದಲ್ಲಿ ಮುಖಂಡರಾದ ಸಚಿನ ಪಾಟೀಲ, ರವಿ ಸಿದ್ದಮ್ಮನವರ, ಮಹಾಂತೇಶ ಗುಜನಾಳ, ಬಸವರಾಜ ಸಿದ್ದಮ್ಮನವರ, ಬಾಬು ಮರಿಗೌಡರ, ಬಸವಣ್ಣೆಪ್ಪ ಹುದ್ದಾರ, ಬಸವಣ್ಣೆಪ್ಪ ದೊಡ್ಡಗೌಡರ ಸೇರಿದಂತೆ ಕಾಂಗ್ರೆಸ್ ಮುಖಂಡರು, ಅನೇಕ ರೈತರು ಉಪಸ್ಥಿತರಿದ್ದರು.

ನಾಟಕೋತ್ಸವ ಇಂದು

ಧಾರವಾಡ: ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ಚಿಣ್ಣರ ನಾಟಕೋತ್ಸವ ಉದ್ಘಾಟನಾ ಸಮಾರಂಭ ಮೇ 2 ಮತ್ತು 3ರಂದು ರಂಗಾಯಣದ ಪಂ. ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ ನಡೆಯಲಿದೆ. ಮೇ 2ರ ಸಂಜೆ 5.30ಕ್ಕೆ ಸಾಹಿತಿ ಡಾ.ಬಸು ಬೇವಿನಗಿಡದ ನಾಟಕೋತ್ಸವ ಉದ್ಘಾಟಿಸಲಿದ್ದು, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಕೆ.ಎಚ್. ಚನ್ನೂರ ಆಗಮಿಸಲಿದ್ದಾರೆ. ಮೇಳದ ಸಂಚಾಲಕ ಅರುಣಕುಮಾರ್ ಮೇದಾರ ಪಾಲ್ಗೊಳ್ಳಲಿದ್ದಾರೆ. ಮೇ 3ರ ಸಂಜೆ 5.30ಕ್ಕೆ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಶಿಬಿರದ ಸಮಾರೋಪ ಭಾಷಣ ಮಾಡಲಿದ್ದು, ರಂಗಾಯಣ ನಿರ್ದೇಶಕ ಝುಕೀರ ನದಾಫ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ತಿಳಿಸಿದ್ದಾರೆ.



ಬೆಳಗಾವಿ : ನಗರದ ಬುದ್ಧವಿಹಾರದಲ್ಲಿ ಬುದ್ಧ ಪೂರ್ಣಿಮಾ ಹಬ್ಬವನ್ನು ಅತ್ಯಂತ ಭಕ್ತಿ, ಸಂಭ್ರಮ ಮತ್ತು ಶಾಂತಿಯ ವಾತಾವರಣದಲ್ಲಿ ಆಚರಿಸಲಾಯಿತು. ಗೌತಮ ಬುದ್ಧರ ಜೀವನ ಸಂದೇಶಗಳನ್ನು ಸ್ಮರಿಸುವ ಈ ವಿಶೇಷ ದಿನದ ಅಂಗವಾಗಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.ಜಿಲ್ಲಾ ಆಡಳಿತದ ವತಿಯಿಂದ ಬುದ್ಧ ಜಯಂತಿ ಕಾರ್ಯಕ್ರಮವನ್ನು ಸಾಂಪ್ರದಾಯಿಕವಾಗಿ ಹಾಗೂ ಗೌರವಪೂರ್ವಕವಾಗಿ ಆಯೋಜಿಸಲಾಗಿತ್ತು.

ಶಂಕರಣ್ಣ ಮಗದುಮ್ಮ ಪ್ರತಿಷ್ಠಾನದಿಂದ ಚಿಕ್ಕೋಡಿಯಲ್ಲಿ ವಿವಿಧ ಕಾರ್ಯಕ್ರಮ



ಚಿಕ್ಕೋಡಿ: ಪಟ್ಟಣದ ಜಿಎಸ್ಇ ಸಂಸ್ಥೆಯ ಮಹಾವಿದ್ಯಾಲಯದ ಆವರಣದಲ್ಲಿ ಮೇ 3ರಂದು ಬೆಳಿಗ್ಗೆ 10 ಗಂಟೆಗೆ ಶಂಕರ ಸಾಹಿತ್ಯ ರತ್ನ ಪುರಸ್ಕಾರ 2026 ಸೇರಿದಂತೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಸ್ಥೆಯ ಅಧ್ಯಕ್ಷ ಶಂಕರಣ್ಣ ಮಗದುಮ್ಮ ಅವರ 83ನೇ ಜನ್ಮದಿನೋತ್ಸವ ನಿಮಿತ್ಯ ನಡೆಯುವ ಕಾರ್ಯಕ್ರಮದಲ್ಲಿ ಪಟ್ಟಣದ ವೈದ್ಯ ಸಾಹಿತಿ ಡಾ. ದಯಾನಂದ ನೂಲಿ ಅವರ ಶರಣರ ಶಿವಯೋಗ ಕೃತಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.ಚಿಕ್ಕೋಡಿಯ ಸಂಪಾದನಾ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ಸಾನ್ನಿದ್ಯದಲ್ಲಿ ನಡೆಯುವ ಕಾರ್ಯಕ್ರಮದ ಗೌರವ ಅಧ್ಯಕ್ಷತೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶಂಕರಣ್ಣ ಮಗದುಮ್ಮ ವಹಿಸಲಿದ್ದಾರೆ. ಹಿರಿಯ ಸಾಹಿತಿ ಪ್ರೊ. ಎಸ್ ವೈ ಹಂಜಿ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಚಾರ್ಯ ಬಸವರಾಜ ಜಗಜಂಪಿ ಪ್ರಶಸ್ತಿ ಪ್ರದಾನ ಮಾಡುವರು. ಮುಖ್ಯ ಅತಿಥಿಗಳಾಗಿ ಕಾಗವಾಡದ ನಿವೃತ್ತ ಪ್ರಾಧ್ಯಾಪಕ, ಸಾಹಿತಿ ಎಂ ಬಿ ಹೂಗಾರ, ಬೆಳಗಾವಿ ಸಾಹಿತಿ ಪಿ ಜಿ ಕೆಂಪಣ್ಣವರ ಭಾಗವಹಿಸಲಿದ್ದಾರೆ ಎಂದು ಶಂಕರಣ್ಣ ಮಗದುಮ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಶಂಕರ ಮಗದುಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೇಸರಗಿ: ಸಮೀಪದ ಮದನಬಾವಿ ಗ್ರಾಮದಲ್ಲಿ ಈರಕಂಠಿ ಹೊಲದ ರಸ್ತೆ ಹಾಗೂ ನೀಲಗಂಗಮ್ಮ ದೇವಸ್ಥಾನದಿಂದ ಮತ್ತಿಕೊಪ್ಪ ಗ್ರಾಮಕ್ಕೆ ಹೋಗುವ ರಸ್ತೆ ಕಾಮಗಾರಿಗಳಿಗೆ, 30 ಲಕ್ಷ ರೂಪಾಯಿಗಳ ಕಾಮಗಾರಿಗೆ ಶುಕ್ರವಾರದಂದು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ಭೂಮಿ ಪೂಜೆ ನೆರವೇರಿಸುವದರ ಮೂಲಕ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ಬೇಡಿಕೆ ಈಡೇರಿಕೆಗೆ ಸಿದ್ಧರ ಆಗ್ರಹ

ಸುರೇಬಾನ: ಅಲೆಮಾರಿ 49 ಸಮುದಾಯಗಳನ್ನು ಪ್ರವರ್ಗ ಎ ದಲ್ಲಿ ಶೇ 1% ಒಳ ಮೀಸಲಾತಿಯನ್ನು ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ಪ್ರಕಾರ ಮಾಡಿ. ಇಲ್ಲವಾದರೆ ನಮ್ಮ ಮೀಸಲಾತಿ ಜೊತೆಗೆ ಎ ವರ್ಗ ಬಲಗೈ ಸಮುದಾಯ ಜೊತೆ ಸೇರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಮದುರ್ಗ ಶಾಸಕ, ಕರ್ನಾಟಕ ಸರ್ಕಾರದ ಮುಖ್ಯ ಸಚೇತಕ ಅಶೋಕ ಅವರಿಗೆ ಮನವಿ ಸಲ್ಲಿಸಲಾಯಿತು.

ಅಲೆಮಾರಿ ಸುಡುಗಾಡು ಸಿದ್ದರ ಸಮುದಾಯದವರಿಗೆ ವಸತಿ ರಹಿತ 90 ಕುಟುಂಬಗಳಿಗೆ ವಸತಿ ಉದ್ದೇಶಕ್ಕೆ 5 ಎಕರೆ ಭೂಮಿಯನ್ನು ಮುಂಜೂರಾತಿ ಮಾಡಿ. ಆತ್ಮಾನಂದ ನಗರವನ್ನು ಪಿಡಬ್ಲ್ಯೂಡಿ ಇಲಾಖೆಯಿಂದ ಹೊಸ ಯೋಜನೆಯಾದ ಬುದ್ಧ ಬಸವ ಅಂಬೇಡ್ಕರ್ ಯೋಜನೆಯಲ್ಲಿ ಆಯ್ಕೆ ಮಾಡಿ ಗ್ರಾಮವನ್ನು ಅಭಿವೃದ್ಧಿಗೊಳಿಸುವುದು. ಅಂಗನವಾಡಿ ನೂತನ ಕಟ್ಟಡವನ್ನು ನಿರ್ಮಾಣ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಯುವಕ ಮುತ್ತಣ ವಿಭೂತಿ ಸೇರಿದಂತೆ ಸಮಾಜದ ಮುಖಂಡರು ಈ ಎಲ್ಲಾ ಬೇಡಿಕೆಗಳನ್ನು ಶಾಸಕ ಅಶೋಕ ಪಟ್ಟಣ ಅವರಿಗೆ ಸಲ್ಲಿಸಿದರು.

ಇದಕ್ಕೆ ಸ್ಪಂದಿಸಿದ ಶಾಸಕ ಅಶೋಕ ಪಟ್ಟಣ ರವರು, ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಈ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮಕ್ಕೆ ನಡೆಸಲು ಸಹಾಯ ನೀಡಿದ ಎಲ್ಲರನ್ನು ಸನ್ಮಾನಿಸಲಾಯಿತು. ಶಿಕ್ಷರರಾದ ಶಿವಾನಂದ ಕರಿಮರಿ ನಿರೂಪಿಸಿದರು, ಎಸ್. ಜೆ.ಸರದೇಶಪಾಂಡೆ ಸ್ವಾಗತಿಸಿ ವಂದಿಸಿದರು.



ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಮೆಂಟ್–2026ಕ್ಕೆ ಚಾಲನೆ

ಸುರೇಬಾನ: ಸಮೀಪದ ಮನಿಹಾಳ ಗ್ರಾಮದ ಆತ್ಮಾನಂದ ನಗರದಲ್ಲಿ ಏರ್ಪಡಿಸಲಾಗಿದ್ದ ಅಖಿಲ ಕರ್ನಾಟಕ ಸುಡುಗಾಡು ಸಿದ್ದರ ರಾಜ್ಯ ಮಟ್ಟದ ಕ್ರಿಟ್ ಟೂರ್ನಮೆಂಟ್–2026ಕ್ಕೆ ರಾಮದುರ್ಗ ಶಾಸಕ, ಕರ್ನಾಟಕ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಚಾಲನೆ ನೀಡಿದರು.

ಜ್ಯೋತಿ ಬೆಳಗಿಸಿ, ಸನ್ಮಾನ ಸ್ವೀಕರಿಸಿದ ಶಾಸಕ ಅಶೋಕ ಪಟ್ಟಣ ಮಾತನಾಡಿ, ಸುಡುಗಾಡ ಸಿದ್ದರ ಸಮುದಾಯ ಬಹಳ ಚಿಕ್ಕದು. ತಮ್ಮ ಸಮುದಾಯಕ್ಕೆ ಸರ್ಕಾರದಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಸಿಗುವಂತೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಮನಿಹಾಳ ಆತ್ಮಾನಂದ ನಗರದ ಶ್ರೀ ಗುರುದೇವ ಆತ್ಮಾನಂದ ಪುಣ್ಯಾಶ್ರಮದ ಸಮರ್ಥ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಸುಡುಗಾಡ ಸಿದ್ದರ ಸಮುದಾಯದ ಹಿರಿಯರು ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿಸಿ. ಮಕ್ಕಳು ಮುಖ್ಯ ವಾಹಿನಿಗೆ ಬರಲು ಶ್ರಮಿಸಿ ಎಂದರು.

ಸುರೇಬಾನ ಪೊಲೀಸ್ ಠಾಣೆಯ ಪಿಎಸ್ಐ ಗುರುರಾಜ ಕಲಬುರ್ಗಿ ಮಾತನಾಡಿ, ಆಟದಲ್ಲಿ ಸೋಲು–ಗೆಲವು ಸಾಮಾನ್ಯ. ಶಾಂತಯುತವಾಗಿ ಆಟವಾಡಬೇಕು ಎಂದರು.

ಪತ್ರಕರ್ತ ಎಸ್.ಆರ್.ಗುರುಬಸಣ್ಣವರ ಮಾತನಾಡಿ, ಗೆಲುವು ಮಾನದಂಡವನ್ನಾಗಿಸಿಕೊಂಡು ಎಲ್ಲರೂ ಕಣಕ್ಕೆ ಇಳಿಯುತ್ತಾರೆ. ಆದರೆ, ಶ್ರಮಪಟ್ಟವರು ಮಾತ್ರ ಗೆಲುವು ಸಾಧಿಸುತ್ತಾರೆ. ನಿರ್ಣಾಯರ ನಿಯಮಕ್ಕೆ ತಲೆಬಾಗಿದಾಗ ಮಾತ್ರ ಆಟಕ್ಕೆ ಬೆಲೆ ಬರುತ್ತದೆ ಎಂದು ಹೇಳಿದರು.

ಸುಡುಗಾಡು ಸಿದ್ದರ ಸಮಾಜದ ಹಿರಿಯರಾದ ತಿಪ್ಪಣ್ಣ ಹು.ವಿಭೂತಿ ಅಧ್ಯಕ್ಷತೆ ವಹಿಸಿದ್ದರು.

ಮನಿಹಾಳ ಗ್ರಾಪಂನ ಮಾಜಿ ಸದಸ್ಯ ಕಾಶಿನಾಥ ಇಡಗಲ್ಲ, ನೂರಂದ ಕೊಂಗಿ, ಅಜಯ ಕುಮಾರ ಮಂದಾಲಿ, ನಿವೃತ್ತ ಮಾಜಿ ಸೈನಿಕ ಶಿವಾನಂದ ಸುಣಗಾರ, ಸಿವ್ಹಿಲ್ ಇಂಜನೀಯರ ಅನಿಲ ಗುರುಬಸಣ್ಣವರ, ಯಲ್ಲಪ್ಪ ವಿಭೂತಿ, ಗೋವಿಂದ ಏಣಿ, ಪ್ರಮೋದ ಬಾಲಪ್ಪನ್ನವರ, ಪತ್ರಿಕಾ ವರದಿಗಾರ ಬಸನಗೌಡ ಪಾಟೀಲ ಸೇರಿದಂತೆ ಅನೇಕರು ವೇದಿಕೆಯ ಮೇಲಿದ್ದರು.

ಬದುಕಿನ ಬಗ್ಗೆ ಉತ್ತಮ ಚಿಂತನೆ ಅಗತ್ಯ

ಗೋಕಾಕ: ಬಸವಣ್ಣನವರು ಶತಶತಮಾನದ ಹಿಂದೆ ಕಲ್ಯಾಣದ ಬಿಜ್ಜಳ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು. ಬಿಜ್ಜಳ ರಾಜ ಮಣ್ಣಿನ ಸಾಮ್ರಾಟನಾಗಿದ್ದರೆ, ಬಸವಣ್ಣನವರು ಹೃದಯ ಸಾಮ್ರಾಟನಾಗಿದ್ದರು. ಬಸವಣ್ಣ ಜಗತ್ತಿನ ಜನರ ಹೃದಯ ಸಿಂಹಾಸನದ ಮೇಲೆ ಕುಳಿತಿದ್ದಾರೆ. ಎಲ್ಲರೂ ಕಾಲ ಕೆಟ್ಟಿದೆ ಎನ್ನುತ್ತಾರೆ. ಆದರೆ, ಕಾಲ ಕೆಟ್ಟಿಲ್ಲ, ಕಟ್ಟೆಯ ಮೇಲೆ ಕುಳಿತು ಮಾತನಾಡುವವರ ತಲೆ ಕೆಟ್ಟಿತಿ ಎಂದು ಕೊಪ್ಪಳ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿ ಹೇಳಿದರು.

ತಾಲೂಕಿನ ಬೆಟಗೇರಿ ಗ್ರಾಮಸ್ಥರ ಸಹಯೋಗದಲ್ಲಿ ಬಸವ ಜಯಂತಿ ಹಾಗೂ 775 ವರ್ಷ ಬಾಳಿದ ಹೊಸಳ್ಳಿ ಮಹಾತಪಸ್ವಿ ಜಗದ್ಗುರು ಬೂದೀಶ್ವರ ಮಹಾಶಿವಯೋಗಿಗಳ ಶಿಲಾ ಮಂಟಪ ಲೋಕಾರ್ಪಣೆ ನಿಮಿತ್ಯ ಬೆಟಗೇರಿ ಗ್ರಾಮದಲ್ಲಿ ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಹಮ್ಮಿಕೊಂಡ ಆಧ್ಯಾತ್ಮಿಕ ಪ್ರವಚನದ ಐದನೇಯ ದಿನ ಸ್ಥಳೀಯ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ನಡೆದ ಪ್ರವಚನ ಮಂಗಲ ಕಾರ್ಯಕ್ರಮದಲ್ಲಿ ಆಶೀರ್ವಚನ ಮಾಡಿದ ಅವರು, ಧನ ಮತ್ತು ಕೀರ್ತಿ ಸಂಪತ್ತು ಉಳಿಯುವುದಿಲ್ಲಾ, ಸಂಪತ್ತು ಯಾರ ಹತ್ತಿರ ಉಳಿಯುವುದಿಲ್ಲಾ, ಜೀವನ ಕ್ಷಣಿಕವಾಗಿದೆ. ಉಸಿರು ತೆಗೆದುಕೊಂಡರೆ ಹುಟ್ಟು, ಉಸಿರು ಬಿಟ್ಟರೆ ಸಾವು. ಯಾರ ಹೃದಯ ಸ್ವಚ್ಛವಿದೆ ಅವರ ಹೃದಯದೊಳಗೆ ದೇವರು ಇರುತ್ತಾನೆ ಎಂದರು.

ಹೊಸಳ್ಳಿ ಅಭಿನವ ಬೂದೀಶ್ವರ ಸ್ವಾಮಿಜಿ, ಬಳಗಾನೂರ ಶಿವಶಾಂತವೀರ ಸ್ವಾಮೀಜಿ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು. ಸುಣಧೋಳಿ ಅಭಿನವ ಶಿವಾನಂದ ಸ್ವಾಮೀಜಿ ಸಮ್ಮುಖ ವಹಿಸಿದ್ದರು.



ಮಲ್ಲಿಕಾರ್ಜುನ ಕೊಡಗನೂರ ಅವರಿಂದ ತಬಲಾ ಸಾಥದೊಂದಿಗೆ ಕಲ್ಲೂರದ ಶಂಕರಯ್ಯ ಗುರುಮಠ ಅವರಿಂದ ಸಂಗೀತ ಸೇವೆ ನಡೆಯಿತು. ಶ್ರೀಗಳನ್ನು ಬೆಟಗೇರಿ ಗ್ರಾಮಸ್ಥರ ಪರವಾಗಿ ಈ ವೇಳೆ ಸತ್ಕರಿಸಿದ ಬಳಿಕ ಮಹಾಪ್ರಸಾದ ನಡೆಯಿತು.

ಈಶ್ವರ ಬಳಿಗಾರ, ಶ್ರೀಧರ ದೇಯಣ್ಣವರ, ಬಸವರಾಜ ಪಣದಿ, ಈರಯ್ಯ ಹಿರೇಮಠ, ಸಂಗಯ್ಯ ಹಿರೇಮಠ, ದುಂಡಪ್ಪ ಮಾಳೇದ, ಮಲ್ಲಪ್ಪ ಪಣದಿ, ಬಾಳಪ್ಪ ಕನೋಜಿ, ನಿಂಗಪ್ಪ ಕಂಬಿ, ದುಂಡಪ್ಪ ಕಂಬಿ, ಈರಣ್ಣ ಬಳಿಗಾರ, ಈರಪ್ಪ ದೇಯಣ್ಣವರ, ಯಲ್ಲಪ್ಪ ಮೇಳೆಣ್ಣವರ, ಸುರೇಶ ನೀಲಣ್ಣವರ, ಭೀಮನಾಯ್ಕ ನಾಯಕರ, ಭರಮಣ್ಣ ಪೂಜೇರ, ಸೇರಿದಂತೆ ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಹರ, ಗುರು, ಚರಮೂರ್ತಿಗಳು, ಸಂತ, ಶರಣರು, ಕೊಪ್ಪಳ ಮತ್ತು ಹೊಸಳ್ಳಿ ಶ್ರೀಗಳ ಪ್ರವಚನ ಆಯೋಜನೆ ಸಮಿತಿ ಪದಾಧಿಕಾರಿಗಳು, ಸದಸ್ಯರು, ಅಪಾರ ಸಂಖ್ಯೆಯಲ್ಲಿ ಭಕ್ತ ಜನ ಸಮೂಹ ಈ ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸುಪ್ರೀಂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಸದಾವಕಾಶ



ಬೆಳಗಾವಿ : ರಾಷ್ಟ್ರಾದ್ಯಂತ ವಿವಾದಗಳ ಸಮನ್ವಯತೆಗಾಗಿ ನ್ಯಾಯವನ್ನು ಸರಳವಾಗಿ ಪ್ರತಿ ಮನೆಗೂ ಸುಲಭವಾಗಿಸುವ ಮತ್ತು ಪರಿಹಾರವನ್ನು ಒಪ್ಪಿಕೊಳ್ಳುವ ಮೂಲಕ ಜನರು ಒಟ್ಟಾಗಿ ವಿವಾದಗಳನ್ನು ಪರಿಹರಿಸಲು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ಸಮಾಧಾನ ಸಮಾರೋಹ ಅಭಿಯಾನವನ್ನು ಆಯೋಜಿಸುತ್ತಿದೆ. ಏಪ್ರಿಲ್ 21 ರಿಂದ ಪ್ರಾರಂಭವಾಗಿ ಆಗಸ್ಟ್ 21, 22 ಮತ್ತು 23 ರಂದು ವಿಶೇಷ ಲೋಕ ಅದಾಲತ್ ನೊಂದಿಗೆ ಈ ಅಭಿಯಾನ ಮುಕ್ತಾಯಗೊಳ್ಳಲಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಅನು ಶಿವರಾಮ ಅವರು ತಿಳಿಸಿದರು.

ಗುರುವಾರನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಜರುಗಿದ ಸಮಾಧಾನ ಸಮಾರೋಹ್ ಕುರಿತು ಜರುಗಿದ ವೀಡಿಯೋ ಸಂವಾದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸರ್ವೋಚ್ಚ ನ್ಯಾಯಾಲಯ ತಲುಪಿದ ವ್ಯಾಜ್ಯಗಳ ಪರಿಹಾರಕ್ಕಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ವೋಚ್ಚ ನ್ಯಾಯಾಲಯವು ವಿಶೇಷ ಅಭಿಯಾನ ಹಮ್ಮಿಕೊಂಡಿದೆ. ಸರ್ವೋಚ್ಚನ್ಯಾಯಾಲಯದಲ್ಲಿ ರಾಜ್ಯದ 4328 ಪ್ರಕರಣಗಳು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಗುರುತಿಸಿ ಆಯಾ ರಾಜ್ಯಗಳಿಗೆ ವರ್ಗಾಯಿಸಲಾಗಿದೆ. ರಾಜ್ಯದ ಯಾವುದೇ ಭಾಗದಲ್ಲಿನ ಪಕ್ಷಗಾರರು, ತಾವು ಇರುವ ಸ್ಥಳದಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಿ ವ್ಯಾಜ್ಯ ಪರಿಹಾರ ಮಾಡಿಕೊಳ್ಳಬಹುದಾಗಿದೆ. ಪಕ್ಷಗಾರರಿಬ್ಬರುಒಂದೆಡೆಸೇರಿ ವ್ಯಾಜ್ಯ ಪರಿಹರಿಸಿಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದ್ದು, ಜನರ ಸಮಯ ಮತ್ತು ಖರ್ಚು ವೆಚ್ಚಗಳನ್ನು ಉಳಿಸಬೇಕೆಂಬ ಸದುದ್ದೇಶದೊಂದಿಗೆ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸಂದೀಪ ಪಾಟೀಲ ಅವರು ಮಾತನಾಡಿ, ಜನರಿಗೆ ತ್ವರಿತ ನ್ಯಾಯ ಒದಗಿಸುವುದು ನ್ಯಾಯಾಲಯಗಳ ಉದ್ದೇಶವಾಗಿದ್ದು, ವಿವಿಧ ಪ್ರಕರಣಗಳಲ್ಲಿ ಮಧ್ಯಸ್ಥಗಾರರ ಸಹಯೋಗದಲ್ಲಿ ಲೋಕ ಅದಾಲತ ನಡಯುತ್ತಿದೆ.

ಸಮಾಧಾನಸಮಾರೋಹ ವಿಶೇಷಅಭಿಯಾನ ಆಗಸ್ಟ್ 21, 22 ಹಾಗೂ 23 ರಂದು ಜರುಗಲಿದೆ. ರಾಷ್ಟ್ರಾದ್ಯಂತ ಜರುಗಲಿರುವ ಈ ಅಭಿಯಾನದಡಿ ಜಿಲ್ಲಾ, ತಾಲೂಕುವಾರು ಬಾಕಿ ಇರುವ ಪ್ರಕರಣಗಳನ್ನುಕೈಗೆತ್ತಿಕೊಳ್ಳಲಾಗುವುದು. ರಾಜ್ಯದ 4328 ಪ್ರಕರಣಗಳನ್ನು ಗುರುತಿಸಲಾಗಿದ್ದು ಈ ಪೈಕಿ ಜಿಲ್ಲೆಯಲ್ಲಿ ಅಂದಾಜು ನಾಲ್ಕು ನೂರಕ್ಕೂ ಅಧಿಕ ಪ್ರಕರಣಗಳನ್ನು ಸಮಾಧಾನ ಸಮಾರೋಹ ಅಭಿಯಾನದಡಿ ಕೈಗೆತ್ತಿಕೊಂಡು ಜಿಲ್ಲಾ, ತಾಲೂಕು ನ್ಯಾಯಾಲಯಗಳಲ್ಲಿ ಲೋಕ ಅದಾಲತ್ ಅಡಿ ಮಧ್ಯಸ್ಥಿಕೆಗಾರರ ಜೊತೆ ರಾಜಿ ಮಾಡುವ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದ್ದು ಪಕ್ಷದಾರರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಬುದ್ಧ ತೋರಿದ ದಾರಿಯಲ್ಲಿ ನಾವು ನಡೆಯೋಣ

ಚಿಕ್ಕೋಡಿ: ಬುದ್ಧ ನಡೆದ ದಾರಿಯಲ್ಲಿ ನಾವು ನಡೆಯಬೇಕು. ಪರೋಪಕಾರ ಮಾಡುವ ಗುಣ ಬೆಳೆಸಿಕೊಳ್ಳಬೇಕು. ಆಗಲೇ ಜೀವನ ಸಾರ್ಥಕವಾಗುವದು ಎಂದು ಕೆಪಿಸಿಸಿ ಪ್ರದಾನ ಕಾರ್ಯದರ್ಶಿ ಮಹಾವೀರ ಮೋಹಿತೆ ಹೇಳಿದರು.

ಪಟ್ಟಣದ ಬುದ್ದನಗರ ಬಡಾವಣೆಯಲ್ಲಿ ಶುಕ್ರವಾರ ಬುದ್ಧ ಪೌರ್ಣಿಮೆ ಹಾಗೂ ಕಾರ್ಮಿಕ ದಿನಾಚರಣೆ ನಿಮಿತ್ತ ಮೋಹಿತೆ ಪರಿವಾರದಿಂದ ಹಮ್ಮಿಕೊಂಡ ಪೌರ ಕಾರ್ಮಿಕರ ಸತ್ಕರಿಸಿ ಮಾತನಾಡಿದ ಅವರು, ಗ್ರಾಮ, ಪಟ್ಟಣ, ನಗರ ಸ್ವಚ್ಛ ಹಾಗೂ ಸುಂದರವಾಗಿ ಕಾಣಲು ಪೌರ ಕಾರ್ಮಿಕರ ಕೊಡುಗೆ ಸಾಕಷ್ಟಿದೆ. ಪೌರ ಕಾರ್ಮಿಕರ ಶ್ರಮವನ್ನು ಗುರುತಿಸುವ ಹೊಣೆಗಾರಿಕೆ ನಮ್ಮದಾಗಬೇಕು. ಕಾರ್ಮಿಕರ ದುಡಿಮೆಯಿಂದಲೇ ದೇಶ ಆರ್ಥಿಕವಾಗಿ ಸದೃಢವಾಗಲು ಸಾಧ್ಯವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮುಖಂಡ ದಿಲೀಪ ಜಮಾದಾರ ಮಾತನಾಡಿ, ಮಹಾವೀರ ಮೋಹಿತೆಅವರದ್ದು ತಾಯಿ ಹೃದಯವಾಗಿದೆ. ಬಡವರು, ಕಾರ್ಮಿಕರನ್ನು ಕಂಡರೆ ಮಮ್ಮಲ ಮರುಗುತ್ತಾರೆ. ಸಹಾಯ ಹಸ್ತ ನೀಡುವ ಮೂಲಕ ಅವರ ನೋವಿಗೆ ಸ್ಪಂದಿಸುವ ಗುಣ ಹೊಂದಿದ್ದು ಹೆಮ್ಮೆ ಎಣಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಯಬಾಗ, ಕಂಕಣವಾಡಿ, ಚಿಂಚಲಿ, ಕಬ್ಬೂರ, ಚಿಕ್ಕೋಡಿ, ಹಿರೇಕೋಡಿ ಸೇರಿದಂತೆ ವಿವಿಧ ಪಟ್ಟಣದ ಪಂಚಾಯಿತಿ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ನೂರಾರು ಪೌರ ಕಾರ್ಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು.



ಈ ಸಂದರ್ಭದಲ್ಲಿ ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ವಿಶ್ವನಾಥ ಚೌಗಲಾ, ಗಣೇಶ ಮೋಹಿತೆ, ರಾಮಕೃಷ್ಣ ಪಾನಬುಡೆ, ರುದ್ರಪ್ಪ ಸಂಗಪ್ಪಗೋಳ, ಅರ್ಜುನ ಬಂಡಗರ, ವೃಷಭ ಪಾಟೀಲ, ಪಿಎಸ್ಐ ಬಸಗೌಡ ನೇರ್ಲಿ, ಸಾಬೀರ ಜಮಾದಾರ, ಶ್ರೀಮಂತ ಮಾಳಗೆ, ಇರ್ಫಾನ ಬೇಪಾರಿ, ಗುಲಾಬಹುಸೇನ ಬಾಗವಾನ ಇತರರು ಇದ್ದರು.

ಎಸ್ಸೆಸ್ಸೆಲ್ಸಿ ಸಾಧಕರಿಗೆ ಸನ್ಮಾನ

ರಾಯಬಾಗ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿ ವಿವೇಕ ಸುಳ್ಳನ್ನವರರನ್ನು ರಾಯಬಾಗ ತಾಲೂಕಿನ ಕಾಂಕಣವಾಡಿ ಪಟ್ಟಣದಲ್ಲಿರುವ ಶ್ರೀ ರಾಮ ಸಹಕಾರಿ ಸಂಘದ ಕಚೇರಿಯಲ್ಲಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಬ್ಯಾರಿಸ್ಟರ್ ಪ್ರತಾಪರಾವ್ ಪಾಟೀಲ ಅವರು ವಿದ್ಯಾರ್ಥಿಯನ್ನು ಅಭಿನಂದಿಸಿ ಮಾತನಾಡಿ, ಸಂಕಷ್ಟಗಳ ನಡುವೆಯೂ ಹಠ ಮತ್ತು ಶ್ರಮ ಇದ್ದರೆ ಯಾವುದೇ ಗುರಿಯನ್ನೂ ಸಾಧಿಸಬಹುದು ಎಂಬುದನ್ನು ವಿವೇಕ ಸುಳ್ಳನ್ನವರು ತೋರಿಸಿದ್ದಾರೆ ಎಂದು ಹೇಳಿದರು. ಅವರ ಸಾಧನೆ ಗ್ರಾಮೀಣ ವಿದ್ಯಾರ್ಥಿಗಳಲ್ಲಿಯೂ ಆತ್ಮವಿಶ್ವಾಸ ಮೂಡಿಸುವಂತಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಪ್ರಕಾಶ ಹುಕ್ಕೇರಿ, ಕೆ.ಬಿ.



ದೇಸಾಯಿ, ಸಿದ್ದಪ್ಪ ಹುಕ್ಕೇರಿ, ಲಕ್ಷ್ಮಿಕಾಂತ ದೇಸಾಯಿ, ಹಾಲಪ್ಪ ಸುಳ್ಳನ್ನವರ, ಬಸವರಾಜ ಪೂಜೇರಿ, ವಿಠ್ಠಲ ಹುಕ್ಕೇರಿ ಸೇರಿದಂತೆ ಶ್ರೀ ರಾಮ ಸಹಕಾರಿ ಸಂಘದ ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಸರ್ಕಾರದಿಂದ ಗ್ಯಾರಂಟಿ ಜೊತೆಗೆ ಅಭಿವೃದ್ಧಿ ಕಾರ್ಯ

ರಾಮದುರ್ಗ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಚುನಾವಣೆಯಲ್ಲಿನೀಡಿರುವಪಂಚಗ್ಯಾರಂಟಿಗಳಸಮರ್ಪಕ ಅನುಷ್ಠಾನದ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ ವಿರೋಧ ಪಕ್ಷಗಳು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ ಎಂದು ಆರೋಪಿಸುವದರಲ್ಲಿ ಯಾವದೇ ಹುರುಳಿಲ್ಲ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಶುಕ್ರವಾರ ತೋರಣಗಟ್ಟಿ ಗ್ರಾಮದಲ್ಲಿ ರೂ. 30 ಲಕ್ಷ ವೆಚ್ಚದಲ್ಲಿ ತೋರಣಗಟ್ಟಿ – ಕೋರಕೊಪ್ಪ ರಸ್ತೆ ಸುಧಾರಣೆ ಹಾಗೂ ಕಟಕೋಳ ಬಸ್ ನಿಲ್ದಾಣದ ಸಮೀಪ ಮುಖ್ಯರಸ್ತೆ ರೂ. 2.60 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ಪಕ್ಷಗಳು ರಾಜ್ಯಸ ಸರ್ಕಾರದ ಜನಪರ ಕಾರ್ಯಗಳನ್ನು ಸಹಿಸದೆ ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದ ಅವರು ತಾಲೂಕಿನ ಕೆರೆಗಳ ನೀರು ತುಂಬಿಸುವ ಕಾರ್ಯಕ್ಕೆ ಅತಿ ಶೀಘ್ರದಲ್ಲಿ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಅಜ್ಜಯ್ಯ ಮಹಾಸ್ವಾಮಿಗಳು, ಮಹಾಂತೇಶಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಎಸ್. ಎನ್. ಸಿಂಗಾರಗೊಪ್ಪ. ಶಿವಪ್ಪ ಮುನವಳ್ಳಿ, ಮಹಾದೇವ ಚೆನ್ನಾಕಟ್ಟಿ, ಪಿಕೆಪಿಎಸ್ ಅಧ್ಯಕ್ಷ ತಮ್ಮೇಶ ಐನಾಪೂರ, ಹಾಲು ಉತ್ಪಾದಕರ ಸಂಘದ ಉಪಾಧ್ಯಕ್ಷ ಪ್ರಕಾಶ ತಿಪ್ಪನ್ನವರ, ಗ್ರಾಪಂ ಮಾಜಿ ಅಧ್ಯಕ್ಷೆಯರದಲಕ್ಷ್ಮೀ ಮುದಗೊಂಡ, ಅನಸವ್ವ ಬಡಕಲೂರ, ಮಲ್ಲನಗೌಡ ಸುರಗ, ಪಂಚಾಯ್ತಿ ಆಡಳಿತಾಧಿಕಾರಿ ಪ್ರಕಾಶ ಮುಗಳಕೋಡ, ಜಿಪಂ ಎಇಇ ಮಹ್ಮದ ಇಜಾನ್, ಪಿಡಬ್ಲೂಡಿ ಎಇಇ ರವಿಕುಮಾರ ಇದ್ದರು.



ಎಸ್ಸೆಸ್ಸೆಲ್ಸಿ ಸಾಧನೆಯ ಗುಣಮಟ್ಟ ಕಾಯ್ದುಕೊಳ್ಳಿ: ಬಸವರಾಜ

ರಾಮದುರ್ಗ: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಿಕ್ಷಕರು ಮಕ್ಕಳ ಫಲಿತಾಂಶದಲ್ಲಿ ಮಾಡಿರುವ ಸಾಧನೆಯು ಪ್ರತಿವರ್ಷವೂ ಪುನಾರಾವರ್ತನೆಯಾಗುವ ರೀತಿಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು. ತಾಲೂಕಿನ ಕೀರ್ತಿಯನ್ನು ಆಗಸದೆತ್ತರಕ್ಕೆ ತೆಗೆದುಕೊಂಡು ಹೋಗಬೇಕು ಎಂದು ತಾಲೂಕಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ ಹೇಳಿದರು.

ರಾಮದುರ್ಗದ ಗುರು ಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದ ಸಹಯೋಗದಲ್ಲಿ ಈ ಸಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿನೂರಕ್ಕೆನೂರರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯಸ್ಥರು ಮತ್ತು ತಾಲೂಕಿಗೆ ಪ್ರಥಮ ಸ್ಥಾನ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ 7 ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮುಂಚಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಮದುರ್ಗ ತಾಲೂಕಿನ ಹೆಸರು ಕೊನೆಯ ಸ್ಥಾನದಲ್ಲಿ ಇರುತ್ತಿತ್ತು. ಶಿಕ್ಷಕರ ನಿರಂತರ ಪ್ರಯತ್ನದಿಂದ ಜಿಲ್ಲೆಯಲ್ಲಿ ಈ ಸಾರಿ ನಾಲ್ಕನೇ ಸ್ಥಾನಕ್ಕೆ ಬಂದು ತಲುಪಿದೆ ಎಂದು



ಹರ್ಷ ವ್ಯಕ್ತ ಪಡಿಸಿದರು.

ಪರೀಕ್ಷಾ ಪೂರ್ವ ಸಭೆಗಳಲ್ಲಿ ಜಿಲ್ಲೆಯ ಹಿರಿಯ ಅಧಿಕಾರಿಗಳು ತಾಲೂಕಿನ ಅಧಿಕಾರಿಗಳನ್ನು ನಿಂದಿಸಿರುವುದನ್ನು ಸಕಾರಾತ್ಮಕವಾಗಿ ತೆಗೆದುಕೊಂಡ ಪ್ರಯುಕ್ತ ರಾಮದುರ್ಗ ತಾಲೂಕಿನ ಹೆಸರು ಜಿಲ್ಲೆಯಲ್ಲಿ ಉನ್ನತ ಸ್ಥಾನದಲ್ಲಿದೆ. ಇನ್ನೊಂದು ವಿದ್ಯಾರ್ಥಿ ಉತ್ತೀರ್ಣಗೊಂಡಿದ್ದರೆ ತಾಲೂಕು ಮೂರನೇ ಸ್ಥಾನದಲ್ಲಿರುತ್ತಿತ್ತು. ಈ ವರ್ಷದ ಸಾಧನೆಗಿಂತ ಮುಂದಿನ ವರ್ಷದ ಸಾಧನೆ ಇನ್ನೂ ಉತ್ತಮವಾಗಿರುವಂತೆ ಶಿಕ್ಷಕರು ಶ್ರಮಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಮಾತನಾಡಿ, ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶದಲ್ಲಿ ರಾಮದುರ್ಗ ತಾಲೂಕು ಐತಿಹಾಸಿಕ ಸಾಧನೆ ಮಾಡಿದೆ. ಐತಿಹಾಸಿಕ ಫಲಿತಾಂಶ ಬರಲು ವಿಷಯ ತಜ್ಞ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರ ಸತತ ಪ್ರಯತ್ನದ ಫಲವಾಗಿದೆ. ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ನಿರಂತರ ಅಧ್ಯಯನ ಕೈಗೊಂಡು ತಾಲ್ಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಹೇಳಿದರು.

ರಾಮದುರ್ಗ ತಾಲೂಕಿನ ವಿವಿಧ ವಲಯಗಳ ಶಿಕ್ಷಕರು ಸಂಘಟಿತರಿದ್ದಾರೆ. ಒಗ್ಗಟ್ಟಿನಲ್ಲಿ ಬಲ ಇದೆ ಎಂಬುದನ್ನು ನಂಬಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರು ಮನಸ್ಸು ಮಾಡಿದರೆ ಮುಂದಿನ ಪರೀಕ್ಷೆಯಲ್ಲಿ ರಾಮದುರ್ಗ ತಾಲ್ಲಕಿನ ಹೆಸರು ಮೊದಲ ಸ್ಥಾನದಲ್ಲಿ ಕಾಣಿಸಲಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷಾ ನೋಡಲ್ ಅಧಿಕಾರಿಯಾಗಿದ್ದ ಶಿಕ್ಷಣ ಸಂಯೋಜಕ ಶ್ರೀಕಾಂತ ಕರಲಿಂಗಪ್ಪನವರ ಪ್ರಾಸ್ತಾವಿಕ ಮಾತನಾಡಿದರು. ಅಕ್ಷರದಾಸೋಹದ ರಾಜಶೇಖರ ಹಿರೇಮಠ, ಎಸ್. ವೈ. ಸನ್ನಿ, ಉಮಾ ಕಡಕೋಳ, ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ ಆಯೂಷ್ ಶಲವಡಿ ಮಾತನಾಡಿದರು. ಎ.ವಿ. ಪಾಟೀಲ ಸ್ವಾಗತಿಸಿದರು. ಮಾರುತಿ ಜಂಗವಾಡ ಕಾರ್ಯಕ್ರಮ ನಿರೂಪಿಸಿದರು.

ಪ್ರಥಮ ಶ್ರೇಣಿಯಲ್ಲಿ ಪಾಸಾದ ಆಯುಷ್ ಶಲವಡಿ, ಸೃಷ್ಠಿ ಸತ್ತಿಗೇರಿ, ನಾಗರಾಜ ಮಿಂಚಲ, ವಿಜಯಲಕ್ಷ್ಮೀ ದಡ್ಡಿ, ರಂಜನಾ ಅಂಗಡಿ, ಸಂದೀಪ ಈಟಿ, ಮಹ್ಮದ ಇಕ್ಬಾಲ ಪಡದಾರ ಅವರನ್ನು ಸನ್ಮಾನಿಸಲಾಯಿತು. ನೂರಕ್ಕೆ ನೂರರಷ್ಟು ಫಲಿತಾಂಶ ಹೊಂದಿದ ತಾಲ್ಲೂಕಿನ 22 ಶಾಲೆಗಳ ಮುಖ್ಯಸ್ಥರನ್ನೂ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕಿರುಸುದ್ದಿ



ಗಲಗಲಿ: ಸ್ಥಳೀಯ ಅರವಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುದ್ಧ ಪೂರ್ಣಿಮೆ ದಿನವಾದ ಇಂದು ಶುಕ್ರವಾರ ಬುದ್ಧ ಜಯಂತಿ ಆಚರಿಸಲಾಯಿತು. ವರ್ಷಾ ನಡುವಿನಮನಿ, ರಂಜನಾ ಗೋಡಸೆ, ಅರುಂಧತಿ ನರಗುಂದ ಇದ್ದರು.

ಅಧ್ಯಕ್ಷರಾಗಿ ಕುಲಕರ್ಣಿ ಆಯ್ಕೆ

ಜಮಖಂಡಿ: ಇತ್ತೀಚೆಗೆ ನಡೆದ ವಕೀಲರ ಸಂಘದ 2026–28ರ ಅವಧಿಯ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎ.ಪಿ.ಕುಲಕರ್ಣಿ, ಉಪಾಧ್ಯಕ್ಷೆಯಾಗಿ ವಿಜಯಲಕ್ಷ್ಮೀ ಎ. ಭಟ್, ಪ್ರಧಾನ ಕಾರ್ಯದರ್ಶಿಯಾಗಿ ವೈ. ಕೆ.ಕಡಪಟ್ಟಿ, ಸಹ ಕಾರ್ಯದರ್ಶಿ ಮತ್ತು ಗ್ರಂಥಾಲಯ ಕಾರ್ಯದರ್ಶಿಯಗಿ ಎಸ್.ಎ.ಅಂಬಿ, ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಆರ್.ಆರ್.ಕರೋಶಿ, ಆರ್. ಎಂ.ಝುಂಡೆ, ಎಸ್.ಕೆ.ದಳವಾಯಿ, ಎಸ್.ಕೆ.ಗೌಡಪ್ಪನವರ, ಯು.ಎಸ್.ಚರಕಿ, ಮಹಿಳಾ ಪ್ರತಿನಿಧಿಗಳಾಗಿ ಜೆ.ಆರ್. ಮಾಳಿ, ವಿ.ಜಿ.ಅರಳೀಕಟ್ಟಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದ ನ್ಯಾಯವಾದಿಗಳದ ಅಜೀತ ತಿಕೋಟಿಕರ, ದಿಗವಿಜಯ ಬಾಂಗಿ, ಎಸ್.ಜಿ.ಮಾಳಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ

ಬಾದಾಮಿ: ಇಲ್ಲಿನ ಹೇಮ ವೇಮ ಚಾರಿಟೇಬಲ್ ಸಂಸ್ಥೆಯ ವತಿಯಿಂದ ಮೇ 17ರಂದು ಭಾನುವಾರ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ನವರ ಜಯಂತಿ ಆಚರಿಸುತ್ತಿದ್ದು, ಅಂದು ಅವಿಭಜಿತ ಬಾದಾಮಿ ತಾಲೂಕಿಗೆ ಸಂಬಂಧಿಸಿದಂತೆ ಇದೆ ಮಾರ್ಚ್, ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಅನುಕ್ರಮವಾಗಿ ಶೇ 85, ಹಾಗೂ ಶೇ 80 ಅಂಕ ಗಳಿಸಿದ ರಡ್ಡಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 2025 ಮೇ 1ರಿಂದ 2026 ಏ.30ರ ಅವಧಿಯಲ್ಲಿ ಸೇವೆಯಿಂದ ನಿವೃತ್ತರಾದ ಸಮಾಜದ ನೌಕರರಿಗೆ ಗೌರವಾರ್ಪಣೆ ಹಮ್ಮಿಕೊಳ್ಳಲಾಗಿದೆ. ಈ ಮಿತಿಯೊಳಗೆ ಬರುವವರು ಪ್ರತಿಭಾ ಪುರಸ್ಕಾರಕ್ಕಾಗಿ ವಿದ್ಯಾರ್ಥಿಯ ಅಂಕಪಟ್ಟಿ, ಪಾಸಪೋರ್ಟ ಭಾವಚಿತ್ರ, ಮೊಬೈಲ್ ನಂಬರ ಹಾಗೂ ನಿವೃತ್ತ ನೌಕರರು ಹೆಸರು, ನಿವೃತ್ತಿ ದಿನಾಂಕ, ವಿಳಾಸ, ಮೊಬೈಲ್ ನಂಬರ ಮಾಹಿತಿಯನ್ನು ಮೊ 9880355092 ಸಂಪರ್ಕಿಸಿ ಮೇ 10ರೊಳಗೆ ಮಾಹಿತಿ ನೀಡಬೇಕು ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಎ.ಭರಮಗೌಡರ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಮೂಢನಂಬಿಕೆಗಳು ಅಜ್ಞಾನದ ಸಂಕೇತ



ಗುಳೇದಗುಡ್ಡ: ಸೋಮಾರಿತನ ಹಾಗೂ ಮೂಢನಂಬಿಕೆಗಳನ್ನು ಕಳೆದುಕೊಂಡರೆ ನಮ್ಮ ವ್ಯಕ್ತಿತ್ವ ಪ್ರಬಲವಾಗಿ ರೂಪುಗೊಳ್ಳುತ್ತದೆ. ಸೋಮಾರಿತನ ಅಳಿವಿನ ಸ್ಥಾವರದ ಸಂಕೇತವಾದರೆ, ಮೂಢನಂಬಿಕೆಗಳು ಅಲ್ಲಮ ಹೇಳುವ ಅಜ್ಞಾನದ ಸಂಕೇತ ಎಂದು ಪ್ರೊ. ಚಂದ್ರಶೇಖರ ಹೆಗಡೆ ಹೇಳಿದರು. ಶುಕ್ರವಾರ ಸಮೀಪದ ಕೋಟೆಕಲ್ಲಿನ ಹೊಳೆ ಹುಚ್ಚೇಶ್ವರ ಸಂಸ್ಥಾನಮಠದಲ್ಲಿ ಕಮತಗಿಯ ಹೊಳೆಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಯೋಗಿನಿಬಾಯಿ ಪಾಟೀಲ ಗ್ರಾಮೀಣ ಮಹಿಳಾ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಹಮ್ಮಿಕೊಂಡ ಮೂರು ದಿನಗಳ ಪೌರತ್ವ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಕುವೆಂಪುರವರು ಪ್ರತಿಪಾದಿಸಿದ ಸಂಯಮಶೀಲ ಬುದ್ಧಿ ಸ್ವಾತಂತ್ರ್ಯವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ನಿರಂಕುಶಮತಿಗಳಾಗಬೇಕಿದೆ. ನಮಗೆ ಅಗತ್ಯವಾಗಿರುವ ಎರಡು ಶಕ್ತಿಗಳೆಂದರೆ ಒಂದು ತಾಳ್ಮೆ ಮತ್ತೊಂದು ಕಾಲ. ಇವೆರಡನ್ನೂ ಪಳಗಿಸಿದರೆ ವಿದ್ಯಾರ್ಥಿಗಳು ನಮ್ಮ ದೇಶದ ಅತ್ಯುತ್ತಮ ನಾಗರಿಕರಾಗಬಹುದು ಎಂದರು.

ಹೊಳೆಹುಚ್ಚೇಶ್ವರ ಸ್ವಾಮೀಜಿ ಕಾಯಕ್ರಮದ ಸಾನಿಧ್ಯವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಸಂಘದ ಸಹಕಾರ್ಯದರ್ಶಿ ವಿದ್ಯಾಧರ ಮಳ್ಳಿ, ಸಂಘದ ಆಡಳಿತಾಧಿಕಾರಿ ಅನಿಲಕುಮಾರ ಕಲ್ಯಾಣಶೆಟ್ಟಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ.ಪಿ.ಐ.ಮೊಮಿನ್, ಶಿಬಿರದ ಕಾರ್ಯಾಧ್ಯಕ್ಷ ಜೆ.ಎಲ್. ವಾಲೀಕಾರ, ಸಂಗಮ್ಮಾ ಸಜ್ಜನ, ಗೀತಾ ಕಟಗಿ, ಅನುಪಮಾ ಹೆಬ್ಬಳ್ಳಿ, ಕಾವೇರಿ ಚೆಟ್ಟೇರ ಮತ್ತಿತರರು ಉಪಸ್ಥಿತರಿದ್ದರು.



ಇಳಕಲ್: ನಗರದ ಎಸ್‌ಆರ್‌ಕೆ ನಿಲಯದ ಕಾಂಗ್ರೆಸ್ ಕಾರ್ಯಾಲಯದಲ್ಲಿ ಇಂದು ಬೆಳಗ್ಗೆ ಬುದ್ಧ ಜಯಂತಿ ಆಚರಿಸಲಾಯಿತು. ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಉತ್ತಮ ಫಲಿತಾಂಶ: ಪಟ್ಟಣಶೆಟ್ಟಿ ಹರ್ಷ



ಬಾಗಲಕೋಟೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗೆ ಒಳಪಟ್ಟಿರುವ ವಸತಿ ಶಾಲೆಗಳ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿರುವ ವಿದ್ಯಾರ್ಥಿಗಳಿಗೆ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಅಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಅಭಿನಂದಿಸಿದ್ದಾರೆ. ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗೆ ಒಳಪಟ್ಟಿರುವ ಮೌಲಾನ ಅಜಾದ್ ಮಾದರಿಯ ಶಾಲೆಗಳಾದ ಬಾದಾಮಿ, ಜಮಖಂಡಿ, ಇಳಕಲ್, ಬನಹಟ್ಟಿ, ಮುಧೋಳ, ತೇರದಾಳ, ಬೀಳಗಿ, ನವನಗರದ ಎರಡು ಶಾಲೆಗಳು ಸೇರಿದಂತೆ ಈ ಎಲ್ಲ ಶಾಲೆಯ ವಿದ್ಯಾರ್ಥಿಗಳು ಈ ಬಾರಿ ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಾರೆ. ಅಲ್ಲದೆ ಎಪಿಜೆ ಅಬ್ದುಲ್ ಕಲಾಂ ಸಿಬಿಎಸ್‌ಸಿ ಹಾಗೂ ಹುನಗುಂದ, ಬೀಳಗಿ, ಜಮಖಂಡಿ, ತೇರದಾಳದ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ಮೆಟ್ರಿಕ್ ಪೂರ್ವ ವಸತಿ ಶಾಲೆಯ ವಿದ್ಯಾರ್ಥಿಗಳು ಮತ್ತು ಜಿಲ್ಲೆಯ ಐದು ಅಲ್ಪಸಂಖ್ಯಾತ ವಸತಿ ನಿಲಯದ ವಿದ್ಯಾರ್ಥಿನಿ ವಿದ್ಯಾರ್ಥಿಗಳು ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಬೇಕೆಂಬ ಉತ್ಸಾಹ ಮೂಡಿಸಿದ್ದರ ಫಲವಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ತಮ್ಮ ನಿರೀಕ್ಷೆಗೆ ತಕ್ಕಂತೆ ಈ ಬಾರಿ ಸಾಧನೆ ಮಾಡಿದ್ದು, ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026ರ ನೀತಿ ಸಂಹಿತೆ ಹಿನ್ನಲೆ ಜಿಲ್ಲಾಡಳಿತದಿಂದ ಭಗವಾನ್ ಬುದ್ಧ ಜಯಂತಿಯನ್ನು ಶುಕ್ರವಾರ ಸರಳವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರು ಗೌತಮ ಬುದ್ಧರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಪುಷ್ಪ ನಮನ ಸಲ್ಲಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬೆಳೆಗಳಿಗೆ ನೀರು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ | ಹಳ್ಳಿಗಳಲ್ಲಿ ನೀರಿಗಾಗಿ ಪರದಾಟ

111 ಗ್ರಾಮಗಳಿಗೆ ಜಲಸಂಕಷ್ಟ

ಮಲ್ಲಿಕಾರ್ಜುನ ಕೋಷ್ಠಿ

ದಿಗಂತ ವಿಶೇಷ

ಸಾವಳಗಿ: ಉತ್ತರ ಕರ್ನಾಟಕದ ಜೀವನಾಡಿ ಎಂದೇ ಕರೆಯಲ್ಪಡುವ ಕೃಷ್ಣಾ ನದಿ ಈ ಬಾರಿ ಬೇಸಿಗೆ ಆರಂಭದಲ್ಲೇ ಬರಿದಾಗುತ್ತಿರುವುದು ಆತಂಕಕಾರಿಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಹಾಯ್ದು ಹೋಗುವ ಈ ಪ್ರಮುಖ ನದಿ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಸೇರಿದಂತೆ ಸುಮಾರು 111 ಗ್ರಾಮಗಳಿಗೆ ಜೀವನಾಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಈಗ ನೀರಿನ ಕೊರತೆಯಿಂದ ಜನಜೀವನ ಹಾಗೂ ಕೃಷಿ ತೀವ್ರ ಸಂಕಷ್ಟಕ್ಕೆ ಸಿಲುಕಿದೆ.

ಮಹಾರಾಷ್ಟ್ರದಲ್ಲಿ ಉಗಮಗೊಂಡು ಬಾಗಲಕೋಟೆ ಭಾಗದಲ್ಲಿ ಸಂಗಮವಾಗುವ ಕೃಷ್ಣಾ ನದಿ, ಈ ಭಾಗದ ಕೃಷಿ ಚಟುವಟಿಕೆಗಳಿಗೆ ಪ್ರಮುಖ ಆಧಾರವಾಗಿದೆ. ಬಾಗಲಕೋಟೆ ಜಿಲ್ಲೆಯ ಹಿಪ್ಪರಗಿ ಗ್ರಾಮದಲ್ಲಿ ನದಿಗೆ ಅಡ್ಡವಾಗಿ ನಿರ್ಮಿಸಲಾದ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಈ ಬಾರಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿದೆ.

ಜಮಖಂಡಿ ತಾಲೂಕಿನ ಕೃಷ್ಣಾ ನದಿ ತೀರದ ಸುತ್ತಮುತ್ತ ಗ್ರಾಮಗಳಾದ ಶಿರುಗುಪ್ಪಿ, ಮೈಗೂರು, ಅಳಬಾಳ, ಮುತ್ತೂರು,ಕಂ ಕನವಾಡಿ,ಕಡಕೋಳ ಶೂರಪಾಲಿ, ಜಂಬಗಿ, ಸನಾಳ, ಕುಂಬಾರಹಳ್ಳ, ಆಲಗೂರು, ಚಿಕ್ಕಪಡಸಲಗಿ, ಹಿರೇಪಡಸಲಗಿ, ಟಕ್ಕೋಡ, ಟಕ್ಕಳಕಿ, ಕುಂಚನೂರ, ಲಿಂಗನೂರು, ಚಿನಗುಂಡಿ, ಜಕನೂರ, ಬಿದರಿ, ಜನವಾಡ, ಕವಟಗಿ ಇತರ ಹಳ್ಳಿಗಳ ರೈತರು ನೀರಿಲ್ಲದೆ ಪರದಾಡುವಂತಾಗಿದೆ.

6 ಟಿಎಂಸಿ ಸಾಮರ್ಥ್ಯ ಹೊಂದಿರುವ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಸುಮಾರು 2.5 ಟಿಎಂಸಿ ನೀರು ಸಂಗ್ರಹವಾಗಿದ್ದರೆ, ಈ ಬಾರಿ ಅದು ಕೇವಲ 1.5 ಟಿಎಂಸಿಗೆ ಇಳಿದಿದೆ. ಇದರಲ್ಲಿ ಬಹುತೇಕ 1.5 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿರುವುದರಿಂದ ಬಳಕೆಗೆ ಯೋಗ್ಯವಾದ ನೀರು ಇಲ್ಲದಂತಾಗಿದೆ. ರಾಜಕೀಯ ನಾಯಕರು ಮಹಾರಾಷ್ಟ್ರದ ಸಿಎಂ ಅವರೊಂದಿಗೆ ಮಾತನಾಡಿ ಮೂರು ಟಿಎಂಸಿ ನೀರನ್ನು ತರಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ. ಕಳೆದ 15 ದಿನಗಳಿಂದ ಕೃಷ್ಣಾ ನದಿ ನೀರು ಸಂಪೂರ್ಣವಾಗಿ ಕಡಿಮೆಯಾಗಿದ್ದು, ರೈತರು ಬೆಳೆದ ಬೆಳೆಗಳಿಗೆ ನೀರು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕೃಷಿಭೂಮಿಗಳು ಒಣಗುತ್ತಿದ್ದು, ರೈತರು ಮತ್ತು ಪಶುಪಾಲಕರು ಭಾರೀ ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರ ತಕ್ಷಣ ಕ್ರಮ ಕೈಗೊಂಡು ನೀರಿನ ಸಮಸ್ಯೆ ಪರಿಹರಿಸಬೇಕೆಂದು ಆಗ್ರಹಿಸಿದ್ದಾರೆ.



ಪರಿಹಾರಕ್ಕೆ ಆಗ್ರಹ

ಮಳೆಗಾಲದಲ್ಲಿ ನದಿ ಬಂದು ಹೊಲ, ಮನೆ ಮುಳುಗಡೆಯಾಗುತ್ತವೆ. ಬೇಸಿಗೆ ಕಾಲದಲ್ಲಿ ನೀರಿಲ್ಲದೆ ಬೆಳೆಗಳು ಒಣಗಿ ಹೋಗುತ್ತವೆ. ಹಾಗೂ ದನ ಕರುಗಳಿಗೆ ಮೇವಿಲ್ಲದೆ ಮಾರಾಟ ಮಾಡುವ ಪರಿಸ್ಥಿತಿ ಉಂಟಾಗಿದೆ. ಶಾಶ್ವತ ಮುಳುಗಡೆ ಮಾಡುವ ಸಲುವಾಗಿ ಪ್ರತಿ ವರ್ಷ ರೈತರು ಹೋರಾಟ ಮಾಡುತ್ತಿದ್ದೇವೆ. ಪ್ರತಿ ಎಕರೆಗೆ 40 ಲಕ್ಷ ರೂ. ಘೋಷಣೆ ಮಾಡಿ ಒಂದು ವರ್ಷ ಕಳೆದರೂ ಕೂಡಾ ರೈತರಿಗೆ ಹಣ ಸಿಕ್ಕಿಲ್ಲ. ನಮ್ಮ ಪರಿಸ್ಥಿತಿ ಸರ್ಕಾರಕ್ಕೆ ತಿಳಿಯುತ್ತಿಲ್ಲ ಎಂದು ಕಂಕಣವಾಡಿ ಗ್ರಾಮದ ರೈತರು ಆಗ್ರಹಿಸಿದರು.

ಬಿಸಿಲಿನ ತಾಪಮಾನ ಮೇ 15ರ ವರೆಗೆ ಮುಂದುವರೆಯುವ ಸಾಧ್ಯತೆಯಿದ್ದು, ನೀರು ಆವಿಯಾಗುವ ಪ್ರಮಾಣ ಕೂಡ ಅತಿಯಾಗಿದೆ. ಜಮಖಂಡಿ ಮತ್ತು ರಬಕವಿ ಬನಹಟ್ಟಿ ನಗರ ಸೇರಿ 35 ಎಂವಿಎಸ್ ಯೋಜನೆ ಜಾರಿಯಲ್ಲಿದ್ದು ಅದಕ್ಕಾಗಿ ನದಿ ದಡದಲ್ಲಿ ವಾರಕ್ಕೊಮ್ಮೆ ವಿದ್ಯುತ್ ಕಡಿತಗೊಳಿಸಲಾಗುತ್ತಿತ್ತು. ಮುಂದಿನ ವಾರದಿಂದ ವಾರಕ್ಕೆ ಎರಡು ದಿನ ವಿದ್ಯುತ್ ಕಡಿತಗೊಳಿಸಲಾಗುವುದು. ನೀರಿನ ತೀವ್ರ ಕೊರತೆ ಹಿನ್ನೆಲೆಯಲ್ಲಿ ಜನರು ಹಾಗೂ ಜಾನುವಾರುಗಳ ಬದುಕು ಸಂಕಷ್ಟದಲ್ಲಿದೆ. ಆದಕಾರಣ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಸುವಂತೆ ಸೂಚಿಸಿದ್ದಾರೆ.

■ ಶ್ವೇತಾ ಬಿಡೀಕರ, ಉಪವಿಭಾಗಾಧಿಕಾರಿ ಜಮಖಂಡಿ

ನಾಗನೂರ ಚಾಂಪಿಯನ್, ಸೋರಗಾವಿ ರನ್ನರ್ ಅಪ್

ತುಳಸಿಗೇರಿ ಅಂತರ್ ರಾಜ್ಯಮಟ್ಟದ ಮುಕ್ತ ಕಬಡ್ಡಿ

ಕಲಾದಗಿ: ಐತಿಹಾಸಿಕ ಧಾರ್ಮಿಕ ಕ್ಷೇತ್ರ ತುಳಸಿಗೇರಿ ಗ್ರಾಮದಲ್ಲಿ ನಡೆದ ಅಂತರಾಜ್ಯ ಮಟ್ಟದ ಮುಕ್ತ ಕಬಡ್ಡಿ ಪಂದ್ಯಾವಳಿಯ ಪೈನಲ್ ಪಂದ್ಯದಲ್ಲಿ ಬೆಳಗಾವಿ ಜಿಲ್ಲೆಯ ನಾಗನೂರ ತಂಡ, ಮುಧೋಳ ತಾಲೂಕಿನ ಸೋರಗಾವಿ ತಂಡವನ್ನು 15 ಅಂಕಗಳಿಂದ ಮಣಿಸಿ ಟ್ರೋಫಿ ಹಾಗೂ 50 ಸಾವಿರ ರೂ.ಬಹುಮಾನ ತನ್ನದಾಗಿಸಿಕೊಂಡಿತು.

ಮಹಾಲಕ್ಷ್ಮೀನಾಗನೂರತಂಡ 27 ಅಂಕ ಪಡೆದರೆ ಮಾರುತೇಶ್ವರ ಸೋರಗಾವಿ ಕೇವಲ 12 ಅಂಕಗಳನ್ನು ಮಡೆದು ರನ್ನರ ಅಪ್ ಆಗಿ 30 ಸಾವಿರ ರೂ.ಹಾಗೂ ಟ್ರೋಫಿ ಪಡೆದುಕೊಂಡಿತು. ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಅರಳಿಮಟ್ಟಿ ಹಾಗೂ ಧಾರವಾಡ ಜಿಲ್ಲೆಯ ಮಮ್ಮಿಗಟ್ಟಿ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಅರಳಿಮಟ್ಟಿ ತಂಡ ಮೂರನೇ ಸ್ಥಾನ ಪಡೆದು 20 ಸಾವಿರ ರೂ.ಬಹುಮಾನ ಹಾಗೂ ಟ್ರೋಫಿ ಪಡೆದರೆ ಮಮ್ಮಿಗಟ್ಟಿ ತಂಡ ನಾಲ್ಕನೇ ಸ್ಥಾನ ಪಡೆದು 15ಸಾವಿರ ರೂ.ಬಹುಮಾನ ಹಾಗೂ ಟ್ರೋಫಿ ಪಡೆದುಕೊಂಡಿತು. ಮಾರುತೇಶ್ವರ ಓಕಳಿ ನಿಮಿತ್ತ ರಾಜ್ಯ ಅಮೇಚ್ಯೂರ ಕಬಡ್ಡಿ ಅಸೋಸಿಯೇಷನ ಬಾಗಲಕೋಟೆ ಜಿಲ್ಲಾ ಅಮೇಚ್ಯೂರ ಕಬಡ್ಡಿ ಅಸೋಸಿಯೇಷನ ನೇತೃತ್ವದಲ್ಲಿ ತುಳಸಿಗೇರಿ ಪವನಪುತ್ರ ಕಬಡ್ಡಿ ತಂಡ ಈ ಪಂದ್ಯಾವಳಿಗಳನ್ನು ಸಂಘಟಿಸಲಾಗಿತ್ತು.

ವಿಧಾನ ಪರಿಷತ ಸದಸ್ಯ ಪಿ.ಎಚ್.ಪೂಜಾರ ಸನ್ಮಾನ ಸ್ವೀಕರಿಸಿ ಮಾತನಾಡಿ, ತುಳಸಿಗೇರಿ ಗ್ರಾಮ ಕುಸ್ತಿ, ಕಬಡ್ಡಿ, ಸೈಕ್ಲಿಂಗ, ಮಲ್ಲಕಂಬದಲ್ಲಿ ಅಂತಾರಾಷ್ಟೀಯ ಮಟ್ಟದ ಕ್ರೀಡಾ ಪಟುಗಳನ್ನು ಹೊಂದಿದ್ದು ನಮ್ಮ ಗ್ರಾಮಕ್ಕೆ ಹೆಮ್ಮೆಯ ವಿಷಯ, ಕ್ರೀಡೆಯಲ್ಲಿ ಗೆಲುವು ಸೋಲು ಸಾಮಾನ್ಯ ಎಲ್ಲರೂ ಅದನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕು ಎಂದರು.

ಬಬಲಾದಿ ಮಠದ ಸ್ವಾಮೀಜಿ, ವೆಂಕಟೇಶ ದಾಸನ್ನವರ, ಹನಮಂತ ಪ್ರಲ್ಹಾದ ಪೂಜಾರ, ಬಶೆಟ್ಟೆಪ್ಪ ಅಂಗಡಿ, ಮಂಜುಗೌಡ ಪಾಟೀಲ, ಬಾಲರಾಜ ಬಾಲರಡ್ಡಿ, ಪಾಂಡಪ್ಪ ಪೋಲಿಸ್, ನಾಗಪ್ಪ ಸೊನ್ನದ, ಸಿ.ಕೆ.ಚನ್ನಾಳ, ಹನಮಂತ ಹೊಸಕೋಟಿ, ಶ್ರೀನಿವಾಸ ದಳವಾಯಿ, ರಮೇಶ ಭಜಂತ್ರಿ, ಗೋವಿಂದಪ್ಪ ಆಯನ್ನವರ, ರಾಮನ್ನ ಸೊನ್ನದ, ರಂಗನಾಥ ಬಾಲರಡ್ಡಿ, ಸಿದ್ದಪ್ಪ ಬಾಲರಡ್ಡಿ, ಭೀಮಣ್ಣ ದಾಸನ್ನವರ, ಬಾಲರಾಜ ಸಂಗನ್ನವರ ಸೇರಿದಂತೆ ಇತರರಿದ್ದರು.




ಬನ್ನಿಯವರ ಸಾಹಿತ್ಯ ಸಮಾಜಮುಖಿಯಾಗಿದೆ: ಶ್ರೀ

ಗುಳೇದಗುಡ್ಡ: ಸಾಹಿತಿ ಮಲ್ಲಿಕಾರ್ಜುನ ಬನ್ನಿಯವರ ಸಾಹಿತ್ಯ ಸಮಾಜದ ತಲ್ಲಣಗಳ ಪ್ರತಿಬಿಂಬವಾಗಿವೆ. ಅವರು ಈ ನಾಡಿಗೆ ಅನೇಕ ಕೃತಿಗಳನ್ನು ನೀಡಿದ್ದಾರೆ. ಅವರ ಒಂದೊಂದು ಕೃತಿಗಳು ಓದುಗರ ಮನಸ್ಸಿನ ಮೇಲೆ ಪರಿಣಾಮ ಬೀರುವಂತಿವೆ ಎಂದು ಸ್ಥಳೀಯ ಗುರುಸಿದ್ದೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು ಹೇಳಿದರು.

ಪಟ್ಟಣದ ಸಾಲೇಶ್ವರ ದೇವಸ್ಥಾನದ ಆವರಣದಲ್ಲಿ ಕಮತಗಿಯ ಮೇಘಮೈತ್ರಿ ಸಾಹಿತ್ಯ ವೇದಿಕೆಯವತಿಯಿಂದಹಮ್ಮಿಕೊಂಡ 2026ನೇ ಸಾಲಿನ ರಾಜ್ಯಮಟ್ಟದ ಮೇಘರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕವನಸಂಕಲಲೋಕಾರ್ಪಣೆಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರಶಸ್ತಿ ಪುರಸ್ಕಾರಗಳು ಮನುಷ್ಯನ ವ್ಯಕ್ತಿತ್ವ ಮತ್ತಷ್ಟು ವೃದ್ಧಿಸುತ್ತವೆ ಎಂದರು.ಜಯಶ್ರೀ ಭಂಡಾರಿಯವರ ಹೃದಯ ಹಣತೆ ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಮುದ್ದೇಬಿಹಾಳದ ಎಂಜಿವಿಸಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಪ್ರಕಾಶ ನರಗುಂದ, ಕಾವ್ಯವು ಪದಗಳ ಜೋಡಣೆಯಲ್ಲ, ಬದಲಾಗಿ ರಸ, ಛಂದಸ್ಸು, ಧ್ವನಿ ಮತ್ತು ರೂಪಕಗಳ ಮೂಲಕ ಓದುಗನ ಮನಸ್ಸನ್ನು ತಲುಪುವ ಸೃಜನಶೀಲ ಅಭಿವ್ಯಕ್ತಿಯಾಗಿದೆ. ಕವಿಯಿತ್ರಿ ಜಯಶ್ರೀ ಭಂಡಾರಿ ಅವರು ಆದರ್ಶ ಶಿಕ್ಷಕರಾಗಿ ಶಿಸ್ತು, ಸಂಯಮ, ಶ್ರದ್ಧೆ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಸೃಜನಶೀಲ ಚಿಂತನೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಹಲವಾರು ಕೃತಿಗಳನ್ನು ಸಮರ್ಪಿಸಿದವರು. ಅವರ ಸೃಜನಶೀಲ ಚಿಂತನೆಗೆ ಈ ಸಂಕಲನ ಇನ್ನಷ್ಟು ಪುಷ್ಟಿ ಕೊಡಲಿ ಎಂದು ಆಶಿಸಿದರು.ಮೇಘರತ್ನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮಲ್ಲಿಕಾರ್ಜುನ ಬನ್ನಿಯವರು ಸಮಾಜದಲ್ಲಿನ ದುಡಿಯುವ ವರ್ಗದವರ ಪರವಾಗಿ ಕಾಳಜಿವಹಿಸಿದ್ದಕ್ಕಾಗಿ ನಾನು ಸಾಹಿತ್ಯ ರಚಿಸಲು ಸಾಧ್ಯವಾಯಿತು. ಪ್ರಶಸ್ತಿ ಬಂದಿರುವುದಕ್ಕೆ ಸಂತೋಷವಾಗಿದೆ ಎಂದರು.

ಸಾಹಿತ್ಯ ವೇದಿಕೆಯ ಅಧ್ಯಕ್ಷ ರಮೇಶ ಕಮತಗಿ ಮಾತನಾಡಿದರು. ಡಾ.ಶಾಂತಾ ಕರಡಿಗುಡ್ಡ ಅಧ್ಯಕ್ಷತೆ ವಹಿಸಿದ್ದರು. ಡಾ.ಪಿ.ಎಂ.ಗುರುವಿನ ಮಠ, ಚೇತನ್ ಶಿವಶಂಪಿ, ಸಂಗಮೇಶ್ ಚಿಕ್ಕಾಡಿ, ಚಂದ್ರಶೇಖರ್ ಹೆಗಡೆ, ಶ್ರೀಕಾಂತ ಶಿರೂರು, ಸಂತೋಷ ಕಲಾಲಬಂಡಿ, ಡಾ. ಸಂತೋಷ ಕಾಳನ್ನವರ, ರವಿ ಕಂಗಳ, ಚಿದಾನಂದಸಾ ಕಾಟವಾ, ಯಲ್ಲಪ್ಪ ಮನ್ನಿಕಟ್ಟಿ, ಆನಂದ ಕಂಬಳಿಹಾಳ, ಅಶೋಕ ಚಿತ್ರಗಾರ ಉಪಸ್ಥಿತರಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಲಾಯಿತು.



ಗುರಿ ತಲುಪುವವರೆಗೂ ಉತ್ತಮ ಸಾಧನೆ ಮಾಡಿ: ಚಿಮ್ಮನಕಟ್ಟಿ



ಬಾದಾಮಿ: ಈ ಬಾರಿಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಈ ಕ್ಷೇತ್ರದ ಎರಡು ತಾಲೂಕಿನ ವಿದ್ಯಾರ್ಥಿಗಳ ಸಾಧನೆ ಜಿಲ್ಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವ್ಯವಸ್ಥೆಬಿತ್ತರಿಸಿದೆ.ಆಮೂಲಕ ಈ ವರ್ಷದ ಶೈಕ್ಷಣಿಕ ಸಾಧಕ ವಿದ್ಯಾರ್ಥಿಗಳು ಭವಿಷ್ಯದಲ್ಲೂ ತಮ್ಮ ಗುರಿ ತಲುಪುವವರೆಗೆ ಟಾಪ್ ಲಿಸ್ಟ್‌ನಲ್ಲೇ ಬರಬೇಕು ಈ ನಿಟ್ಟಿನಲ್ಲಿ ಸಾಧಕರಾಗಿ ಹೊರಹೊಮ್ಮುವ ಪ್ರಯತ್ನ ನಿಮ್ಮದಾಗಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಕಾಳಿದಾಸಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿಗೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಮಾತನಾಡಿದರು. ಶೈಕ್ಷಣಿಕ ಭವಿಷ್ಯದಲ್ಲೂ ನಿಮ್ಮ ಗುರಿ ತಲುಪುವ ವರೆಗೂ ನೀವು ಟಾಪ್ ಇರಬೇಕು. ಪಾಲಕರ ಮತ್ತು ಶಿಕ್ಷಕರ ಪ್ರೋತ್ಸಾಹ ದಿಂದ ಈ ವರ್ಷದ ಫಲಿತಾಂಶ ಉತ್ತಮವಾಗಲು ಕಾರಣವಾಗಿದೆ. ಶೈಕ್ಷಣಿಕವಾಗಿ ಅಭಿವೃದ್ಧಿಗೆ ಸರಕಾರದಿಂದ ಸರಕಾರಿ ಎಲ್ಲ ವರ್ಗದವರಿಗೆ ವಸತಿ ನಿಲಯ ಹಾಸ್ಟೆಲ್ ನಿರ್ಮಾಣಕ್ಕೆ ತಕ್ಕಂತೆ ಜಿಲ್ಲೆಯಲ್ಲಿ ನಮ್ಮ ತಾಲೂಕಿನ ಹೆಚ್ಚಿನ ಅಂಕ ಪಡೆದಿರುವುದು ಹೆಮ್ಮೆಯಾಗಿದೆ. ಮೊಬೈಲ್ ಬಳಕೆ ಕಡಿತಗೊಳಿಸಿ ಮುಂದೆ ಐಎಎಸ್ ಹುದ್ದೆಗೆ ನಿಮ್ಮ ದೃಷ್ಟಿ ಸಾಕಾರಗೊಳ್ಳಲಿ ಎಂದರು.

ಮುಖಂಡರಾದ ಅಶೋಕ ಕೋಟನಕರ, ಅವಳಿ ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷ ಈರನಗೌಡ ಕರಿಗೌಡ್ರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಪುರಸಭೆ ಮಾಜಿ ಸದಸ್ಯ ಮಂಜುನಾಥ ಹೊಸಮನಿ, ಕಾನಿಪ ತಾಲೂಕಾಧ್ಯಕ್ಷ ಅಡವೇಂದ್ರ ಇನಾಮದಾರ ಉಪಸ್ಥಿತರಿದ್ದರು.

ಕೆರೂರ ಶಾಖೆ ಉದ್ಘಾಟನೆ

ಬೀಳಗಿ: ಪಟ್ಟಣದ ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 11ನೇ ನೂತನ ಕೆರೂರ ಶಾಖೆಯನ್ನು ಗಿರಿಸಾಗರ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷೆ ಡಾ. ಆಶಾ ಬೀಳಗಿ ಅಧ್ಯಕ್ಷತೆ ವಹಿಸಿದ್ದರು. ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿವೃತ್ತ ಪ್ರಧಾನ ವ್ಯವಸ್ಥಾಪಕ ಎಲ್.ಬಿ.ಕುರ್ತಕೋಟಿ, ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ವ್ಯವಸ್ಥಾಪಕ ಶಾಹೀರ ಬೀಳಗಿ, ಯಶಸ್ವಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಪ್ರಧಾನ ವ್ಯವಸ್ಥಾಪಕ ರಾಜು ಗರಿಬನ್ನವರ, ಕೆರೂರ ಶಾಖೆ ಸಲಹಾ ಸಮಿತಿ ಅಧ್ಯಕ್ಷ ಬಿ.ಆರ್.ಶೆಟ್ಟರ, ಉಪಾಧ್ಯಕ್ಷ ಐ.ಬಿ.ಕಳ್ಳಿಮನಿ ಮತ್ತು ಸದಸ್ಯರು ಉಪಸ್ಥಿತರಿದ್ದರು.



ಲಕ್ಷ್ಮೀ ನರಸಿಂಹ ಅದ್ದೂರಿ ರಥೋತ್ಸವ



ಜಮಖಂಡಿ: ತಾಲೂಕಿನ ಶೂರ್ಪಾಲಿಯ ಕ್ಷೇತ್ರದ ಲಕ್ಷ್ಮೀ ನರಸಿಂಹ ದೇವರ ಜಾತ್ರಾ ಮಹೋತ್ಸವ ವೈಶಾಖ ಮಾಸದ ಶುಕ್ಲ ಪಕ್ಷದ ದಶಮಿ ತಿಥಿಯಿಂದ ಪ್ರಾರಂಭವಗಿ ಪೌರ್ಣಿಮೆಯ ರಥೋತ್ಸವದವರೆಗೆ ಅದ್ದೂರಿಯಾಗಿ ನಡೆಯಿತು.

ಗುರುವಾರ ಚತುರ್ದಶಿ ತಿಥಿಯಂದು ನರಸಿಂಹ ಹಿರಣ್ಯಕಶ್ಯಪುವಿನ ವಧೆಗಾಗಿ ಬಾಲಕ ಪ್ರಹ್ಲಾದ ಭಕ್ತಿಗೆ ಮೆಚ್ಚಿ ಭೂಮಿಗೆ ಅವತರಿಸಿದ ದಿನವಾಗಿದೆ. ಅಂದು ಸಂಜೆ ಗೋಧೂಳಿ ಮುಹೂರ್ತದಂದು ದೇವರಿಗೆ ತೊಟ್ಟಿಲು ಸೇವೆ, ಮಂತ್ರಪುಷ್ಪ ಮತ್ತು ಪಲ್ಲಕ್ಕಿ ಸೇವೆ, ವಸಂತ ಪೂಜೆ ನಡೆಯುತ್ತದೆ. ಮೇ 1ರಂದು ಹುಣ್ಣಿಮೆಯಂದು ಬೆಳಗ್ಗೆ ದೇವರಿಗೆ ಅಭಿಷೇಕ ಸಮರ್ಪಿಸಿ ರಥಾಂಗ ಹೋಮದೊಂದಿಗೆ ಮಧ್ಯಾಹ್ನ ಬೃಹನ್ ರಥೋತ್ಸವ ಜರುಗುತ್ತದೆ. ಸುತ್ತಲಿನ ಗ್ರಾಮ ಮತ್ತು ನಗರ ಅಲ್ಲದೇ ನೆರೆ ರಾಜ್ಯಗಳಾದ ಮಹಾರಾಷ್ಟ್ರದಿಂದಲೂ ಸಹ ಭಕ್ತಾದಿಗಳು ಆಗಮಿಸಿದ್ದರು. ಭಕ್ತರ ಹರ್ಷೋದ್ಗಾರ ಮತ್ತು ವೇದ ಘೋಷ ತಾಲ ಮೇಳಗಳೊಂದಿಗೆ ಲಕ್ಷ್ಮೀ ನರಸಿಂಹ ದೇವರ ರಥೋತ್ಸವು ಪಂಡಿತ ಮಧ್ವಾಚಾರ ಮೊಖಾಶಿ, ಪಂಡಿತರಘೂತ್ತಮಾಚಾರ್ಯ ಮೊಖಾಶಿ, ವೆಂಕಣ್ಣಾಚಾರ್ಯ ಅಧ್ಯಾಪಕ, ಅರ್ಚಕ ಗುರುರಾಜ ಕುಲಕರ್ಣಿಯವರ ಇವರ ನೇತೃತ್ವದಲ್ಲಿ ನಡೆಯಿತು. ರಥೋತ್ಸವದಲ್ಲಿ ವಿಸ್ವಸ್ಥ ಮಂಡಳಿಯ ವಾದಿರಾಜ ನಾಮಣ್ಣಾ, ಗುರುರಾಜ ಕುಲಕರ್ಣಿ, ಶ್ರೀನಿವಾಸ ಬಾದರಾಯಣಿ, ಮುಕುಂದ ನಾಮಣ್ಣಾ, ಪ್ರಲ್ಹಾದ ಬಾದರಾಯಣಿ, ಶೇಶ ಮೊಖಾಶಿ ಸೇರದಂತೆ ಸಾವಿರಾರು ಭಕ್ತರು ಇದ್ದರು.

ಸ್ವಂತ ಕಚೇರಿ ಸೌಲಭ್ಯಕ್ಕೆ ಭರವಸೆ

ಬಾಗಲಕೋಟೆ: ಲಿಂಗತ್ವ ಅಲ್ಪಸಂಖ್ಯಾತ ಇರುವ ಸಮುದಾಯದವರಿಗೆ ಸ್ವಂತ ಕಚೇರಿ ಸೇರಿದಂತೆ ಇತರ ಸೌಲಭ್ಯ ಒದಗಿಸಿಕೊಡಲಾಗುವುದು ಎಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡ ಮಲ್ಲಿಕಾರ್ಜುನ ಮೇಟಿ ಭರವಸೆ ನೀಡಿದರು. ನವನಗರ ಖಾಸಗಿ ಹೊಟೇಲ್‌ದಲ್ಲಿ ಮಿಲನ ಸಂಘದಿಂದ ಆಯೋಜನೆ ಮಾಡಿರುವ ಲಿಂಗತ್ವ ಅಲ್ಪ ಸಂಖ್ಯಾತ ಸಮುದಾಯ ಕುಂದು ಕೊರತೆಗಳ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ಸಮುದಾಯದವರ ಕುಂದುಕೊರತೆ ಅಹವಾಲು ಚರ್ಚಿಸಿ ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದಲ್ಲಿ ಸಭೆ ಮಾಡಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸುವ ಮೂಲಕ, ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು.ಮುಂದಿನ ದಿನ ಜಿಲ್ಲೆಯಲ್ಲಿ ಮಿಲನ ಸಂಘದ ಸಮುದಾಯದವರಿಗೆ ಒಂದು ಕಚೇರಿಯ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು.ಜಿಲ್ಲಾ ಕಾಂಗ್ರೆಸ್ ಪಕ್ಷದ ಎಸ್.ಸಿ.ಘಟಕದ ಅಧ್ಯಕ್ಷ ರಾಜು ಮಣ್ಣೇರಿ, ಮೆಹಬೂಬ್ ತಹಸೀಲ್ದಾರ್, ಮಿಲನ ಸಂಘದ ಸದಸ್ಯರು, ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಮತ್ತು ಸಮುದಾಯದವರು ಇದ್ದರು. ಸಾಲಿಡಾರಿಟಿ ಫೌಂಡೇಶನ್ ಸದಸ್ಯರು ಸಹ ಭಾಗಿಯಾಗಿದ್ದರು.



ಸಂಭ್ರಮದ ನರಸಿಂಹ ರಥೋತ್ಸವ



ಗಲಗಲಿ: ಸ್ಥಳೀಯ ಪ್ರಸಿದ್ಧ ಲನರಸಿಂಹ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಲಕ್ಷ್ಮೀ ನರಸಿಂಹ ದೇವರ ಉತ್ಸವ ಪ್ರಾರಂಭಗೊಂಡಿದ್ದು, ಉತ್ಸವದ ನಿಮಿತ್ತ ಶುಕ್ರವಾರ ಬೆಳಗ್ಗೆ ಅಭಿಷೇಕ, ಅಲಂಕಾರ, ವಿಶೇಷ ಪೂಜೆ, ಹೋಮ ಹವನ ನಡೆಯಿತು.

ರಥೋತ್ಸವ ವೈಭವದಿಂದ ಭಕ್ತರ ಹರ್ಷೋದ್ಗಾರದ ಮಧ್ಯೆ ನಡೆಯಿತು. ಸ್ಥಳೀಯ ತೇರಿನ ಮನೆಯಿಂದ ಪ್ರಾರಂಭಗೊಂಡ ರಥೋತ್ಸವವು ಗಾಲವೇಶ್ವರ ದೇವಸ್ಥಾನಕ್ಕೆ ತಲುಪಿ ನಂತರ ತೇರಿನ ಮನೆಗೆ ಮರಳಿತು. ನೂರಾರು ಭಕ್ತರು ಪಾಲ್ಗೊಂಡಿದ್ದರು. ನಂತರ ದೇವಸ್ಥಾನದಲ್ಲಿ ತೊಟ್ಟಿಲು ಉತ್ಸವ ಹಾಗೂ ಪ್ರಸಾದ ವಿತರಣೆ ನಡೆಯಿತು. ಗೋಪಿನಾಥಾಚಾರ ಗಲಗಲಿ, ನರಸಿಂಹಾಚಾರ್ಯ ಗಲಗಲಿ, ಶ್ರೀನಿವಾಸ ಆಚಾರ್ಯ ಗಲಗಲಿ, ಯದುನಂದನಾಚಾರ್ಯ ಗಲಗಲಿ, ಶ್ರೀಶ ಗಲಗಲಿ ಸೇರಿದಂತೆ ದೇವಸ್ಥಾನದ ಟ್ರಸ್ಟ್ ಕಮಿಟಿ ಸದಸ್ಯರು ಹಾಗೂ ಗ್ರಾಮದ ಬ್ರಾಹ್ಮಣ ಸಮಾಜದವರಿದ್ದರು.

ಇಳಕಲ್ ಪೊಲೀಸ್ ಠಾಣೆಗೆ ಐಜಿಪಿ ಭೇಟಿ

ಇಳಕಲ್: ನಗರದ ಪಿಲೀಸ್ ಠಾಣೆಗೆ ಬೆಳಗಾವಿ ಉತ್ತರ ವಲಯದ ಐಜಿಪಿ ಚೇತನ್‌ಸಿಂಗ್ ರಾಥೋಡ್ ಭೇಟಿ ನೀಡಿ ಪರಿಶೀಲಿಸಿದರು. ಇಳಕಲ್ ಪೊಲೀಸ್ ಠಾಣೆ, ಪೋಲಿಸ್ ವಸತಿ ಗೃಹ ಹಾಗೂ ಕೊಠಡಿ ಪರಿಶೀಲಿಸಿ ಸ್ವಚ್ಛತೆಗೆ ಹೆಚ್ಚಿನ ಮಹತ್ವ ಕೊಡಿ. ಅಧಿಕಾರಿಗಳು ಸಾರ್ವಜನಿಕರೊಂದಿಗೆ ಜನಸ್ನೇಹಿ ಪೊಲೀಸ್ ಆಗಿ ಕಾರ್ಯ ನಿರ್ವಹಿಸಿ ಎಂದು ಹೇಳಿದರು. ಪೊಲೀಸ್ ಸಿಬ್ಬಂದಿ ಕುಂದುಕೊರತೆ ಆಲಿಸಿ, ಶಹರ್ ಮತ್ತು ಗ್ರಾಮೀಣ ಪೋಲಿಸ್ ಠಾಣೆಯ ದಾಖಲಾತಿ ಪರಿಶೀಲಿಸಿ ಇತರೆ ಮಾಹಿತಿ ಪಡೆದುಕೊಂಡರು. ನಗರದ ಹೊರವಲಯದ ಹುಚನೂರ ಹೋಗುವ ರಸ್ತೆ ಪಕ್ಕದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಗ್ರಾಮೀಣ ಪೋಲಿಸ್ ಠಾಣೆಯ ಕಟ್ಟಡ ಪರಿಶೀಲಿಸಿ, ಗುಣಮಟ್ಟದ ಕಟ್ಟಡ, ಕಾಂಪೌಂಡ್ ನಿರ್ಮಾಣ, ನೀರಿನ ವ್ಯವಸ್ಥೆ, ಆವರಣದಲ್ಲಿ ಗಿಡ ಮರಗಳನ್ನು ಬೆಳೆಸುವಂತೆ ಸಲಹೆ ಸೂಚನೆ ನೀಡಿದರು. ನಂತರ ಪೊಲೀಸ್ ವಸತಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಾಗಲಕೋಟೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಜಗದೀಶ, ಸಿಪಿಐ ಶರಣಬಸಪ್ಪ ಅಜೂರ, ಶಹರ್ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಪಾಟೀಲ, ನಗರ ಪೋಲಿಸ್ ಠಾಣೆಯ ಪಿಎಸ್‌ಐ ಮಲ್ಲಿಕಾರ್ಜುನ ಸತ್ತಿ ಗೌಡರ, ಗ್ರಾಮೀಣ ಕ್ರೈಂ ಪಿಎಸ್‌ಐ ಎಸ್.ಆರ್.ನಾಯಕ, ಅಮೀನಗಡ ಪಿಎಸ್‌ಐ ಜ್ಯೋತಿ ವಾಲಿಕಾರ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ ಪುರಾಣ ಆರಂಭ

ಬಸವನಬಾಗೇವಾಡಿ: ತಾಲೂಕಿನ ಡೋಣೂರ ಕಟ್ಟಿಮನಿ ಹಿರೇಮಠ ಶ್ರೀಗುರು ಮರೋಳ ಸಿದ್ದೇಶ್ವರ ಜಾತ್ರಾ ಮತ್ತು ರಥೋತ್ಸವ ಕಾರ್ಯಕ್ರಮದ ನಿಮಿತ್ತ ಮೇ 16, 17ರಂದು ಹಜರತ್ ಸುಲೇಮಾನ ಉರುಸು ಮತ್ತು ಚೌಡಮ್ಮದೇವಿ ಜಾತ್ರೆ ನಿಮಿತ್ತ ಮೇ.2ರಿಂದ ಮೇ.17ರವರೆಗೆ ಬಂಥನಾಳ ಶಿವಯೋಗಿಗಳ ಮಹಾತ್ಮೆ ಕುರಿತು ಬಾಗಲಕೋಟೆ ಜಿಲ್ಲೆ ಚಿಕ್ಕಶೆಲ್ಲಿಕೇರಿಯ ಶಿವಜ್ಞಾನಗುರುಕುಲ ಅಡವೇಶ್ವರ ಶ್ರೀಗಳಿಂದ ಪುರಾಣ ನಡೆಯಲಿದೆ ಎಂದು ಜಾತ್ರಾ ಉತ್ಸವ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಆ.11ಕ್ಕೆ ಮುಂದೂಡಿಕೆ

ಕೊಲ್ಹಾರ: ಪಟ್ಟಣದ ಹೃದಯ ಭಾಗದಲ್ಲಿರುವ ಶತಮಾನ ಕಂಡ ಸರ್ಕಾರಿ ಕನ್ನಡ ಮತ್ತು ಉರ್ದು ಪ್ರಾಥಮಿಕ ಶಾಲೆಗಳ 32 ವರ್ಷ ಹಳೆಯ ಸರ್ಕಾರಿ ಶಾಲೆಯ ಜಾಗದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುತ್ತಿರುವುದನ್ನು ಆಕ್ಷೇಪಿಸಿ ಸಲ್ಲಿಸಿರುವ ಅರ್ಜಿ ಸಂಬಂಧ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ. ಸ್ಥಳೀಯ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್ಡಿಎಂಸಿ) ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಕೆಲಕಾಲ ಅರ್ಜಿ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರ, ಬಸವನಬಾಗೇವಾಡಿ ಬಿಇಒ, ಕೊಲ್ಹಾರ ಪಟ್ಟಣ ಪಂಚಾಯಿತಿ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಿತು. ಪ್ರಕರಣದಲ್ಲಿ ಮುಂದಿನ ವಿಚಾರಣೆವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನಿರ್ದೇಶಿಸಿ ವಿಚಾರಣೆ ಆ.11ಕ್ಕೆ ಮುಂದೂಡಿತು. ಕೊಲ್ಹಾರ ಪಟ್ಟಣದ ವಾರ್ಡ್ ನಂ.7ರಲ್ಲಿ ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಉರ್ದು ಶಾಲೆ ಇದೆ. ಈ ಶಾಲಾ ಕಟ್ಟಡ 1993ರಲ್ಲಿ ನಿರ್ಮಾಣ ಮಾಡಲಾಗಿದೆ. ಈ ಶಾಲೆಯಲ್ಲಿ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದಾರೆ. ಈ ಜಾಗದಲ್ಲಿ ಮಿನಿ ವಿಧಾನಸೌಧ ಕಟ್ಟಲಾಗುತ್ತಿದೆ. ಇದಕ್ಕೆ ಅವಕಾಶ ನೀಡಬಾರದು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ. ಇದರ ಕುರಿತು ಸಾರ್ವಜನಿಕರು ಮತ್ತು ವಿವಿಧ ಸಂಘಟನೆಗಳು ಕಳೆದ ಕೆಲವು ತಿಂಗಳುಗಳಿಂದ ಪ್ರತಿಭಟನೆ ವಿರೋಧಗಳು ನಡೆಯುತ್ತಲಿವೆ.

ಎಸ್‌ಟಿಪಿ ಘಟಕ ನಿರ್ವಹಣೆ ಅಸಮರ್ಪಕ: ಆಕ್ರೋಶ

ಕೊಲ್ಹಾರ: ಪಟ್ಟಣದಲ್ಲಿ ನಿರ್ಮಾಣಗೊಂಡಿರುವ ಪಟ್ಟಣದ ಒಳಚರಂಡಿಯ ಎಸ್‌ಟಿಪಿ ಘಟಕದ ಸಮರ್ಪಕ ನಿರ್ವಹಣೆ ಇಲ್ಲದೆ ಅವ್ಯವಸ್ಥೆ ಆಗರವಾಗಿದೆ ಎಂದು ಪಪಂ ಸದಸ್ಯ ನಿಂಗಪ್ಪ ಗಣಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು ಒಳಚರಂಡಿಯ ಎಸ್‌ಟಿಪಿ ಘಟಕದ ಸಮರ್ಪಕ ನಿರ್ವಹಣೆ ಇಲ್ಲದೇ ಪಟ್ಟಣದ ಬಹುತೇಕ ವಾರ್ಡ್‌ಗಳಲ್ಲಿ ರಸ್ತೆ ಮಧ್ಯ ಇರುವ ಮ್ಯಾನ್ ಹೋಲ್‌ಗಳಿಂದ ತ್ಯಾಜ್ಯ ನೀರು ಹೊರ ಬರುತ್ತಿದೆ. ಪ್ರತಿ ವಾರ್ಡಿನಲ್ಲಿ ಒಂದಿಲ್ಲೊಂದು ಕಡೆ ಒಳಚರಂಡಿ ಕಲುಷಿತ ತ್ಯಾಜ್ಯ ರಸ್ತೆಯ ಮೇಲೆ ಹರಿದು ನಾಗರಿಕರು ಅಸಹ್ಯಪಡುವಂತಾಗಿದೆ. ಎಸ್‌ಟಿಪಿ ಘಟಕದಲ್ಲಿ ಸರಿಯಾಗಿ ನಿರ್ವಹಣೆ ಇಲ್ಲದೆ ಕುಡುಕರ ತಾಣವಾಗಿದೆ. ಈ ಕುರಿತು ಪುನರ್ವಸತಿ ಪುನರ್ ನಿರ್ಮಾಣ ಇಲಾಖೆಯ ವಿಭಾಗ 6ರ ಅಧಿಕಾರಿಗಳಿಗೆ ಮೌಖಿಕ ಮನವಿ ಮಾಡಲಾಗಿದ್ದರೂ ಕೂಡ ಸ್ಪಂದನೆ ದೊರಕುತ್ತಿಲ್ಲ, ಕೆಲ ಬಾರಿ ತಾತ್ಕಾಲಿಕವಾಗಿ ಸಮಸ್ಯೆ ಪರಿಹರಿಸುತ್ತಿದ್ದಾರೆ. ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅರ್ಜಿ ಆಹ್ವಾನ

ಬಸವನಬಾಗೇವಾಡಿ: ಕರ್ನಾಟಕ ರಾಜ್ಯ ಹಡಪದ ನೌಕರರ ಸಂಘದ(ಶಿಯಾ) ನೇತೃತ್ವದಲ್ಲಿ ನಡೆಯುವ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.90ರಷ್ಟು ಅಂಕಗಳನ್ನು ಪಡೆದ ಹಡಪದ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯೊಂದಿಗೆ ಅಂಕಪಟ್ಟಿ, ಜಾತಿ ದೃಢೀಕರಣ ಪತ್ರ ಅಥವಾ ಟಿ.ಸಿ, ವಿದ್ಯಾರ್ಥಿ ಬ್ಯಾಂಕ್ ಖಾತೆ ಸಂಪೂರ್ಣ ವಿವರ, ಆಧಾರ್ ಪ್ರತಿ ಸೇರಿ ಭರ್ತಿ ಮಾಡಿದ ಅರ್ಜಿಯೊಂದಿಗೆ ದಾಖಲಾತಿಗಳನ್ನು ಕಳುಹಿಸಲು ಮೇ.15ಕೊನೆ ದಿನವಾಗಿದೆ. ಅರ್ಜಿಯನ್ನು ಪ್ಲಾಟ್ ನಂ 94/2/ಎ,10ನೇ ಕ್ರಾಸ್ ಬಿವಿವಿಎಸ್ ಶಾಲೆಯ ಎದುರುಗಡೆ, ವಿದ್ಯಾಗಿರಿ ಬಾಗಲಕೋಟೆ 587102 ಈ ವಿಳಾಸಕ್ಕೆ ಕಳುಹಿಸಿಕೊಡಲು ತಿಳಿಸಿದೆ ಎಂದು ಕ.ರಾ.ಹ.ನೌ ಸಂಘದ ರಾಜ್ಯಾಧ್ಯಕ್ಷ ಪ್ರಕಾಶ ಆರ್.ಎಚ್., ಪ್ರದಾನ ಕಾರ್ಯದರ್ಶಿ ಶಿವಾನಂದ ನಾವಿ ತಿಳಿಸಿದ್ದಾರೆ.

ಶಾಂತಾಬಾಯಿ ನಿಧನ



ವಿಜಯಪುರ: ಜಿಲ್ಲೆಯ ಬಬಲೇಶ್ವರ ತಾಲೂಕಿನ ಹಲಗಣಿ ಗ್ರಾಮದ ಹೇಮರೆಡ್ಡಿ ಮಲ್ಲಮ್ಮನ ಪರಮಭಕ್ತ ಶರಣೆ ಶಾಂತಾಬಾಯಿ ಭೀಮನಗೌಡ ಬಿರಾದಾರ (78) ಗುರುವಾರ ನಿಧನರಾದರು. ಮೃತರಿಗೆ ಒಬ್ಬ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಇಂಗಳೇಶ್ವರ ಹಿರೇಮಠದ ಶಿವಬಸವ ಶಿವಾಚಾರ್ಯ ಸ್ವಾಮೀಜಿಯವರ ಜನ್ಮ ಶತಮಾನೋತ್ಸವ ನಿಮಿತ್ತ ಶುಕ್ರವಾರ ಸಂಜೆ ಕಾಶಿ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಉತ್ಸವ ಸಂಭ್ರಮದಿಂದ ಜರುಗಿತು. ಗ್ರಾಮದ ಬಸವೇಶ್ವರ ವೃತ್ತದಿಂದ ಹಿರೇಮಠದವರೆಗೆ ಸುಮಂಗಲೇಯರ ಕುಂಭಮೇಳ ಸಕಲವಾದ್ಯಗಳೊಂದಿಗೆ ಭಕ್ತರು ಮುಖಂಡರು, ಹಿರಿಯರು, ಯುವಕರು, ಮಹಿಳೆಯರು ನೇತೃತ್ವದಲ್ಲಿ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಶ್ರಮಜೀವಿಗಳಿಗೆಂದೇ ಮೀಸಲಾದ ಕಾರ್ಮಿಕರ ದಿನಾಚರಣೆ: ಸಿದ್ರಾಮ

ವಿಜಯಪುರ: ಕಾರ್ಮಿಕರು ಜಗತ್ತಿನ ಆಸ್ತಿ. ಕಾರ್ಮಿಕರಿಲ್ಲದ ಜಗತ್ತನ್ನು ಊಹಿಸುವುದಕ್ಕೇ ಸಾಧ್ಯವಿಲ್ಲ. ಇಂತಹ ಶ್ರಮಜೀವಿಗಳನ್ನು ಗೌರವಿಸುವ, ಅವರ ಸೇವೆಯನ್ನು ಸ್ಮರಿಸುವ ದಿನವಾಗಿ ಪ್ರತಿವರ್ಷ 'ಅಂತಾರಾಷ್ಟ್ರೀಯ ಕಾರ್ಮಿಕರ ದಿನ'ವನ್ನು ಆಚರಿಸಲಾಗುತ್ತದೆ ಎಂದು ರವಿ ಇಂಡಸ್ಟ್ರೀಸ್ ಮಾಲೀಕ ಸಿದ್ರಾಮ ಕಾಸೆ ಹೇಳಿದರು.

ಮುಳವಾಡ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ದಿನಾಚರಣೆ ನಿಮಿತ್ಯವಾಗಿ ಕಾರ್ಮಿಕರಿಗೆ ಸಿಹಿ ವಿತರಿಸಿ ಶಾಲು ಹೊದಿಸಿ ಸನ್ಮಾನಿಸಿ ಅವರು ಮಾತನಾಡಿದರು.

ಮೇ 1 ಅಂತಾರಾಷ್ಟ್ರೀಯ ಕಾರ್ಮಿಕರ ದಿನ. ಇದು ಶ್ರಮಜೀವಿಗಳಿಗೆಂದೇ ಮೀಸಲಾದ ದಿನ. ಪ್ರತಿಯೊಂದು ಕ್ಷೇತ್ರದಲ್ಲೂ ಶ್ರಮಪಟ್ಟು ದುಡಿಯುವ ಕೆಲಸಗಾರರು ದೇಶ, ರಾಜ್ಯದ ಅಭಿವೃದ್ಧಿಗೆ ಹೆಗಲು ಕೊಡುತ್ತಾರೆ. ಇಂತಹ ಶ್ರಮಜೀವಿಗಳ ಪ್ರಯತ್ನ, ಕೆಲಸದಲ್ಲಿಯೇ ದೇಶದ ಅಭಿವೃದ್ಧಿಯಡಗಿದೆ. ಹೀಗೆ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಕಾರ್ಮಿಕರ ಶ್ರಮ ಮತ್ತು ಸೇವೆಯನ್ನು ಗೌರವಿಸುವ, ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವ ನಮ್ಮ ಕರ್ತವ್ಯವಾಗಿದೆ ಎಂದರು. ನೇತಾ, ಬಡಕನ, ಬುಲಾಯಿ, ಗೋಪಾಲ ಕಾರ್ಮಿಕರಿಗೆ ಸನ್ಮಾನಿಸಲಾಯಿತು. ಬಸವರಾಜ ಮಲಘಾಣ, ಉಮೇಶ ಶಿವಶರಣ, ಸುರೇಶ ಜಾಧವ, ಶ್ರೀನಿವಾಸ ವಾಘ್ಮೋರೆ, ಶ್ರೀಕಾಂತ ಬಂಡಿವಡ್ಡರ, ಭೀಮಶಿ, ಗೋವಿಂದ ಇದ್ದರು.



ವಿಜಯಪುರ: ನಗರದ ಮುಳವಾಡ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ದಿನಾಚರಣೆ ನಿಮಿತ್ತ ಕಾರ್ಮಿಕರಿಗೆ ಸನ್ಮಾನಿಸಿದರು. ರವಿ ಇಂಡಸ್ಟ್ರೀಸ್ ಮಾಲೀಕ ಸಿದ್ರಾಮ ಕಾಸೆ, ನೇತಾ, ಬಡಕನ, ಬುಲಾಯಿ, ಗೋಪಾಲ ಕಾರ್ಮಿಕರಿಗೆ ಸನ್ಮಾನಿಸಲಾಯಿತು. ಬಸವರಾಜ ಮಲಘಾಣ, ಉಮೇಶ ಶಿವಶರಣ, ಸುರೇಶ ಜಾಧವ, ಶ್ರೀನಿವಾಸ ವಾಘ್ಮೋರೆ, ಶ್ರೀಕಾಂತ ಬಂಡಿವಡ್ಡರ, ಭೀಮಶಿ, ಗೋವಿಂದ ಇದ್ದರು.

984 ಲಕ್ಷ ರೂ. ಮೌಲ್ಯದ ಕಾಮಗಾರಿಗೆ ಭೂಮಿಪೂಜೆ | ಎಂಬಿಪಾ ಸಲಹೆ

ನೀರು ಬಳಕೆಯಲ್ಲಿ ಮಿತಿಯಿರಲಿ

ವಿಜಯಪುರ: ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಶುಕ್ರವಾರ ಬಬಲೇಶ್ವರ ತಾಲೂಕಿನ ತಿಗಣಿ ಬಿದರಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ ಕಾಖಂಡಕಿ-ಮಮದಾಪುರ, ಬಬಲೇಶ್ವರ-ಯಕ್ಕುಂಡಿ, ಕಾಖಂಡಕಿ-ತೊನಶ್ಯಾಳ ಹಾಗೂ ತಿಗಣಿ ಬಿದರಿ ಹಳ್ಳಗಳಿಗೆ ಅಡ್ಡಲಾಗಿ ಸರಣಿ ಚೆಕ್ ಡ್ಯಾಂ ಮತ್ತು ರಿಚಾರ್ಜ್ ಶಾಫ್ಟ್ ಗಳ ನಿರ್ಮಾಣ ಮಾಡುವ ಮೂಲಕ ಅಂತರ್ಜಲ ಅಭಿವೃದ್ಧಿಪಡಿಸುವ ಅಂದಾಜು ರೂ. 984 ಲಕ್ಷ ಮೌಲ್ಯದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ನೀರು ಬಳಕೆದಾರರ ಸಂಘ ರಚಿಸುವ ಮೂಲಕ ನೀರು ಬಳಕೆಯಲ್ಲಿ ಶಿಸ್ತು ತರಲು ಕ್ರಮ ಕೈಗೊಳ್ಳಲಾಗುವುದು. ಇದರಿಂದ ಕಾಲುವೆಯ ಕೊನೆಯ ಭಾಗದವರೆಗೂ ನೀರು ತಲುಪಲು ಅನುಕೂಲವಾಗಲಿದೆ. ಇದರ ಜೊತೆಗೆ ಈಗ ಕೈಗೆತ್ತಿಕೊಳ್ಳಲಾಗಿರುವ ಹಳ್ಳಗಳನ್ನು ತುಂಬಿಸುವ ಯೋಜನೆಯಿಂದ ಅಂತರ್ಜಲ ಮತ್ತಷ್ಟು ಹೆಚ್ಚಾಗಲಿದೆ. ಕಾಲುವೆಗಳ ವ್ಯಾಪ್ತಿಯಲ್ಲಿ ಬರುವ 178 ಹಳ್ಳಗಳಿಗೆ ಎಸ್ಕೇಪ್ ಮೂಲಕ ನೀರು ಹರಿಸಲಾಗುವುದು. ಪ್ರತಿ ಕಿಲೋ ಮೀಟರ್ ಗೊಂದರಂತೆ ಚೆಕ್ ಡ್ಯಾಂ ನಿರ್ಮಾಣದಿಂದ ಸುಮಾರು 400 ಕಿ. ಮೀ. ವ್ಯಾಪ್ತಿಯಲ್ಲಿ ಅಂತರ್ಜಲ ವೃದ್ಧಿಸಿ ಬೇಸಿಗೆಯಲ್ಲಿ ನೀರಿನ ಸಮಸ್ಯೆಗೆ ಸೂಕ್ತ ಪರಿಹಾರ ಸಿಗಲಿದೆ. ಹಳ್ಳಗಳ ಒತ್ತುವರಿ ತೆರವಿಗೆ ರೈತರು ಕೈ ಜೋಡಿಸಬೇಕು. ಸರಣಿಯಲ್ಲಿ ಬರುವ ಪ್ರತಿಯೊಂದು ಚೆಕ್ ಡ್ಯಾಂಗೆ ನೀರು ತಲುಪುವಂತಾಗಬೇಕು ಎಂದು ಅವರು ಹೇಳಿದರು.



ಕೆಎಂಎಫ್ ಮಾಜಿ ಅಧ್ಯಕ್ಷ ಶ್ರೀಶೈಲಗೌಡ ಪಾಟೀಲ ನಿಡೋಣಿ ಮಾತನಾಡಿ, ಬರದ ನಾಡಿನ್ನು ಹಸಿರು ಬೀಡನ್ನಾಗಿ ಮಾಡಿರುವ ಸಚಿವ ಎಂ. ಬಿ. ಪಾಟೀಲರು ನಮ್ಮ ಪಾಲಿಗೆ ಅನ್ನದಾತರಾಗಿದ್ದಾರೆ. ರೈತರು ಕಾಲುವೆಗಳನ್ನು ಸಂರಕ್ಷಿಸುವ ಮೂಲಕ ನೀರು ಹಳ್ಳಗಳ ಕೊನೆಯಂಚಿನವರೆಗೆ ತಲುಪಲು ಕೈಜೋಡಿಸಬೇಕು ಎಂದರು.

ಮುಖಂಡ ಚನ್ನಪ್ಪ ಕೊಪ್ಪದ, ಜಿಪಂ ಮಾಜಿ ಅಧ್ಯಕ್ಷ ವಿ.ಎಸ್.ಪಾಟೀಲ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಬಬಲೇಶ್ವರ ತಾಲೂಕು ಅಧ್ಯಕ್ಷ ಮಲ್ಲಪ್ಪ ದಳವಾಯಿ ಮಾತನಾಡಿದರು.

ಎಂಜಿನಿಯರ್ ವಿಶ್ವನಾಥ ಪೀರಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈರಗೊಂಡ ಬಿರಾದಾರ, ನಾಗರಾಜ ಕುಲಕರ್ಣಿ, ಪ್ರಭುಗೌಡ ಪಾಟೀಲ, ಬಾಬುಗೌಡ ಪಾಟೀಲ, ಅಶೋಕ ಕಾಖಂಡಕಿ, ಮುದಕನಗೌಡ ಪಾಟೀಲ, ಜಕ್ಕಪ್ಪ ಎಡವೆ, ರಫೀಕ್ ಸೋನಾರ, ಮಹೇಶ ಮಾಳಿ, ಪರಶು ಬಡಗಾರ, ರಜಾಕ ದಳವಾಯಿ, ಲಾಲಸಾಬ್ ಕಮತೆ, ಮಾಳಪ್ಪ ಜಲ್ಲೆ, ವಿನಾಯಕ ಕೊಟ್ಟಲಗಿ, ವಿದ್ಯಾರಾಣಿ ತುಂಗಳ, ಕಾವ್ಯ ಪಡತಾರೆ, ಉಮ್ಮಯ್ಯಾ ಹಿರೇಮಠ, ದಾನಮ್ಮ ಜಿರಲಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿಜಯ ವಸ್ತ್ರದ, ಗಣೇಶ ಮಾಳಿ, ಭೀಮರಾವ ಶಿಂಧೆ, ವಜೀರ ಆಲಗೂರ ಇದ್ದರು.

ಮಠಗಳಿಂದ ಪ್ರತಿಯೊಬ್ಬರಿಗೆ ಸಂಸ್ಕಾರ: ಪಾಟೀಲ

ಬಸವನಬಾಗೇವಾಡಿ: ಸಮಾಜದಲ್ಲಿ ಮಠಗಳ ಕೊಡುಗೆ ಅಪಾರವಾಗಿದ್ದು ಮಠಗಳಿಂದ ಶಿಕ್ಷಣ ದಾಸೋಹ ಆಶ್ರಯ ನೀಡುವಂತ ಮಠಗಳು ಈ ರಾಜ್ಯದಲ್ಲಿ, ದೇಶದಲ್ಲಿ ಇರುವುದರಿಂದ ಸಂಸ್ಕಾರ ಪ್ರತಿಯೊಬ್ಬರಿಗೆ ದೊರೆಯುತ್ತಿದೆ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸೋಮನಗೌಡ ಪಾಟೀಲ ಹೇಳಿದರು.

ತಾಲೂಕಿನ ಮನಗೂಳಿ ಹಿರೇಮಠದ ಶತಾಯುಷಿ ಸಂಗನಬಸವ ಶಿವಾಚಾರ್ಯ ಮಹಾಸ್ವಾಮಿಜಿಯವರ 43ನೇ ಪುಣ್ಯಸ್ಮರಣೋತ್ಸವ ಹಾಗೂ 2008ಜಗದ್ಗುರು ಡಾ.ಮಹಾಂತ ಶಿವಾಚಾರ್ಯ ಸ್ವಾಮೀಜಿಯವರ 13ನೇ ಯಾತ್ರಾ ಮಹೋತ್ಸವ ನಿಮಿತ್ತ ಶಿವಶರಣೆ ಅಕ್ಕಮಹಾದೇವಿ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಹಿರೇಮಠದಲ್ಲಿ ನಡೆಯುತ್ತಿರುವ ಪುರಾಣದ ಸದುಪಯೋಗ ಪಡೆದುಕೊಳ್ಳಬೇಕು, ಈಗಿನ ಕಲಿಯುಗದ 21ನೇ ಶತಮಾನದಲ್ಲಿ ಟಿವಿ ಕಡೆಗೆ ಲಕ್ಷಕೊಡದೆ ಟಿವಿಯಿಂದ ಮನುಷ್ಯನಿಗೆ ನೆಮ್ಮದಿಯಿಲ್ಲ ಪುರಾಣ ಪ್ರವಚನದಿಂದ ನೆಮ್ಮದಿ ಇದೆ ಎಂದು ಹೇಳಿದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಪ್ರಾಸ್ತಾವಿಕವಾಗಿ ಮಾತನಾಡಿ ಮನಗೂಳಿ ಹಿರೇಮಠ ಈ ಭಾಗದಲ್ಲಿ ಇತಿಹಾಸವನ್ನು ಹೊಂದಿರುವ ಮಠ, ಈ ಮಠದ ಹಿಂದಿನ ಲಿಂಗೈಕ್ಯ ಪರಮಪೂಜ್ಯರಾದ ಗುರುಸಂಗನಬಸವ ಶಿವಾಚಾರ್ಯರು ಬೇಡಿದ ಭಕ್ತರಿಗೆ ಬೇಡಿದ ವರವನ್ನು ಕೊಟ್ಟಿರುವ ಪೂಜ್ಯರು ಅಂತ ಪೂಜ್ಯರ ಜಾತ್ರಾ ಮಹೋತ್ಸವದಲ್ಲಿ ಪುರಾಣ ಪ್ರವಚನ ಹಚ್ಚಿದ್ದು ಸಂತೋಷದ ವಿಚಾರ ಎಂದು ಹೇಳಿದರು.

ಹಿರೇಮಠದ ಸಂಗನಬಸವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಮಾತನಾಡಿ ಪ್ರತಿಯೊಬ್ಬರೂ ಮಕ್ಕಳಿಗೆ ಶಿಕ್ಷಣ ಮತ್ತು ಸಂಸ್ಕಾರ ಕೊಡುವ ಜೊತೆಗೆ ಮಠಗಳಿಗೆ ಹೋಗುವಪರಂಪರೆ ಮಕ್ಕಳಿಗೆಕಲಿಸಬೇಕೆಂದು ಹೇಳಿದರು. ಪಪಂ ಅಧ್ಯಕ್ಷ ಶೇಖಪ್ಪಗೌಡ ಬಿರಾದಾರ ಅಧ್ಯಕ್ಷತೆವಹಿಸಿದರು. ಮಾಜಿ ತಾಪಂ ಸದಸ್ಯ ಮಾಮಲ್ಲಪ್ಪ ತಪಶೆಟ್ಟಿ, ಈರಪ್ಪ ಹುಣಶಿಕಟ್ಟಿ, ಪುರಾಣಿಕ ಶರಣಯ್ಯ ಶಾಸ್ತ್ರಿಗಳು, ಕುಮಾರ ಬಾವಿಮನಿ ಸಂಗೀತ ಸೇವೆಗೈದರು, ಬಸನಗೌಡ ಬಿರಾದಾರ ತಬಲಾ ಸೇವೆಗೈದರು.



ಪ್ರತಿಯೊಬ್ಬರೂ ಕಾನೂನಿನ ಅರಿವು ಹೊಂದಲಿ

ದೇವರಹಿಪ್ಪರಗಿ: ಇಡೀ ಜಗತ್ತಿನಲ್ಲಿ ಶ್ರೇಷ್ಠವಾದ ಸಂವಿಧಾನ ನಮ್ಮದಾಗಿದ್ದು, ಪ್ರತಿಯೊಬ್ಬರೂ ಕಾನೂನಿನ ಅರಿವು ಹೊಂದಿರಬೇಕು. ಗ್ರಾಮೀಣ ಭಾಗದ ಜನರ ಜಾಗೃತಿಗಾಗಿ ಕಾನೂನು ಅರಿವು ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ಸಿಂದಗಿ ನ್ಯಾಯಾಲಯದ ಗೌರವಾನ್ವಿತ ಹಿರಿಯ ನ್ಯಾಯಾಧೀಶ ನಾಗೇಶ ಮೋಗೆರ ಹೇಳಿದರು.

ತಾಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಸಿಂದಗಿ ತಾಲೂಕು ವಕೀಲರ ಸಂಘ ಹಾಗೂ ಚಿಕ್ಕರೂಗಿ ಗ್ರಾಮದ ವತಿಯಿಂದ ಹಮ್ಮಿಕೊಂಡ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಳ್ಳಿಯ ಜನರು ಕಾನೂನಿನ ಜ್ಞಾನವನ್ನು ಹೊಂದಬೇಕು. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಿಸಬೇಕು. ಎಲ್ಲರೂ ಅಪರಾಧ ಚಟುವಟಿಕೆಗಳಿಂದ ದೂರ ಇರಬೇಕು. ವರದಕ್ಷಿಣೆ ನೀಡುವುದು ಅಪರಾಧ, ತೆಗೆದುಕೊಳ್ಳುವುದು ಅಪರಾಧವಾಗಿದೆ. ವರದಕ್ಷಿಣೆ ಮುಕ್ತ ಗ್ರಾಮವನ್ನಾಗಿಸಲು ತಾವೆಲ್ಲರೂ ಮುಂದಾಗಬೇಕು ಎಂದು ಸಲಹೆ ನೀಡಿದರು.

ನ್ಯಾಯಾಧೀಶೆ ಪಂಕಜಾ ಕೊಣ್ಣೂರ ಮಾತನಾಡಿ, ತಮ್ಮ ಚಿಕ್ಕ ಚಿಕ್ಕ ಮಕ್ಕಳಿಗೆ ವಾಹನ ಚಾಲನೆ ಮಾಡಲು ಕೊಡಬಾರದು. ಒಂದು ವೇಳೆ ನೀಡಿದರೆ ಅದಕ್ಕೆ ನ್ಯಾಯಾಲಯದಿಂದ ದಂಡ ವಿಧಿಸಲಾಗುತ್ತಿದೆ. ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬಾರದು ಎಂದು ತಿಳಿಸುತ್ತ, ಹಲವಾರು ಕಾನೂನಾತ್ಮಕ ವಿಚಾರಗಳನ್ನು ತಿಳಿಸಿದರು.

ಸಿಂದಗಿ ವಕೀಲರ ಸಂಘದ ಅಧ್ಯಕ್ಷ ಎಸ್.ಬಿ.ಪಾಟೀಲ ಹಾಗೂ ಸರ್ಕಾರಿ ವಕೀಲರಾದ ಬಿ.ಜಿ.ನೆಲ್ಲಗಿ ಮಾತನಾಡಿದರು. ನ್ಯಾಯವಾದಿ ಶ್ರೀಶೈಲ ಮುಳಜಿ ಚಿಕ್ಕರೂಗಿ ಮಾತನಾಡಿ ನಮ್ಮ ಯುವಕರು ಕಾನೂನನ್ನು ಗೌರವಿಸಬೇಕು ಅದನ್ನು ನಾವು ಪಾಲಿಸಬೇಕು ಕಾನೂನು ಬಾಹಿರ ಚಟುವಟಿಕೆ ಮಾಡಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ನ್ಯಾಯವಾದಿಗಳಾದ ಕಾಶಿನಾಥ್ ಚವ್ಹಾಣ ರವಿ ನಾಯಕ, ಬಿ.ಎಸ್.ಬಿರಾದಾರ, ಪಿಕೆಪಿಎಸ್ ಅಧ್ಯಕ್ಷ ನಾಗಣ್ಣ ಮುಳಜಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಶಿವಾನಂದ ಮುಲಿಮನಿ, ಎಸ್.ಎಂ.ಆನಂದಿ, ವಿಶ್ವನಾಥ್ ಚಂಡಕಿ, ಶಂಕರೇಗೌಡ ಪಾಟೀಲ್, ಮಲ್ಲಿಕಾರ್ಜುನ ಚಂಡಕಿ, ದೇವಾನಂದ ಬಾಗಲಕೋಟಿ, ಕುಮಾರಗೌಡ ಬಿರಾದಾರ, ಹಣಮಂತ ಬಿರಾದಾರ, ಚಿದಾನಂದ ಬಿರಾದಾರ, ಶಿವಾನಂದ ಬಿರಾದಾರ, ಕಲ್ಲು ನಾಟಿಕಾರ, ಶರಣಪ್ಪ ಕುಂಬಾರ, ಮೊಹಸೀನ್ ಇನಾಮದಾರ, ಜಟ್ಟೆಪ್ಪ ಚಂಡಕಿ, ಬಸವರಾಜ ಕುಂಬಾರ ಸೇರಿದಂತೆ ವಕೀಲರು ಇದ್ದರು.



ಮಹಾಬಲೇಶ ಗಡೇದಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ

ಮುದ್ದೇಬಿಹಾಳ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆಯಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮೇ 1ರಂದು ಕಾರ್ಮಿಕ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ನಗರದ ಹಸಿರು ತೋರಣ ಗೆಳೆಯರ ಬಳಗದ ಸಂಚಾಲಕ ಮಹಾಬಲೇಶ್ವರ ಗಡೇದ ಅವರಿಗೆ ಕಾಯಕಯೋಗಿ 2026 ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ವೃತ್ತಿಯಲ್ಲಿ ಅಂಚೆ ಇಲಾಖೆಯ ಪೋಸ್ಟ್ ಮಾಸ್ಟರ್ ಆಗಿರುವ ಅವರು, ಪ್ರವೃತ್ತಿಯಿಂದ ಹತೋಗೆಬ ಸಂಘಟನೆ ಅಡಿಯಲ್ಲಿ ಪರಿಸರ ಸಂರಕ್ಷಣೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಸದಾ ತೊಡಗಿಸಿಕೊಂಡಿದ್ದಾರೆ. ತಾಲೂಕಿನಲ್ಲಿ 10 ಸಾವಿರಕ್ಕಿಂತ ಹೆಚ್ಚು ಗಿಡಗಳನ್ನು ನೆಡುವ, ಸರಕಾರಿ ಜಮೀನು ಸಂರಕ್ಷಿಸಿ, ಹಸಿರೀಕರಣ ಮಾಡುವಲ್ಲಿ ಗಮನಾರ್ಹ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು(ರಿ) ದೊಡ್ಡಬಳ್ಳಾಪುರ ರಾಜ್ಯಾಧ್ಯಕ್ಷ ನಟರಾಜ ಹುಲಿಕಲ್ಲ, ಇಸ್ರೊದ ನಿವೃತ್ತ ಅಧ್ಯಕ್ಷ ಡಾ.ಕಿರಣಕುಮಾರ, ಖ್ಯಾತ ವೈದ್ಯ ಡಾ.ಆಂಜನೇಯಪ್ಪ, ರಾಘವೇಂದ್ರ ಮಿಸಾಳೆ, ಶಿವರಂಜನ್ ಸತ್ಯಂಪೇಟೆ ಇತರ ಗಣ್ಯರು ಉಪಸ್ಥಿತರಿದ್ದರು.

ಸಂಘದ ಸದಸ್ಯರು ಹಾಗೂ ಪದಾಧಿಕಾರಿಗಳು ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.




ನಾಲತವಾಡ: ಡಾ.ಬಾಬಸಾಹೇಬ್ ಅಂಬೇಡ್ಕರ್ ವೃತ್ತದಲ್ಲಿ ಜಯ ಕರ್ನಾಟಕ ಕಟ್ಟಡ ಮತ್ತು ಇತರೆ ಕಾರ್ಮಿಕ ಸಂಘದ ವತಿಯಿಂದ ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಮಿಕರ ದಿನಾಚರಣೆ ಆಚರಣೆ ಮಾಡಲಾಯಿತು. ತಾಲೂಕು ಅಧ್ಯಕ್ಷ ಮಲ್ಲು ಕುಂಬಾರ, ಮುದೇಬಿಹಾಳ ಗುಂಡಪ್ಪ ಚಲವಾದಿ, ಬಾಳಪ್ಪ ಚೌಡೇಕೆರ, ಲಕ್ಷ್ಮಣ ಚಲವಾದಿ, ಗೋಪಾಲ ಗೌಂಡಿ ಬಿಲ್ಲಿ, ಅಶ್ಪಾಕ ರಗಟ್ಟಿ, ಮಾದೇಪ್ಪ ಕೇಸರಪುರ ಸಾಬು ಬೋವಿ, ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಸುಜಾತ ತಂದೆ ಯಂಕಪ್ಪ ದಾಸರ, ಹಣಮಂತ ಕೇಸಾಪುರ ಇದ್ದರು.

ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ

ಇಂಡಿ: ತಾಲೂಕಿನ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಮತ್ತು ಬುದ್ಧ ಪೂರ್ಣಿಮಾ ಆಚರಿಸಲಾಯಿತು. ಮುಖಂಡರಾದ ಲಾಲಸಾಬ್ ನದಾಫ, ಶ್ರೀದೇವಿ ಕಾಶಿನಾಥ್ ಬಡಿಗೇರ ಮಾತನಾಡಿದರು.

ಕಾರ್ಮಿಕ ನಿರೀಕ್ಷಕ ಡಿ.ಎಂ.ದೇವರಮನಿ ಮಾತನಾಡಿ, ಕಾರ್ಮಿಕರ ಹೋರಾಟ ಮತ್ತು ಕಾರ್ಮಿಕರ ದಿನಾಚರಣೆಯ ನಡೆದು ಬಂದ ಹಾದಿ ಮತ್ತು ಇತಿಹಾಸದ ಕುರಿತು ವಿವರಿಸಿದರು.

ಕಾರ್ಮಿಕ ನಿರೀಕ್ಷಕರ ಕಚೇರಿ ಸಿಬ್ಬಂದಿಯಾದ ಸುಭಾಷ್ ಚಂದ್ರ ಟೋನಿ ಮಾತನಾಡಿದರು. ಕಟ್ಟಡ ಕಾರ್ಮಿಕರಿಗೆ ಸುರಕ್ಷತಾ ಕಿಟ್‌ಗಳನ್ನು ನೀಡಲಾಯಿತು. ಕಾರ್ಮಿಕ ನಿರೀಕ್ಷಕರು, ಮುಖಂಡರು ಭಾಗವಹಿಸಿದ್ದರು



ಕಾರ್ಮಿಕ ದಿನಾಚರಣೆ: ಕಾರ್ಮಿಕರಿಂದ ಬೃಹತ್ ರ್‍ಯಾಲಿ

ವಿಜಯಪುರ: ಕಾರ್ಮಿಕ ದಿನಾಚರಣೆ ಅಂಗವಾಗಿ ವಿವಿಧ ಸಂಘಟನೆಯ ಪದಾಧಿಕಾರಿಗಳು ಹಕ್ಕೊತ್ತಾಯ ಆಗ್ರಹಿಸಿ ಬೃಹತ್ ರ್‍ಯಾಲಿ ನಡೆಸಿದರು. ಲಾರಿ ಹಮಾಲರ ಸಂಘ, ಅಕ್ಷರ ದಾಸೋಹ ನೌಕರರ ಸಂಘ, ಕಟ್ಟಡ ಕಾರ್ಮಿಕರ ಸಂಘ ಸೇರಿದಂತೆ ಅನೇಕ ಸಂಘಟನೆಯ ಪದಾಧಿಕಾರಿಗಳು, ಕಾರ್ಮಿಕರು ರ್‍ಯಾಲಿ ನಡೆಸಿದರು.



ವಿಜಯಪುರ ನಗರದ ಕೋರಿಚೌಕ್‌ದಿಂದ ಸಿದ್ದೇಶ್ವರ ದೇವಸ್ಥಾನ ಮಾರ್ಗವಾಗಿ, ಗಾಂಧಿ ವೃತ್ತ, ಬಸವೇಶ್ವರ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ ತಲುಪಿತು.

ಈರಣ್ಣ ಬೆಳ್ಳುಂಡಗಿ ಮಾತನಾಡಿ, ಪ್ರಪಂಚದಾದ್ಯಂತ ತನ್ನ ಪ್ರಾಬಲ್ಯವನ್ನು ಸ್ಥಾಪಿಸಲು ಅಮೆರಿಕದ ಸಾಮ್ರಾಜ್ಯಶಾಹಿ ತನ್ನ ಆಕ್ರಮಣ ಉಲ್ಬಣಗೊಳಿಸುತ್ತಿರುವ ಈ ಸಂದರ್ಭದಲ್ಲಿ, ಈ ಸಾಮ್ರಾಜ್ಯಶಾಹಿ ದಾಳಿಗಳಿಗೆ ಜನರ ಪ್ರತಿರೋಧವು ಸಹಾ ಹೆಚ್ಚುತ್ತಿವೆ. ಇಂತಹ ಸಂಧರ್ಭದಲ್ಲಿ ಈ ವರ್ಷದ ಕಾರ್ಮಿಕ ವರ್ಗವು ಮೇ ದಿನವನ್ನು ಆಚರಿಸಲು ಸಜ್ಜಾಗುತ್ತಿದೆ. ಟ್ರಂಪ್ ಅವರ ಅಧ್ಯಕ್ಷತೆಯ ಎರಡನೇ ಅವಧಿಯಲ್ಲಿ, ಅಂತಾರಾಷ್ಟ್ರೀಯ ಕಾನೂನುಗಳು ಮತ್ತು ಸ್ಥಾಪಿತಗೊಂಡಿರುವ ನಿಯಮಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಸಾಮ್ರಾಜ್ಯಶಾಹಿ ಅಮೆರಿಕ ತನ್ನ ಪ್ರಾದೇಶಿಕ ಮತ್ತು ಕಾರ್ಯತಂತ್ರದ ಪ್ರಭಾವವನ್ನು ವಿಸ್ತರಿಸಲು ಬೆತ್ತಲೆ ಪ್ರಯತ್ನಗಳನ್ನು ಮಿಲಿಟರಿ ಶಕ್ತಿಯ ಮೂಲಕ ಪ್ರದರ್ಶಿಸುತ್ತಿದೆ ಎಂದರು.

ಸಿಐಟಿಯು ಸಂಚಾಲಕ ಲಕ್ಷ್ಮಣ ಹಂದ್ರಾಳ ಮಾತನಾಡಿ, ತೈಲ ಮತ್ತು ಅನಿಲ ಸಂಪನ್ಮೂಲಗಳು ಮತ್ತು ಜಾಗತಿಕ ವ್ಯಾಪಾರ ಮಾರ್ಗಗಳ ಮೇಲೆ ಹಿಡಿತ ಸಾಧಿಸುವುದು. ಬಂಡವಾಳಶಾಹಿಯ ತೀವ್ರ ಬಿಕ್ಕಟ್ಟನ್ನು ನಿವಾರಿಸಲು ಈ ಬೆತ್ತಲೆ ಆಕ್ರಮಣಗಳನ್ನು ಮಾಡಲಾಗುತ್ತಿದೆ. ಹೀಗಾಗಿ, ಬಂಡವಾಳಶಾಹಿಯ ಜಾಗತಿಕ ನಾಯಕ ಅಮೆರಿಕವು ಜಗತ್ತಿನಲ್ಲಿ ಕ್ಷೀಣಿಸುತ್ತಿರುವ ತನ್ನ ಶಕ್ತಿ ಮತ್ತು ಪ್ರಭಾವವನ್ನು ಮತ್ತೆ ಮೆರೆಸಲು, ಪ್ರಪಂಚದಾದ್ಯಂತ ತನ್ನ ಮಿಲಿಟರಿ ಕಾರ್ಯತಂತ್ರದ ಪ್ರದೇಶಗಳಲ್ಲಿ ವಸಾಹತುಶಾಹಿ ಮತ್ತು ಭೌಗೋಳಿಕ ರಾಜಕೀಯ ನಿಯಂತ್ರಣ ಹೊಂದಲು, ಮತ್ತೊಂದು ರೂಪಾಂತರದ ಮೂಲಕ ತನ್ನ ಪ್ರಾಬಲ್ಯವನ್ನು ಮರುಸ್ಥಾಪಿಸಲು ಇಂತಹ ಕಚ್ಚಾ ಮತ್ತು ಕ್ರೂರ ದಾಳಿ ನಡೆಸುತ್ತಿದೆ ಎಂದರು.

ಸೋಮಪ್ಪ ಆಯಟ್ಟಿ, ಸುರೇಶ ಜೀಬಿ, ಪ್ರಭುಗೌಡ ಪಾಟೀಲ, ಸುಮಂಗಲಾ ಆನಂದ ಶೆಟ್ಟಿ, ಭಾರತಿ ಮಠಪತಿ ಮಾತನಾಡಿದರು. ಸಂಗಪ್ಪ ಕಪಾಲಿ, ಸೋಮಪ್ಪ ಆಯಟ್ಟಿ, ಮೋದಿನಸಾಬ್ ಮಮದಾಪುರ, ಪರಶುರಾಮ ಬೆನಕಟ್ಟಿ, ಸಾಬು ಗುಗದಡ್ಡಿ, ಮಲಿಕ್‌ಸಾಕ್ ಟಕ್ಕಳಕಿ, ಪರಶುರಾಮ ತಳವಾರ, ಪ್ರಭುಗೌಡ ಪಾಟೀಲ್, ಮುಖಂಡರಾದ ಸತೀಶ್ ಅಡವಿ, ಸುವರ್ಣಾ ಹಲಗಣೆ, ಶಿವಾನಂದ ಅನಮಿ, ಸತೀಶ ಅಡವಿ ಇದ್ದರು.

ಕನ್ನಡ ಸಾಹಿತ್ಯ ಲೋಕಕ್ಕೆ ಡಾ.ಚನ್ನಪ್ಪ ಕಟ್ಟಿ ಕೊಡುಗೆ ಅಪಾರ

ಸಿಂದಗಿ: ಆಂಗ್ಲ ಪ್ರಾಧ್ಯಾಪಕರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಡಾ.ಚನ್ನಪ್ಪ ಕಟ್ಟಿ ಅವರ ಕೊಡುಗೆ ಅನನ್ಯ. ಕಥೆ, ಕಾವ್ಯ, ಸಂಶೋಧನೆ, ಜೀವನ ಚರಿತ್ರೆ ಮತ್ತು ಅನುವಾದದ ಮೂಲಕ ಸಾಹಿತ್ಯದ ಕೃಷಿಯನ್ನು ಮಾಡಿ ಅಮೋಘ ಸಾಧನೆ ಮಾಡಿದ್ದಾರೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಎಂದರು.



ನಗರದ ವಿಜಯಪುರ ರಸ್ತೆಯಲ್ಲಿರುವ ಮಾಂಗಲ್ಯ ಭವನದಲ್ಲಿ ಸಿಂದಗಿಯ ಡಾ.ಚನ್ನಪ್ಪ ಕಟ್ಟಿ ಅಭಿನಂದನ ಸಮಿತಿ ಹಮ್ಮಿಕೊಂಡ ಅಭಿನಂದನ ಸಮಾರಂಭ ನೆಲೆ ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿ, ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಒದಗಿ ಬಂದಿದ್ದು ಸಿಂದಗಿ ನೆಲೆಗೆ ಹೆಮ್ಮೆಯ ಗರಿ. ಒಟ್ಟಿನಲ್ಲಿ ಡಾ.ಚನ್ನಪ್ಪ ಕಟ್ಟಿ ಅವರ ಬದುಕು, ಬರಹ ಮತ್ತು ಆಡಳಿತ ಕಾರ್ಯವೈಖರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಗರಿಮೆಯನ್ನು ಹೆಚ್ಚಿಸಿದ್ದಾರೆ ಎಂದರು.

ಗ್ರಂಥ ಬಿಡುಗಡೆಗೊಳಿಸಿದ ಬೆಂಗಳೂರಿನ ಸಂಸ್ಕೃತಿ ಚಿಂತಕ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ನೆಲೆ ಎನ್ನುವ ಹೆಸರೇ ಚನ್ನಪ್ಪ ಕಟ್ಟಿ ಅವರ ಅಸ್ಮಿತೆ. ಅವರ ಇಡೀ ಬದುಕು ಮತ್ತು ಸಾಹಿತ್ಯ ಚಟುವಟಿಕೆಗೆ ಒಂದು ನೆಲೆ ಸಿಕ್ಕಿರುವುದೇ ಈ ನೆಲೆ ಎನ್ನುವ ಶಬ್ದ ಅವರ ವ್ಯಕ್ತಿತ್ವದ ಗುಣವಾಗಿದೆ ಎಂದರು.

ವಿಜಯಪುರದ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್. ಮದಭಾವಿ ಅಭಿನಂದನಾ ನುಡಿಗಳನ್ನಾಡಿದರು. ಡಾ.ಅರವಿಂದ ಮನಗೂಳಿ, ಅಭಿನಂದನ ಗ್ರಂಥದ ಗೌರವ ಸಂಪಾದಕ ಡಾ.ಶ್ರೀರಾಮ ಇಟ್ಟಣ್ಣವರ ಮಾತನಾಡಿದರು. ಮಾಜಿ ವಿಪ ಸದಸ್ಯ ಅರುಣ ಶಹಾಪುರ ಮಾತನಾಡಿದರು. ಸಂಗಮೇಶ ಮೇತ್ರಿ ಸಂಪಾದಿಸಿದ ಅಮೋಘಸಿದ್ಧ ಜನಪದ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ ಗ್ರಂಥವನ್ನು ಮಾಜಿ ಶಾಸಕ ರಮೇಶ ಭೂಸನೂರ ಮತ್ತು ಚನ್ನಪ್ಪ ಕಟ್ಟಿ ಅವರ ವಿಮರ್ಶಾ ಸಂಕಲನ ಒಕ್ಕಣೆಯನ್ನು ವಿಪ ಮಾಜಿ ಸದಸ್ಯ ಅರುಣ ಶಹಾಪೂರ ಬಿಡುಗಡೆಗೊಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ರಾಷ್ಟ್ರೀಯ ಅಧ್ಯಕ್ಷರು, ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಸಮ್ಮುಖವನ್ನು ಹಾಲುಮತ ಗುರುಪೀಠ ಅಗತೀರ್ಥದ ಸರೂರದ ರೇವಣಸಿದ್ದೇಶ್ವರ ಶಾಂತಮಯ ಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ವಿಜಯಪುರ ಲೋಕಾಯುಕ್ತ ಎಸ್‌ಪಿ ಟಿ.ಮಲ್ಲೇಶ, ಪ್ರಧಾನ ಸಂಪಾದಕ ಡಾ.ಎಂ.ಎಂ.ಪಡಶೆಟ್ಟಿ, ಡಾ.ಸಂಗಮೇಶ ಮೇತ್ರಿ, ಡಾ.ಚನ್ನಪ್ಪ ಕಟ್ಟಿ, ಪತ್ನಿ ಸರೋಜಾ ಕಟ್ಟಿ, ಎಂ.ಎಸ್.ಹೈಯ್ಯಾಳಕರ, ಶಿವಪ್ಪ ಗವಸಾಯಿ, ಬಿ.ಎಸ್.ಹಣಮಶೆಟ್ಟಿ, ಚಿದಂಬರ ಬಂಡಗಾರ, ಡಾ.ರವಿ.ಗೋಲಾ, ಡಾ.ಶರಣಬಸವ ಜೋಗುರ, ಶಿವಾನಂದ ಕಲಬುಗಿ ಭಾಗವಹಿಸಿದ್ದರು.

ಕಿರುಸುದ್ದಿ

ಡಾ.ಬಿ. ಆರ್.ಅಂಬೇಡ್ಕರ್ ತತ್ವಾದರ್ಶ ಅಳವಡಿಸಿಕೊಳ್ಳಿ

ಹನಮಸಾಗರ: ಅಂಬೇಡ್ಕರ್ ಎಂದರೆ ಕೇವಲ ಮೀಸಲಾತಿ ಅಲ್ಲ, ಶಿಕ್ಷಣವೇ ಅಂಬೇಡ್ಕರ್ ಎಂದು ಪ್ರತಿಪಾದಿಸಿದರು. ಶಿಕ್ಷಣ ಎಂದರೆ ಹುಲಿ ಹಾಲು, ಅದನ್ನು ಕುಡಿದವರು ಗರ್ಜಿಸಲೇಬೇಕು ಎಂದು ಹೇಳಿದರು. ಅವರ ಆದರ್ಶ ಮೈಗೂಡಿಸಿಕೊಂಡು ಹೋಗಬೇಕು ಎಂದು ಮುಖಂಡರು ದೊಡ್ಡಬಸವನಗೌಡ ಬಯ್ಯಾಪುರ ಹೇಳಿದರು.

ಪಟ್ಟಣದಲ್ಲಿ ಮಾದಿಗ ಸಮಾಜ ಹಾಗೂ ಜೈ ಭೀಮ್ ಯುವಕ ಸಂಘದ ಸಹಯೋಗದಲ್ಲಿ ಇತ್ತೀಚಿಗೆ ನಡೆದ ಡಾ. ಬಿ.ಆರ್.ಅಂಬೇಡ್ಕರ್ 135ನೇ ಜಯಂತ್ಯುತ್ಸವದಲ್ಲಿ ಮಾತನಾಡಿದರು.ಶರಣು ತಮ್ಮಿನಾಳ ಮಾತನಾಡಿ, ಅಂಬೇಡ್ಕರ್ ತತ್ವ ಜೀವನದಲ್ಲಿ ಅಳವಡಿಸಿಕೊಳಬೇಕು. ವೈಚಾರಿಕ ಚಿಂತನೆ ನೆಲೆಗಟ್ಟಿನ ಮೇಲೆ ಬದುಕು ನಡೆಸಬೇಕು. ಮೌಢ್ಯದಿಂದ ಹೊರಬಂದರೆ ನಮ್ಮ ಮನೆಯಲ್ಲಿ ದಲಿತ ಸೂರ್ಯ ಪ್ರಕಾಶಿಸಲು ಸಾಧ್ಯ ಎಂದರು.

ಶರಣಪ್ಪ ವಡ್ಡರ ಮಾತನಾಡಿ, ಡಾ.ಅಂಬೇಡ್ಕರರು ಶೋಷಿತ ಸಮುದಾಯದ ಹರಿಕಾರ. ಅವರ ಹೋರಾಟದಿಂದಾಗಿ ಇಂದು ನಾವು ಸ್ವತಂತ್ರವಾಗಿ ಜೀವಿಸುತ್ತಿದ್ದೇವೆ. ಶಿಕ್ಷಣ, ಸಂಘಟನೆ, ಹೋರಾಟ, ಚಳುವಳಿಗಳ ಮಹತ್ವ ತಿಳಿಯಬೇಕು. ದುಡಿದ ಹಣ ಆಹಾರ, ಪುಸ್ತಕಗಳನ್ನು ಓದಲು ಬಳಸಬೇಕು. ಸಂವಿಧಾನವು ಯಾವುದೇ ಧರ್ಮ ಅಂಗೀಕರಿಸದೆ, ಎಲ್ಲರಿಗೂ ಸಮಾನತೆ ನೀಡಿದೆ ಎಂದರು.

ಹನಮಸಾಗರ ಪಟ್ಟಣದ ಬೀದಿಗಳಲ್ಲಿ ವಿವಿಧ ಕಲಾತಂಡಗಳೊಂದಿಗೆ ಡಾ.ಅಂಬೇಡ್ಕರರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ನೀಲಕಂಠಪ್ಪ ಪೂಜಾರಿ ಅಧ್ಯಕ್ಷತೆ ವಹಿಸಿದರು. ಮಾದಿಗ ಸಮಾಜದ ಹಿರಿಯರಾದ ಶಿವರಾಜ ಹುಲ್ಲೂರು, ಮೈನುದೀನ ಖಾಜಿ, ಚಂದ್ರು ಹಿರೇಮನಿ, ದೇವಪ್ಪ ತೆಂಗುಂಟಿ, ನಾಗರಾಜ ಕಂದಗಲ, ಗುರುರಾಜ, ಶೇಖಪ್ಪ, ಹುಲಗಪ್ಪ ವಡ್ಡರ, ಯಮನೂರ, ನೀಲಪ್ಪ ಕುದರಿ, ಹನಮಪ್ಪ ಗುಡಿಮನಿ, ದ್ಯಾಮಪ್ಪ ಕಟ್ಟಿಮನಿ, ಮರಿಯಪ್ಪ ಕಡೇಮನಿ, ಚಂದಪ್ಪ ಬಿ. ಕುದರಿ, ಬಾಳಪ್ಪ ಹಿರೇಮನಿ, ದುರಗಪ್ಪ ಅಂತರಗಂಗಿ, ಸೋಮಪ್ಪ ಹೊಸಮನಿ, ಯಮನಪ್ಪ ಪೂಜಾರ, ರಜತಪ್ಪ ಸಂಧಿಮನಿ, ದುರಗಪ್ಪ ಇಲಕಲ್, ಹಾಗೂ ಮಹಾಂತೇಶ ಅಗಸಿಮುಂದಿನ, ವಿಶ್ವನಾಥ ಕನ್ನೂರ, ಆಸೀಫ್ ಡಲಾಯತ, ಚಂದಪ್ಪ ಗುಡ್ಡಲ್ದೀನಿ, ಸೋಮಪ್ಪ, ಮಂಜುನಾಥ ಹುಲ್ಲೂರು, ಹುಲಗಪ್ಪ, ಶರಣಪ್ಪ ಸೇರಿದಂತೆ ಅನೇಕ ಗಣ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಕಾರ್ಮಿಕನ ಮಗಳು ಶಾಂಭವಿ ಉತ್ತಮ ಸಾಧನೆ

ಕುಕನೂರು: ಪಟ್ಟಣದ ಟ್ರಿನಿಟಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಶಾಂಭವಿ ಹಿರೇಮಠ ಕನ್ನಡದಲ್ಲಿ 100ಕ್ಕೆ 100 ಅಂಕ ಪಡೆದು ಕನ್ನಡ ಅಭಿಮಾನ ಹೆಚ್ಚಿಸಿದ್ದಾರೆ. ತಾಲೂಕಿನ ಅಡೂರು ಗ್ರಾಮದ ಡಿಟಿಹೆಚ್ ರಿಪೇರಿ ಮಾಡುವ ಕಾರ್ಮಿಕ ಗುರುಮೂರ್ತಿ ಹಿರೇಮಠ ಅವರ ಮಗಳು



ಶಾಂಭವಿ ಹಿರೇಮಠ ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 557 ಅಂಕಗಳನ್ನು ಪಡೆದು ಶೇ. 89.12% ರಷ್ಟು ಸಾಧನೆ ಮಾಡಿ ಶಾಲೆಗೆ ಕೀರ್ತಿ ತಂದಿದ್ದಾಳೆ. ಅಲ್ಲದೆ ಆಂಗ್ಲ ಮಾಧ್ಯಮವಾದರೂ ಕನ್ನಡದಲ್ಲಿ 100ಕ್ಕೆ 100 ಪಡೆದು ಕನ್ನಡಾಭಿಮಾನ ಹೆಚ್ಚಿಸಿದ್ದಾರೆ. ಈ ವಿದ್ಯಾರ್ಥಿನಿಯ ಸಾಧನೆಗೆ ಶಾಲೆ ಆಡಳಿತ ಮಂಡಳಿ ಮುಖ್ಯೋಪಾಧ್ಯಾಯ ಗಣೇಶ, ಶಿಕ್ಷಕ ರಮೇಶ್, ಶಿಕ್ಷಕರು ಮತ್ತು ಪಾಲಕರು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ನಾಲ್ವರಿಗೆ ಪ್ರಶಸ್ತಿ ಪ್ರದಾನ



ಯಲಬುರ್ಗಾ: ಕೊಪ್ಪಳದ ಜಿಲ್ಲಾ ಸಭಾಂಗಣದಲ್ಲಿ ಇತ್ತೀಚಿಗೆ ನಡೆದ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಯಲಬುರ್ಗಾ ತಾಲೂಕಿನ ನಾಲ್ವರು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಪ್ರಶಸ್ತಿ ಪ್ರದಾನ ಮಾಡಿದರು.

ಯಲಬುರ್ಗಾ ಬಿಸಿಎಂ ಇಲಾಖೆ ಅಧಿಕಾರಿ ಶಿವಶಂಕರ ಕರಡಕಲ್, ಪಪಂ ಮುಖ್ಯಾಧಿಕಾರಿ ನಾಗೇಶ, ತಾಲೂಕಿನ ಬೇವೂರ ಗ್ರಾಪಂ ಅಭಿವೃದ್ಧಿ ಅಧಿಕಾರಿ ಅಬ್ದುಲ್ ಗಫಾರ, ತಾಲೂಕಿನ ಕರಮುಡಿ ಗ್ರಾಮ ಆಡಳಿತಾಧಿಕಾರಿ ದೇವರಾಜ ಅವರುಗಳು 2024-25ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಇಲಾಖೆಗಳ ಸಿಬ್ಬಂದಿಗಳು, ಜಿಲ್ಲಾ ಮತ್ತು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಸರ್ವ ಪದಾಧಿಕಾರಿಗಳು ಇದ್ದರು. ವಿವಿಧ ಇಲಾಖೆ ಅಧಿಕಾರಿಗಳ ಆಯ್ಕೆಗೆ ಪಟ್ಟಣ ಸೇರಿದಂತೆ ತಾಲೂಕಿನ ಜನತೆ, ಸಾರ್ವಜನಿಕರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳು ಹರ್ಷ ವ್ಯಕ್ತಪಡಿಸಿದ್ದಾರೆ.



ಹನಮಸಾಗರ: ಪಟ್ಟಣದಲ್ಲಿ ಮಾದಿಗ ಸಮಾಜ ಹಾಗೂ ಜೈ ಭೀಮ್ ಯುವಕ ಸಂಘದ ಸಹಯೋಗದಲ್ಲಿಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತ್ಯುತ್ಸವ ಆಚರಿಸಲಾಯಿತು. ಶಾಸಕ ದೊಡ್ಡಬಸವನಗೌಡ ಬಯ್ಯಾಪುರ, ಶರಣು ತಮ್ಮಿನಾಳ, ಶರಣಪ್ಪ ವಡ್ಡರ, ನೀಲಕಂಠಪ್ಪ ಪೂಜಾರಿ ಇತರರು ಇದ್ದರು.

ಕಾರ್ಮಿಕರಿಗೆ ಸೇವಾ ಭದ್ರತೆ ದೊರೆಯಲಿ

ಕುಕನೂರು: ಮಾನವ ಸಮಾಜದ ಬೆಳವಣಿಗೆ ಹಾದಿಯಲ್ಲಿ ಶ್ರಮವೇ ಮೂಲಾಧಾರ. ಕರುಣೆ ಮತ್ತು ಸಮಾನತೆಯೇ ಮಾರ್ಗದರ್ಶಕ. ಕಾರ್ಮಿಕರ ದಿನ ಶ್ರಮಜೀವಿಗಳ ಹಕ್ಕು, ಗೌರವ ಮತ್ತು ಸಮಾನತೆ ಸಂಕೇತ. ಪ್ರತಿಯೊಬ್ಬ ಕಾರ್ಮಿಕನು ಬೆವರು ಹರಿಸಿ ದೇಶದ ಬೆಳವಣಿಗೆಗೆ ಶ್ರಮಿಸುತ್ತಾನೆ. ಅವರಿಗೆ ಸೇವಾ ಭದ್ರತೆ, ಸೂಕ್ತ ವೇತನ, ಸರ್ಕಾರಿ ನೌಕರರಂತೆ ಎಲ್ಲ ಸೌಲಭ್ಯ ದಗಿಸಬೇಕು ಎಂದು ರುದ್ರ ಮುನಿಶ್ವರ ಹಮಾಲರ ಮತ್ತು ಕಾರ್ಮಿಕ ಸಂಘದ ತಾಲೂಕ ಅಧ್ಯಕ್ಷ ನಿಂಗಪ್ಪ ಗೋರ್ಲೆಕೊಪ್ಪ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಜರುಗಿದ ವಿಶ್ವ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಮೆರವಣಿಗೆ ಕಾರ್ಯಕ್ರಮ ಉದ್ದೇಶಿಸಿಮಾತನಾಡಿ, ನಮಿಸುವಕೈಗಳಿಗಿಂತ, ದುಡಿಯುವಕೈಗಳುಶ್ರೇಷ್ಠವಾಗಿವೆ. ದುಡಿಯುವ ವರ್ಗ ಕನಿಷ್ಠ ಮತ್ತು ದುಡಿಸಿಕೊಳ್ಳುವ ವರ್ಗ ಗರಿಷ್ಠ ಎಂಬ ಮನೋಭಾವನೆ ತೆಗೆದು ಕಾಯಕಕ್ಕೆ ದೈವತ್ವದ ಸ್ಥಾನ ನೀಡಿದ ಬಸವಾದಿ ಶರಣರ ಕೊಡುಗೆ ಅನನ್ಯವಾಗಿದೆ. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಕಾರ್ಮಿಕರ ಹಿತರಕ್ಷಣೆಗಾಗಿ ಸಂವಿಧಾನದ ಮೂಲಕ ಕಾನೂನು ನೀಡಿದ್ದಾರೆ. ಕಾಯಕ ಜೀವಿಗಳ ಕೊಡುಗೆ ಸಮಾಜ ಎಂದಿಗೂ ಮರೆಯುವಂತಿಲ್ಲ ಎಂದರು.

ನಿವೃತ್ತ ನಾಲ್ವರು ಹಮಾಲರಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ವಿರೂಪಾಕ್ಷಪ್ಪ ಭಂಡಾರಿ, ಪದಾಧಿಕಾರಿಗಳಾದ ದೇವಪ್ಪ ಗುಡದಳ್ಳಿ, ದೊಡ್ಡ ಈರಪ್ಪ ಆರು ಬೆರಳಿನ, ತಿರುಪತಿ ಮಾನ್ವಿ, ಶರಣಪ್ಪ ಹಿರೇಕೊಪ್ಪ, ಮಾರುತಿ, ಬಸವರಾಜ ಅಣ್ಣಿಗೇರಿ, ಮಹಾಂತೇಶ ಆರುಬೆರಳಿನ, ಪರಶುರಾಮ, ಹಾಗೂ ಸಂಘದ ಸದಸ್ಯರು ಸೇರಿದಂತೆ ಇತರರು ಇದ್ದರು.



ಕುಕನೂರು: ಪಟ್ಟಣದಲ್ಲಿ ಶುಕ್ರವಾರ ವಿಶ್ವ ಕಾರ್ಮಿಕರ ದಿನಾಚರಣೆ ಪ್ರಯುಕ್ತ ಮೆರವಣಿಗೆ ಕಾರ್ಯಕ್ರಮ ನಡೆಯಿತು. ರುದ್ರ ಮುನೀಶ್ವರ ಹಮಾಲರ ಮತ್ತು ಕಾರ್ಮಿಕ ಸಂಘದ ತಾಲೂಕ ಅಧ್ಯಕ್ಷ ನಿಂಗಪ್ಪ ಗೋರ್ಲೆಕೊಪ್ಪ ಮತ್ತಿತರರು ಇದ್ದರು.

ಭಗವಾನ್ ಬುದ್ಧ ಜಯಂತಿ | ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅಭಿಮತ

ಏಷಿಯಾದ ಬೆಳಕು ಗೌತಮ ಬುದ್ಧ

ಕೊಪ್ಪಳ: ಭಗವಾನ್ ಗೌತಮ ಬುದ್ಧ ಅವರು ಇಡೀ ಏಷಿಯಾದ ಬೆಳಕು ಎಂದು ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರ ಗೌತಮ ಬುದ್ಧ ವ್ಯಕ್ತಿತ್ವವನ್ನು ಬಣ್ಣಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮೇ 1ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ನಡೆದ ಭಗವಾನ್ ಬುದ್ಧ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಮ್ಮ ಮನೆಯಲ್ಲಿದ್ದ ಸಿರಿ ಸಂಪತ್ತನ್ನು ತ್ಯಜಿಸಿ ಸರಳ ಬದುಕಿಗೆ ಬಂದ ಬುದ್ಧ ಅವರು ಈ ಜಗತ್ತು ಕಂಡ ಮಹಾಮಹೀಮರಾಗಿದ್ದಾರೆ. ಇಂತಹ ಮಹಾತ್ಮನ ಜಯಂತಿಯು ರಾಜ್ಯ ಸರ್ಕಾರದಿಂದ ನಡೆಯುತ್ತಿರುವುದು ವಿಶೇಷ ಎಂದರು.

75 ವರ್ಷಗಳಾದರು ಸಹ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ಕೆಲಸ ಮಾಡಬೇಕಿದೆ. ಅಂದಾಗ ಸಮಾನತೆ ಕಾಣಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನಿವೃತ್ತ ಉಪ ಅಧೀಕ್ಷಕರಾದ ಗಿರೀಶ ಕಾಂಬ್ಳೆ ಅವರು ವಿಶೇಷ ಉಪನ್ಯಾಸ ನೀಡಿ, ಬುದ್ಧ ಅವರು ಕೇವಲ ಭಾರತದ ಬೆಳಕಲ್ಲ; ಅವರು ಇಡೀ ಜಗತ್ತಿನ ಬೆಳಕು. ಬುದ್ಧ ಅಂದರೆ ಅದು ಮಹಾಸಾಗರ ಇದ್ದಂತೆ. ನಮ್ಮ ಮುಂದಿನ ಏಳ್ಗೇಗೆ, ನಮ್ಮ ಮುಂದಿನ ಬಾಳ್ವೆಗೆ ಬುದ್ಧ ಬೇಕು. ಬುದ್ಧನನ್ನು ಅರ್ಥ ಮಾಡಿಕೊಂಡವರು ಈ ಜಗತ್ತಿನಲ್ಲಿ ನೆಮ್ಮದಿಯಿಂದ ಬದುಕುತ್ತಾರೆ.

ಬುದ್ಧ ಒಂದು ಜಾತಿ, ಭಾಷೆ, ಪ್ರದೇಶ, ದೇಶಕ್ಕೆ ಸೀಮಿತರಾಗಿಲ್ಲ. ಅವರ ವಿಚಾರ ವಿಶ್ವವ್ಯಾಪಿ ಎಂದರು.

ಬುದ್ಧನ ಆಶಯದಂತೆ ಡಾ.ಅಂಬೇಡ್ಕರ್ ಅವರು ಸಂವಿಧಾನ ಬರೆದರು ಎಂದು ತಿಳಿಸಿದರು.



> ಬುದ್ಧ ಪೂರ್ಣಿಮೆಯು ಸಂಭ್ರಮದ ದಿನವಾಗಿದೆ. ಬುದ್ಧ, ಬಸವ, ಡಾ. ಬಿ.ಆರ್. ಅಂಬೇಡ್ಕರ್ ಅವರು ಜಗತ್ತಿಗೆ ಬೆಳಕು ನೀಡಿದ ಮಹಾನ್ ನಾಯಕರು. ಯುದ್ಧ ಬೇಡ ಬುದ್ಧ ಬೇಕು ಎಂದು ಈಗ ಇಡೀ ಜಗತ್ತೇ ಹೇಳುತ್ತಿದೆ. ಸಾಮರಸ್ಯದ ಬದುಕು ಕಟ್ಟಿಕೊಳ್ಳಲಾಗದಂತಹ ಪರಿಸ್ಥಿತಿ ಇಂದು ಜಗತ್ತಿನಲ್ಲಿ ಮುಂದುವರೆದಿದೆ. ಅಹಿಂಸೆ ಬೇಡ, ನಾವು ಬದುಕಬೇಕು ಮತ್ತು ಇತರರಿಗೂ ಬದುಕಲು ಬಿಡಬೇಕು ಎಂಬ ಮಹತ್ವದ ಸಂದೇಶವನ್ನು ಗೌತಮ ಬುದ್ಧ ನೀಡಿದ್ದಾರೆ.
>
> ■ ಕರಡಿ ಸಂಗಣ್ಣ, ಮಾಜಿ ಸಂಸದ

ರೋಗಿಯನ್ನು, ಸತ್ತವನನ್ನು ನೋಡಿದ ಗೌತಮ ಬುದ್ಧ ಆಸ್ತಿ ಕೇಳಲಿಲ್ಲ; ಸಂಪತ್ತು ಕೇಳಲಿಲ್ಲ, ಈ ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬರಿಗೂ ನೆಮ್ಮದಿಯಿಂದ ಬದುಕುವ ಹಕ್ಕಿದೆ ಎಂದು ತಿಳಿಸಿದವರು ಬುದ್ಧ. ಬುದ್ಧ ಎಂದರೆ ಶಾಂತಿಯ ದ್ಯೋತಕ. ಆದರೆ ಬುದ್ಧನ ವಿಚಾರಗಳು ಬೆಳೆಯಲು ಕೆಲವರು ಬಿಡುತ್ತಿಲ್ಲ ಎಂದರು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ನಗರಸಭೆ ಪೌರಾಯುಕ್ತರಾದ ಮಂಜುನಾಥ ಗುಂಡೂರ, ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಮುಖಂಡರಾದ ಪ್ರಸನ್ನ ಗಡಾದ, ಕೃಷ್ಣ ಇಟ್ಟಂಗಿ, ಮುತ್ತುರಾಜ್ ಕುಷ್ಟಗಿ, ಸಿದ್ರಾಮ ಹೊಸಮನಿ, ನಾಗರಾಜ ಬೆಲ್ಲದ, ರಘು ಬೆಲ್ಲದ, ಜಗದೀಶ ಚಲವಾದಿ, ಹನುಮಂತಪ್ಪ ಬಂಗಾಳಿಗಿಡದ, ಮಹಾವೀರ ಅಳ್ಳಿ, ಗವಿಸಿದ್ದಪ್ಪ ಬೆಲ್ಲದ ಹಾಗೂ ಇತರರು ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ ಅವರು ಸ್ವಾಗತಿಸಿದರು. ಬಿ.ಎನ್. ಹೊರಪೇಟೆ ನಿರೂಪಿಸಿದರು. ನಗರಸಭೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ಇದ್ದರು.

ಶೋಷಿತ ಸಮುದಾಯಕ್ಕೆ ನ್ಯಾಯ ದೊರೆಯಲಿ

ಕುಷ್ಟಗಿ: ಇಂದಿನ ದಿನಮಾನಗಳಲ್ಲಿ ಸಮಾಜ ಬದಲಾವಣೆಯತ್ತಾ ಸಾಗುತ್ತಿದ್ದು, ಶೋಷಿತ ಸಮುದಾಯ ಸಂಘಟನೆಯತ್ತಾ ಸಾಗುವ ಮೂಲಕ ನ್ಯಾಯ ದೊರೆಯುವಂತಹ ಕಾರ್ಯವಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಧೀಶ ಎಂ.ಎಲ್.ಪೂಜೇರಿ ಹೇಳಿದರು.

ಪಟ್ಟಣದ ನ್ಯಾಯಲಯದ ಸಭಾ ಭವನದಲ್ಲಿ ಕಾರ್ಮಿಕ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದನೇತೃತ್ವದಲ್ಲಿನಡೆದಅಂತಾರಾಷ್ಟ್ರಿಯ ಕಾರ್ಮಿಕ ದಿನಾಚರಣೆ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿರುವ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಧ್ವನಿ ಇಲ್ಲದವರ ಸಮಾಜಕ್ಕೆ ನೆರವಾಗಿ ಇಡೀ ವಿಶ್ವಕ್ಕೆ ಸಂವಿಧಾನದ ಕೊಡುಗೆ ನೀಡಿದ್ದಾರೆ. ಸಂಘಟಿತ ಹಾಗೂ ಅಸಂಘಟಿತ ವಲಯದಲ್ಲಿ ಶ್ರಮಿಸುವ ಕಾರ್ಮಿಕರಿಗೆ ಶ್ರಮಕ್ಕೆ ತಕ್ಕಂತೆ ಫಲ ದೊರೆತಾಗ ಮಾತ್ರ ಬದುಕು ಸಾರ್ಥಕವಾಗುವುದು. ಕಾರ್ಮಿಕರು ನಿಗದಿತ ಅವಧಿಯಲ್ಲಿ ಕೆಲಸ ನಿರ್ವಹಿಸುವ ಮೂಲಕ ಕಾನೂನು ನಿಯಮ ಹೊಂದಬೇಕು. ಸರ್ಕಾರ ಯೋಜನೆ ಸಕಾಲಕ್ಕೆ ಪಡೆದುಕೊಳ್ಳಬೇಕಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ವಿಖ ಬೀಳಗಿ ಮಾತನಾಡಿ, ಕಟ್ಟಡ, ಸಂಘಟಿತ ವಲಯದ ಕಾರ್ಮಿಕರು ಕಾನೂನಿನ ಅರಿವು ಹೊಂದಬೇಕು. ಕೆಲಸ ನಿರ್ವಹಿಸುವ ಮೂಲಕ ಹೆರಿಗೆ ರಜಾ, ಪಿಎಫ್, ಇಎಫ್, ಇಎಸ್ಐ ಸೌಲಭ್ಯ ಪಡೆದುಕೊಳ್ಳಿ ಎಂದರು.

ಕಾರ್ಮಿಕ ಇಲಾಖೆ ನಿರೀಕ್ಷಕಿ ನಿವೇದಿತಾ ಡಿ. ಮಾತನಾಡಿ, ಕಾರ್ಮಿಕ ಇಲಾಖೆ ಮಂಡಳಿ ವತಿಯಿಂದ ನೊಂದಾಯಿತ ಕಟ್ಟಡ ಕಾರ್ಮಿಕರಿಗೆಹೆರಿಗೆ, ವೈದ್ಯಕೀಯಸೌಲಭ್ಯ, ಅಂತ್ಯಕ್ರಿಯೆ ಸವಲತ್ತು ದೊರೆಯಲಿದೆ. ಈಗಾಗಲೇ ರಾಜ್ಯದ 60 ಕಡೆ ಕಾರ್ಮಿಕ ಸೇವಾ ಕೇಂದ್ರ ಕಾರ್ಯನಿರ್ವಹಿಸುತ್ತಿವೆ. ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು. ಅಪರ ಸರ್ಕಾರಿ ವಕೀಲ ಪರಸಪ್ಪ ಎನ್. ಗುಜಮಾಗಡಿ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಶಶಿಧರ ಎಂ.ಶೆಟ್ಟರ್, ಸಹಾಯಕ ಸರ್ಕಾರಿಅಭಿಯೋಜಕ ರಾಯನಗೌಡ ಎಲ್., ಸಹಾಯಕ ಸರ್ಕಾರಿ ಅಭಿಯೋಜಕ ರಾಯನಗೌಡ ಎಲ್, ವಕೀಲ ಮಾರುತಿ ಗುಡದೂರ ತಾಪಂ ಎಡಿ ಗೀತಾ ಅಯ್ಯಪ್ಪ ಕಾರ್ಮಿಕರು, ಮುಖಂಡರು ಪಾಲ್ಗೊಂಡಿದ್ದರು. ಯೋಜನಾ ನಿರ್ದೇಶಕ ಬಸವರಾಜ ಹಿರೇಗೌಡ್ರ ನಿರೂಪಿಸಿ, ವಂದಿಸಿದರು.



ಪ್ರೀತಿ, ಕರುಣೆ ಬೌದ್ಧ ಧರ್ಮದ ಅಡಿಗಲ್ಲು

ಕನಕಗಿರಿ: ಸರ್ವ ಸಮಾನತೆಯೇ ಬೌದ್ಧ ಧರ್ಮದ ಅಡಿಗಲ್ಲು ಪ್ರೀತಿ ಮತ್ತು ಕರುಣೆ ಅದರ ಕಣ್ಣುಗಳು ಎಂಬ ಬಾಬಾ ಸಾಹೇಬ್ ಅಂಬೇಡ್ಕರ್ ನುಡಿಯಂತೆ ಜಗತ್ತಿನಲ್ಲಿ ಶಾಂತಿ ಅಹಿಂಸೆ ಪ್ರತಿಪಾದಿಸಿದ ಮಹಾನ್ ಮೇಧಾವಿ ಅಂದರೆ ಗೌತಮ ಬುದ್ಧರು. ಪ್ರೀತಿ ಮತ್ತು ಕರುಣೆ ಹಂಚಿ ಏಷ್ಯಾದ ಬೆಳಕಾದರು. ಕ್ರಿಪೂ 6ನೇ ಶತಮಾನ ವೈದಿಕ ಸನಾತನ ಧರ್ಮದ ಅಸಮಾನತೆ ಜಾತಿ ವ್ಯವಸ್ಥೆ ತೊಲಗಿಸಲು ಬುದ್ಧರು ವೈಜ್ಞಾನಿಕ ತಳಹದಿ ಮೇಲೆ ಸರ್ವರನ್ನು ಒಳಗೊಂಡ ಸಮ ಸಮಾಜವಾದ ಬೌದ್ಧ ಧರ್ಮವನ್ನು ಸ್ಥಾಪಿಸಿದ್ದರು ಪಪಂ ಮುಖ್ಯಾಧಿಕಾರಿ ಲಕ್ಷಣ ಕಟ್ಟಿಮನಿ ಎಂದು ಹೇಳಿದರು.

ಪಟ್ಟಣದ ಗಂಗಾವತಿ ಮುಖ್ಯ ರಸ್ತೆಯಲ್ಲಿರುವ ಗೌತಮ ಬುದ್ಧ ವೃತ್ತಕ್ಕೆ ಹೂವಿನ ಹಾರ ಹಾಕುವ ಮೂಲಕ ಶುಕ್ರವಾರ ಬುದ್ಧ ಪೂರ್ಣಿಮೆ ದಿನವನ್ನು ಆಚರಣೆ ಮಾಡಿದ ಬಳಿಕ ಮಾತನಾಡಿದರು.

ತಹಶೀಲ್ದಾರ್ ವಿಶ್ವಾನಾಥಮುರಡಿ,ಸಿಡಿಪಿಒ ವಿರೂಪಾಕ್ಷಿ ಮತ್ತು ನೀಲಕಂಠ ಬಡಿಗೇರ್ ಮಾತನಾಡಿ, ಈ ಬೌದ್ಧ ಧರ್ಮವನ್ನು ಅಶೋಕ ಚಕ್ರವರ್ತಿ, ಕನಿಷ್ಕನಂತಹ ಮಹಾನ್ ರಾಜರು ಜಗತ್ತಿನ ಉದ್ದಗಲಕ್ಕೂ ಪಸರಿಸಿದರು. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು 1956ರಲ್ಲಿ ಭಾರತದ ಮೂಲ ಧರ್ಮವಾದ ಬೌದ್ಧ ಧರ್ಮದವನ್ನು ಸ್ವಿಕರಿಸಿದರು. ಅವರ ತತ್ವ ಚಿಂತನೆ ಇಂದಿಗೂ ಪ್ರಸ್ತುತ. ಇವರ ಉದಾತ್ತ ಮೌಲ್ಯಗಳಿಂದ ದೇಶ ಶಾಂತಿ, ನೆಮ್ಮದಿ, ಅಹಿಂಸೆ, ಸಮಾನತೆ ಭ್ರಾತೃತ್ವ ಸೌಹಾರ್ದತೆಯಿಂದ ಇರಲು ಸಾಧ್ಯ ಎಂದರು.

ಸಿಪಿಐ ನಾರಾಯಣ, ಪಪಂ ಅಧ್ಯಕ್ಷ ತನುಶ್ರೀ ಟಿ, ಜೆ.ರಾಮಚಂದ್ರ, ಸದಸ್ಯ ಶೇಷಪ್ಪ ಪೂಜಾರ, ಹನುಮಂತ ಬಸಿರಿಗಿಡದ, ಸಂಗಪ್ಪ ಸಜ್ಜನ, ಪ್ರಮುಖರಾದ ಸಣ್ಣ ಕನಕಪ್ಪ, ಪಾಮಣ್ಣ ಅರಳಿಗನೂರ, ನಾಗೇಶ ಬಡಿಗೇರ, ಟಿ.ಜೆ.ರಾಮಚಂದ್ರ, ಗ್ರಾಮ ಲೆಕ್ಕಾಧಿಕಾರಿ ಶಿವರಾಜ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಜಗತ್ತಿಗೆ ಅಹಿಂಸೆ ಸಂದೇಶ ಸಾರಿದ ಬುದ್ಧ



ಮಾನ್ವಿ: ಭಗವಾನ್ ಬುದ್ಧರು ಸಾರಿದ ಅಹಿಂಸೆ ಹಾಗೂ ಶಾಂತಿಯ ಸಂದೇಶಗಳು ಇಂದು ವಿಶ್ವದಲ್ಲಿನ ವಿವಿಧ ರಾಷ್ಟಗಳ ನಡುವೆ ನಡೆಯುತ್ತಿರುವ ಯುದ್ಧದ ವಾತಾವರಣಕ್ಕೆ ಸೂಕ್ತ ಸಂದೇಶ ನೀಡುತ್ತಿವೆ. ಡಾ.ಬಿ.ಆರ್. ಅಂಬೇಡ್ಕರ್ ಬೌದ್ಧ ಧರ್ಮದಲ್ಲಿನ ಸಮಾನತೆ, ತತ್ವಗಳಿಂದ ಆರ್ಕರ್ಷಿತರಾಗಿಬೌದ್ಧಧರ್ಮವನ್ನು ಒಪ್ಪಿಕೊಂಡು ಸ್ವಿಕಾರ ಮಾಡಿದರು. ಇಂದು ಬುದ್ಧರ ಸಂದೇಶಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯ ನಾವೆಲ್ಲರು ಮಾಡಬೇಕಾಗಿದೆ ಎಂದು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಹೇಳಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ ಭಗವಾನ್ ಬುದ್ಧರ 2570ನೇ ಜಯಂತ್ಯುತ್ಸವ ದಲ್ಲಿ ಮೂರ್ತಿಗೆ ಪುಷ್ಪ ಸಮರ್ಪಿಸಿ ಮಾತನಾಡಿದರು

ಮಾಜಿ ಎಪಿಎಂಸಿ ಸದಸ್ಯ ಶಿವರಾಜ ನಾಯಕ ಮಾತನಾಡಿ, ಸತ್ಯ ಮತ್ತು ಅಹಿಂಸೆ ಒಳಗೊಂಡ ಪಂಚಶೀಲ ತತ್ವ ಗೌತಮ ಬುದ್ಧರು ನಮಗೆ ಬೋಧಿಸಿದ್ದಾರೆ. ಅವುಗಳನ್ನು ನಾವು ನಿತ್ಯ ಜೀವನದಲ್ಲಿ ಅಳವಡಿಸಿಕೊಳಬೇಕಾಗಿದೆ. ಶಾಂತಿ ಮತ್ತು ಅಹಿಂಸೆಯಿಂದ ಮಾತ್ರ ನಾವು ಜಗತ್ತನ್ನು ಗೆಲ್ಲುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ಶಿಕ್ಷಕಿ ಅಶ್ವಿನಿ ಸಂಗಮೇಶ ಉಪನ್ಯಾಸ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದ ಸಾಧಕರನ್ನು ತಾಲೂಕು ಆಡಳಿತವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು. ಗ್ರೇಡ್-2 ತಹಶೀಲ್ದಾರ್ ಅಬ್ದುಲ್ ವಾಹಿದ್, ಪಿಎಸ್ಐ ಸೋಮಶೇಖರ ಎಸ್. ಕೆಂಚರೆಡ್ಡಿ, ಕೃಷಿ ಅಧಿಕಾರಿ ಗುರುನಾಥ ಭೂಸನೂರ್ ಮಠ, ಮುಖಂಡ ರಾದ ಪಿ.ತಿಪ್ಪಣ್ಣ ಬಾಗಲವಾಡ, ಲಕ್ಷ್ಮಣ ಜಾನೇಕಲ್, ಹನುಮೇಶ ಸೀಕಲ್, ಶಿವರಾಜ ಉಮಳಿಹೊಸೂರು, ದತ್ತಾತ್ರೇಯ ವಕೀಲರು, ಜಿ.ಹನುಮೇಶ ಉದ್ಬಳ್, ಶಿವು ಡೋಣಮರಡಿ, ಮಲ್ಲಿಕಾರ್ಜುನ ಜಾನೇಕಲ್, ರಾಮುಹೋಳೆಯಪ್ಪ, ಸಂಜೀವಪ್ಪ ಸೇರಿದಂತೆ ಇನ್ನಿತರರು ಇದ್ದರು.

ಎನ್. ರವಿಕುಮಾರ್ ಹೇಳಿಕೆ

ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿ

ಕಲಬುರಗಿ: ಕಲ್ಯಾಣ ಕರ್ನಾಟಕ ಏಳು ಜಿಲ್ಲೆಗಳಿಂದ ಈಗಾಗಲೇ 31,300 ಎನರೋಲ್ ಮತದಾರರು ಆಗಿದ್ದಾರೆ. ಮತದಾರರನ್ನು ಪಕ್ಕಾ ಮಾಡಿಕೊಂಡು ನಮ್ಮ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ, ಪರಿಷತ್ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ನಡೆಯಲಿರುವ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆ ಕುರಿತು ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಹಿಂದೆಯೂ ಗೆಲುವು ಸಾಧಿಸಿದ ಎಂಎಲ್ಸಿ ಶಶೀಲ್ ನಮೋಶಿ ಈ ಬಾರಿಯೂ ನೂರಕ್ಕೆ ನೂರರಷ್ಟು ಗೆಲುವು ಸಾಧಿಸಲಿದ್ದು, ಕಲಬುರಗಿ ಜಿಲ್ಲೆಯಾದ್ಯಂತ ಹೆಚ್ಚು ಮತದಾರರು ಇರುವ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ನೆಗ್ಲೆಕ್ಟ್ ಮಾಡುವಂತಿಲ್ಲ ಎಂದರು.

> 40 ವಿಧಾನ ಸಭಾ ಕ್ಷೇತ್ರಗಳ ಮತದಾರರನ್ನು ಯಾವ ರೀತಿ ಸಂಪರ್ಕ ಸಾಧಿಸಬಹುದು ನೋಡಿಕೊಳ್ಳಿ, ಶಿಕ್ಷಣ ಸಂಸ್ಥೆ, ಸಂಘಟನೆಗಳಿಗೆ ಭೇಟಿ ನೀಡಿದರು. ವಾತಾವರಣ ಚೆನ್ನಾಗಿದ್ದರೂ ನಮ್ಮ ಶ್ರಮ ಅಗತ್ಯವಿದೆ. 60 ಪ್ರತಿಶತ ಪ್ರೌಢಶಾಲೆ ಹಾಗೂ ಪಿಯು ಶಿಕ್ಷಕರೇ ಮತದಾರ ಆಗಿದ್ದಾರೆ. ಈ ನಿಟ್ಟಿನಲ್ಲಿ ಶಕ್ತಿ ಮೀರಿ ಸಂಪರ್ಕ ಸಾಧಿಸಿ ಗೆಲುವು ದಾಖಲೆ ಮಾಡಬೇಕು.
>
> ■ ಶಶೀಲ್ ನಮೋಶಿ, ಎಂಎಲ್ಸಿ

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ, ಶಾಸಕ ಕ.ಗ್ರಾಂ, ಬಸವರಾಜ ಮತ್ತಿಮಡು, ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಶಾಸಕ ಅವಿನಾಶ್ ಜಾಧವ್, ಮಾಜಿ ಸಂಸದ ಡಾ.ಉಮೇಶ್ ಜಾಧವ್, ಮಾಜಿ ಸಚಿವ ಬಾಬುರಾವ್ ಚೌಹಾಣ್, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ವಿಭಾಗ ಪ್ರಭಾರಿ ಶರಣಪ್ಪ ತಳವಾರ, ಒಬಿಸಿ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರ, ಲಿಂಗರಾಜ ಬಿರಾದಾರ, ನಗರ ಪ್ರಧಾನ ಕಾರ್ಯದರ್ಶಿ ಉಮೇಶ ಪಾಟೀಲ್, ಮಹಾದೇವ ಬೆಳಮಗಿ, ಶಿವಯೋಗಿ ನಾಗೇನಹಳ್ಳಿ, ಧರ್ಮಣ್ಣ ಇಟಗಾ, ನಿತೀನ್ ಗುತ್ತೇದಾರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಗೌರಿ ಚಿಚಕೋಟಿ,ಡಾ.ಸುಧಾ ಹಾಲಕಾಯಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬುದ್ಧನ ಸಂದೇಶ ಇಂದಿನ ಜಗತ್ತಿಗೆ ಅಗತ್ಯ: ಶಾಸಕ ಪಾಟೀಲ

ಕಲಬುರಗಿ: ವಿಶ್ವವ್ಯಾಪಿ ಬುದ್ಧನ ಶಾಂತಿ ಮತ್ತು ಅಹಿಂಸೆಯ ಸಂದೇಶಗಳು ಇಂದಿನ ಸಂಘರ್ಷಮಯ ಜಗತ್ತಿಗೆ ಅತ್ಯಗತ್ಯವಾಗಿವೆ. ಬುದ್ಧನ ಜ್ಞಾನೋದಯದ ಕಿರಣಗಳು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಇಡೀ ಮಾನವಕುಲಕ್ಕೆ ಬೆಳಕಾಗಿವೆ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಪ್ರತಿಪಾದಿಸಿದರು.



ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಬುದ್ಧ ಜಯಂತ್ಯುತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಾಬಾಸಾಹೇಬ್ ಅಂಬೇಡ್ಕರರು ಅಂತಿಮವಾಗಿ ಬುದ್ಧನ ವೈಜ್ಞಾನಿಕ, ಮಾನವೀಯ ತತ್ವಗಳಿಂದ ಪ್ರಭಾವಿತರಾದರು. ಬೌದ್ಧ ಧರ್ಮ ಸ್ವೀಕರಿಸುವ ಮೂಲಕ ಸಮಾನತೆ ಹೊಸ ಯುಗ ಆರಂಭಿಸಿದರು. ಅಶೋಕ ಚಕ್ರವರ್ತಿ ಕಾಲದಿಂದ ಹರಡುತ್ತಾ ಬಂದ ಈ ಧರ್ಮದ ಹಾದಿಯಲ್ಲಿ ಇಂದಿನ ಯುವ ಪೀಳಿಗೆ ಸಾಗಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ಬುದ್ಧ, ಬಸವ ಮತ್ತು ಅಂಬೇಡ್ಕರ್ ಆಶಯ ಒಂದೇ ಆಗಿತ್ತು. ಶಾಂತಿ, ಕರುಣೆ, ಸತ್ಯದ ಮಾರ್ಗ ಗೌತಮ ಬುದ್ಧ ತೋರಿಸಿಕೊಟ್ಟರೆ. ಸಮಾನತೆಯಿಂದ ಬದುಕುವುದು ಅಂಬೇಡ್ಕರ್ ಕಲ್ಪಿಸಿಕೊಟ್ಟರು. ಇವರ ತತ್ವ ಪಾಲಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ ಉಪನ್ಯಾಸ ನೀಡಿದರು. ಇಲಾಖೆ ಉಪನಿರ್ದೇಶಕಿ ಜಗದೀಶ್ವರಿ.ಅ. ನಾಸಿ ಸ್ವಾಗತಿಸಿದರು. ಭಂತೆ ಧಮ್ಮ ಜ್ಯೋತಿ ಬುದ್ಧ ವಂದಿಸಿದರು. ಸಿದ್ದಾರ್ಥ ಚಿಮ್ಮಾ ಇದ್ಲಾಯಿ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು.

ಗ್ಯಾರಂಟಿಯೋಜನೆಗಳಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷೆ ಚಂದ್ರಿ. ಕಾ.ಪರಮೇಶ್ವರ್, ಬುದ್ಧ ಜಯಂತಿ ಉತ್ಸವ ಸಮಿತಿ ಅಧ್ಯಕ್ಷೆ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್ .ಡಿ.ಶರಣಪ್ಪ, ಎಸ್ಪಿ ಅಡ್ಡೂರು ಶ್ರೀನಿವಾಸಲು, ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ,ಕರ್ನಾಟಕ ರಾಜ್ಯ ಸರ್ಕಾರಿ-ಅರೆ ಸರ್ಕಾರಿ ಎಸ್ಸಿ ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಮಹೇಶ ಹುಬ್ಬಳ್ಳಿ, ಸಮಾಜದ ಮುಖಂಡರ ಎ.ಬಿ. ಹೊಸಮನಿ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ವಿವಿಧ ಸಮಾಜದ ಮುಖಂಡರು ಇದ್ದರು.

ಅಡವಿ ಮುಖ್ಯ ಪ್ರಾಣೇಶ ಮಹಾರಥೋತ್ಸವ



ಕುಷ್ಟಗಿ: ಪಟ್ಟಣದ ಶಾಖಾಪೂರ ರಸ್ತೆಯಲ್ಲಿರುವ ಅಡವಿ ಮುಖ್ಯ ಪ್ರಾಣೇಶ ಜಾತ್ರೆ ನಿಮಿತ್ತ ಮಹಾರಥೋತ್ಸವ ಶುಕ್ರವಾರ ಅದ್ದೂರಿಯಾಗಿ ನಡೆಯಿತು.

ಅಡವಿ ಪ್ರಾಣೇಶನಿಗೆ ವಿಶೇಷ ಪೂಜೆ, ಪಂಚಾಮೃತ ಅಭಿಷೇಕ, ವ್ಯಾಸಪೂಜೆ, ಪವಮಾನ ಹೋಮ, ಸತ್ಯನಾರಾಯಣ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ವಿಜೃಂಭಣೆಯಿಂದ ಜರುಗಿದ ರಥೋತ್ಸವಕ್ಕೆ ಭಕ್ತರು ಉತ್ತತ್ತಿ ಸಮರ್ಪಿಸಿದರು. ಸುತ್ತಲಿನ ಗ್ರಾಮಗಳಾದ ಶಾಖಾಪೂರ, ವಣಗೇರಿ, ಕಂದಕೂರ, ನೆರಬೆಂಚಿ, ಗುಮಗೇರಾ, ಹಿರೇಮನ್ನಾಪೂರ, ತಳುವಗೇರಾ, ದೋಟಿಹಾಳ, ಬಿಜಕಲ್, ಕೊರಡಕೇರಾ, ಹಿರೇ ನಂದಿಹಾಳ, ಬ್ಯಾಲಿಹಾಳ್, ಮದಲಗಟ್ಟಿ ಸೇರಿದಂತೆ ಇನ್ನಿತರ ಗ್ರಾಮಗಳಿಂದ ಭಕ್ತರು ಆಗಮಿಸಿ ಪ್ರಾಣೇಶನ ದರ್ಶನ ಪಡೆದರು. ಶ್ರೀಗಳು, ಮುಖಂಡರು, ಗಣ್ಯರು ಪಾಲ್ಗೊಂಡಿದ್ದರು.

ನರಸಿಂಹ ಅವತಾರ ಹರಿಯ ವಿಭಿನ್ನ ರೂಪ

ಹಟ್ಟಿಚಿನ್ನದಗಣಿ: ನರಸಿಂಹ ವಿಷ್ಣುವಿನ ಉಗ್ರ ರೂಪವಾಗಿದೆ. ವಿಷ್ಣು ಈ ಅವತಾರ ತಾಳಿದ ದಿನವನ್ನೇ ನರಸಿಂಹ ಜಯಂತಿ ಎಂದು ಕರೆಯಲಾಗುತ್ತದೆ. ನರಸಿಂಹ ಜಯಂತಿಯಂದು ನರಸಿಂಹನ ಆರಾಧನೆ ಮಾಡುವುದರಿಂದ ನಕಾರಾಕತ್ಮಕತೆ ನಿವಾರಣೆಯಾಗಿ ಶಿಷ್ಟರ ರಕ್ಷಣೆಯಾಗುತ್ತದೆ ಎಂದು ಪಂಡಿತ್ ಉಡುಪಿ ಕ್ರಿಷ್ಣಾಚಾರ ಬಳ್ಳಾರಿ ಹೇಳಿದರು.

ಹಟ್ಟಿಚಿನ್ನದಗಣಿ ಸಮೀಪದ ಕೋಠಾ ಗ್ರಾಮದ ಕೊತ್ತಲ ನರಸಿಂಹ ಜಯಂತಿ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಶುಕ್ರವಾರ ಪ್ರವಚನ ನೀಡಿದರು.

ಜಯಂತಿ ನಿಮಿತ್ತ ವಿಶೇಷ ಪಂಚಾಮೃತ ಅಭಿಷೇಕ, ಬೆಳ್ಳಿ ಕವಚಧಾರಣೆ ಅಲಂಕಾರ, ಮಹಾ ಮಂಗಳಾರತಿ, ಭಜನೆ, ಪ್ರವಚನ, ತೀರ್ಥ-ಪ್ರಸಾದ ಕಾರ್ಯಕ್ರಮ ಜರುಗಿದವು. ಲಕ್ಷ್ಮಣಾಚಾರ ಜೋಷಿ, ಅನಂತಾಚಾರ, ರಾಮ್ ಜೋಷಿ, ಆನಂದ್ ಜೋಷಿ, ಹನುಮೇಶ್ ಜೋಷಿ, ವಿಜಯೇಂದ್ರ ಜೋಷಿ, ಶ್ರೀಧರ್ ಜೋಷಿ, ಶ್ರೀವಾಸ್ ಕುಲಕರ್ಣಿ, ವಾಜೇಂದ್ರ ಕುಲಕರ್ಣಿ, ರವಿ ಕುಲಕರ್ಣಿ, ರಾಘವೇಂದ್ರ ಕುಲಕರ್ಣಿ ಕೋಠಾ, ಗುರುಗುಂಟಾ, ಹಟ್ಟಿ, ಲಿಂಗಸುಗೂರು, ರಾಯಚೂರು ಹಾಗೂ ವಿವಿಧೆಡೆಯಿಂದ ಭಕ್ತರು ಆಗಮಿಸಿದ್ದರು.



ಕಿರುಸುದ್ದಿ

ಭಗವಾನ್ ಬುದ್ಧರ ಜಯಂತಿ ಆಚರಣೆ

ಕುರುಗೋಡು: ಭಗವಾನ್ ಬುದ್ಧರ ತತ್ವ ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಪ್ರತಿಯೊಬ್ಬರ ಬದುಕಿನಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದು ಕುರುಗೋಡು ತಹಶೀಲ್ದಾರ್ ನರಸಪ್ಪ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಶುಕ್ರವಾರ ಬೆಳಗ್ಗೆ ನಡೆದ ಭಗವಾನ್ ಬುದ್ಧರ ಜಯಂತಿ ಆಚರಣೆಯಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಬುದ್ಧರು ಇಡೀ ಜಗತ್ತಿಗೆ ಶಾಂತಿ, ಕರುಣೆ ಹಾಗೂ ಸಹಬಾಳ್ವೆ ಸಂದೇಶ ನೀಡಿ ಜಗಕ್ಕೆ ಬೆಳಕಾದವರು. ಅವರ ವಿಚಾರಧಾರೆಗಳನ್ನು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ. ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಬುದ್ಧರ ಚಿಂತನೆ ಅಗತ್ಯ. ಸರ್ಕಾರದಿಂದ ಗೌತಮ ಬುದ್ಧರ ಜಯಂತಿ ಆಚರಿಸುತ್ತಿರುವುದು ಸಂತೋಷದ ವಿಚಾರ ಎಂದು ಹೇಳಿದರು.ಈ ವೇಳೆ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಇತರರು ಇದ್ದರು.

ಬುದ್ಧ ಜಯಂತಿ ಆಚರಣೆ



ವಿಜಯನಗರ: ಹೊಸಪೇಟೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ವಿವಿಧ ಸಂಘ- ಸಂಸ್ಥೆಗಳಿಂದ ಶುಕ್ರವಾರ ಬುದ್ಧನ ಜಯಂತಿಯನ್ನು ಅತ್ಯಂತ ಭಕ್ತಿ ಮತ್ತು ಸಡಗರದಿಂದ ಆಚರಿಸಲಾಯಿತು.

ಬುದ್ಧ ಹಾಗೂ ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಭಕ್ತಿ ಸಲ್ಲಿಸಿದರು. ಬಳಿಕ ಬುದ್ಧ, ಬಸವಣ್ಣ ಹಾಗೂ ಡಾ. ಅಂಬೇಡ್ಕರ್ ಅವರ ಭಾವಚಿತ್ರಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಸಲಾಯಿತು.

ಹರಿಹರ ರಸ್ತೆಯ ಬುದ್ಧ ವೃತ್ತದಲ್ಲಿ ನೆರೆದಿದ್ದ ನೂರಾರು ಅನುಯಾಯಿಗಳು 'ಸಮೂಹ ಬುದ್ಧ ವಂದನೆ' ಸಲ್ಲಿಸಿ ವಿಶ್ವಶಾಂತಿಗಾಗಿ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಚಿಂತಕರು, ಇಂದಿನ ಅಶಾಂತಿಯ ಜಗತ್ತಿಗೆ ಬುದ್ಧನ ಅಹಿಂಸೆ ಮತ್ತು ಕರುಣೆಯ ತತ್ವಗಳೇ ಮದ್ದು ಎಂದರು.ಕಾರ್ಯಕ್ರಮದಲ್ಲಿ ಶೇಖರಪ್ಪ ವರಪೇಟೆ, ಪ್ರೊ. ಚಿನ್ನಸ್ವಾಮಿ ಸೋಸಲೆ, ಸೋಮಶೇಖರ್ ಬಣ್ಣದಮನೆ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು, ಪ್ರಗತಿಪರ ಚಿಂತಕರು ಹಾಗೂ ಸಾರ್ವಜನಿಕರು ಪಕ್ಷಾತೀತವಾಗಿ ಪಾಲ್ಗೊಂಡಿದ್ದರು.

ಕಾನೂನು ಸೇವಾ ಪ್ರಾಧಿಕಾರದಿಂದ ಕಾರ್ಮಿಕ ದಿನಾಚರಣೆ



ವಿಜಯನಗರ: ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ನಗರದ ಟಿ.ಎಂ.ಎ.ಇ.ಎಸ್ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಶುಕ್ರವಾರ ಕಾರ್ಮಿಕ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಿಜೆಎಂ ಹಾಗೂ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಸುಬ್ರಮಣ್ಯ, ಎನ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಾಲಾಪುರ್, ವಕೀಲರ ಸಂಘದ ಅಧ್ಯಕ್ಷ ಗುಜ್ಜಲ ನಾಗರಾಜ್, ಕಾರ್ಮಿಕ ನಿರೀಕ್ಷಕರಾದ ಜಿ.ಬಿ.ದೂಪದ್, ಶಿವಶಂಕರ್ ತಳವಾರ್ ಮತ್ತಿತರರು ಇದ್ದರು.

ಬೈಕ್ ಕಳ್ಳತನ: ಆರೋಪಿ ಬಂಧನ

ಬಳ್ಳಾರಿ: ಬೈಕ್‌ಗಳ ಕಳ್ಳತನ ಮಾಡುತ್ತಿದ ಆರೋಪಿಯನ್ನು ಗಾಂಧಿನಗರ ಪೊಲೀಸ್ ಠಾಣೆ ಅಧಿಕಾರಿಗಳು ಬಂಧಿಸಿ 13 ಬೈಕ್ ವಶ ಪಡಿಸಿಕೊಂಡಿದ್ದಾರೆ. ನೆರೆಯ ಆಂಧ್ರಪ್ರದೇಶದ ಹಾಕರ್ವಿ ಬಳಿಯ ಮಾಚನೂರು ಗ್ರಾಮದ ರಾಜಾ ಬಂಧಿತ ಆರೋಪಿ. ಬೈಕ್ ಕಳ್ಳತನ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ, ನಗರದ ಗಾಂಧಿನಗರ ಪೊಲೀಸ್ ಠಾಣೆ ಸೇರಿದಂತೆ, ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ. ಪೊಲೀಸರು ಆರೋಪಿ ಬಂಧನಕ್ಕಾಗಿ ಹುಡುಕಾಟ ನಡೆಸಿ ಕೊನೆಗೆ 13 ಬೈಕ್‌ಗಳ ಸಮೇತ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಕುರುಗೋಡು: ಪಟ್ಟಣದ ತಾಲೂಕು ಕಚೇರಿಯಲ್ಲಿ ಶುಕ್ರವಾರ ಬೆಳಗ್ಗೆ ನಡೆದ ಭಗವಾನ್ ಬುದ್ಧರ ಜಯಂತಿ ಆಚರಣೆಯಲ್ಲಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಕುರುಗೋಡು ತಹಶೀಲ್ದಾರ್ ನರಸಪ್ಪ ಅವರು ಪುಷ್ಪಾರ್ಚನೆ ಮಾಡಿ ಮಾತನಾಡಿದರು.ಈ ವೇಳೆ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತು ಇತರರು ಇದ್ದರು.

ಅದ್ದೂರಿ ಶ್ರೀ ವಡಕರಾಯನ ಮಹಾರಥೋತ್ಸವ

ವಿಜಯನಗರ: ಹೊಸಪೇಟೆ ನಗರದ ಮೇನ್ ಬಜಾರ್‌ನಲ್ಲಿರುವ ಐತಿಹಾಸಿಕ ಶ್ರೀ ವಡಕರಾಯ ದೇವಸ್ಥಾನದಲ್ಲಿ ಸಾವಿರಾರು ಭಕ್ತರ ಹರ್ಷೋದ್ಘಾರದ ಮಧ್ಯೆ ಶುಕ್ರವಾರ ಸಂಜೆ ಮಹಾರಥೋತ್ಸವವು ಅದ್ದೂರಿಯಾಗಿ ನೆರವೇರಿತು.

ಜಾತ್ರಾ ಮಹೋತ್ಸವದ ನಿಮಿತ್ತ ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಜಲಾಭಿಷೇಕ, ಪಂಚಾಮೃತಾಭಿಷೇಕ, ಮಹಾಮಂಗಳಾರತಿ, ನೈವೇದ್ಯ ಸಮರ್ಪಣೆ ಮಾಡಿ ಪವನ ಪುತ್ರ ಹನುಮಾನನ್ನು ಸ್ತುತಿಸಲಾಯಿತು.

ದೇವರ ದರ್ಶನಕ್ಕಾಗಿ ಬೆಳಗ್ಗೆಯಿಂದಲೇ ಸಾಲುಗಟ್ಟಿದ್ದ ಭಕ್ತರು, ದೇವರಿಗೆ ಹಣ್ಣು ಕಾಯಿ ಅರ್ಪಿಸಿದರೆ ಪೂಜೆ ಸಲ್ಲಿಸಿದರೆ, ಇನ್ನೂ ಕೆಲವರು ಹನುಮಾನ ಚಾಲೀಸ ಪಠಿಸಿ, ದೇವರ ಕೃಪೆಗೆ ಪಾತ್ರರಾದರು.

ಧಾರ್ಮಿಕ ವಿಧಿವಿಧಾನಗಳ ನಂತರ ಸಂಜೆ ಆರಂಭವಾದ ರಥೋತ್ಸವವು ದೇವಸ್ಥಾನದಿಂದ ಪಾದಗಟ್ಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಸಾಗಿತು. ಬಳಿಕ ರಥವು ಪುನಃ ಮೂಲ ಸ್ಥಾನಕ್ಕೆ ಮರಳುವವರೆಗೆ ಭಕ್ತರು ಗೋವಿಂದ ನಾಮಸ್ಮರಣೆ ಮಾಡುತ್ತಾ ಭಕ್ತಿಯ ಪರಾಕಾಷ್ಠೆ ಮೆರೆದರು. ವಿಜಯನಗರ, ಬಳ್ಳಾರಿ, ದಾವಣಗೆರೆ ಹಾಗೂ ಕೊಪ್ಪಳ ಸೇರಿದಂತೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣು-ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.



ವಿಜಯನಗರ: ಹೊಸಪೇಟೆ ನಗರದ ಮೇನ್ ಬಜಾರ್‌ನಲ್ಲಿರುವ ಐತಿಹಾಸಿಕ ಶ್ರೀ ವಡಕರಾಯ ದೇವಸ್ಥಾನದಲ್ಲಿ ಸಾವಿರಾರು ಭಕ್ತರ ಹರ್ಷೋದ್ಘಾರದ ಮಧ್ಯೆ ಶುಕ್ರವಾರ ಸಂಜೆ ಮಹಾರಥೋತ್ಸವವು ಅದ್ದೂರಿಯಾಗಿ ನೆರವೇರಿತು.

ರಾಷ್ಟ್ರ ಸೇವಿಕಾ ಸಮಿತಿಯಿಂದ ಆಕರ್ಷಕ ಪಥಸಂಚಲನ
ಸಮಾಜಕ್ಕಾಗಿಯೂ ಸಮಯ ಮೀಸಲಿಡಿ

ಹಗರಿಬೊಮ್ಮನಹಳ್ಳಿ: ವರ್ಗದಲ್ಲಿ ಕಲಿತ ದೈಹಿಕ, ಬೌದ್ಧಿಕ ಶಿಕ್ಷಣವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಿ. ಇಲ್ಲಿಂದ ನಿಮ್ಮ ಜೀವನದ ಹೊಸ ಅಧ್ಯಾಯವನ್ನು ತೆರೆದುಕೊಳ್ಳುತ್ತಿದೆ. ದಿನದ 24 ಗಂಟೆಗಳಲ್ಲಿ ಸ್ವಲ್ಪ ಸಮಯವನ್ನು ಸಮಾಜಕ್ಕೋಸ್ಕರ ನೀಡಿ. ರಾಷ್ಟ್ರಸೇವೆಗಾಗಿ ಸದಾ ಸಿದ್ಧರಾಗಿರಿ ಎಂದು ಮಾ. ಅಲಕಾ ಇನಾಮದಾರ ಮಾರ್ಗದರ್ಶಿಸಿದರು.

ಅವರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ರಾಷ್ಟ್ರ ಸೇವಿಕಾ ಸಮಿತಿಯ ಶಿಕ್ಷಾವರ್ಗಗಳ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಉಪಸ್ಥಿತರಿದ್ದು, ಮಾತನಾಡಿದರು.

ಇಂದಿನ ಮಕ್ಕಳಲ್ಲಿ ದೇಶದ ಬಗೆಗಿನ ಪ್ರೀತಿ, ಅಭಿಮಾನ ಕಡಿಮೆಯಾಗುತ್ತಿದೆ. ಆದರೆ, ಅದರ ಕಾರಣ ಹುಡುಕುತ್ತಾ ಹೋದಾಗ ಸಿಗುವ ಉತ್ತರ ಸ್ವಾರ್ಥದ ಬದುಕು. ದೇಶಪ್ರೇಮದ ಬದಲಾಗಿ ಡಾಲರ್ ಮೋಹ ಹೆಚ್ಚಾಗುತ್ತಿದೆ. ಸ್ವಲ್ಪ ವರ್ಷಗಳ ಹಿಂದೆ ಸ್ವಾರ್ಥ ಬದುಕಿಗಿಂತ ಕುಟುಂಬದಲ್ಲಿನ ಪ್ರೀತಿ, ಸಮಾಜದ ಬಗೆಗಿನ ಕಳಕಳಿ ಹೆಚ್ಚಾಗಿತ್ತು. ಆಗಿನ ಮನೆಯ ಸಂಸ್ಕಾರಗಳು ಹಾಗಿದ್ದವು. ಇಂದು ಅಂತಹ ಸಂಸ್ಕಾರಗಳು ಕಡಿಮೆಯಾಗುತ್ತಿವೆ. ಇದರ ಬಗ್ಗೆ ತಾಯಂದಿರು ಗಂಭೀರವಾಗಿ ಯೋಚಿಸಿ ತಮ್ಮ ಮಕ್ಕಳಿಗೆ ಸಂಸ್ಕಾರ ನೀಡುವ ಕಡೆ ಗಮನಹರಿಸಬೇಕು ಎಂದರು.

ಶತಮಾನ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಕಾರ್ಯಗಳಿಂದಾಗಿ ಇಂದು ಎಲ್ಲರಿಗೂ ಪರಿಚಿತವಾಗಿದೆ. ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಸಂಘ ಹಾಗೂ ರಾಷ್ಟ್ರ ಸೇವಿಕಾ ಸಮಿತಿ ತೊಡಗಿದೆ. ಆಧುನೀಕರಣದ ಪ್ರಭಾವದಿಂದಾಗಿ, ಸ್ವಾವಲಂಬನೆ, ಸ್ವಾತಂತ್ರ್ಯದ ಹೆಸರಿನಲ್ಲಿ ಹೆಣ್ಣುಮಕ್ಕಳು ನಮ್ಮತನವನ್ನೇ ಮರೆಯುತ್ತಿದ್ದಾರೆ. ಕುಟುಂಬ ಪದ್ಧತಿಯಿಂದ ವಿಮುಖರಾಗುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ. ಸಂಸ್ಕೃತಿ, ಆಚಾರ,ವಿಚಾರ, ಬೌದ್ಧಿಕ ಗುಣಮಟ್ಟ, ಶಾರೀರಿಕ ಕ್ಷಮತೆಯನ್ನು ಹೆಚ್ಚಿಸುವಂತಹ ಶಿಕ್ಷಣ ಹೆಣ್ಣುಮಕ್ಕಳಿಗೆ ನೀಡಬೇಕು. ರಾಷ್ಟ್ರದ ಬಗೆಗಿನ ಕಾಳಜಿ ಹೆಣ್ಣುಮಕ್ಕಳಲ್ಲಿ ಹೆಚ್ಚಾಗುವಂತಾಗಬೇಕು ಎಂದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಾಂತ ಸಹಕಾರ್ಯವಾಹಿಕಾ ಮಾ.ರತ್ನಮಾಲಾ ಕುಲಕರ್ಣಿ, ರಾಷ್ಟ್ರ ಸೇವಿಕಾ ಸಮಿತಿಯು ಮಹಿಳೆಯರನ್ನು ಶಾರೀರಿಕ, ದೈಹಿಕವಾಗಿ ಸದೃಢರನ್ನಾಗಿಸಲು ಶಿಕ್ಷಣವನ್ನು ನೀಡುತ್ತಾ ಬಂದಿದೆ. ಇಂತಹ ವರ್ಗಗಳು ಪ್ರತಿವರ್ಷ ನಡೆಯುತ್ತದೆ. ಎಲ್ಲರೂ ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಡಾ. ಸಹನಾ ಸಿ.ಎಂ. ಮಾತನಾಡಿ, ಉತ್ತಮ ಸಮಾಜ ನಿರ್ಮಿಸುವಲ್ಲಿ ತಾಯಂದಿರ ಪಾತ್ರ ಬಹು ದೊಡ್ಡದು. ವೃತ್ತಿಯ ಜೊತೆ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಲು ಎಡವುತ್ತಿದ್ದಾರೆ. ಮಕ್ಕಳಿಗೆ ದೇಶ, ಸಮಾಜದ ಬಗ್ಗೆ ಪ್ರೀತಿ ಹುಟ್ಟುವಂತಾಗಬೇಕು. ಅಂತಹ ಶಿಕ್ಷಣ ಮನೆಯಿಂದಲೇ ಪ್ರಾರಂಭವಾಗಲಿ ಎಂದರು.

ಶಿಕ್ಷಾವರ್ಗದ ಶಿಕ್ಷಾರ್ಥಿಗಳಿಂದ ವಿವಿಧ ಪ್ರಾತ್ಯಕ್ಷಿಕೆಗಳು ನಡೆದವು. ವೇದಿಕೆಯಲ್ಲಿ ಪ್ರಾಂತ ಕಾರ್ಯವಾಹಿಕಾ ಮಾ. ವೇದಾ ಕುಲಕರ್ಣಿ, ಸೇವಾ ಪ್ರಮುಖ ಮಾ. ಸರಸ್ವತಿ ಹೆಬ್ಬಾರ್, ಕಾರ್ಯಕ್ರಮದಲ್ಲಿ ಜ್ಯೋತಿ, ಸಾವಿತ್ರಿ ಭಟ್, ಕು. ಭೀಮಾ, ಸುಗಂಧಿ ಇನ್ನಿತರರು ಉಪಸ್ಥಿತರಿದ್ದರು. ಚಿತ್ರಾ ಪರಿಚಯಿಸಿ, ಸ್ವಾಗತಿಸಿದರೆ, ಜ್ಯೋತಿ ವಂದಿಸಿದರು. ಕು. ಶ್ರೀಲಕ್ಷ್ಮಿ ವೈಯಕ್ತಿಕ ಗೀತೆ ಹಾಡಿದರು.



- ರಾಷ್ಟ್ರ ಸೇವಿಕಾ ಸಮಿತಿ ವರ್ಗದ ಸಮಾರೋಪ
- ಶಿಕ್ಷಾವರ್ಗದ ಸಮಾರೋಪದ ಹಿನ್ನೆಲೆಯಲ್ಲಿ ಬುಧವಾರದಂದು ನಗರದ ಪ್ರಮುಖ ಮಾರ್ಗಗಳಲ್ಲಿ ಗಣವೇಷಧಾರಿ ಸೇವಿಕೆಯರಿಂದ ಘೋಷ್ ಸಹಿತ ಆಕರ್ಷಕ ಪಥಸಂಚಲನ ನಡೆಯಿತು.

ಕೆಪಿಎಂಇ ನೋಂದಣಿ ಕಡ್ಡಾಯ: ಡಿಸಿ



ಬಳ್ಳಾರಿ: ವೈದ್ಯಕೀಯ ಪದವಿ ಪಡೆದ ನಂತರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳದೆ ಕ್ಲಿನಿಕ್ ಅಥವಾ ಆಸ್ಪತ್ರೆ ಆರಂಭಿಸುವ ವೈದ್ಯರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಹಮ್ಮಿಕೊಂಡಿದ ಜಿಲ್ಲಾ ನೋಂದಣಿ ಮತ್ತು ಕುಂದು-ಕೊರತೆಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ಮತ್ತು 2009ರ ತಿದ್ದುಪಡಿ ನಿಯಮಗಳ ಪ್ರಕಾರ, ಯಾವುದೇ ವೈದ್ಯರು ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಪ್ರಯೋಗಾಲಯ ಆರಂಭಿಸುವ ಮೊದಲು ಜಿಲ್ಲಾಧಿಕಾರಿಗಳಿಂದ ಕಡ್ಡಾಯವಾಗಿ ಕೆಪಿಎಂಇ ನೋಂದಣಿ ಪ್ರಮಾಣಪತ್ರ ಪಡೆಯಬೇಕು. ನೋಂದಣಿ ಮಾಡಿಕೊಳ್ಳದೆ ಅಥವಾ ನವೀಕರಣ ಮಾಡದೆ ಸಂಸ್ಥೆ ನಡೆಸುತ್ತಿದ್ದರೆ ಅಂತಹ ಕೇಂದ್ರಗಳಿಗೆ ಪ್ರತಿ ವರ್ಷಕ್ಕೆ 25,000 ರೂ.ಗಳಂತೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದ ಅವರು, ಕಾಯ್ದೆಯ ಕಲಂ 19, 20, 21 ಹಾಗೂ 22ರಡಿ ಕ್ರಮ ಜರುಗಿಸಲಾಗುವುದು ಎಂದರು.

ನಕಲಿ ವೈದ್ಯರ ವಿರುದ್ಧ ಎಫ್‌ಐಆರ್: ಜಿಲ್ಲೆಯಲ್ಲಿ ಅಧಿಕೃತ ವೈದ್ಯಕೀಯ ಪದವಿ ಇಲ್ಲದೆ ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟ ವಾಡುವ ನಕಲಿ ವೈದ್ಯರ ಮೇಲೆ ತೀವ್ರ ನಿಗಾ ಇರಿಸಲಾಗಿದೆ. ಅಂತಹವರ ವಿರುದ್ಧ ನೇರವಾಗಿ ಎಫ್‌ಐಆರ್ ದಾಖಲಿಸಬೇಕು ಎಂದು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಕಟ್ಟಡ ಮಾಲೀಕರಿಗೆ ಸೂಚನೆ: ತಮ್ಮ ಮನೆ ಅಥವಾ ಮಳಿಗೆಗಳನ್ನು ಆಸ್ಪತ್ರೆ, ಕ್ಲಿನಿಕ್ ಅಥವಾ ಲ್ಯಾಬ್‌ಗಳಿಗೆ ಬಾಡಿಗೆ ನೀಡುವ ಮುನ್ನ ಮಾಲೀಕರು ಎಚ್ಚರಿಕೆ ವಹಿಸಬೇಕು. ಬಾಡಿಗೆದಾರರ ಅಧಿಕೃತ ವೈದ್ಯಕೀಯ ಪ್ರಮಾಣಪತ್ರ ಪರಿಶೀಲಿಸಿದ ನಂತರವೇ ಬಾಡಿಗೆ ಒಪ್ಪಂದ ಮಾಡಿಕೊಳ್ಳಬೇಕು ಎಂದರು.

ಜಿಲ್ಲೆಯ ಆರೋಗ್ಯ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಮತ್ತು ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ಖಾತ್ರಿಪಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಸಭೆಯಲ್ಲಿ ಜಿ.ಪಂ.ಸಿಇಒ ಮಹಮ್ಮದ್ ಹಾರೀಸ್ ಸುಮೇರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕು ಆರೋಗ್ಯ ಅಧಿಕಾರಿಗಳು, ನೋಂದಣಿ ಮತ್ತು ಕುಂದು ಕೊರತೆ ಪರಿಹಾರ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಬಡವರಿಗೆ ಗ್ಯಾರಂಟಿ ಯೋಜನೆ ಆಸರೆ

ಹೂವಿನ ಹಡಗಲಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆ ಬಡವರ ಬದುಕಿಗೆ ಆಸರೆಯಾಗಿವೆ ಎಂದು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಪಿ.ಟಿ. ಭರತ್ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ತಾಪಂ ರಾಜೀವ್ ಗಾಂಧಿ ಸಭಾಂಗಣದಲ್ಲಿ ಗುರುವಾರ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಅರ್ಹ ಫಲಾನುಭವಿಗಳು ಗ್ಯಾರಂಟಿ ಯೋಜನೆಗಳಿಂದ ವಂಚಿತರಾಗಬಾರದು. ಯಾವುದೇ ತಾಂತ್ರಿಕ ದೋಷಗಳು ಇದ್ದಲ್ಲಿ ಅಧಿಕಾರಿಗಳು ಸರಿಪಡಿಸಬೇಕು ಎಂದು ತಾಕೀತು ಮಾಡಿದರು.

ಫಲಾನುಭವಿಗಳ ಬದಲು ಯೋಜನೆ ವ್ಯಾಪ್ತಿಗೆ ಬಾರದವರು ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳದಂತೆ ಎಚ್ಚರ ವಹಿಸಬೇಕು ಎಂದರು.

ಜೆಸ್ಕಾಂ ಮೀಟರ್ ಗಳು ಗ್ರಾಮೀಣ ಪ್ರದೇಶಗಳಲ್ಲಿ ಗೃಹಜ್ಯೋತಿ ಶೂನ್ಯ ಬಿಲ್ ಗಳನ್ನು ನೀಡುತ್ತಿಲ್ಲ. ಪ್ರತಿ ಸಭೆಯಲ್ಲೂ ಈ ವಿಷಯ ತಿಳಿಸಿದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಸದಸ್ಯ ಜಿ ಶಿವಕುಮಾರ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಕೃಷಿ ಪಂಪ್ ಸೆಟ್ ಗಳ ವಿದ್ಯುತ್ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಜೆಸ್ಕಾಂನವರು ಸಕಾಲದಲ್ಲಿ ಮಾಡುತ್ತಿಲ್ಲ. ಗ್ರಾಹಕರನ್ನು ವಿನಾ ಕಾರಣ ಅಲೆದಾಡಿಸುತ್ತಾರೆ. ಕೇಳಿದಷ್ಟು ಹಣ ಕೊಟ್ಟರೆ ಮಾತ್ರ ಪರಿವರ್ತಕಗಳನ್ನು ಕೊಡುತ್ತಾರೆ ಎಂದು ಸದಸ್ಯರು ಆರೋಪಿಸಿದರು.

ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೆ ತರುವುದು ಸರ್ಕಾರದ ಉದ್ದೇಶವಾಗಿದೆ. ಯೋಜನೆ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳು ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲು ಅಧ್ಯಕ್ಷ ಪಿ.ಟಿ. ಭರತ್ ಸೂಚಿಸಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ ಪರಮೇಶ್ವರ, ಜಿಲ್ಲಾ ಸಮಿತಿ ಸದಸ್ಯ ಗುರುವಿನ ರಾಜು ಉಪಸ್ಥಿತರಿದ್ದರು.

ತಾಲೂಕು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.



ಮೂಢನಂಬಿಕೆಗಳಿಂದ ದೂರವಿರಿ: ಗದುಗಿನ



ಹೂವಿನಹಡಗಲಿ: ಎಲ್ಲಾ ದೇವದಾಸಿ ಮಹಿಳೆಯರು ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಬಹಳ ಮುಖ್ಯ.ಹಾಗೆಯೆ ಸರ್ಕಾರ ನಿಮ್ಮಂತಹ ಮಹಿಳೆಯರನ್ನು ಗುರುತಿಸಿ ಅನೇಕ ರೀತಿಯ ಸಹಾಯ ಸೌಲಭ್ಯಗಳನ್ನು ಒದಗಿಸುತ್ತಿದ್ದು ಇದರ ಸದುಪಯೋಗ ಪಡೆದುಕೊಂಡು ನಿಮ್ಮ ನಿಮ್ಮ ಮಕ್ಕಳನ್ನು ಉತ್ತಮ ವಿದ್ಯಾಭ್ಯಾಸ ಮಾಡಿಸುವುದು ಒಳ್ಳೆಯದು. ಹಾಗೆಯೇ ದೇವದಾಸಿ ಪದ್ಧತಿ ಇದೊಂದು ಅನಿಷ್ಟ ಪದ್ಧತಿ ಇದನ್ನು ಇಲ್ಲಿಗೆ ಮೂಟಕು ಗೂಳಿಸಿ. ನಿಮ್ಮ ಮಕ್ಕಳ ಭವಿಷ್ಯ ರೂಪಿಸುವಂತೆ ವಕೀಲರಾದ ಹನುಮಂತಪ್ಪ ಗದುಗಿನ ಅವರು ಸಲಹೆ ನೀಡಿದರು.

ತಾಲೂಕಿನ ಹೊಳಗುಂದಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು.ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೂವಿನಹಡಗಲಿ ಹಾಗೂ ದೇವದಾಸಿ ಪುನರ್ವಸತಿ ಇಲಾಖೆ ವಿಜಯನಗರ ಇವರ ಸಂಯುಕ್ತ ಆಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ಉಚಿತ ಕಾನೂನು ಶಿಬಿರದಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿ ಮಹಿಳೆಯರಿಗಾಗಿಗೆ ಅಂಬೇಡ್ಕರ್ ರವರು ಅನೇಕ ಕಾನೂನುಗಳನ್ನು ರೂಪಿಸಿದ್ದಾರೆ. ಹಾಗೂ ತಾವುಗಳು ಖುದ್ದಾಗಿ ಬಂದು ಕಾನೂನು ಪಡೆಯುವ ಹಕ್ಕು ಕಾಯ್ದೆ ನಿಮಗಿದೆ.ಮುಖ್ಯವಾಗಿ ಬಾಲ್ಯ ವಿವಾಹ.ದೇವದಾಸಿ ಪದ್ದತಿ. ದೇವರ ಹೆಸರಿನಲ್ಲಿ,ಮಹಿಳೆಗೆ ಮುತ್ತು ಕಟ್ಟುವುದು ಸೇರಿದಂತೆ ಇತರೆ ಮೂಢನಂಬಿಕೆಗಳಿಂದ ದೂರ ಇರುವಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದರು.

ಶಿಬಿರದ ಮುಖ್ಯ ಅತಿಥಿಗಳಾಗಿ ಹೊಳಗುಂದಿ ಗ್ರಾಪಂ ಮಾಜಿ ಅಧ್ಯಕ್ಷ ದನರಾಜ, ಚೌಕಳಿ ದುಗ್ಗಮ್ಮ, ಸದಸ್ಯರಾದ ರುದ್ರಗೌಡ, ದೇವದಾಸಿ ಪುನರ್ವಸತಿ ಅನುಷ್ಠಾನಾಧಿಕಾರಿ ಹಾಲನಗೌಡ, ಪತ್ರಕರ್ತರಾದ ಹಲಗಿ ಸುರೇಶ, ಅಂಗನವಾಡಿ ಕಾರ್ಯಕರ್ತೆ ಮಂಜುಳಾ ಇತರರಿದ್ದರು.

ಇದೆಸಂದರ್ಭದಲ್ಲಿಮೂವತ್ತೈದು ಮಾಜಿ ದೇವದಾಸಿ ಮಹಿಳೆಯರಿಗೆ ಉಚಿತ ಕಾನೂನು ಶಿಬಿರದಲ್ಲಿ ಭಾಗವಹಿಸಿದ್ದರು. ಮಂಜಮ್ಮ ಇವರು ಕಾರ್ಯಕ್ರಮ ನಿರ್ವಹಿಸಿದರು.

ಪಿಯುಸಿ ಮರು ಮೌಲ್ಯಮಾಪನ ಮೂವರು ವಿದ್ಯಾರ್ಥಿನಿಯರ ಉತ್ತಮ ಸಾಧನೆ

ಕೊಟ್ಟೂರು: ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಹಾಗೂ ನಿರಂತರ ಪಿಯುಸಿ ಫಲಿತಾಂಶದಲ್ಲಿ 11 ಬಾರಿ ಫಸ್ಟ್ ರ್‍ಯಾಂಕ್ ಪಡೆದು ರಾಜ್ಯದಲ್ಲಿ ಪ್ರಸಿದ್ಧಿಯಾಗಿರುವ ಇಂದು ಕಾಲೇಜಿನಲ್ಲಿ ಮರುಮೌಲ್ಯಮಾಪನದಲ್ಲಿ ಮಹತ್ವದ ಬದಲಾವಣೆಯಾಗಿದೆ.





ರಾಣೇಬೆನ್ನೂರು ತಾಲೂಕಿನ ಕುಪ್ಪೇಲೂರು ಗ್ರಾಮದ ಕೆಎಸ್ ಆರ್‌ಟಿಸಿ ಬಸ್ ಡ್ರೈವರ್‌ನ ಮಗಳು ದೀಪಾ ಚಂದ್ರಕಾಂತ್ ಅಡಿನವರ್ ಕಲಾ ವಿಭಾಗದ ಇಂಗ್ಲಿಷ್ ವಿಷಯದಲ್ಲಿ 2 ಅಂಕ ಹೆಚ್ಚುವರಿ ಪಡೆದು ಒಟ್ಟು 595 ಅಂಕಗಳೊಂದಿಗೆ ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದಿದ್ದಾಳೆ. ವಾಣಿಜ್ಯ ವಿಭಾಗದಲ್ಲಿ ಹೂವಿನಹಡಗಲಿಯ ಭುವನೇಶ್ವರಿ ಇಂಗ್ಲಿಷ್ ವಿಷಯದಲ್ಲಿ 3 ಅಂಕಗಳನ್ನು ಪಡೆದು ಇಂಗ್ಲಿಷ್ ವಿಷಯದಲ್ಲಿ 98 ಅಂಕಗಳೊಂದಿಗೆ ಒಟ್ಟು 595 ಅಂಕಗಳನ್ನು ಪಡೆದು ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾಳೆ. ಹೊಸಪೇಟೆಯ ಹೂಗಾರ ಸಿಂಧು ಇಂಗ್ಲಿಷ್ ವಿಷಯದಲ್ಲಿ 2, ಅರ್ಥಶಾಸ್ತ್ರ ವಿಷಯದಲ್ಲಿ 5 ಅಂಕಗಳನ್ನು ಪಡೆದು ಒಟ್ಟು 595 ಅಂಕಗಳನ್ನು ಪಡೆದು ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾಳೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಇಂದು ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಮತ್ತು ಸಮಸ್ತ ವಿದ್ಯಾರ್ಥಿ ಬಳಗ ಹರ್ಷ ವ್ಯಕ್ತಪಡಿಸಿದ್ದಾರೆ.

ಉಚಿತ ದಾಖಲಾತಿಗೆ ಅರ್ಜಿ ಆಹ್ವಾನ

ಬಳ್ಳಾರಿ: ನಗರದ ಡಾ. ಎಪಿಜೆ ಅಬ್ದುಲ್ ಕಲಾಂ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು (ಅಲ್ಲೀಪುರ) ಪ್ರಥಮ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ದಾಖಲಾತಿಗಾಗಿ ಅರ್ಹ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ನಾಗಯ್ಯ ಹಿರೇಮಠ ತಿಳಿಸಿದ್ದಾರೆ. ಪ್ರಥಮ ಪಿಯುಸಿ ವಿಜ್ಞಾನ ವಿಭಾಗಕ್ಕೆ 60 ಮತ್ತು ವಾಣಿಜ್ಯ ವಿಭಾಗಕ್ಕೆ 60 ಸೀಟ್ ಲಭ್ಯವಿದ್ದು, ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಬಾಲಕಿಯರು ಮಾತ್ರ ಅರ್ಜಿ ಸಲ್ಲಿಸಲಿಸಬಹುದು. ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು http://dom.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಮೇ 16 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಬಾಲಕಿಯರ ವಸತಿ ಪದವಿ ಪೂರ್ವ ಕಾಲೇಜು, ಅಲ್ಲೀಪುರ, ಬಳ್ಳಾರಿ ಅಥವಾ ಮೊ.7349008289, ಗೆ ಸಂಪರ್ಕಿಸಬಹುದು.

ಅದ್ದೂರಿ ಬಿಕ್ಕಿಮರಡಿ ದುರ್ಗಮ್ಮ ಜಾತ್ರಾ ಮಹೋತ್ಸವ

ಕೊಟ್ಟೂರು: ಕೊಟ್ಟೂರಿನ ಕೆರೆಯ ಏರಿಯ ಮೇಲಿರುವ ಶ್ರೀ ಬಿಕ್ಕಿಮರಡಿ ದುರ್ಗಮ್ಮ ಜಾತ್ರೆಯು ಸಾವಿರಾರು ಭಕ್ತರ ನಡುವೆ ಅದ್ದೂರಿಯಾಗಿ ನೆರವೇರಿತು.

ಕೊಟ್ಟೂರಿನ ಕೆರೆಯ ದಂಡೆಯ ಮೇಲಿರುವ ಶ್ರೀ ಬಿಕ್ಕಿಮರಡಿ ದುರ್ಗಮ್ಮ ಜಾತ್ರೆಯು ದವನದ ಹುಣ್ಣಿಮೆಯಂದು ಪ್ರತಿ ವರ್ಷದ ಪದ್ಧತಿಯಂತೆ ರಥವನ್ನು ಎಳೆಯಲಾಯಿತು. ಕೊಟ್ಟೂರಿನ ಕೆಳಗೇರಿಯಲ್ಲಿರುವ ದುರ್ಗಮ್ಮ ದೇವಿಯು ಹಳ್ಳಿಗಳ ಮೇಲೆ ಉತ್ಸವ ಹೊರಟು ಕೊಟ್ಟೂರಿನ ಪಕ್ಕದ ಜಾಗಟಗೆರೆ ಎಂಬ ಹಳ್ಳಿಯಿಂದ ದವನದ ಹುಣ್ಣಿಮೆಯ ದಿನದಂದು ಕೆರೆಯ ದಂಡೆಯ ಮೇಲಿರುವ ದೇವಸ್ಥಾನಕ್ಕೆತರಲಾಗುತ್ತದೆ.ಬೆಳಗ್ಗಿಂದ ಸಂಜೆವರೆಗೂ ಪೂಜಾ ಕೈಂಕರ್ಯಗಳು ನೆರವೇರಿದ ನಂತರ ಸಂಜೆ 6ರಂದು ಗೋಧೂಳಿ ಸಮಯದಲ್ಲಿ ರಥವನ್ನು ಎಳೆಯಲಾಗುತ್ತದೆ.



ಪಲ್ಲಕ್ಕಿಯ ಮೂಲಕ ದೇವಿಯನ್ನು ಉತ್ಸವದ ಮೂಲಕ ರಥದ ಬಳಿಗೆ ತಂದು ಮೂರು ಸುತ್ತು ಪ್ರದಕ್ಷಣೆ ಹಾಕಿದ ನಂತರ ದೇವಿಯು ರಥವನ್ನು ಏರಿದ ಮೇಲೆ ದೇವಿಯ ಪಟವನ್ನು ಹರಾಜು ಹಾಕಲಾಗುತ್ತದೆ. ತದನಂತರದಲ್ಲಿ ಸಾವಿರಾರು ಭಕ್ತರು ಶ್ರದ್ಧಾಭಕ್ತಿಯಿಂದ ರಥವನ್ನು ಎಳೆದು ಭಕ್ತಿಯನ್ನು ಸಮರ್ಪಿಸಿದರು.

ಈ ರಥೋತ್ಸವದ ಇನ್ನೊಂದು ವಿಶೇಷತೆ ಎಂದರೆ ಹರಕೆ ಹೊತ್ತಂತಹ ಭಕ್ತರು ಜೀವಂತ ಕೋಳಿಗಳನ್ನು ರಥಕ್ಕೆ ತೂರುವ ಮೂಲಕವಾಗಿ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಈ ರಥೋತ್ಸವದ ಮತ್ತೊಂದು ತುಂಬಾ ವಿಶೇಷ ಎಂದರೆ ಮದುವೆಯಾದಂತಹ ಹೊಸ ಜೋಡಿಗಳು ಹರಿವ ರಥದ ಕಳಸ ದರ್ಶನ ಮಾಡಿದರೆ ಒಳಿತಾಗುತ್ತದೆ ಎಂಬ ನಂಬಿಕೆಯಿಂದ ಸಾವಿರಾರು ನವ ವಧು-ವರರು ರಥೋತ್ಸವಕ್ಕೆ ಆಗಮಿಸಿ ರಥದ ದರ್ಶನವನ್ನು ಪಡೆಯುತ್ತಾರೆ. ರಥೋತ್ಸವ ಜರ್ಗಿ ಮೂರು ದಿನಗಳ ನಂತರದಲ್ಲಿ ದೇವಿಯನ್ನು ಪಲ್ಲಕ್ಕಿ ಉತ್ಸವದ ಮೂಲಕವಾಗಿ ಕೊಟ್ಟೂರಿನ ಎಲ್ಲಾ ಬೀದಿಗಳಲ್ಲೂ ಮೆರವಣಿಗೆ ಮಾಡಲಾಗುತ್ತದೆ.

> **ನಮ್ಮ ವಿವಾಹವಾಗಿ ಮೂರನೇ ದಿನಕ್ಕೆ ಈ ರಥೋತ್ಸವ ಜರಗುತ್ತಿದ್ದು, ಮದುವೆಯಾದ ನವ ವಧು-ವರರು ರಥದ ಕಳಸ ದರ್ಶನ ಮಾಡಿದರೆ ಒಳಿತಾಗುತ್ತದೆ ಎಂಬ ನಂಬಿಕೆಯಿಂದ ಈ ರಥೋತ್ಸವದ ದರ್ಶನಕ್ಕೆ ಆಗಮಿಸಿದ್ದೇವೆ. ಇದರಿಂದ ಒಳಿತಾಗುತ್ತದೆ ಎಂಬ ನಂಬಿಕೆ ಮೊದಲಿನಿಂದಲೂ ಪ್ರಚಲಿತದಲ್ಲಿದ್ದು ನಾವು ಸಹ ಇದನ್ನು ಶ್ರದ್ಧಾಭಕ್ತಿಯಿಂದ ಪಾಲಿಸುತ್ತಿದ್ದೇವೆ.**
>
> ■ **ಆಶಾದೀಪ ಕೆ.ಆರ್. ಪ್ರಶಾಂತ್. ಮದುವೆಯಾದ ನೂತನ ದಂಪತಿಗಳು**

ಬುದ್ಧ ಪೂರ್ಣಿಮೆ: ಪ್ರತಿಭಾ ಪುರಸ್ಕಾರ

ಬಳ್ಳಾರಿ: ಸಮೀಪದ ಸಂಗನಕಲ್ ಗ್ರಾಮದ ದೇವನಾಮಪ್ರಿಯ ಬಯಲು ಬುದ್ಧ ವಿಹಾರ ಟ್ರಸ್ಟ್ ವತಿಯಿಂದ ಬುದ್ಧ ಪೂರ್ಣಿಮೆ ನಿಮಿತ್ತ ಶುಕ್ರವಾರ ಶರಣ ಪಂಚಶೀಲರೊಂದಿಗೆ ಕಾರ್ಯಕ್ರಮ ಜರುಗಿತು.

ಎಸ್ಸೆಸ್ಸೆಲ್ಸಿಯಲ್ಲಿ ಶೇ.90ರಷ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಕಪ್ಪಗಲ್ಲು ಓಂಕಾರಪ್ಪ ಅಧ್ಯಕ್ಷತೆ ವಹಿಸಿದರು. ಮಹಾನಗರಪಾಲಿಕೆ ಮೇಯರ್ ಪಿ.ಗಾದೆಪ್ಪ, ಲೆಕ್ಕಪರಿಶೋಧಕ ಸಂಘದ ಪ್ರಮುಖ ಸಿರಿಗೆರೆ ಪನ್ನರಾಜ್, ಸಂಗನಕಲ್ಲು ವಿಜಯಕುಮಾರ್, ಯರಣ್ಣ ನಿವೃತ್ತ ಶಿಕ್ಷಕ ಮೆಹತಾಬ್ ಕಪ್ಪಗಲ್ಲು, ಮುಖ್ಯ ಗುರು ಬಾಬು, ಶಿಕ್ಷಕ ಧರ್ಮಣ್ಣ, ಜಿಲ್ಲಾ ಛಲವಾದಿ ಮಹಾಸಭಾಧ್ಯಕ್ಷ ಸಿ.ಶಿವಕುಮಾರ್, ಗೋವಿಂದರಾಜ ನಾಗಲಕರಿ, ನರಸಪ್ಪ, ನಾಗರತ್ನ, ಬಂತೇಜಿ, ನಾಗರಾಜ್ ಕೆ., ಲಿಂಗಪ್ಪ ಸಿ ಶಂಕರ್ ಹೊನ್ನೂರಪ್ಪ ಕಪ್ಪಗಲ್ ಚಂದ್ರ ಲಿಂಗದೇವನಹಳ್ಳಿ ನಾಗೇಂದ್ರ, ಮೋಕ ಹನುಮಂತ ಕೊಳಗಲ್ ಸೂರಿ ಕಪ್ಪಗಲ್ ಸಂಗನಕಲ್ ಚಂದ್ರ, ಮಹೇಂದ್ರ ಕಪ್ಪಗಲ್ ಸೇರಿದಂತೆ ಇತರರಿದ್ದರು.



ಒಗ್ಗಟ್ಟಿನಿಂದ ಹೋರಾಟ ಮಾಡಿ: ಛಲವಾದಿ



ಕುರುಗೋಡು: ದಲಿತರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ ತಡೆಯಲು, ದಲಿತ ಸಂಘಟನೆ ಬಲ ಪಡಿಸಲು ಮತ್ತು ಮೂಲಭೂತ ಹಕ್ಕು ಪಡೆಯಲು ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಹೋರಾಡುವ ಅವಶ್ಯವಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಸೋಮಪ್ಪ ಛಲವಾದಿ ಹೇಳಿದರು.

ಪಟ್ಟಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಮಾರ್ಗ) ಸಂಘಟನೆಯಿಂದ ನೂತನ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಪ್ರದೇಶದ ದಲಿತ ವರ್ಗ ದವರಿಗೆ ಸರ್ಕಾರದ ಅಗತ್ಯ ಸೌಲಭ್ಯ ಹಾಗೂ ಹಕ್ಕು ತಲುಪಿಸುವಂತೆ ಜಾಗೃತಿ ಮೂಡಿಸಲು ಪ್ರತಿಯೊಬ್ಬ ಸಮಿತಿ ಸದಸ್ಯರು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಪದಾಧಿಕಾರಿಗಳ ಆಯ್ಕೆ: ಬೈಲೂರು ಬಿ.ನಾಗೇಂದ್ರ (ತಾಲೂಕು ಅಧ್ಯಕ್ಷ), ವೀರೇಶ್ (ಉಪಾಧ್ಯಕ್ಷ), ಸಂಘಟನೆ ಸಂಚಾಲಕರಾಗಿ ಸುಧೀರ್ ಬಾದನಹಟ್ಟಿ, ಕಲ್ಲುಕಂಬ ಪಂಪಾಪತಿ, ಅಯ್ಯಪ್ಪ ಗುತ್ತಿಗೆನೂರು, ಕೃಷ್ಣಸಿದ್ದಮ್ಮನಹಳ್ಳಿ, ಸರದಾರ ಸಿಂಧಿಗೇರಿ, ನಾಗರಾಜ ಸಿಂಧಿಗೇರಿ, ವೀರೇಶ ವದ್ದಟ್ಟಿ, ಬಸವರಾಜ ಬೈಲೂರು, ದೇವರಾಜ ಸಿಂಧಿಗೇರಿ, ಮಹೇಶ ಸಿಂಧಿಗೇರಿ, ಮುನಿಸ್ವಾಮಿ, ಸಂತೋಷ್, ಶ್ರೀಕಾಂತ್, ಶೇಕ್ಷವಲಿ ಅವರನ್ನು ಆಯ್ಕೆ ಮಾಡಲಾಯಿತು. ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಮಾರ್ಗ) ಸಂಘಟನೆ ಸದಸ್ಯರು ಹಾಗೂ ಇತರರು ಇದ್ದರು.